ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## ಭಾಗ – ೧

## ಕನ್ನಡ ಮಾಧ್ಯಮ

## (ಪರಿಷ್ಕೃತ)

# 6

## ಆರನೆಯ ತರಗತಿ

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,

ಬೆಂಗಳೂರು – 560 085.

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1ರಿಂದ 4ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5ರಿಂದ 10ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ನಿತ್ಯ ಜೀವನದಲ್ಲಿ ಗಣಿತವು ಎಲ್ಲಾ ಹಂತಗಳಲ್ಲೂ ಯಶಸ್ಸಿಗೆ ಅತ್ಯಾವಶ್ಯಕವಾಗಿದೆ. ರಾಷ್ಟ್ರೀಯ ಪಠ್ಯಕ್ರಮ–2005ರಂತೆ ಗಣಿತವು ಕೆಲವು ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಸಿದ್ಧಾಂತಗಳನ್ನು ನಿರೂಪಿಸಿ, ಪ್ರಮೇಯಗಳನ್ನು ಸಾಧಿಸಿ, ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದನ್ನು ಬಿಟ್ಟು ಗಣಿತವನ್ನು ಜೀವನದ ಸಕಲ ಕ್ಷೇತ್ರಗಳಲ್ಲೂ ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಂಡು ಜೀವನದಲ್ಲಿ ಯಶಸ್ಸನ್ನು ಗಳಿಸುವಂತೆ ಮಾಡಬೇಕು. ಅದು ಸಹಕಾರೀ ಕಲಿಕೆಗೂ ಪೂರಕವಾಗಿರಬೇಕು. ಬಹುತೇಕ ಮಂದಿ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಗಣಿತವೆಂದರೆ ಭಯ. ಈ ಭಯವನ್ನು ಹೋಗಲಾಡಿಸಲು ವಿನೋದಗಣಿತ, ಕಥೆಗಳು, ಒಗಟುಗಳು, ಗೂಢಪ್ರಶ್ನೆಗಳು ಮುಂತಾದ ಅಂಶಗಳನ್ನು ಸೇರಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಚಟುವಟಿಕೆಯ ಮೂಲಕ ಅಥವಾ ಕುತೂಹಲ ಕೆರಳಿಸುವ ಕಥೆಗಳ ಮೂಲಕ ಪ್ರತಿಯೊಂದು ಪರಿಕಲ್ಪನೆಯನ್ನು ವಿವರಿಸಲಾಗಿದೆ. ಪ್ರಾಚೀನ ಭಾರತದ ಶ್ರೇಷ್ಠ ಗಣಿತ ಶಾಸ್ತ್ರಜ್ಞರ ಕೊಡುಗೆಗಳನ್ನು ಸೂಕ್ತ ಸಂದರ್ಭಗಳಲ್ಲಿ ಕೊಡಲಾಗಿದೆ.

ನಾವಿಂದು ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಜೀವಿಸುತಿದ್ದೇವೆ. ಕಳೆದ ಅರ್ಧಶತಮಾನದಲ್ಲಿ ಮಾನವನ ಅದ್ಭುತ ಕನಸುಗಳು ನನಸಾಗಿ ಮಾನವ ತನ್ನ ಸಾಧನೆಯ ಪರಾಕಾಷ್ಠೆಯನ್ನು ಮುಟ್ಟಿದ್ದಾನೆ. ಜೀವನವನ್ನು ಸುಗಮವನ್ನಾಗಿಸಲು ಅತ್ಯಾವಶ್ಯಕವಾದ ಸಕಲ ವಸ್ತುಗಳನ್ನು ತಯಾರಿಸಿದ್ದಾನೆ. ಹಾಗೆಯೇ ಭೋಗ ವಿಲಾಸ ಜೀವನಕ್ಕೆ ಮಾರುಹೋಗಿ ಇಂದು ಮೂಲವಿಜ್ಞಾನವನ್ನೇ ಮರೆಯುವ ಹಂತಕ್ಕೆ ಮಾನವ ತಲುಪಿರುವುದು ಒಂದು ದುರಂತವೇ ಆಗಿದೆ. ಭೋಗ ಜೀವನಕ್ಕೆ ಪುಷ್ಟಿಯನ್ನು ಕೊಡುವ ತಂತ್ರಜ್ಞಾನದತ್ತ ಇಂದು ನಮ್ಮ ಒಲವಿದ್ದು ಮೂಲವಿಜ್ಞಾನದತ್ತ ನಮ್ಮ ದೃಷ್ಟಿ ಹರಿಯುತ್ತಿಲ್ಲ. ಈಗಲಾದರೂ ನಮ್ಮ ಯುವಕ ಯುವತಿಯರು ವಿಜ್ಞಾನ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ನಡೆಸಿ ಸಂಶೋಧನಾ ಸಂಪ್ರದಾಯವನ್ನು ಮುಂದುವರಿಸುವರೆಂದು ಆಶಿಸಿ ಮುಂದೆ ಬರುವ ನೂತನ ವಿಜ್ಞಾನ ಪುಸ್ತಕಗಳಲ್ಲಿ ಅವರಿಗೆ ಯೋಚಿಸುವುದು, ಆಳವಾದ ಅಧ್ಯಯನ ಮಾಡುವುದು, ಪ್ರಯೋಗಗಳನ್ನು ಮಾಡುವುದು ಹಾಗೂ ಅವರಲ್ಲಿ ಸೃಜನ ಶೀಲತೆಯನ್ನು ಬೆಳೆಸುವತ್ತ ಒಲವನ್ನುಂಟುಮಾಡಲು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಕಲಿಕೆ ಚಟುವಟಿಕೆಗಳ ಸುತ್ತಲೂ ಹೆಣೆಯುವಂತೆ ಮಾಡಲು ಪ್ರಯತ್ನಗಳು ನಡೆದಿವೆ. ಈ ವಿಚಾರದಲ್ಲಿ ಗುರುವೃಂದದವರ ಸಹಕಾರವು ಅತ್ಯಾವಶ್ಯಕ.

6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವು ಪಠ್ಯವಸ್ತುವಿಗೆ ಅನುಗುಣವಾಗಿ ರಚನೆಯಾಗಿದ್ದು, ಎನ್‌ಸಿಎಫ್ 2005 ಹಾಗೂ ಕೆಸಿಎಫ್ 2007 ಇವುಗಳಲ್ಲಿ ಕಂಡುಬರುವ ಎಲ್ಲಾ ಲಕ್ಷಣಗಳನ್ನು ಹೊಂದಿರುತ್ತದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ವಂತವಾಗಿ ಜ್ಞಾನವನ್ನು ರಚಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ಚಟುವಟಿಕೆಗಳನ್ನು ಹೊಂದಿಸಲಾಗಿದೆ. ಅವುಗಳೊಂದಿಗೆ ಅನೇಕ ಪ್ರಾಜೆಕ್ಟ್‌ಗಳನ್ನು ರಚಿಸಲಾಗಿದೆ. ಆದರೆ ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳು ಪುಸ್ತಕದಲ್ಲಿ ಪ್ರಾಮುಖ್ಯತೆಯನ್ನು ಪಡೆದಿಲ್ಲ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ,
ಬೆಂಗಳೂರು.

©KTBS
Not to be republished

# ಪರಸ್ಪರ

ಆರನೆಯ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕಕ್ಕೆ ಒಂದು ಹಿನ್ನೆಲೆ ಇದೆ. ಕರ್ನಾಟಕ ಸರ್ಕಾರದ ಒಂದು ಪ್ರಮುಖ ಅಂಗಸಂಸ್ಥೆಯಾಗಿರುವ ಕರ್ನಾಟಕ ಪಠ್ಯಪುಸ್ತಕ ಸಂಘವು ಪ್ರಕಟಿಸಿರುವ ಈ ಪುಸ್ತಕವು 2005ರಲ್ಲಿ ಜಾರಿಗೊಳಿಸಲ್ಪಟ್ಟ ರಾಷ್ಟ್ರೀಯ ಪಠ್ಯಕ್ರಮವನ್ನು ಆಧರಿಸಿ ಕರ್ನಾಟಕ ಸರ್ಕಾರದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ನಡೆಸಿದ ವಿವಿಧ ಕಾರ್ಯಾಗಾರಗಳು ಮತ್ತು ತರಬೇತಿಗಳಿಂದ ಹೊರಹೊಮ್ಮಿದ ನೂತನ ಪಠ್ಯಕ್ರಮದ ಆಧಾರವಾಗಿದೆ.

ಪ್ರತಿಯೊಂದು ಪಾಠದ ಪ್ರಾರಂಭದಲ್ಲಿ ಆ ಪಾಠದ ಬಗೆಗೆ ಪರಿಚಯವನ್ನು ನೀಡಲಾಗಿದೆ. ಪಾಠದ ವೇಳೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾದ ಸಾಮರ್ಥ್ಯಗಳನ್ನೂ ಕೊಡಲಾಗಿದೆ. ಚರಿತ್ರೆಯ ಪಾಠಗಳಲ್ಲಿ ಸಣ್ಣ ಪ್ರಶ್ನೆ ಅಥವಾ ಸನ್ನಿವೇಶ ಅಥವಾ ಕುತೂಹಲ ಮೂಡಿಸುವ ಪರಿಚಯಾತ್ಮಕ ದೃಷ್ಟಿಯಿಂದ ಪಾಠಗಳನ್ನು ಪ್ರಾರಂಭಿಸಲಾಗಿದೆ. ಚರಿತ್ರೆಯ ಪಾಠಗಳ ನಡುವೆ ಚಿತ್ರಗಳನ್ನು ನೀಡಲಾಗಿದ್ದು, ಇವುಗಳು ಪಾಠಕ್ಕೆ ಪೂರಕವಾಗಿರುವಂತೆ ನೋಡಿಕೊಳ್ಳುವುದು ಶಿಕ್ಷಕರ ಜವಾಬ್ದಾರಿ ಆಗಿದೆ. ಭೂಪಟಗಳು ವಿದ್ಯಾರ್ಥಿಗಳ ಕುತೂಹಲವನ್ನು ಹೆಚ್ಚಿಸುವಂತೆ ಶಿಕ್ಷಕರು ಪ್ರಯತ್ನಿಸಬೇಕಾಗಿದೆ. ಇತಿಹಾಸದ ವಿಭಾಗದಲ್ಲಿನ ಪಾಠಗಳ ಪ್ರಾರಂಭದಲ್ಲಿ ನೀಡಿರುವ ರಾಜವಂಶಗಳ ಚಿಹ್ನೆಗಳನ್ನು ಶಿಕ್ಷಕರು ಪಾಠಕ್ಕೆ ಪೂರಕ ಸಾಮಾಗ್ರಿಯಾಗಿ ಬಳಸಿಕೊಳ್ಳಲು ವಿಪುಲ ಅವಕಾಶಗಳಿವೆ. ಪಾಠಗಳ ಕೊನೆಯಲ್ಲಿ ಪಾಠಕ್ಕೆ ಸಂಬಂಧಿಸಿದ ಕಾಲಗಣನೆ ನೀಡಲಾಗಿದೆ. ಶಿಕ್ಷಕರು ಇದರ ಬಗ್ಗೆ ಪ್ರಶ್ನೆಗಳನ್ನು ಕೇಳಬಾರದೆಂಬುದು ನಮ್ಮ ಆಶಯ.

ಪಾಠಗಳ ಕೊನೆಯಲ್ಲಿ ಚಟುವಟಿಕೆಗಳನ್ನು ನೀಡಲಾಗಿದೆ. ಶಿಕ್ಷಕರು ವಿದ್ಯಾರ್ಥಿಗಳು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ. ಇವುಗಳನ್ನು ಪಾಠಗಳಿಗೆ ಪೂರಕವಾಗಿರುವಂತೆ ನೀಡಲಾಗಿದೆ. ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಮತ್ತು ಹೆಚ್ಚಿನ ತಿಳುವಳಿಕೆಗಾಗಿ ಚೌಕಗಳಲ್ಲಿ ಆ ಪಾಠಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನೀಡಲಾಗಿದೆ. ಇವುಗಳಲ್ಲಿಯೂ ವಿಷಯಗಳ ಕುರಿತಾಗಿ ಲಿಖಿತ ಅಥವಾ ಮೌಖಿಕ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶಗಳಿರುವುದಿಲ್ಲ. ಪಾಠಗಳ ಕೊನೆಯಲ್ಲಿ ನೀಡಿರುವ 'ಚರ್ಚಿಸಿ' ಎಂಬ ವಿಷಯದಡಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಆರೋಗ್ಯಕರ ಸಂವಾದ ನಡೆಸಬಹುದು ಮತ್ತು ಇದನ್ನು ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತಪ್ರತಿಭೆಗೆ ವೇದಿಕೆಯಾಗುವಂತೆ ಪರಿವರ್ತಿಸುವುದು ಶಿಕ್ಷಕರ ಕರ್ತವ್ಯವಾಗಿದೆ. ಪೌರನೀತಿಯ ಪಾಠಗಳನ್ನು ಎರಡು ಸೆಮಿಸ್ಟರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಈ ಪಾಠಗಳಲ್ಲಿನ ಚಿತ್ರಗಳನ್ನು ಪಾಠಗಳಿಗೆ ಪೂರಕವಾಗಿ ಬಳಸಿಕೊಳ್ಳುವುದು ಶಿಕ್ಷಕರ ಕರ್ತವ್ಯವಾಗಿದೆ ಮತ್ತು ಅದು ಪಠ್ಯಪುಸ್ತಕ ರಚನಾ ಸಮಿತಿಯ ಆಶಯವು ಹೌದು. ಭೂಗೋಳಶಾಸ್ತ್ರ ವಿಭಾಗದಲ್ಲಿನ ಪಾಠಗಳಲ್ಲಿ ಹೆಚ್ಚಿನ ಮಾಹಿತಿಗಳನ್ನು ಚೌಕದಲ್ಲಿ ನೀಡಲಾಗಿದೆ ಮತ್ತು ಭೂಗೋಳಶಾಸ್ತ್ರದಲ್ಲಿ ವಿಶೇಷ ಆಸಕ್ತಿಯನ್ನು ಮೂಡಿಸುವ ಸಲುವಾಗಿ ಅವಶ್ಯವಿದ್ದೆಡೆ ಭೂಪಟಗಳು ಮತ್ತು ಚಿತ್ರಗಳನ್ನು ನೀಡಲಾಗಿದೆ. ನೈಜ ಕಲಿಕಾಂಶದ ಆರಂಭ ಹಾಗೂ ಅಂತ್ಯವನ್ನು ಸೂಚಿಸಲು ಐಕಾನ್‌ಗಳನ್ನು ಬಳಸಲಾಗಿದೆ.

ಪೌರನೀತಿ ಪಾಠಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದೆಡೆ ಸೂಕ್ತ ಚಿತ್ರಗಳನ್ನು ಅಳವಡಿಸಲಾಗಿದೆ. ಮಕ್ಕಳಲ್ಲಿ ಮೌಲ್ಯವೃದ್ಧಿಯ ನಿಟ್ಟಿನಲ್ಲಿ 'ರಾಷ್ಟ್ರೀಯ ಭಾವೈಕ್ಯ' ಮತ್ತು 'ನಮ್ಮ ರಕ್ಷಣಾ ಪಡೆಗಳು' ಪಾಠಗಳನ್ನು ರಚಿಸಲಾಗಿದೆ.

ಒಂದು ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರಿಗೆ ಲಭ್ಯವಿರುವ ಅವಧಿಯ ಆಧಾರದ ಮೇರೆ ಪಾಠಗಳನ್ನು ಮೊದಲನೆಯ ಮತ್ತು ಎರಡನೆಯ ಸೆಮಿಸ್ಟರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಪುಸ್ತಕದಲ್ಲಿ ತಪ್ಪುಗಳು ಇರದ ರೀತಿಯಲ್ಲಿ ಪರಿಶೀಲಿಸಲಾಗಿದೆ. ಹೀಗಿದ್ದರೂ ತಪ್ಪುಗಳು, ಮಾಹಿತಿ ಕೊರತೆ, ಅಥವಾ ಸಾಮಾನ್ಯ ಕೊರತೆಗಳು ಪುಸ್ತಕದಲ್ಲಿ ಕಂಡು ಬಂದಲ್ಲಿ, ವಿದ್ಯಾರ್ಥಿಗಳು, ಅವರ ಪೋಷಕರು ಶಿಕ್ಷಕರಿಗೆ ತಿಳಿಸಿದಲ್ಲಿ ಪುಸ್ತಕವನ್ನು ಮತ್ತಷ್ಟು ಉತ್ತಮಗೊಳಿಸಲು ಮತ್ತು ತನ್ಮೂಲಕ ಅದರ ಗುಣಮಟ್ಟವನ್ನು ಹೆಚ್ಚಿಸಲು ನೆರವಾದಲ್ಲಿ ನಮ್ಮ ಪ್ರಯತ್ನ ಸಾರ್ಥಕವಾಗುತ್ತದೆ.

ಪಠ್ಯಪುಸ್ತಕದ ರಚನೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಹಕರಿಸಿದ ಸಮಿತಿಯ ಸದಸ್ಯರು, ಪರಿಶೀಲಕರು, ಸಂಪಾದಕ ಮಂಡಳಿಯ ಸದಸ್ಯರು ಮತ್ತು ಕರ್ನಾಟಕ ಪಠ್ಯಪುಸ್ತಕ ಸಂಘದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನಾವು ವಂದಿಸುತ್ತೇವೆ.

**ಡಾ. ಎಸ್. ನರೇಂದ್ರ ಪ್ರಸಾದ್**
**ಅಧ್ಯಕ್ಷರು**
**ಪಠ್ಯಪುಸ್ತಕ ರಚನಾ ಸಮಿತಿ**

©KTBS Not to be republished

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು** : **ಡಾ. ಎಸ್. ನರೇಂದ್ರ ಪ್ರಸಾದ್,** ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜೆ.ಎಸ್.ಎಸ್. ಮಹಿಳಾ ಕಾಲೇಜು (ಸ್ವಾಯತ್ತ), ಸರಸ್ವತಿಪುರಂ, ಮೈಸೂರು.

**ಸದಸ್ಯರು** : **ಡಾ. ಪಿ. ಸತೀಶ್‌ಕುಮಾರ್ ಶೆಟ್ಟಿ,** ಇತಿಹಾಸ ವಿಭಾಗ, ಸಹಪ್ರಾಧ್ಯಾಪಕರು, ಬೆಸೆಂಟ್ ಸಂಜೆ ಕಾಲೇಜು, ಮಂಗಳೂರು.

**ಡಾ. ಬಾಳಾಸಾಹೇಬ ಲೋಕಾಪುರ,** ಭೂಗೋಳಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಬಾಗಲಕೋಟೆ.

**ಶ್ರೀ ಶಂಕರ ಬಸವಣ್ಣೆಪ್ಪ ಕ್ಯಾಸ್ತಿ,** ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಣ್ಣಿಕೇರಿತೋಟ, ಹಿಡಕಲ್, ರಾಯಭಾಗ, ಬೆಳಗಾವಿ ಜಿಲ್ಲೆ.

**ಶ್ರೀ ಹುಸೇನ ಷರೀಫ,** ಸಹಶಿಕ್ಷಕರು, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಮುಸ್ಟೂರು, ಜಗಳೂರು, ದಾವಣಗೆರೆ ಜಿಲ್ಲೆ.

**ಚಿತ್ರ ಕಲಾವಿದರು** : **ಶ್ರೀ ತಾರಾನಾಥ ಕೈರಂಗಳ,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಂಚಿ ಕೊಳ್ನಾಡು, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.

**ಪರಿಶೀಲಕರು** : **ಶ್ರೀ ಎಂ. ರಾಘವೇಂದ್ರ ಪ್ರಭು,** ಇತಿಹಾಸ ಪ್ರಾಧ್ಯಾಪಕರು (ನಿವೃತ್ತ), ಅನಂತ ಪ್ರಸಾದ, ದಂಬೆಲ್, ಅಶೋಕನಗರ ಅಂಚೆ, ಮಂಗಳೂರು.

**ಶ್ರೀ ಪಿ. ಮಲ್ಲಪ್ಪ,** ಭೂಗೋಳಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ), ಜೆ.ಎಸ್.ಎಸ್. ಬಡಾವಣೆ, ಮೈಸೂರು.

**ಸಂಪಾದಕ ಮಂಡಳಿ** : **ಡಾ. ಎಂ.ವಿ. ಶ್ರೀನಿವಾಸ್,** ಇತಿಹಾಸ ಪ್ರೊಫೆಸರ್ (ನಿವೃತ್ತ), ಹೆಚ್. ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು.

**ಡಾ. ಆರ್.ಎಲ್.ಎಂ. ಪಾಟೀಲ್,** ರಾಜ್ಯಶಾಸ್ತ್ರ ಪ್ರೊಫೆಸರ್ (ನಿವೃತ್ತ), 1105, ಪೂರ್ಣಪ್ರಜ್ಞಾನಗರ, ಉತ್ತರ ಹಳ್ಳಿ, ಬೆಂಗಳೂರು.

**ಡಾ. ಈಶ್ವರಪ್ಪ** ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಮುಖ್ಯ ಸಂಯೋಜಕರು** : **ಪ್ರೊ. ಜಿ.ಎಸ್, ಮುಡಂಬಡಿತ್ತಾಯ,** ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ**

: **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀಮತಿ ಸಿ. ನಾಗಮಣಿ,** ಉಪ ನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

: **ಶ್ರೀಮತಿ ಎಸ್.ಎನ್. ಲೀಲಾವತಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

©KTBS Not to be republished

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ**
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಡಾ. ಟಿ. ಆರ್. ಚಂದ್ರಶೇಖರ್,** ಸಮಾಲೋಚಕರು, 4ನೇ ಹಣಕಾಸು ಆಯೋಗ, 3ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.

**ಸದಸ್ಯರು :**

**ಡಾ. ಬಸವರಾಜ್,** ಸಹಪ್ರಾಧ್ಯಾಪಕರು, ರಾಜ್ಯಶಾಸ್ತ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

**ಡಾ. ಎನ್.ಆರ್. ಹಡಪದ,** ಭೂಗೋಳಶಾಸ್ತ್ರ ಉಪನ್ಯಾಸಕರು, ಶ್ರೀ ಚನ್ನಬಸವೇಶ್ವರ ಪದವಿ ಪೂರ್ವ ಕಾಲೇಜು, ಬಿ.ಅರಳೀಕಟ್ಟಿ, ಹುಬ್ಬಳ್ಳಿ ತಾ, ಧಾರವಾಡ ಜಿಲ್ಲೆ.

**ಶ್ರೀ. ಹಂ. ಗು. ರಾಜೇಶ್,** ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ದೊಡ್ಡೇರಿ, ಬೆಂಗಳೂರು ದಕ್ಷಿಣ ತಾ. ಬೆಂಗಳೂರು–562130.

**ಶ್ರೀ. ಪಿ. ಎಂ. ಕಾಗೀನಕರ್,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಚಂಗಾವಾರ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀಮತಿ. ರಾಜಲಕ್ಷ್ಮಿ. ಎಸ್,** ಸಹ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ವಿಭಾಗ) ಶ್ರೀರಾಂಪುರಂ, ಬೆಂಗಳೂರು, ಉತ್ತರ ವಲಯ–2, ಬೆಂಗಳೂರು ಉತ್ತರ ಜಿಲ್ಲೆ.

**ಶ್ರೀಮತಿ. ಶಾಹಿನಾ ಬೇಗಂ,** ಸಹ ಶಿಕ್ಷಕರು, ಸ್ತ್ರೀಸಮಾಜ, ಶೇಷಾದ್ರಿಪುರಂ ಪ್ರೌಢಶಾಲೆ, ಬೆಂಗಳೂರು ಉ.ವಲಯ–2.

**ಶ್ರೀ. ಡಿ.ಎನ್ ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ಜಿಲ್ಲೆ.

| ಉನ್ನತ ಪರಿಶೀಲನ ಸಮಿತಿ | |
|---|---|
| **ಡಾ. ಎಂ. ಎಸ್. ತಳವಾರ್**<br>#777, 'ಜೇನುಗೂಡು',<br>5ನೇ ಬ್ಲಾಕ್, ಬನಶಂಕರಿ 6ನೇ ಘಟ್ಟ,<br>ಮೆಟ್‌ಕಲ್ ಪಾಳ್ಯ, ಬೆಂಗಳೂರು–60. | **ಡಾ. ಅಮರೇಶ ಯತಗಲ್,** ಸ.ಪ್ರಾ.<br>ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ,<br>ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ –586105. |
| **ಶ್ರೀ. ಮಂಜುನಾಥ ಐಲಿ**<br>ಇತಿಹಾಸ ಉಪನ್ಯಾಸಕರು,<br>ಸರಕಾರಿ ಪದವಿ ಪೂರ್ವ ಕಾಲೇಜು,<br>ಪೋಲಿಸ್ ಕಾಲೋನಿ, ರಾಯಚೂರು – 584101. | **ಡಾ. ನಂದೀಶ್ವರ**<br>ಪ್ರಾಂಶುಪಾಲರು,<br>ಎಸ್.ಎಂ.ಆರ್. ಪಿ.ಯು. ಕಾಲೇಜು,<br>ಕಳ್ಳಂಬೆಳ್ಳ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ – 572125. |
| **ಸಲಹೆ ಮತ್ತು ಮಾರ್ಗದರ್ಶನ :** | |
| **ಶ್ರೀ. ನರಸಿಂಹಯ್ಯ**<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಪಠ್ಯಪುಸ್ತಕ ಸಂಘ(ರಿ),<br>ಬೆಂಗಳೂರು. | **ಶ್ರೀಮತಿ. ಸಿ. ನಾಗಮಣಿ**<br>ಉಪ ನಿರ್ದೇಶಕರು,<br>ಕರ್ನಾಟಕ ಪಠ್ಯಪುಸ್ತಕ ಸಂಘ(ರಿ),<br>ಬೆಂಗಳೂರು. |
| **ಕಾರ್ಯಕ್ರಮ ಸಂಯೋಜಕರು :**<br>**ಶ್ರೀಮತಿ. ಎಸ್.ಎನ್. ಲೀಲಾವತಿ,** ಹಿ.ಸ.ನಿ., ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು. | |

© KTBS Not to be republished

# ಪರಿಷ್ಕರಣೆ ಕುರಿತು.

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ. ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**ನರಸಿಂಹಯ್ಯ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫.

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫.

©KTBS Not to be republished

# ಪರಿವಿಡಿ


| ಕ್ರ. ಸಂ. | ಇತಿಹಾಸ | ಪುಟ ಸಂಖ್ಯೆ |
|---|---|---|
| 1 | ಇತಿಹಾಸ ಪರಿಚಯ | 1 |
| 2 | ನಮ್ಮ ಕರ್ನಾಟಕ | 8 |
| 3 | ಆರಂಭಿಕ ಸಮಾಜ | 46 |
| 4 | ಪ್ರಾಚೀನ ನಾಗರಿಕತೆಗಳು | 54 |
| 5 | ವೇದ ಕಾಲದ ಸಂಸ್ಕೃತಿ | 73 |
| 6 | ಕ್ರೈಸ್ತಧರ್ಮ ಮತ್ತು ಇಸ್ಲಾಂಧರ್ಮ | 77 |
| 7 | ಹೊಸ ಧರ್ಮಗಳ ಉದಯ | 82 |
| 8 | ಉತ್ತರ ಭಾರತದ ಪ್ರಮುಖ ರಾಜಮನೆತನಗಳು | 89 |
| | ಪೌರನೀತಿ | |
| 9 | ಪೌರತ್ವ | 110 |
| 10 | ರಾಷ್ಟ್ರೀಯ ಚಿಹ್ನೆಗಳು ಮತ್ತು ರಾಷ್ಟ್ರೀಯ ಭಾವೈಕ್ಯತೆ | 114 |
| | ಭೂಗೋಳ ವಿಜ್ಞಾನ | |
| 11 | ಗ್ಲೋಬ್ ಮತ್ತು ನಕಾಶೆಗಳು | 121 |
| 12 | ಏಷ್ಯಾ – ವೈಪರೀತ್ಯಗಳ ಖಂಡ | 132 |


©KTBS Not to be republished

| ಪಾಠ 1 | ಇತಿಹಾಸ ಪರಿಚಯ |
|---|---|

**ಪಾಠದ ಪರಿಚಯ**

ಈ ಪಾಠದಲ್ಲಿ ಇತಿಹಾಸದ ಅರ್ಥವನ್ನು ಪರಿಚಯಿಸಲಾಗಿದೆ. ಇತಿಹಾಸದ ಉಪಯೋಗಗಳನ್ನು ವಿವರಿಸಲಾಗಿದೆ. ಇತಿಹಾಸವನ್ನು ರಚಿಸಲು ಬಳಸಿಕೊಳ್ಳಲಾಗುವ ವಿವಿಧ ಆಧಾರಗಳನ್ನು ಪಟ್ಟಿ ಮಾಡಲಾಗಿದೆ. ಭಾರತದ ಇತಿಹಾಸ ರಚನೆಯಲ್ಲಿ ವಿವಿಧ ಯುರೋಪಿಯನ್ನರು ನೀಡಿದ ಕೊಡುಗೆಯನ್ನು ಗುರುತಿಸಲಾಗಿದೆ.

**ಸಾಮರ್ಥ್ಯಗಳು**

1] ಇತಿಹಾಸದ ಪರಿಕಲ್ಪನೆಯನ್ನು ಮೂಡಿಸುವುದು.

2] ಇತಿಹಾಸದ ಮಹತ್ವವನ್ನು ಅರಿತುಕೊಳ್ಳುವುದು.

3] ಇತಿಹಾಸದ ರಚನೆಯಲ್ಲಿ ಆಧಾರಗಳ ಪಾತ್ರವನ್ನು ತಿಳಿದುಕೊಳ್ಳುವುದು.

4] ಭಾರತದ ಇತಿಹಾಸಕ್ಕೆ ಕೊಡುಗೆ ನೀಡಿದ ಕೆಲವು ಯುರೋಪಿಯನ್ನರನ್ನು ಸ್ಮರಿಸುವುದು.

**ಇತಿಹಾಸ ಎಂದರೇನು?** ಈ ಹಿಂದೆ ನಡೆದು ಹೋದ ಸಂಗತಿಗಳನ್ನು ಕ್ರಮಬದ್ಧವಾಗಿ ಹೇಳುವುದೇ ಇತಿಹಾಸ. ಇದು ಮನುಷ್ಯರು ನಡೆದು ಬಂದ ದಾರಿಯನ್ನು ಪರಿಚಯಿಸುತ್ತದೆ. ಆ ದಾರಿಯಲ್ಲಿ ಮಾನವರ ಸಫಲತೆ ಮತ್ತು ವಿಫಲತೆಗಳನ್ನೂ ವಿವರಿಸುತ್ತದೆ. ಇತಿಹಾಸವು ಘಟನೆಗಳನ್ನು ವಿವರಿಸುವಾಗ ಕಾಲ, ಸ್ಥಳ ಮತ್ತು ವ್ಯಕ್ತಿಯ ಕುರಿತು ನಿರ್ದಿಷ್ಟತೆ ಮತ್ತು ಖಚಿತತೆಯನ್ನು ಹೊಂದಿರುತ್ತದೆ. ಅಂದರೆ, ಆ ಘಟನೆಯು ಯಾವಾಗ? ಎಲ್ಲಿ? ಮತ್ತು ಯಾರಿಂದ ನಡೆಯಿತು? ಎಂಬುದರ ಸ್ಪಷ್ಟತೆ ಇರುತ್ತದೆ. ಈ ಸ್ಪಷ್ಟತೆ ಇಲ್ಲವಾದರೆ ಇತಿಹಾಸವು ಕಥೆಯಾಗಿ ಹೋಗುತ್ತದೆ.

**ಕಥೆ ಮತ್ತು ಇತಿಹಾಸಕ್ಕೆ ಇರುವ ವ್ಯತ್ಯಾಸ ಗಮನಿಸಿ:**

- "ಒಂದಾನೊಂದು ಕಾಲದಲ್ಲಿ, ಒಂದಾನೊಂದು ಊರಿನಲ್ಲಿ ಒಬ್ಬ ರಾಜನಿದ್ದ. ಅವನೊಂದು ಯುದ್ಧ ಮಾಡಿದ."
- "ಸಾ.ಶ.ಪೂ.261ರಲ್ಲಿ ಪಾಟಲಿಪುತ್ರದಲ್ಲಿ ಆಳುತ್ತಿದ್ದ ಅಶೋಕನೆಂಬ ರಾಜನು ಕಳಿಂಗ ಯುದ್ಧ ಮಾಡಿದನು."

©KTBS Not to be republished

**ಇತಿಹಾಸ ಏಕೆ ಬೇಕು?** ಮಕ್ಕಳೇ, ನೀವು ಒಮ್ಮೆ ಬೆಂಕಿಯ ಜ್ವಾಲೆಯನ್ನು ಮುಟ್ಟುತ್ತೀರಿ ಎಂದಿಟ್ಟುಕೊಳ್ಳಿ. ಏನಾಗುತ್ತದೆ? ಬೆಂಕಿ ಸುಡುತ್ತದೆ ಅಲ್ಲವೆ? ಇದುವೇ ಅನುಭವ. ಮತ್ತೊಮ್ಮೆ ನೀವು ಬೆಂಕಿಯ ಜ್ವಾಲೆಯನ್ನು ಮುಟ್ಟುತ್ತೀರಾ? ಇಲ್ಲ. ಏಕೆಂದರೆ ಈ ಮೊದಲು ಬೆಂಕಿಯು ಸುಟ್ಟ ಅನುಭವ ನಿಮಗಿದೆ ಅಲ್ಲವೆ? ಹೌದು. ಇದನ್ನೇ 'ನೆನಪು' ಅಥವಾ 'ಜ್ಞಾಪನಶಕ್ತಿ' ಇಲ್ಲವೇ 'ಸ್ಮರಣಶಕ್ತಿ' ಎಂದು ಕರೆಯುತ್ತೇವೆ. ಒಂದು ವೇಳೆ ಮನುಷ್ಯರಿಗೆ ಸ್ಮರಣಶಕ್ತಿ ಇಲ್ಲದೆ ಹೋದರೆ ಏನು ಮಾಡುತ್ತಿದ್ದರು? ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡುತ್ತಿದ್ದರು ಅಲ್ಲವೆ? ಇದರಿಂದ ಮಾನವರ ಪ್ರಗತಿ ಸಾಧ್ಯವಿಲ್ಲ.


**'ಇತಿಹಾಸದ ಪಿತಾಮಹ' – ಹೆರೊಡೋಟಸ್**

ಹಾಗಾದರೆ ಮನುಷ್ಯರ ಪ್ರಗತಿಗೆ ಸ್ಮರಣಶಕ್ತಿ ಇದ್ದಂತೆ ಒಂದು ಸಮಾಜ ಅಥವಾ ಒಂದು ದೇಶದ ಪ್ರಗತಿಗೆ ಸ್ಮರಣಶಕ್ತಿ ಇರಬೇಕಲ್ಲವೆ? ಹೌದು ಇರಬೇಕು. ಹಾಗಾದರೆ ಯಾವುದು ಸಮಾಜಕ್ಕೆ ಅಥವಾ ದೇಶಕ್ಕೆ ಇರಬಹುದಾದ ಸ್ಮರಣಶಕ್ತಿ?

ಅದೇ ಇತಿಹಾಸ! ಹೌದು, ಮನುಷ್ಯನಿಗೆ ಸ್ಮರಣಶಕ್ತಿ ಇದ್ದಂತೆ ಒಂದು ಸಮಾಜಕ್ಕೆ, ರಾಜ್ಯಕ್ಕೆ, ದೇಶಕ್ಕೆ ಅಷ್ಟೇ ಏಕೆ ಈ ಜಗತ್ತಿಗೆ ಇತಿಹಾಸವೇ ಸ್ಮರಣಶಕ್ತಿಯಾಗಿದೆ. ಇತಿಹಾಸವು ನಮ್ಮ ಪೂರ್ವಿಕರು ಕೈಗೊಂಡ ಒಳ್ಳೆಯ ಮತ್ತು ತಪ್ಪು ತೀರ್ಮಾನಗಳಿಂದ ಅನುಭವಿಸಿದ ಸುಖದುಃಖಗಳನ್ನು ತೊಂದರೆಗಳನ್ನು ತಿಳಿಸುತ್ತದೆ. ಅಲ್ಲದೆ, ಮುಂದಿನ ತೀರ್ಮಾನಗಳನ್ನು ಕೈಗೊಳ್ಳುವಾಗ ಎಚ್ಚರಿಸುತ್ತದೆ. ಇತಿಹಾಸದಲ್ಲಿನ ನಮ್ಮ ಪೂರ್ವಿಕರ ತತ್ವಾದರ್ಶಗಳು, ವಿಚಾರಧಾರೆಗಳು ಮುಂದಿನ ತಲೆಮಾರುಗಳಿಗೆ ಮಾದರಿಯೂ, ದಾರಿದೀಪವೂ ಆಗುತ್ತವೆ. ಅವರ ಶೌರ್ಯ, ಪರಾಕ್ರಮ ಮತ್ತು ತ್ಯಾಗ–ಬಲಿದಾನಗಳು ನಂತರದ ಪೀಳಿಗೆಗಳಿಗೆ ಸ್ಫೂರ್ತಿಯೂ ಆಗುತ್ತವೆ. ಇಷ್ಟೇ ಅಲ್ಲದೆ ನಮ್ಮ ಸಂಸ್ಕೃತಿ, ಪರಂಪರೆಯನ್ನೂ ಪರಿಚಯಿಸುವ ಮೂಲಕ ಅಭಿಮಾನ ಮತ್ತು ಗೌರವವನ್ನು ಇತಿಹಾಸವು ಮೂಡಿಸುತ್ತದೆ.

©KTBS Not to be republished

ಇಷ್ಟು ಅಮೂಲ್ಯವಾದ ಇತಿಹಾಸವನ್ನು ಹೇಗೆ ರಚಿಸಬೇಕು ಎಂಬುದನ್ನ ಜಗತ್ತಿಗೆ ಮೊಟ್ಟಮೊದಲು ತೋರಿಸಿಕೊಟ್ಟವರು ಗ್ರೀಕ್ ದೇಶದ ಹೆರೊಡೋಟಸ್. ಆದ್ದರಿಂದ ಅವರನ್ನು 'ಇತಿಹಾಸದ ಪಿತಾಮಹ' ಎಂದು ಕರೆಯಲಾಗುತ್ತದೆ.

**ಆಧಾರಗಳು:** ಇತಿಹಾಸ ರಚಿಸುವವರನ್ನು ಇತಿಹಾಸಕಾರರು ಎನ್ನುತ್ತಾರೆ. ಇವರು ಇತಿಹಾಸವನ್ನು ನಿರ್ದಿಷ್ಟವಾಗಿ ಮತ್ತು ಖಚಿತವಾಗಿ ಹೇಳಲು ಸಾಕ್ಷ್ಯಾಧಾರಗಳನ್ನು ಬಳಸಿಕೊಳ್ಳುತ್ತಾರೆ. ಆದ್ದರಿಂದ 'ಆಧಾರವಿಲ್ಲದೆ ಇತಿಹಾಸವಿಲ್ಲ' ಎಂದು ಹೇಳಲಾಗುವುದು. ಹಾಗಾದರೆ ಇತಿಹಾಸದ ಆಧಾರಗಳು ಯಾವುವು? ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ಇತಿಹಾಸದ ಆಧಾರಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ.

1. ಸಾಹಿತ್ಯ ಆಧಾರಗಳು 2. ಪುರಾತತ್ವ ಆಧಾರಗಳು

**ಸಾಹಿತ್ಯ ಆಧಾರಗಳು:** ಇತಿಹಾಸದ ಹಿನ್ನಲೆಯಲ್ಲಿ ಸಾಹಿತ್ಯ ಎಂದರೆ ಬರವಣಿಗೆ ಅಥವಾ ಬಾಯಿಂದ ಬಾಯಿಗೆ ಹರಿದು ಬಂದಿರುವ ಸಂಗತಿಗಳು. ಇವುಗಳಲ್ಲಿ ಎರಡು ವಿಧ. ಒಂದು– ಲಿಖಿತ ಸಾಹಿತ್ಯ. ಎರಡು– ಮೌಖಿಕ ಸಾಹಿತ್ಯ. ಲಿಖಿತ ಸಾಹಿತ್ಯವನ್ನು ದೇಶೀಯ ಸಾಹಿತ್ಯ ಮತ್ತು ವಿದೇಶಿಯ ಸಾಹಿತ್ಯಗಳೆಂದು ವಿಂಗಡಿಸಲಾಗುವುದು. ಮೌಖಿಕ ಸಾಹಿತ್ಯವು ಜನಪದ ಗೀತೆ, ಕಥೆ, ಲಾವಣಿ, ಐತಿಹ್ಯ ಮೊದಲಾದವುಗಳನ್ನು ಒಳಗೊಂಡಿರುತ್ತದೆ. ಲಿಖಿತ ಸಾಹಿತ್ಯ ರಚಿಸುವವರು ಅಕ್ಷರಸ್ಥರಾದರೆ, ಮೌಖಿಕ ಸಾಹಿತ್ಯ ರಚಿಸುವವರು ಅನಕ್ಷರಸ್ಥರಾಗಿರುತ್ತಾರೆ.

**ಪುರಾತತ್ವ ಆಧಾರಗಳು:** ಹಿಂದಿನ ಮಾನವರು ನಿರ್ಮಿಸಿದ ಮತ್ತು ಬಳಸಿದ ಭೌತಿಕ ವಸ್ತುಗಳ ಅವಶೇಷಗಳೇ ಪುರಾತತ್ವ ಆಧಾರಗಳು. ಭೂಮಿಯ ಒಳಗೆ ಹುದುಗಿ ಹೋಗಿರುವ ಅವಶೇಷಗಳನ್ನು ಉತ್ಖನನದ ಮೂಲಕ ಹೊರತೆಗೆಯಲಾಗುವುದು. ಪುರಾತತ್ವ ಆಧಾರಗಳ ವ್ಯಾಪ್ತಿಗೆ ಮಡಕೆ ಚೂರುಗಳು, ನಾಣ್ಯಗಳು, ಶಾಸನಗಳು, ಸ್ಮಾರಕಗಳು ಮತ್ತಿತರ ಅವಶೇಷಗಳು ಒಳಪಡುತ್ತವೆ.

ಉತ್ಖನನ ಎಂದರೆ ಮಾನವನ ಪ್ರಾಚೀನ ಅವಶೇಷ ಅಥವಾ ಪಳೆಯುಳಿಕೆಗಳನ್ನು ಹೊರತೆಗೆಯಲು ನಡೆಸುವ ವೈಜ್ಞಾನಿಕವಾದ ಭೂ ಅಗೆತ. ಬ್ರೆಷ್, ಕರಣೆ, ಚಾಕು, ಮರದ ದಬ್ಬಳದಂತಹ ಮೊನಚಾದ ಸಾಧನಗಳನ್ನು ಬಳಸಿ ನಿಧಾನವಾಗಿ ಮಣ್ಣಿನ ಪದರ, ಪದರಗಳನ್ನು ಸರಿಸುತ್ತಾರೆ. ಆ ಮಣ್ಣಿನಲ್ಲಿ ಸಿಗುವ ಮಡಕೆ ಚೂರು, ನಾಣ್ಯ, ಮಣಿ, ಹರಳು, ಎಲುಬು ಮುಂತಾದ ಅವಶೇಷಗಳನ್ನು ಹೊರ ತೆಗೆದು ಅಧ್ಯಯನಕ್ಕೆ ಒಳಪಡಿಸುತ್ತಾರೆ.

©KTBS Not to be republished




©KTBS Not to be republished

**ಯೂರೋಪಿಯನ್ನರು ಪರಿಚಯಿಸಿದ ಭಾರತ:** ಭಾರತೀಯರಿಗೆ ಇತಿಹಾಸವು ಪುರಾಣ ಮತ್ತು ಐತಿಹ್ಯಗಳ ರೂಪದಲ್ಲಿ ಪ್ರಾಚೀನ ಕಾಲದಿಂದಲೂ ಪರಿಚಯವಿತ್ತು. ಆದರೆ ಇದು ಯುರೋಪಿಯನ್ನರು ರಚಿಸುವ ಇತಿಹಾಸದ ಮಾದರಿಗಿಂತ ಭಿನ್ನವಾದುದಾಗಿತ್ತು. 16ನೇ ಶತಮಾನದ ನಂತರ ಭಾರತಕ್ಕೆ ಬಂದ ಯೂರೋಪಿಯನ್ನರಲ್ಲಿ ಕೆಲವು ಜೆಸೂಟ್ ಪಾದ್ರಿಗಳೂ ಇದ್ದರು. ಇವರು ಭಾರತೀಯರ ಜೀವನ ಕ್ರಮ ಅರ್ಥ ಮಾಡಿಕೊಳ್ಳಲು ವ್ಯವಸ್ಥಿತ ಅಧ್ಯಯನ ಕೈಕೊಂಡರು. ಅವರಲ್ಲಿ ಆಗ್ರಾದಲ್ಲಿ ನೆಲೆಸಿದ್ದ ಹೆನ್ರಿಚ್ ರೋಥ್ (Heinrich Roth) ಎಂಬಾತನು ಇಂದಿಗೆ 350 ವರ್ಷಗಳ ಹಿಂದೆ ಸಂಸ್ಕೃತ ವ್ಯಾಕರಣವನ್ನು ಮೊದಲ ಬಾರಿಗೆ ಲ್ಯಾಟಿನ್ ಭಾಷೆಯಲ್ಲಿ ಬರೆದನು. ಒಂದು ಶತಮಾನ ಕಳೆದ ನಂತರ ಫಾದರ್ ಕಾರ್‌ಡಾಕ್ಸ್ (Couerdoux) ಎಂಬಾತನು ಸಂಸ್ಕೃತ ಮತ್ತು ಯೂರೋಪಿನ ಭಾಷೆಗಳ ನಡುವೆ ಸಂಬಂಧವಿದೆ ಎಂಬುದನ್ನು ಮೊದಲ ಬಾರಿಗೆ ಗುರುತಿಸಿದನು. ಇದೇ ಹೊತ್ತಿಗೆ ಬ್ರಿಟಿಷರಿಗೆ ಬಂಗಾಳದ ದಿವಾನಿ ಹಕ್ಕು (ಕಂದಾಯ ಸಂಗ್ರಹದ ಅಧಿಕಾರ) ದೊರಕಿತು. ಆದ್ದರಿಂದ ಬ್ರಿಟಿಷ್ ಅಧಿಕಾರಿಗಳು ಭಾರತೀಯರೊಂದಿಗೆ ವ್ಯವಹರಿಸುವ ಸಲುವಾಗಿ ಭಾರತೀಯರ ಇತಿಹಾಸ, ಸಂಪ್ರದಾಯ, ಆಚಾರ, ವಿಚಾರ, ನಂಬಿಕೆ ಮತ್ತು ಕಾನೂನುಗಳನ್ನು ಅರ್ಥಮಾಡಿಕೊಳ್ಳಲು ಮುಂದಾದರು. ಹಲವು ಆಡಳಿತಗಾರರು ಭಾರತೀಯರ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಆಕರ್ಷಿತರಾದರು. ಪರಿಣಾಮವಾಗಿ ಮನುಸ್ಮೃತಿ, ಭಗವದ್ಗೀತೆ ಮೊದಲಾದ ಅಭಿಜಾತ ಸಾಹಿತ್ಯ ಕೃತಿಗಳು ಇಂಗ್ಲಿಷ್‌ಗೆ ಅನುವಾದಗೊಂಡವು.



ವಿಲಿಯಂ ಜೋನ್ಸ್



ಮ್ಯಾಕ್ಸ್ ಮುಲ್ಲರ್

ಭಾರತೀಯಶಾಸ್ತ್ರದ (ಇಂಡಾಲಜಿ) ಅಧ್ಯಯನಕ್ಕೆ ಮಹತ್ವದ ಹೆಜ್ಜೆಯಿಟ್ಟ ಇಂಗ್ಲಿಷ್ ಅಧಿಕಾರಿ ಎಂದರೆ ಸರ್. ವಿಲಿಯಂ ಜೋನ್ಸ್. ಬಂಗಾಳದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಬಂದ ಇವರು ಸಾ.ಶ 1784ರಲ್ಲಿ 'ದಿ ಏಷ್ಯಾಟಿಕ್ ಸೊಸೈಟಿ' ಎಂಬ ಸಂಸ್ಥೆಯನ್ನು ಕಲ್ಕತ್ತಾದಲ್ಲಿ ಸ್ಥಾಪಿಸಿದರು. ಬಹುಭಾಷಾ ಪಂಡಿತರಾಗಿದ್ದ ವಿಲಿಯಂ ಜೋನ್ಸ್ 'ಗೀತಗೋವಿಂದ', 'ಮಾನವಧರ್ಮಶಾಸ್ತ್ರ' ಗ್ರಂಥಗಳಲ್ಲದೆ ಕಾಳಿದಾಸನ 'ಶಾಕುಂತಲ' ಕೃತಿಯನ್ನೂ ಸಂಸ್ಕೃತದಿಂದ ಇಂಗ್ಲಿಷ್ ಭಾಷೆಗೆ ಅನುವಾದಿಸಿದರು. ಮತ್ತೋರ್ವ ಪ್ರಮುಖ ಪೌರಾತ್ಯವಾದಿ ಹಾಗೂ ಭಾರತೀಯ ಶಾಸ್ತ್ರಜ್ಞ ಎಂದರೆ ಮ್ಯಾಕ್ಸ್ ಮುಲ್ಲರ್. ಜರ್ಮನ್ ದೇಶದವರಾದ ಇವರು 'ಸೇಕ್ರೆಡ್ ಬುಕ್ ಆಫ್ ದಿ ಈಸ್ಟ್' ಹೆಸರಿನಲ್ಲಿ 50 ಸಂಪುಟಗಳನ್ನು ಇಂಗ್ಲಿಷ್‌ಗೆ ತಂದರು. ಉಪಯುಕ್ತವಾದಿಗಳ ಗುಂಪಿಗೆ ಸೇರುವ ಜೇಮ್ಸ್ ಮಿಲ್ ಎಂಬ ಸ್ಕಾಟ್ಲಾಂಡಿನ ಇತಿಹಾಸಕಾರರು 'ಹಿಸ್ಟರಿ ಆಫ್ ಇಂಡಿಯಾ' ಹೆಸರಿನಲ್ಲಿ ಆರು

© KTBS Not to be republished

ಸಂಪುಟಗಳ ಭಾರತದ ಇತಿಹಾಸವನ್ನು ರಚಿಸಿದರು. ಆದರೆ ಮ್ಯಾಕ್ಸ್ ಮುಲ್ಲರ್ ಆಗಲಿ, ಜೇಮ್ಸ್ ಮಿಲ್ ಆಗಲಿ ಎಂದೂ ಭಾರತಕ್ಕೆ ಬಂದವರಲ್ಲ.



ಅಬೆ ಡುಬಾಯ್ಸ್

ಅಬೆ ಡುಬಾಯ್ಸ್ (Abbe Dubois) ಎಂಬ ಫ್ರೆಂಚ್ ಮಿಷನರಿ ಶ್ರೀರಂಗಪಟ್ಟಣ ಬಳಿಯ ಗಂಜಾಂಗೆ ಬಂದು ನೆಲೆಸಿದರು. ಸ್ಥಳೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡು ಸನ್ಯಾಸಿಯಂತೆ ಬದುಕಿದ ಇವರನ್ನು ಜನರು 'ದೊಡ್ಡ ಸ್ವಾಮಿಯವರು' ಎಂದು ಕರೆಯುತ್ತಿದ್ದರು. ಇವರು 'ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಅಂಡ್ ಸೆರೆಮನಿಸ್' ಎಂಬ ಕೃತಿಯನ್ನು ಬರೆದರು. ಇದರಲ್ಲಿ ಭಾರತೀಯರ ಆಚಾರ, ವಿಚಾರ, ಹಬ್ಬ ಹರಿದಿನ, ವರ್ಣಾಶ್ರಮ ವ್ಯವಸ್ಥೆ ಮೊದಲಾದವುಗಳನ್ನು ಕುರಿತು ಬರೆದಿದ್ದಾರೆ. 24 ವರ್ಷಗಳ ಕಾಲ ಇಲ್ಲಿಯೇ ನೆಲೆಸಿದ್ದ ಅಬೆ ಡುಬಾಯ್ಸ್ ಆನಂತರ ಫ್ರಾನ್ಸಿಗೆ ಹಿಂತಿರುಗಿದರು.

ಇವರಲ್ಲದೆ ಎಲ್ಫಿನ್‌ಸ್ಟನ್, ಕೋಲ್ ಬ್ರೂಕ್, ಕನ್ನಿಂಗ್‌ಹ್ಯಾಮ್, ಇಲಿಯೆಟ್ ಮತ್ತು ಡಾಸನ್ ಮುಂತಾದವರು ಭಾರತದ ಚರಿತ್ರೆಯ ವಿವಿಧ ಘಟ್ಟಗಳನ್ನು ಪರಿಚಯಿಸಿದ್ದಾರೆ. ಫ್ರಾನ್ಸಿಸ್ ಬುಕನಾನ್, ಕರ್ನಲ್ ವಿಲ್ಕ್ಸ್, ಮೆಕೆಂಜಿ, ಬಿ.ಎಲ್. ರೈಸ್, ಫ್ಲೀಟ್ ಮುಂತಾದ ಯುರೋಪಿಯನ್ನರು ಕರ್ನಾಟಕದ ಚರಿತ್ರೆಯ ರಚನೆಗೆ ಅಮೂಲ್ಯ ಆಧಾರಗಳಾದ ಶಾಸನಗಳು, ಕೈಫಿಯತ್ತುಗಳು, ಹಸ್ತಪ್ರತಿಗಳು, ಬಖೈರುಗಳು ಮೊದಲಾದವುಗಳನ್ನು ಸಂಗ್ರಹಿಸುವಲ್ಲಿ ಮತ್ತು ಸಮಕಾಲೀನ ಸಂಗತಿಗಳನ್ನು ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗೆ ಭಾರತೀಯರಿಗೆ ಹೊಸ ಮಾದರಿಯ ಚರಿತ್ರೆ ನೋಡುವ ಮತ್ತು ಕಟ್ಟುವ ಕ್ರಮವನ್ನು ಯುರೋಪಿಯನ್ನರು ಕಲಿಸುವಲ್ಲಿ ಸಫಲರಾದರು. ಆ ಮೂಲಕ ಭಾರತೀಯರ ಆಲೋಚನಾ ಕ್ರಮವನ್ನೆ ಬದಲಿಸಿದರು.

**ಗಮನಿಸಿ:** ಸಾ.ಶ. ಎಂದರೆ 'ಸಾಮಾನ್ಯ ಶಕ' ಸಾ.ಶ.ಪೂ. ಎಂದರೆ 'ಸಾಮಾನ್ಯ ಶಕ ಪೂರ್ವ'.ಕ್ರಿ.ಶ. ಮತ್ತು ಕ್ರಿ.ಪೂ. ಪ್ರಯೋಗಗಳಿಗೆ ಬದಲಾಗಿ ಸಾ.ಶ. ಮತ್ತು ಸಾ.ಶ.ಪೂ ಎಂದು ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಬಳಸಲಾಗಿದೆ.

**ಹೊಸ ಶಬ್ದಗಳ ಪರಿಚಯ:**

ಜೆಸೂಟ್ (Jesut): ಇಗ್ನೇಶಿಯಸ್ ಲಯೊಲ ಎಂಬಾತನು ಸಾ.ಶ 1534ರಲ್ಲಿ ಪ್ಯಾರಿಸ್‌ನಲ್ಲಿ 'ಜೀಸಸ್ ಸಂಘ'ವನ್ನು ಕಟ್ಟಿದನು. ಇದು ಪುರುಷ ಕ್ಯಾಥೋಲಿಕ್ ಪಂಥಿಯ ಧರ್ಮಾಸಕ್ತರ ಸಭೆ (Congregation of religious) ಯಾಗಿತ್ತು. ಈ ಜೀಸಸ್ ಸಂಘದ ಸದಸ್ಯರೇ ಜೆಸೂಟ್‌ಗಳು.

ಮಿಷನರಿ (Missionary): ವಿದೇಶಗಳಲ್ಲಿ ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ಕಳುಹಿಸಲ್ಪಡುವ ಧರ್ಮ ಪ್ರಚಾರಕರು.

ಭಾರತೀಯಶಾಸ್ತ್ರ (Indology): ಭಾರತದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತು ಅಧ್ಯಯನ ನಡೆಸುವ ಶಾಸ್ತ್ರ.

ಪೌರಾತ್ಯವಾದಿ (Orientalist): ಪೂರ್ವ ದೇಶಗಳ ಇತಿಹಾಸ, ಸಂಸ್ಕೃತಿ, ಆಧ್ಯಾತ್ಮ ಮುಂತಾದವುಗಳ ಬಗೆಗೆ ಒಲವುಳ್ಳ ಯುರೋಪಿನ ವಿದ್ವಾಂಸರು.

©KTBS Not to be republished

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಇತಿಹಾಸದ ಪಿತಾಮಹ__________
2. ದಿ ಏಷ್ಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿದವರು__________

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಇತಿಹಾಸ ಎಂದರೇನು?
2. ಇತಿಹಾಸ ಪಿತಾಮಹ ಯಾರು? ಅವರು ಯಾವ ದೇಶದವರು?
3. 'ಆಧಾರವಿಲ್ಲದೆ ಇತಿಹಾಸವಿಲ್ಲ' ಏಕೆ?
4. ಇತಿಹಾಸದ ಆಧಾರಗಳನ್ನು ಪಟ್ಟಿ ಮಾಡಿ.
5. ಪುರಾತತ್ವ ಆಧಾರ ಎಂದರೇನು?
6. ಭಾರತೀಯಶಾಸ್ತ್ರವನ್ನು ಕುರಿತು ಅಧ್ಯಯನ ನಡೆಸಿದ ಇತಿಹಾಸಕಾರರನ್ನು ಹೆಸರಿಸಿ.

## III. ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

1. ಅಬೆ ಡುಬಾಯ್ಸ್ ಕುರಿತು ಟಿಪ್ಪಣಿ ಬರೆಯಿರಿ.

## IV. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ |
|---|---|
| ಕಾಳಿದಾಸ | ಹಿಸ್ಟರಿ ಆಫ್ ಇಂಡಿಯಾ |
| ಮ್ಯಾಕ್ಸ್ ಮುಲ್ಲರ್ | ದಿ ಏಷ್ಯಾಟಿಕ್ ಸೊಸೈಟಿ |
| ಜೇಮ್ಸ್ ಮಿಲ್ | ಸೇಕ್ರೆಡ್ ಬುಕ್ ಆಫ್ ದಿ ಈಸ್ಟ್ |
| ವಿಲಿಯಂ ಜೋನ್ಸ್ | ಶಾಕುಂತಲ. |

**ಚರ್ಚಿಸಿರಿ.**

ಇತಿಹಾಸ ನಮಗೆ ಏಕೆ ಬೇಕು? ಚರ್ಚಿಸಿ.

**ಚಟುವಟಿಕೆ:**

ಹಿರಿಯರು ಹೇಳುವ ಕತೆಗಳನ್ನು ಆಲಿಸಿ, ಅದನ್ನು ನಿಮ್ಮ ವಾಕ್ಯಗಳಲ್ಲಿ ಬರೆಯಿರಿ.

*****

©KTBS Not to be republished

| ಪಾಠ 2 | ನಮ್ಮ ಕರ್ನಾಟಕ |
|---|---|

# ನಮ್ಮ ಕರ್ನಾಟಕ

## ಪಾಠದ ಪರಿಚಯ

ನಮ್ಮ ನುಡಿ ಕನ್ನಡ. ನಮ್ಮ ನಾಡು ಕರ್ನಾಟಕ. ನಮ್ಮ ನಾಡಿನ ಚರಿತ್ರೆಯ ಬಗ್ಗೆ, ನಮ್ಮ ನಾಡಿನ ಪ್ರಾಕೃತಿಕ ಸಂಪನ್ಮೂಲಗಳ ಬಗ್ಗೆ, ನಮ್ಮ ಕೃಷಿ, ಉದ್ದಿಮೆ, ವ್ಯಾಪಾರ ಮುಂತಾದ ಸಂಗತಿಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಅದಕ್ಕಾಗಿ ಈ ಅಧ್ಯಾಯದಲ್ಲಿ ನಮ್ಮ ನಾಡಾದ ಕರ್ನಾಟಕದ ನಾಲ್ಕು ಕಂದಾಯ ವಿಭಾಗಗಳ ಬಗ್ಗೆ ಪರಿಚಯ ಮಾಡಿಕೊಡಲಾಗುವುದು. ಕರ್ನಾಟಕ ಏಕೀಕರಣದ ಬಗ್ಗೆ, ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಬಗ್ಗೆ ನೀವು ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಅನೇಕ ವಿಚಾರಗಳನ್ನು ತಿಳಿದುಕೊಂಡಿದ್ದೀರಿ. ನಮ್ಮ ನಾಡಿನ ನದಿಗಳು, ನಾವು ಬೆಳೆಯುವ ಬೆಳೆಗಳು, ನಾವು ಉತ್ಪಾದಿಸುವ ಸರಕುಗಳು, ನಮ್ಮ ಬ್ಯಾಂಕುಗಳು, ನಮ್ಮ ನೀರಾವರಿ ಯೋಜನೆಗಳು, ನಮ್ಮ ಅರಣ್ಯಗಳು, ನಮ್ಮ ವನ್ಯಪ್ರಾಣಿಗಳು ಮುಂತಾದ ಸಂಗತಿಗಳ ಬಗ್ಗೆ ಇಲ್ಲಿ ವಿವರಿಸಲಾಗುವುದು. ಆಡಳಿತದ ಅನುಕೂಲಕ್ಕೆ ನಮ್ಮ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳಾಗಿ ವಿಂಗಡಿಸಲಾಗಿದೆ. ಈ ನಾಲ್ಕು ವಿಭಾಗಗಳ ಬಗ್ಗೆ ಇಲ್ಲಿ ವಿವರಿಸಲಾಗುವುದು.

## ಸಾಮರ್ಥ್ಯಗಳು

ಈ ಅಧ್ಯಾಯವನ್ನು ಅಧ್ಯಯನ ಮಾಡಿದ ಮೇಲೆ ಮಕ್ಕಳು ಕೆಳಕಂಡ ಸಂಗತಿಗಳನ್ನು ಅರಿತುಕೊಳ್ಳುತ್ತಾರೆ

1] ನಮ್ಮ ಕರ್ನಾಟಕ ರಾಜ್ಯದ ಆಡಳಿತ ವಿಭಾಗಗಳ ಚರಿತ್ರೆ, ವಿಭಾಗಗಳಲ್ಲಿನ ಜಿಲ್ಲೆಗಳು, ಜಿಲ್ಲೆಗಳಲ್ಲಿನ ವಿಶಿಷ್ಟತೆಗಳು ಮತ್ತು ಅವುಗಳ ಮಹತ್ವವನ್ನು ಅರಿಯುವುದು.

2] ನಮ್ಮ ರಾಜ್ಯದ ವಿವಿಧ ವಿಭಾಗಗಳಲ್ಲಿ ಬೆಳೆಯುವ ಬೆಳೆಗಳು, ಜನಸಂಖ್ಯೆ, ಉದ್ದಿಮೆಗಳು, ನದಿಗಳು ಮುಂತಾದ ಸಂಗತಿಗಳ ಬಗ್ಗೆ ತಿಳುವಳಿಕೆ ಮೂಡುವುದು.

3] ನಮ್ಮ ವಿಭಾಗ ಯಾವುದು? ಅದರ ವಿಶೇಷತೆ ಏನು? ಅಲ್ಲಿನ ಪ್ರಾಕೃತಿಕ ಸಂಪನ್ಮೂಲಗಳು, ಅರಣ್ಯ, ವನ್ಯಮೃಗಗಳು, ಪಕ್ಷಿಧಾಮಗಳು ಮುಂತಾದವುಗಳ ಬಗ್ಗೆ ನಮಗೆ ಅರಿವು ಮೂಡಿಸುವುದು.

4] ನಮ್ಮ ನಾಡಿನ ಕಲೆ, ಸಾಹಿತ್ಯ, ಕ್ರೀಡೆ, ರಾಜಕಾರಣ ಮುಂತಾದ ಕ್ಷೇತ್ರದಲ್ಲಿ ಪ್ರಸಿದ್ಧರಾದವರ ಪರಿಚಯವನ್ನು ಮಕ್ಕಳು ತಿಳಿದುಕೊಳ್ಳುವುದು.

5] ಒಟ್ಟಾರೆ, ಈ ಅಧ್ಯಾಯದ ಅಧ್ಯಯನದಿಂದ ಮಕ್ಕಳಿಗೆ ಕರ್ನಾಟಕದ ಪ್ರಾದೇಶಿಕ ವಿಭಿನ್ನತೆಯ ಬಗ್ಗೆ ಖಚಿತವಾಗಿ ಮಾತನಾಡುವ ಸಾಮರ್ಥ್ಯ ಮೂಡುತ್ತದೆ.

©KTBS Not to be republished

## 1. ಕರ್ನಾಟಕದಲ್ಲಿ ಆಡಳಿತ ವಿಭಾಗಗಳು

ನಮ್ಮ ನಾಡು ಕರ್ನಾಟಕ. ನಮ್ಮ ರಾಜ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆಯಿದೆ ಎಂದು ಹೇಳಲಾಗಿದೆ. ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಪ್ರಾಚೀನ ಶಿಲಾಯುಗದ ಕೇಂದ್ರಗಳಿವೆ. ಚರಿತ್ರೆಕಾರರು ಅಂತಹ ಸ್ಥಳಗಳನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಗುರುತಿಸಿದ್ದಾರೆ. ನಮ್ಮ ರಾಜ್ಯದ ಭವ್ಯ ಚರಿತ್ರೆಯ ಬಗ್ಗೆ ಮುಂದಿನ ತರಗತಿಗಳಲ್ಲಿ ನಾವು ಅಧ್ಯಯನ ಮಾಡುತ್ತೇವೆ. ಈ ಅಧ್ಯಾಯದಲ್ಲಿ ನಮ್ಮ ರಾಜ್ಯದ ನಾಲ್ಕು ವಿಭಾಗಗಳ ಬಗ್ಗೆ ಮತ್ತು ಅವುಗಳ ವಿಶೇಷತೆಗಳ ಬಗ್ಗೆ ತಿಳಿದುಕೊಳ್ಳೋಣ. ಪ್ರತಿ ವಿಭಾಗದಲ್ಲಿನ ಜಿಲ್ಲೆಗಳು, ವಿಭಾಗಗಳಲ್ಲಿನ ಪ್ರಾಕೃತಿಕ ಸಂಪನ್ಮೂಲ, ಕೃಷಿ, ಉದ್ದಿಮೆ, ಶಿಕ್ಷಣ, ಸಾಹಿತ್ಯ, ಕಲೆ, ಪ್ರವಾಸಿ ತಾಣಗಳು ಮುಂತಾದ ವಿಷಯಗಳ ಬಗ್ಗೆ ಚರ್ಚೆ ಮಾಡೋಣ. ಬ್ರಿಟಿಷರ ಆಡಳಿತ ಕಾಲದಲ್ಲಿ ವಿವಿಧ ಜಿಲ್ಲೆಗಳನ್ನು ರೂಪಿಸಲಾಯಿತು. ಅನೇಕ ಸಂದರ್ಭಗಳಲ್ಲಿ ಜಿಲ್ಲಾ ಕೇಂದ್ರಗಳು ಬದಲಾಗಿವೆ. ಕೆಲವು ಜಿಲ್ಲೆಗಳು ಚಿಕ್ಕದಾಗಿವೆ ಮತ್ತು ಕೆಲವು ವಿಸ್ತರಣೆಗೊಂಡಿವೆ. ಉದಾಹರಣೆಗೆ ಇಂದು ಯಾವುದನ್ನು ವಿಜಯಪುರ ಎಂದು ಕರೆಯುತ್ತಿದ್ದೇವೆಯೋ ಅದರ ಜಿಲ್ಲಾ ಕೇಂದ್ರ ಕಲದಿಗಿಯಾಗಿತ್ತು. ಮತ್ತೆ ಅದನ್ನು ವಿಜಯಪುರಕ್ಕೆ ಬದಲಾಯಿಸಲಾಯಿತು. ಸ್ವಾತಂತ್ರ್ಯ ನಂತರ ಹೊಸ ಜಿಲ್ಲೆಗಳನ್ನು ರಚಿಸಲಾಗಿದೆ. ದೊಡ್ಡ ಜಿಲ್ಲೆಗಳನ್ನು ವಿಭಜಿಸಿ ಎರಡು ಜಿಲ್ಲೆಗಳನ್ನು ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕೆ ನಾಲ್ಕು ಕಂದಾಯ ವಿಭಾಗಗಳನ್ನು ರೂಪಿಸಲಾಗಿದೆ. ಅವುಗಳು ಹೀಗಿವೆ: ಬೆಂಗಳೂರು ವಿಭಾಗ (ಒಂಬತ್ತು ಜಿಲ್ಲೆಗಳು), ಮೈಸೂರು ವಿಭಾಗ (ಎಂಟು ಜಿಲ್ಲೆಗಳು), ಬೆಳಗಾವಿ ವಿಭಾಗ (ಏಳು ಜಿಲ್ಲೆಗಳು) ಮತ್ತು ಕಲಬುರಗಿ ವಿಭಾಗ (ಆರು ಜಿಲ್ಲೆಗಳು). ಒಟ್ಟು ಮೂವತ್ತು ಜಿಲ್ಲೆಗಳು. ಪ್ರತಿ ಜಿಲ್ಲೆಗೆ ಒಬ್ಬರು ಜಿಲ್ಲಾಧಿಕಾರಿಗಳಿರುತ್ತಾರೆ (ಡೆಪ್ಯೂಟಿ ಕಮೀಷನರ್). ಅದೇ ರೀತಿಯಲ್ಲಿ ವಿಭಾಗಕ್ಕೆ ವಿಭಾಗೀಯ ಅಧಿಕಾರಿಯಿರುತ್ತಾರೆ (ಡಿವಿಜನಲ್ ಕಮೀಷನರ್). ಈ ಭಾಗದಲ್ಲಿ ನಾಲ್ಕು ವಿಭಾಗಗಳಲ್ಲಿರುವ ಜಿಲ್ಲೆಗಳು, ಅವುಗಳ ವಿಶಿಷ್ಟತೆಗಳು, ಪ್ರಾಕೃತಿಕ ಸಂಪನ್ಮೂಲ, ಕೃಷಿ, ಉದ್ದಿಮೆ, ನದಿಗಳು, ಬೆಳೆಗಳು, ಅರಣ್ಯಗಳು, ವಾಯುಗುಣ, ಕಲೆ, ಸಾಹಿತ್ಯ, ಜಾನಪದ, ಕ್ರೀಡೆ, ಉತ್ಸವಗಳು ಮುಂತಾದ ಸಂಗತಿಗಳ ಬಗ್ಗೆ ತಿಳಿದುಕೊಳ್ಳೋಣ.

### ಬೆಂಗಳೂರು ವಿಭಾಗ

ನಮ್ಮ ರಾಜ್ಯದ ರಾಜಧಾನಿ ಬೆಂಗಳೂರು. ಇದು ಒಂದು ಆಡಳಿತ ಕಂದಾಯ ವಿಭಾಗವಾಗಿದೆ. ಈ ವಿಭಾಗದಲ್ಲಿ 9 ಜಿಲ್ಲೆಗಳಿವೆ. ಅವುಗಳ ಹೆಸರುಗಳು ಹೀಗಿವೆ: ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ (ಭೂಪಟ ನೋಡಿ). ನಮ್ಮ ರಾಜ್ಯದ ದಕ್ಷಿಣ ಭಾಗದಲ್ಲಿ ಇವು ನೆಲೆಗೊಂಡಿದೆ.

©KTBS Not to be republished




ವಿಭಾಗವಾರು ಕರ್ನಾಟಕ ರಾಜ್ಯದ ಭೂಪಟ

## ಚಾರಿತ್ರಿಕ ಹಿನ್ನೆಲೆ

ಕರ್ನಾಟಕದಷ್ಟೇ ಪ್ರಾಚೀನ ಚಾರಿತ್ರಿಕ ಹಿನ್ನೆಲೆ ಬೆಂಗಳೂರು ವಿಭಾಗಕ್ಕಿದೆ. ಈ ಭಾಗವನ್ನು ಮೊದಲು ಆಳಿದ ಅರಸರೆಂದರೆ ಕುವಲಾಲಪುರವನ್ನು (ಈಗಿನ ಕೋಲಾರ) ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಗಂಗರ ಮನೆತನದ ಅರಸರು. ಅವರ ಆಳ್ವಿಕೆ ಅಳಿದ ಮೇಲೆ ಈ ಪ್ರದೇಶವು ಚೋಳರ, ಹೊಯ್ಸಳರ, ವಿಜಯನಗರ, ಮರಾಠರ, ಮೈಸೂರು ಒಡೆಯರ ಮತ್ತು ವಿಜಯಪುರದ ಆದಿಲ್‌ಶಾಹಿ ಮನೆತನದ ಅರಸರ ಆಳ್ವಿಕೆಗೆ ಒಳಗಾಯಿತು. ವಿಜಯನಗರ ಅರಸರ ಆಳ್ವಿಕೆಯಲ್ಲಿ ಅನೇಕ ಪಾಳೆಗಾರರು ವಿವಿಧ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಅವರು ಆಳುತ್ತಿದ್ದ ಪ್ರದೇಶವನ್ನು ಪಾಳೆಪಟ್ಟು ಎಂದು ಕರೆಯಲಾಗುತ್ತಿತ್ತು. ಈ ಪಾಳೆಗಾರರಿಗೆ ನಾಯಕರೆಂಬ ಹೆಸರಿತ್ತು. ಈ ಪಾಳೆಗಾರರು ವಿಜಯನಗರ ಅರಸರಿಗೆ ವಿಧೇಯರಾಗಿದ್ದರು. ಅವರಿಗೆ ಪಾಳೆಗಾರರು ಕಪ್ಪ ಮತ್ತು ಕಾಣಿಕೆ ನೀಡುತ್ತಿದ್ದರು. ಪ್ರಮುಖ ಪಾಳೆಪಟ್ಟುಗಳೆಂದರೆ ಕೆಳದಿ, ಚಿತ್ರದುರ್ಗ, ಯಲಹಂಕ, ಚಿಕ್ಕಬಳ್ಳಾಪುರ ಮುಂತಾದವು.




ಬೆಂಗಳೂರು ವಿಭಾಗದ ಜಿಲ್ಲಾವಾರು ಭೂಪಟ

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಆಳಿದ ಮೂರು ರಾಜ ಮನೆತನಗಳು ಯಾವುವು?
2. ಬೆಂಗಳೂರು ವಿಭಾಗದಲ್ಲಿ ಎಷ್ಟು ಜಿಲ್ಲೆಗಳಿವೆ?
3. ಬೆಂಗಳೂರು ವಿಭಾಗವನ್ನು ಆಳಿದ ಎರಡು ಪಾಳೆಪಟ್ಟುಗಳ ಹೆಸರನ್ನು ಬರೆಯಿರಿ.

## ಪ್ರಾಕೃತಿಕ ಸಂಪನ್ಮೂಲ

ಪ್ರಕೃತಿಯಿಂದ ದತ್ತವಾದ ಸಂಗತಿಗಳನ್ನು ಪ್ರಾಕೃತಿಕ ಸಂಪನ್ಮೂಲ ಎಂದು ಕರೆಯುತ್ತೇವೆ. ನದಿ, ಕಾಡು, ಕಣಿವೆ, ಜಲಪಾತಗಳು, ಖನಿಜ ಗಣಿಗಳು, ವನ್ಯಮೃಗಗಳು, ಮಣ್ಣು ಮುಂತಾದವೆಲ್ಲ ಪ್ರಕೃತಿಯು

© KTBS Not to be republished

ನಮಗೆ ನೀಡಿರುವ ಸಂಪತ್ತು. ಈ ವಿಭಾಗವು ಉಷ್ಣ ವಲಯದ ಮಾನ್ಸೂನ್ ವಾಯುಗುಣವನ್ನು ಹೊಂದಿದೆ. ಆದರೆ ವಿಭಾಗದ ಎಲ್ಲ ಜಿಲ್ಲೆಗಳಲ್ಲಿ ಏಕರೂಪದ ಹವಾಮಾನವಿಲ್ಲ. ಕೋಲಾರ ಜಿಲ್ಲೆ ಅತಿ ಉಷ್ಣವಲಯಕ್ಕೆ ಸೇರಿದ್ದರೆ ಶಿವಮೊಗ್ಗ ಅತಿಯಾದ ಮಳೆ ಬೀಳುವ ಪ್ರದೇಶವಾಗಿದೆ. ಆದರೆ ಚಿತ್ರದುರ್ಗ ಅತಿ ಕಡಿಮೆ ಮಳೆ ಬೀಳುವ ಜಿಲ್ಲೆಯಾಗಿದೆ. ಉಳಿದ ಜಿಲ್ಲೆಗಳಾದ ತುಮಕೂರು, ದಾವಣಗೆರೆ, ರಾಮನಗರ, ಚಿಕ್ಕಬಳ್ಳಾಪುರ ಮುಂತಾದವು ಸಾಧಾರಣ ಮಳೆ ಬೀಳುವ ಜಿಲ್ಲೆಗಳಾಗಿವೆ.

ಈ ವಲಯದ ಅನೇಕ ಮುಖ್ಯ ನದಿಗಳು ಪಶ್ಚಿಮಘಟ್ಟದಲ್ಲಿ ಹುಟ್ಟುತ್ತವೆ. ಈ ವಿಭಾಗದ ಪ್ರಮುಖ ನದಿಗಳೆಂದರೆ ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ, ವೇದಾವತಿ, ಶಿಂಷಾ, ತುಂಗಭದ್ರಾ, ಶರಾವತಿ, ವರದಾ ಮುಂತಾದವು. ಶರಾವತಿಯು ಪಶ್ಚಿಮ ದಿಕ್ಕಿಗೆ ಹರಿಯುವ ನದಿ. ಇದರಿಂದ ನಿರ್ಮಾಣವಾದ ವಿಶ್ವವಿಖ್ಯಾತ ಜೋಗಜಲಪಾತ ಶಿವಮೊಗ್ಗ ಜಿಲ್ಲೆಯಲ್ಲಿದೆ. ಮುತ್ಯಾಲಮಡು ಎಂಬ ಜಲಾಶಯ ಬೆಂಗಳೂರು ನಗರ ಜಿಲ್ಲೆಯಲ್ಲಿದೆ. ಗಾಜನೂರು ಅಣೆಕಟ್ಟೆ ಮತ್ತು ತುಂಗಾ ಅಣೆಕಟ್ಟೆ ಶಿವಮೊಗ್ಗ ಜಿಲ್ಲೆಯಲ್ಲಿವೆ. ಈ ವಿಭಾಗದಲ್ಲಿ ನೂರಾರು ಪ್ರಸಿದ್ಧ ಕೆರೆಗಳಿವೆ. ಮೈಸೂರು ಅರಸರು ಅನೇಕ ಅಣೆಕಟ್ಟೆಗಳನ್ನು ಕಟ್ಟಿಸಿದ್ದರು. ವಾಣಿವಿಲಾಸ ಅಣೆಕಟ್ಟೆ ಅಂತಹ ಒಂದು ನೀರಾವರಿ ಯೋಜನೆಯಾಗಿದೆ. ಇದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿದೆ. ಅದೇ ರೀತಿಯಲ್ಲಿ ಮಾರ್ಕೋನಹಳ್ಳಿ ಜಲಾಶಯ ತುಮಕೂರು ಜಿಲ್ಲೆಯಲ್ಲಿದೆ.

ಪರಿಸರ ಮಾಲಿನ್ಯ, ಅರಣ್ಯ ನಾಶ, ಅತಿಯಾದ ನಗರೀಕರಣ ಮುಂತಾದ ಕಾರಣಗಳಿಂದ ನಮ್ಮ ಅನೇಕ ನದಿಗಳು ಬತ್ತಿ ಹೋಗುತ್ತಿವೆ. ಬೆಂಗಳೂರು ನಗರ ಜಿಲ್ಲೆಯ ಅನೇಕ ನದಿಗಳು ನಾಶದ ಅಂಚನ್ನು ತಲುಪಿವೆ. ಅನೇಕ ಕೆರೆಗಳು ಭೂ ಆಕ್ರಮಣದಿಂದ ನಾಶವಾಗುತ್ತಿವೆ. ಇದರಿಂದಾಗಿ ನೀರಿನ ತೀವ್ರ ಅಭಾವ ಉಂಟಾಗುತ್ತಿದೆ. ಕೆರೆಗಳ, ಜಲಮೂಲಗಳ ಮತ್ತು ಅಂತರ್ಜಲದ ರಕ್ಷಣೆಗೆ ನಾವೆಲ್ಲರೂ ಗಮನ ನೀಡುವ ಅಗತ್ಯವಿದೆ.

ಈ ವಿಭಾಗದಲ್ಲಿ ಅನೇಕ ಖನಿಜ ನಿಕ್ಷೇಪಗಳಿವೆ. ಇಡೀ ದೇಶದಲ್ಲಿ ಸಮೃದ್ಧವಾದ ಚಿನ್ನದ ಗಣಿಗಳು ಕರ್ನಾಟಕ ರಾಜ್ಯದಲ್ಲಿದ್ದು, ಕೋಲಾರ ಚಿನ್ನದ ಗಣಿ ಪ್ರಸಿದ್ಧವಾಗಿತ್ತು. ಆದರೆ ಅಲ್ಲಿನ ಚಿನ್ನದ ಅದಿರು ಮುಗಿದು ಹೋಗಿದೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಬ್ಬಿಣದ ಅದಿರು ನಿಕ್ಷೇಪಗಳಿವೆ ಮತ್ತು ಚಿತ್ರದುರ್ಗದಲ್ಲಿ ತಾಮ್ರದ ಗಣಿಗಳಿವೆ. ಪರಮಾಣು ಶಕ್ತಿ ಉತ್ಪಾದನೆಗೆ ಅಗತ್ಯವಾದ ಖನಿಜವು ಚಿತ್ರದುರ್ಗದಲ್ಲಿ ದೊರೆಯುತ್ತದೆ ಎಂದು ಹೇಳಲಾಗಿದೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಪ್ರಾಕೃತಿಕ ಸಂಪನ್ಮೂಲ ಎಂದರೇನು? ಉದಾಹರಣೆ ನೀಡಿ.
2. ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಯಾವುದು?
3. ಬೆಂಗಳೂರು ವಿಭಾಗದಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಲು ಕಾರಣಗಳೇನು?
4. ಬೆಂಗಳೂರು ವಿಭಾಗದ ಎರಡು ಜಲಪಾತಗಳ ಹೆಸರನ್ನು ಬರೆಯಿರಿ.

## ಅರಣ್ಯಗಳು, ವನ್ಯಪ್ರಾಣಿಗಳು, ರಾಷ್ಟ್ರೀಯ ಉದ್ಯಾನಗಳು

ಬೆಂಗಳೂರು ವಿಭಾಗದ ಶಿವಮೊಗ್ಗ ಜಿಲ್ಲೆಯಲ್ಲಿ ದಟ್ಟ ಅರಣ್ಯವಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ ಕಡಿಮೆ. ಈ ವಿಭಾಗದ ಜಿಲ್ಲೆಗಳಲ್ಲಿ ನಿತ್ಯ ಹರಿದ್ವರ್ಣ ಅರಣ್ಯದಿಂದ ಎಲೆ ಉದುರುವ ಅರಣ್ಯದವರೆಗೆ ವಿವಿಧ ಬಗೆಯ ಅರಣ್ಯಗಳಿವೆ. ಸಹ್ಯಾದ್ರಿ ಪರ್ವತ ಶ್ರೇಣಿಯು ಶಿವಮೊಗ್ಗ ಜಿಲ್ಲೆಯ ಗಡಿ ಭಾಗದಲ್ಲಿ ಹಾದು ಹೋಗುತ್ತದೆ. ಬಿದಿರು, ಆಲದ ಮರಗಳು,

©KTBS Not to be republished

ಹುಣಿಸೆ ಮರಗಳು, ಶ್ರೀಗಂಧ, ದಿಂಡಿಗ, ತೇಗ, ಜಾಲಿ, ಮಾವಿನಮರಗಳು, ಬೇವಿನಮರಗಳು ಮುಂತಾದವು ಇಲ್ಲಿನ ಅರಣ್ಯಗಳಲ್ಲಿ ಬೆಳೆಯುತ್ತವೆ. ಕಿರು ಅರಣ್ಯ ಉತ್ಪನ್ನಗಳು ಅನೇಕರಿಗೆ ವರಮಾನದ ಮೂಲಗಳಾಗಿವೆ. ಈ ವಿಭಾಗದಲ್ಲಿರುವ ಅತಿ ಎತ್ತರದ ಬೆಟ್ಟವೆಂದರೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ಹಾಲುರಾಮೇಶ್ವರ ಗುಡ್ಡ. ಇತರೆ ಪ್ರಸಿದ್ಧ ಗುಡ್ಡಗಳೆಂದರೆ ಕವಲೆದುರ್ಗ, ಚಂದ್ರಗುತ್ತಿ, ಕೊಡಚಾದ್ರಿ, ನಂದಿದುರ್ಗ ಇತ್ಯಾದಿ.

ಈ ವಿಭಾಗದಲ್ಲಿ ಅನೇಕ ವಿಧದ ವನ್ಯಪ್ರಾಣಿಗಳಿವೆ. ಕಾಡುಬೆಕ್ಕು, ಹುಲಿ, ಚಿರತೆ, ಕಾಡೆಮ್ಮೆ, ಕಾಡಹಂದಿ, ಜಿಂಕೆಗಳು, ಕರಡಿ, ತೋಳ ಮುಂತಾದವು. ಅರಣ್ಯ ರಕ್ಷಣೆಗಾಗಿ ಮತ್ತು ವನ್ಯಪ್ರಾಣಿಗಳ ಪೋಷಣೆಗಾಗಿ ಅನೇಕ ಅರಣ್ಯಧಾಮಗಳನ್ನು, ವನ್ಯಪ್ರಾಣಿ ಧಾಮಗಳನ್ನು, ರಾಷ್ಟ್ರೀಯ ಉದ್ಯಾನಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರು ವಿಭಾಗದಲ್ಲಿರುವ ಪ್ರಮುಖ ಧಾಮಗಳು ಹೀಗಿವೆ:

ಜೋಗಿಮಟ್ಟಿ ಅರಣ್ಯಧಾಮ, ಚಿತ್ರದುರ್ಗ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು, ಭದ್ರಾ ವನ್ಯಮೃಗ ಧಾಮ– ಶಿವಮೊಗ್ಗ, ಶರಾವತಿ ವನ್ಯಮೃಗ ಧಾಮ– ಶಿವಮೊಗ್ಗ, ಶೆಟ್ಟಿಹಳ್ಳಿ ವನ್ಯಮೃಗಧಾಮ– ಶಿವಮೊಗ್ಗ, ಗುಡವಿ ಪಕ್ಷಿಧಾಮ– ಶಿವಮೊಗ್ಗ ಜಿಲ್ಲೆ, ಮಂಡಗದ್ದೆ ಪಕ್ಷಿಧಾಮ– ಶಿವಮೊಗ್ಗ ಜಿಲ್ಲೆ, ಕಗ್ಗಲಡು ಪಕ್ಷಿ ಧಾಮ– ತುಮಕೂರು ಜಿಲ್ಲೆ, ರಾಮದೇವರಬೆಟ್ಟ ರಣಹದ್ದು ಪಕ್ಷಿಧಾಮ– ರಾಮನಗರ, ಜಯಮಂಗಲಿ ಕೃಷ್ಣಮೃಗ ವನ್ಯಧಾಮ, ತುಮಕೂರು.

ಮಕ್ಕಳೆ, ನೀವು ವನ್ಯಮೃಗಗಳಾದ ಹುಲಿ, ಕರಡಿ, ಚಿರತೆ, ಆನೆ, ಜಿಂಕೆ ಮುಂತಾದವುಗಳನ್ನು ಅರಣ್ಯ ಪ್ರದೇಶದಲ್ಲಿ ನೋಡಲು ಬಯಸುವಿರಾ? ಹಾಗಾದರೆ ನಿಮ್ಮ ವಿಭಾಗದಲ್ಲಿರುವ ವನ್ಯಮೃಗಧಾಮಗಳಿಗೆ, ಪಕ್ಷಿಧಾಮಗಳಿಗೆ ಭೇಟಿ ನೀಡಿ. ಅರಣ್ಯದಲ್ಲಿರುವ ಪ್ರಾಣಿಗಳನ್ನು ನೋಡಿ ಸಂತೋಷಪಡಿ.



**ಹುಲಿ – ಬನ್ನೇರುಘಟ್ಟ ವನ್ಯ ಮೃಗಧಾಮ**

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಯಾವ ಜಿಲ್ಲೆಯಲ್ಲಿದೆ?
2. ಬೆಂಗಳೂರು ವಿಭಾಗದಲ್ಲಿರುವ ಅತಿ ಎತ್ತರದ ಗುಡ್ಡದ ಹೆಸರನ್ನು ಬರೆಯಿರಿ.
3. ಬೆಂಗಳೂರು ವಿಭಾಗದಲ್ಲಿರುವ ಎರಡು ಪಕ್ಷಿಧಾಮಗಳ ಹೆಸರನ್ನು ತಿಳಿಸಿ.
4. ರಾಮನಗರ ಜಿಲ್ಲೆಯಲ್ಲಿರುವ ಪಕ್ಷಿಧಾಮದಲ್ಲಿ ಯಾವ ಪಕ್ಷಿಯನ್ನು ರಕ್ಷಿಸಲಾಗುತ್ತಿದೆ?

© KTBS Not to be republished

## ಕೃಷಿ ಮತ್ತು ಉದ್ದಿಮೆಗಳ ಬೆಳವಣಿಗೆ

ಕೃಷಿಯು ಬೆಂಗಳೂರು ವಿಭಾಗದ ಜನರ ಪ್ರಧಾನ ಕಸುಬಾಗಿದೆ. ಈ ವಿಭಾಗದಲ್ಲಿ ಹೆಚ್ಚು ಒಣ ಭೂಮಿ ಬೇಸಾಯವಿದೆ. ಮಳೆಯನ್ನು ನಂಬಿಕೊಂಡೇ ಇಲ್ಲಿ ವ್ಯವಸಾಯ ನಡೆಯುತ್ತಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ನೀರಾವರಿಯಿದೆ. ಈ ವಿಭಾಗದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಹೆಚ್ಚಾಗಿದೆ. ಎರೆ ಮಣ್ಣು ಕೆಲವು ಭಾಗದಲ್ಲಿದೆ. ಈ ವಿಭಾಗದ ಪ್ರಮುಖ ಬೆಳೆಗಳೆಂದರೆ ರಾಗಿ, ಮೆಕ್ಕೆ ಜೋಳ, ಭತ್ತ, ಕಡಲೆಕಾಯಿ, ಬೇಳೆಕಾಳು ಮುಂತಾದವು. ಪ್ರಮುಖ ವಾಣಿಜ್ಯ ಬೆಳೆಗಳೆಂದರೆ ತೆಂಗಿನಕಾಯಿ, ಅಡಕೆ, ಹತ್ತಿ, ಕಬ್ಬು ಮುಂತಾದವು. ರೇಷ್ಮೆ ಉದ್ಯಮಕ್ಕೆ ಮೂಲವಾದ ಹಿಪ್ಪುನೇರಳೆಯನ್ನು ಬೆಂಗಳೂರು ಜಿಲ್ಲೆ, ರಾಮನಗರ ಜಿಲ್ಲೆಗಳಲ್ಲಿ ಬೆಳೆಯುತ್ತಾರೆ. ಸಪೋಟ, ಪಪ್ಪಾಯ, ಹಲಸಿನಹಣ್ಣು, ಕಿತ್ತಳೆಹಣ್ಣು, ಬಾಳೆಹಣ್ಣು ಮುಂತಾದ ಹಣ್ಣುಗಳನ್ನು ಬೆಳೆಯಲಾಗುತ್ತದೆ.

ಈ ವಿಭಾಗದಲ್ಲಿನ ಜನರು ಹೆಚ್ಚಾಗಿ ರಾಗಿ ಮುದ್ದೆ, ಮತ್ತು ಅಕ್ಕಿ ಬಳಸುತ್ತಾರೆ. ರಾಗಿ ಮತ್ತು ಅಕ್ಕಿ ರೊಟ್ಟಿಯನ್ನು ತಿನ್ನುತ್ತಾರೆ. ಇತ್ತೀಚಿಗೆ ಗೋಧಿ ಚಪಾತಿಯನ್ನು ಬಳಸುವುದನ್ನು ರೂಢಿಸಿಕೊಂಡಿದ್ದಾರೆ. ಹಬ್ಬಗಳಲ್ಲಿ ಪಾಯಸ, ಹೋಳಿಗೆ, ಸಿಹಿಕಿಚ್ಚಡಿ, ಶಾವಿಗೆ ಮುಂತಾದ ಸಿಹಿ ತಿನಿಸುಗಳನ್ನು ಸೇವಿಸುತ್ತಾರೆ.

ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಸರ್ಕಾರ ಸ್ಥಾಪಿಸಿದೆ. ಅಲ್ಲಿ ರೈತರು ತಮ್ಮ ಸರಕುಗಳನ್ನು ಮಾರಾಟ ಮಾಡಬಹುದು. ಸರ್ಕಾರವು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಉಗ್ರಾಣಗಳನ್ನು ನಿರ್ಮಿಸಿದೆ. ಅಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ದಾಸ್ತಾನಿಡಬಹುದು.

## ಉದ್ದಿಮೆಗಳು


ಸರ್. ಎಂ. ವಿಶ್ವೇಶ್ವರಯ್ಯ

ನಮ್ಮ ರಾಜ್ಯದ ಕೈಗಾರಿಕಾ ವಲಯದ ನಿರ್ಮಾತೃ ಸರ್. ಎಂ. ವಿಶ್ವೇಶ್ವರಯ್ಯ. ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಮುಂದಾಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಿದರು. ಇಂದು ಕೈಗಾರಿಕೆಗಳನ್ನು ಸ್ಥಾಪಿಸದೆ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಬೆಂಗಳೂರು, ಭದ್ರಾವತಿ, ತುಮಕೂರು, ಶಿವಮೊಗ್ಗ ಮುಂತಾದ ಸ್ಥಳಗಳಲ್ಲಿ ದೊಡ್ಡ ಕಾರ್ಖಾನೆಗಳನ್ನು ನಿರ್ಮಿಸಲಾಗಿದೆ. ಬೆಂಗಳೂರು ರಾಷ್ಟ್ರದಲ್ಲಿಯೇ ಪ್ರಮುಖ ಕೈಗಾರಿಕಾ ಕೇಂದ್ರವಾಗಿದೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯಿದೆ. ಇದನ್ನು 1923ರಲ್ಲಿ ಸ್ಥಾಪಿಸಲಾಗಿದೆ. ಅದನ್ನು ಇಂದು ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತ ಕಾರ್ಖಾನೆ ಎಂದು ಕರೆಯಲಾಗುತ್ತಿದೆ. ಅಲ್ಲಿ ಕಾಗದದ ಕಾರ್ಖಾನೆಯೂ ಇದೆ. ಇದನ್ನು 1936ರಲ್ಲಿ ಸ್ಥಾಪಿಸಲಾಗಿದೆ. ರಾಜ್ಯದ ಮೊದಲ ಸಿಮೆಂಟ್ ಕಾರ್ಖಾನೆಯು ಭದ್ರಾವತಿಯಲ್ಲಿ ಸ್ಥಾಪನೆಗೊಂಡಿತು. ತುಮಕೂರು ಜಿಲ್ಲೆಯ ಅಮ್ಮಸಂದ್ರದಲ್ಲಿ ಬಿರ್ಲಾ ಕಂಪನಿಯ ಸಿಮೆಂಟ್ ಕಾರ್ಖಾನೆಯಿದೆ. ಬೆಂಗಳೂರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ದಿಮೆಗಳಿಗೆ ಪ್ರಸಿದ್ಧಿಯಾಗಿದೆ. ಕೈಗಾರಿಕೆಗಳು ಉದ್ಯೋಗದ ಮೂಲಗಳಾಗಿವೆ.

ಬಟ್ಟೆ ರಫ್ತು ವ್ಯಾಪಾರದಲ್ಲಿ ದೇಶದಲ್ಲಿ ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. ನಮ್ಮ ವಿಭಾಗದ ದೊಡ್ಡಬಳ್ಳಾಪುರ, ಆನೇಕಲ್ ಮುಂತಾದ ನಗರಗಳಲ್ಲಿ ಸರ್ಕಾರ ಸಿದ್ಧ ಉಡುಪಿನ ಪಾರ್ಕುಗಳನ್ನು ಸ್ಥಾಪಿಸಿದೆ. ಬೆಂಗಳೂರಿನಲ್ಲಿ ವಿಮಾನ ಕಾರ್ಖಾನೆ, ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಉದ್ದಿಮೆಗಳು ಕಾರ್ಯ ನಿರತವಾಗಿವೆ. ಕೆಲವು ಉದ್ದಿಮೆಗಳು ಸಾರ್ವಜನಿಕ ವಲಯದಲ್ಲಿದ್ದರೆ ಉಳಿದವು ಖಾಸಗಿ ಮಾಲೀಕತ್ವದಲ್ಲಿವೆ.

©KTBS Not to be republished

## ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಬೆಂಗಳೂರು ವಿಭಾಗದಲ್ಲಿನ ಪ್ರಮುಖ ಆಹಾರ ಬೆಳೆಗಳು ಯಾವುವು?
2. ಹಿಪ್ಪುನೇರಳೆ ಎಲೆಯು ಯಾವ ಉದ್ದಿಮೆಗೆ ಕಚ್ಚಾ ಸಾಮಗ್ರಿಯಾಗಿದೆ?
3. ಭದ್ರಾವತಿಯಲ್ಲಿರುವ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯನ್ನು ಯಾವ ವರ್ಷ ಆರಂಭಿಸಲಾಯಿತು?
4. ಬೆಂಗಳೂರು ವಿಭಾಗದಲ್ಲಿ ಯಾವ ಸ್ಥಳಗಳಲ್ಲಿ ಸಿದ್ಧ ಉಡುಪು ಪಾರ್ಕುಗಳನ್ನು ಸ್ಥಾಪಿಸಲಾಗಿದೆ?

## ಕಲೆ, ಸಾಹಿತ್ಯ, ಜಾನಪದ, ನಾಟಕ, ನೃತ್ಯ

ಬೆಂಗಳೂರು ವಿಭಾಗದ ಮೂವರು ಸಾಹಿತಿಗಳಿಗೆ ದೇಶದ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಗಳಲ್ಲೊಂದಾದ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಅವರು ಯಾರೆಂದರೆ ರಾಷ್ಟ್ರಕವಿ ಕುವೆಂಪು (ಕೆ.ವಿ. ಪುಟ್ಟಪ್ಪ), ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಡಾ. ಯು.ಆರ್. ಅನಂತಮೂರ್ತಿ. ಇದರಿಂದ ಬೆಂಗಳೂರು ವಿಭಾಗವು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಸಾಧನೆಯ ಮಹತ್ವವನ್ನು ಅರಿತುಕೊಳ್ಳಬಹುದು. ಪ್ರಾಚೀನ ಕಾಲದಿಂದಲೂ ಈ ವಿಭಾಗವು ಕಲೆ, ಸಾಹಿತ್ಯಕ್ಕೆ ಹೆಸರುವಾಸಿಯಾಗಿದೆ. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವ ಅಕ್ಕಮಹಾದೇವಿ ಮತ್ತು ಅಲ್ಲಮಪ್ರಭುಗಳು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಗೆ ಸೇರಿದವರು. ಅದೇ ರೀತಿಯಲ್ಲಿ ದಾಸ ಪರಂಪರೆಗೆ ಸೇರಿದ ಶ್ರೀಪಾದರಾಯರು ಮುಂತಾದವರು ಬೆಂಗಳೂರು ವಿಭಾಗಕ್ಕೆ ಸೇರಿದವರು.

ಆಧುನಿಕ ಕಾಲಕ್ಕೆ ಬಂದರೆ ಕುವೆಂಪು, ಡಿ.ವಿ.ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪಿ. ಲಂಕೇಶ್, ನಿಸಾರ್ ಅಹಮದ್, ಟಿ. ಪಿ. ಕೈಲಾಸಂ, ಎಂ.ಕೆ. ಇಂದಿರಾ, ತರಾಸು, ಡಾ. ಅನುಪಮಾ ನಿರಂಜನ, ಹಾ.ಮಾ. ನಾಯಕ, ಪಿ. ಸೀತಾರಾಮಯ್ಯ, ಬಿ.ಜಿ.ಎಲ್. ಸ್ವಾಮಿ, ಎಂ.ವಿ. ಸೀತಾ ರಾಮಯ್ಯ, ಕೆ.ವಿ. ಸುಬ್ಬಣ್ಣ, ಯು.ಆರ್. ಅನಂತಮೂರ್ತಿ, ಬರಗೂರು ರಾಮಚಂದ್ರಪ್ಪ, ಶತಾಯುಷಿ ವೆಂಕಟಸುಬ್ಬಯ್ಯ, ಜಿ.ಎಸ್.ಶಿವರುದ್ರಪ್ಪ, ದಲಿತಕವಿ ಡಾ. ಸಿದ್ದಲಿಂಗಯ್ಯ, ಡಾ. ಡಿ.ಆರ್. ನಾಗರಾಜ್, ಕಿ. ರಂ. ನಾಗರಾಜ್, ನಾ. ಡಿಸೋಜ, ಕೋಟಗಾನಹಳ್ಳಿ ರಾಮಯ್ಯ, ಕೆ.ಬಿ. ಸಿದ್ದಯ್ಯ, ದೊಡ್ಡ ರಂಗೇಗೌಡ, ಪ್ರತಿಭಾ ನಂದಕುಮಾರ್ ಮುಂತಾದವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಸಾಹಿತಿಗಳು.


ಮಾಸ್ತಿ ವೆಂಕಟೇಶ ಅಯ್ಯಂಗಾರ್


ಕುವೆಂಪು


ಯು.ಆರ್. ಅನಂತಮೂರ್ತಿ


ಜಿ.ಎಸ್. ಶಿವರುದ್ರಪ್ಪ


ನಿಸಾರ್ ಅಹಮದ್


ಪಿ. ಲಂಕೇಶ್


ಡಿ.ವಿ. ಗುಂಡಪ್ಪ


ಅನುಪಮ ನಿರಂಜನ


ಎಂ. ಕೆ. ಇಂದಿರಾ


ನಾ. ಡಿಸೋಜ

©KTBS Not to be republished

ಸಾಹಿತ್ಯದಷ್ಟೇ ನಾಟಕ ಕ್ಷೇತ್ರದಲ್ಲಿಯೂ ಬೆಂಗಳೂರು ವಿಭಾಗದ ಸಾಧನೆ ಮಹತ್ವದ್ದಾಗಿದೆ. ಗುಬ್ಬಿವೀರಣ್ಣ ಅವರ ಹೆಸರು ಕನ್ನಡ ನಾಟಕ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ. ನಾಟಕರತ್ನ, ನಾಟಕ ಸಾರ್ವಭೌಮ ಎಂಬ ಬಿರುದುಗಳು ಅವರಿಗಿದ್ದವು. ಅವರು ಸ್ಥಾಪಿಸಿದ ಗುಬ್ಬಿ ನಾಟಕ ಕಂಪನಿಯು ಶತಮಾನೋತ್ಸವವನ್ನು ಕಂಡಿದೆ. ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಗಮನಿಸಬೇಕಾದ ಇನ್ನೊಂದು ಹೆಸರು – ಸುಬ್ಬಯ್ಯ ನಾಯ್ಡು ಅವರದು. ಇವರು ಕನ್ನಡದ ಮೊದಲನೇ ವಾಕ್ಚಿತ್ರ 'ಸತಿ ಸುಲೋಚನ'ದ ನಾಯಕ ನಟರು. ಕಲ್ಚರ್ಡ್ ಕಮೆಡಿಯನ್ ಎಂದು ಹೆಸರು ಮಾಡಿದ ಕೆ. ಹಿರಣ್ಣಯ್ಯ ಮತ್ತು ಅವರ ಪುತ್ರ ಮಾಸ್ಟರ್ ಹಿರಣ್ಣಯ್ಯ ಅವರ ರಂಗಭೂಮಿ ಕೊಡುಗೆ ಪ್ರಶಂಸನೀಯ. ನೃತ್ಯ ಲೋಕಕ್ಕೆ ಅಪಾರ ಕಾಣಿಕೆ ನೀಡಿರುವ ಶ್ರೀಮತಿ ಮಾಯಾರಾವ್ ಬೆಂಗಳೂರಿನವರು. ಇವರು ಪ್ರಸಿದ್ಧ ನೃತ್ಯ ಕಲಾವಿದರು. ನೃತ್ಯ ಶಿಕ್ಷಣಕ್ಕಾಗಿ ನಾಟ್ಯ ಸರಸ್ವತಿ ಎಂಬ ಶಾಲೆಯನ್ನು ತೆರೆದು ಅನೇಕ ಕಲಾವಿದರಿಗೆ ನೃತ್ಯವನ್ನು ಹೇಳಿಕೊಟ್ಟಿದ್ದಾರೆ. ಬೆಂಗಳೂರು ಈಗ ಚಲನಚಿತ್ರೋದ್ಯಮದ ಪ್ರಮುಖ ಕೇಂದ್ರವಾಗಿದೆ. ಚಲನಚಿತ್ರದ ಕೇಂದ್ರಶಕ್ತಿಯಾಗಿ ಡಾ. ರಾಜಕುಮಾರ್ ಅವರನ್ನು ಒಳಗೊಂಡಂತೆ ಅನೇಕರ ಕೊಡುಗೆಯಿಂದ ಚಲನಚಿತ್ರೋದ್ಯಮ ಬೆಳೆಯುತ್ತಿದೆ. ಡಾ. ವಿಷ್ಣುವರ್ಧನ್, ಶಂಕರನಾಗ್ ಮುಂತಾದ ನಟರನ್ನೂ ಇಲ್ಲಿ ನೆನೆಯಬಹುದು. ಹೊಸ ಅಲೆಯ ಚಿತ್ರಗಳ ಕೊಡುಗೆಯೂ ಅಪಾರವಾಗಿದೆ.



**ಡಾ. ರಾಜಕುಮಾರ್**



**ಡಾ. ವಿಷ್ಣುವರ್ಧನ್**



**ಶಂಕರನಾಗ್**



**ಮಾಯಾರಾವ್**



**ಸುಬ್ಬಯ್ಯ ನಾಯ್ಡು**



**ಗುಬ್ಬಿ ವೀರಣ್ಣ**



**ಜಾನಪದ ಲೋಕ**

ಜನಪದ ಸಾಹಿತ್ಯ ಮತ್ತು ಕಲೆಗೆ ಈ ವಿಭಾಗ ಪ್ರಸಿದ್ಧಿಯಾಗಿದೆ. ಪ್ರಸಿದ್ಧ ಜನಪದ ತಜ್ಞರಾದ ಸಾಹಿತಿ ಎಚ್.ಎಲ್. ನಾಗೇಗೌಡ ಅವರು ಸ್ಥಾಪಿಸಿರುವ 'ಜಾನಪದ ಲೋಕ' ರಾಮನಗರ ಜಿಲ್ಲೆಯಲ್ಲಿದೆ. ಅದೊಂದು ಅದ್ಭುತ ಜಾನಪದ ವಸ್ತು ಸಂಗ್ರಹಾಲಯವಾಗಿದೆ. ಇಲ್ಲಿ ನಮ್ಮ ನಾಡಿಗೆ ಸೇರಿದ ವಿವಿಧ ಜನಪದ ಕಲೆ, ಸಾಹಿತ್ಯ, ನಾಟಕಗಳಿಗೆ ಸೇರಿದ ಕಲಾಕೃತಿಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಬೆಂಗಳೂರು ವಿಭಾಗದ ಪ್ರಸಿದ್ಧ ಜನಪದ ಕಲೆಗಳ ವಿವರ ಹೀಗಿದೆ:

ಬೆಂಗಳೂರಿನಲ್ಲಿ ಪ್ರತಿ ವರ್ಷ ನಡೆಯುವ ಕರಗ ಉತ್ಸವ ಒಂದು ಜನಪದ ಪ್ರಕಾರವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧವಾದ ಸೋಮನ ಕುಣಿತ ಮತ್ತೊಂದು ಜಾನಪದ ಪ್ರದರ್ಶನ ಕಲೆಯಾಗಿದೆ. ಈ ವಿಭಾಗಕ್ಕೆ ವಿಶೇಷವಾದ ಜಾನಪದ ನಾಟಕವೆಂದರೆ ಮೂಡಲಪಾಯ ಯಕ್ಷಗಾನ. ಗಾರುಡಿ ಕುಣಿತ, ಡೊಳ್ಳು ಕುಣಿತ, ಕಂಸಾಲೆ ಕುಣಿತ ಮುಂತಾದವು ಜಾನಪದ ಕಲೆಗಳಾಗಿವೆ. ಚಿತ್ರಕಲೆಗೆ ಆರ್.ಎಸ್. ನಾಯ್ಡು, ರುಮಾಲೆ ಚನ್ನಬಸವಯ್ಯ, ವೆಂಕಟಪ್ಪ ಮುಂತಾದವರ ಕೊಡುಗೆ ಅನನ್ಯ.



ಕರಗ ಉತ್ಸವ



ವೆಂಕಟಪ್ಪ ಆರ್ಟ್ ಗ್ಯಾಲರಿ

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಜ್ಞಾನಪೀಠ ಪ್ರಶಸ್ತಿ ಪಡೆದ ಬೆಂಗಳೂರು ವಿಭಾಗಕ್ಕೆ ಸೇರಿದ ಮೂವರು ಸಾಹಿತಿಗಳ ಹೆಸರುಗಳನ್ನು ಬರೆಯಿರಿ.
2. ಪ್ರಸಿದ್ಧ ಜಾನಪದ ಮ್ಯೂಸಿಯಂ 'ಜಾನಪದ ಲೋಕ'ವನ್ನು ಸ್ಥಾಪಿಸಿದವರಾರು?
3. ಬೆಂಗಳೂರು ನಗರದಲ್ಲಿ ಪ್ರತಿ ವರ್ಷ ನಡೆಯುವ ಪ್ರಸಿದ್ಧ ಉತ್ಸವ ಯಾವುದು?

### ಶಿಕ್ಷಣ ಮತ್ತು ಆರೋಗ್ಯ



ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ

ಬೆಂಗಳೂರು ವಿಭಾಗ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉನ್ನತ ಸಾಧನೆ ಮಾಡಿದೆ. ಭಾರತ ರತ್ನ ಪ್ರಶಸ್ತಿ ಪಡೆದ ಇಬ್ಬರು ಈ ವಿಭಾಗದ ಕೋಲಾರ ಜಿಲ್ಲೆಗೆ ಸೇರಿದ್ದಾರೆ. ಅವರಲ್ಲಿ ಒಬ್ಬರು ಸರ್. ಎಂ. ವಿಶ್ವೇಶ್ವರಯ್ಯ ಮತ್ತು ಮತ್ತೊಬ್ಬರು ವಿಜ್ಞಾನಿ ಸಿ.ಎನ್.ಆರ್.ರಾವ್. ನೋಬಲ್ ಪ್ರಶಸ್ತಿ ಪಡೆದ ಸರ್. ಸಿ. ವಿ. ರಾಮನ್ ಅವರು ಬೆಂಗಳೂರಿನಲ್ಲಿ ಸಂಶೋಧನೆ ನಡೆಸಿದ್ದರು.

ಬೆಂಗಳೂರು ಪ್ರಸಿದ್ಧ ಶಿಕ್ಷಣ ಕೇಂದ್ರವಾಗಿದೆ. ಬೆಂಗಳೂರು ವಿಭಾಗದಲ್ಲಿ ಅನೇಕ ಪ್ರಸಿದ್ಧ ಸಾರ್ವಜನಿಕ ಮತ್ತು ಖಾಸಗಿ

Not to be republished ©KTBS

ವಿಶ್ವವಿದ್ಯಾಲಯಗಳಿವೆ. ಇದಲ್ಲದೆ ಇಲ್ಲಿ ಕೇಂದ್ರ ಸರ್ಕಾರದ ಸಂಶೋಧನಾ ಸಂಸ್ಥೆಗಳು ಮತ್ತು ವೈಜ್ಞಾನಿಕ ಪ್ರಯೋಗಾಲಯಗಳಿವೆ. ಬೆಂಗಳೂರು, ತುಮಕೂರು, ಶಿವಮೊಗ್ಗ, ದಾವಣಗೆರೆಗಳಲ್ಲಿ ವಿಶ್ವವಿದ್ಯಾಲಯಗಳಿವೆ. ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾಲಯವಿದೆ. ಸ್ವಾತಂತ್ರ್ಯಪೂರ್ವದಿಂದಲೂ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಅನೇಕ ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿವೆ. ಸಿದ್ಧಗಂಗಾ ಮಠವು ಶ್ರೀಶಿವಕುಮಾರಸ್ವಾಮಿಗಳ ನೇತೃತ್ವದಲ್ಲಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅಕ್ಷರ ಮತ್ತು ಅನ್ನ ದಾಸೋಹದ ಕಾರ್ಯ ನಡೆಸುತ್ತಿದೆ. ರಾಮನಗರ ಜಿಲ್ಲೆಯಲ್ಲಿ ಜನಿಸಿದ ಶ್ರೀ ಬಾಲಗಂಗಾಧರ ಸ್ವಾಮೀಜಿಯವರ ನೇತೃತ್ವದಲ್ಲಿ ಬೆಳೆದ ಆದಿಚುಂಚನಗಿರಿ ಮಠದ ಶೈಕ್ಷಣಿಕ ಸೇವೆಯು ಅಪೂರ್ವವಾಗಿದ್ದು ಮೂಲಶಿಕ್ಷಣ, ವೃತ್ತಿ ಶಿಕ್ಷಣದ ಕಾಲೇಜುಗಳನ್ನು ನಡೆಸುತ್ತಿದೆ. ಚಿತ್ರದುರ್ಗದ ಮುರುಘರಾಜೇಂದ್ರ ಮಠ ಮತ್ತು ಸಿರಿಗೆರೆ ತರಳಬಾಳು ಮಠಗಳ ಶೈಕ್ಷಣಿಕ ಸೇವೆಯೂ ಗಮನಾರ್ಹ. ಈ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿಯೂ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಕೆಲವು ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ.


ಶ್ರೀ ಶಿವಕುಮಾರಸ್ವಾಮೀಜಿ


ಸಿದ್ಧಗಂಗಾ ಮಠ

ಆರೋಗ್ಯಕ್ಕೆ ಸಂಬಂಧಿಸಿದಂತೆಯೂ ಈ ವಿಭಾಗವು ಮಹತ್ವದ ಸಾಧನೆ ಮಾಡಿದೆ. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲಾಗಿದೆ. ಶಿಶುಮರಣ ಪ್ರಮಾಣ ಕಡಿಮೆಯಾಗಿದೆ. ಪೋಲಿಯೋ, ಸಿಡುಬು ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲಾಗಿದೆ. ಶಿವಮೊಗ್ಗ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ವ್ಯಾಪಕವಾಗಿದ್ದ ಮಂಗನ ಖಾಯಿಲೆಯನ್ನು ತಡೆಗಟ್ಟಲಾಗಿದೆ. ಆದರೂ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳು ಅಪೌಷ್ಠಿಕತೆಯನ್ನು ಎದುರಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಆರೋಗ್ಯ ಉಪಕೇಂದ್ರಗಳು ಜನರಿಗೆ ವೈದ್ಯಕೀಯ ಸೌಲಭ್ಯ ಒದಗಿಸುತ್ತಿವೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತವಾದ ಜಿಲ್ಲಾ ಆಸ್ಪತ್ರೆಗಳಿವೆ. ದೊಡ್ಡ ದೊಡ್ಡ ಗ್ರಾಮಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳಿವೆ. ತಾಲ್ಲೂಕು ಆಸ್ಪತ್ರೆಗಳು ತಾಲ್ಲೂಕು

©KTBS Not to be republished

ಕೇಂದ್ರಗಳಲ್ಲಿವೆ. ಸಂತಾನೋತ್ಪತ್ತಿ ಆರೋಗ್ಯವನ್ನು ಉತ್ತಮ ಪಡಿಸುವುದಕ್ಕಾಗಿ ಸರ್ಕಾರವು ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 24x7 ಕೇಂದ್ರಗಳೆಂದು ಘೋಷಿಸಿದೆ. ಗ್ರಾಮೀಣ ಪ್ರದೇಶದಲ್ಲಿನ ಗರ್ಭಿಣಿಯರಿಗೆ ಸೇವೆ ಒದಗಿಸುವುದಕ್ಕಾಗಿ ಸಂಚಾರಿ ವಾಹನ ವ್ಯವಸ್ಥೆಯನ್ನು ಮಾಡಲಾಗಿದೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಶಿವಮೊಗ್ಗ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿದ್ದ ರೋಗದ ಹೆಸರೇನು?
2. ಭಾರತರತ್ನ ಪ್ರಶಸ್ತಿ ಪಡೆದ ಬೆಂಗಳೂರು ವಿಭಾಗದ ಇಬ್ಬರ ಹೆಸರನ್ನು ಬರೆಯಿರಿ.
3. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರ ಸ್ಥಾಪಿಸುವ ಆಸ್ಪತ್ರೆ ಕೇಂದ್ರಗಳನ್ನು ಏನೆಂದು ಕರೆಯಲಾಗುತ್ತದೆ?

## ಸಾಂಸ್ಕೃತಿಕ ಸಂಪತ್ತು

ಬೆಂಗಳೂರು ವಿಭಾಗವು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಇಲ್ಲಿ ಅರಣ್ಯ ಮತ್ತು ಪ್ರಾಣಿ ಸಂಪತ್ತಿದೆ. ನದಿಗಳು, ಕಣಿವೆಗಳು, ಗಿರಿಧಾಮಗಳು, ಧಾರ್ಮಿಕ ಸ್ಥಳಗಳು, ಪ್ರವಾಸಿ ಕೇಂದ್ರಗಳು, ಸಾಂಸ್ಕೃತಿಕ ಉತ್ಸವಗಳು, ಜಾತ್ರೆ, ಹಬ್ಬಗಳು ಮುಂತಾದ ಸಂಗತಿಗಳಿಂದ ಕೂಡಿ ಇದು ಸಮೃದ್ಧವಾದ ವಿಭಾಗವಾಗಿದೆ. ರಾಜಕೀಯ ಮುತ್ಸದ್ದಿಗಳು ರಾಜ್ಯ ನಿರ್ಮಾಣಕ್ಕೆ ಅಪಾರ ಕಾಣಿಕೆ ನೀಡಿದ್ದಾರೆ. ಕರ್ನಾಟಕ ಏಕೀಕರಣ ರೂವಾರಿ ಕೆಂಗಲ್ ಹನುಮಂತಯ್ಯ ಅವರು ಈ ವಿಭಾಗಕ್ಕೆ ಸೇರಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ವಿಧಾನಸೌಧ ಕಟ್ಟಡ ನಿರ್ಮಾಣವಾಯಿತು. ಮತ್ತೊಬ್ಬ ಏಕೀಕರಣ ಹೋರಾಟಗಾರ ಎಸ್. ನಿಜಲಿಂಗಪ್ಪ ಅವರು ಮುಖ್ಯಮಂತ್ರಿಯಾಗಿ ರಾಜ್ಯ ನಿರ್ಮಾಣ ಕಾರ್ಯಗಳನ್ನು ಕೈಗೊಂಡರು. ನಮ್ಮ ರಾಜ್ಯದಲ್ಲಿ ಸಮಾಜವಾದಿ ಚಳವಳಿಗೆ ಅಡಿಪಾಯ ಹಾಕಿದವರು ಶಾಂತವೇರಿ ಗೋಪಾಲಗೌಡರು ಶಿವಮೊಗ್ಗ ಜಿಲ್ಲೆಯವರು. ಪರಿಸರ ಪೋಷಣೆಗೆ ಮತ್ತೊಂದು ಹೆಸರು ಸಾಲುಮರದ ತಿಮ್ಮಕ್ಕ. ನಮ್ಮ ದೇಶದ ಕ್ರಿಕೆಟ್‌ಗೆ ನಮ್ಮ ಕೊಡುಗೆ ಅನಿಲ್ ಕುಂಬ್ಳೆ. ಯೋಗ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿರುವ ಬಿ.ಕೆ.ಎಸ್. ಅಯ್ಯಂಗಾರ್ ಮತ್ತು ಮಲ್ಲಾಡಿಹಳ್ಳಿ ಶ್ರೀರಾಘವೇಂದ್ರ ಸ್ವಾಮೀಜಿ ಈ ವಿಭಾಗದವರು. ಈ ವಿಭಾಗದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ.



ಲಾಲ್‌ಬಾಗ್

Not to be Republished © KTBS

## ಸ್ವಾತಂತ್ರ್ಯ ಹೋರಾಟಗಾರರು


ಕೆಂಗಲ್ ಹನುಮಂತಯ್ಯ


ಎಸ್. ನಿಜಲಿಂಗಪ್ಪ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಈ ವಿಭಾಗದ ಅನೇಕ ಮುತ್ಸದ್ದಿಗಳು ಭಾಗವಹಿಸಿದ್ದರು. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿದ್ದ ಕೆ. ಸಿ. ರೆಡ್ಡಿ ಅವರು, ಎರಡನೆಯ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಸೇರಿದಂತೆ ವಿಶಾಲ ಮೈಸೂರು ರಾಜ್ಯದ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ, ಸಮಾಜವಾದಿ ದುರೀಣ ಶಾಂತವೇರಿ ಗೋಪಾಲಗೌಡ, ಕಡಿದಾಳ್ ಮಂಜಪ್ಪ, ತಿ.ತಾ. ಶರ್ಮ, ಭಾಗೀರಥಮ್ಮ ಮುಂತಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಕೆಂಗಲ್ ಹನುಮಂತಯ್ಯ ಮತ್ತು ಎಸ್. ನಿಜಲಿಂಗಪ್ಪ ಅವರು ಕರ್ನಾಟಕ ಏಕೀಕರಣದ ರೂವಾರಿಗಳೂ ಹೌದು. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಮುಂದಿನ ಅಧ್ಯಾಯಗಳಲ್ಲಿ ನೀವು ತಿಳಿದುಕೊಳ್ಳುತ್ತೀರಿ.

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯ ಹೆಸರನ್ನು ಬರೆಯಿರಿ.
2. ಇಬ್ಬರು ಕರ್ನಾಟಕ ಏಕೀಕರಣದ ರೂವಾರಿಗಳ ಹೆಸರನ್ನು ಬರೆಯಿರಿ.

## ಬೆಂಗಳೂರು ವಿಭಾಗದ ಜಿಲ್ಲೆಗಳ ವಿಶಿಷ್ಟತೆಗಳು

ಈಗಾಗಲೇ ತಿಳಿಸಿರುವಂತೆ ಈ ವಿಭಾಗದಲ್ಲಿ 9 ಜಿಲ್ಲೆಗಳಿವೆ. ಪ್ರತಿಯೊಂದು ಜಿಲ್ಲೆಯು ತನ್ನದೇ ಆದ ವಿಶಿಷ್ಟತೆಯನ್ನು ಮೆರೆದಿದೆ. ಈ ವಿಭಾಗದ ದಾವಣಗೆರೆ (1997) ರಾಮನಗರ (2007) ಮತ್ತು ಚಿಕ್ಕಬಳ್ಳಾಪುರ (2007) ಹೊಸದಾಗಿ ರಚಿತವಾದ ಜಿಲ್ಲೆಗಳು.

## ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ನಗರವು ಕರ್ನಾಟಕದ ರಾಜಧಾನಿ. ಸರ್ಕಾರದ ಆಡಳಿತ ಕೇಂದ್ರವಾದ ವಿಧಾನಸೌದ ಇಲ್ಲಿದೆ. ರಾಜ್ಯದ ಉಚ್ಚ ನ್ಯಾಯಾಲಯ ಇಲ್ಲಿದೆ. ಬ್ರಿಟಿಷರ ಆಡಳಿತದ ಅವಧಿಯಲ್ಲಿ ಸ್ಥಾಪಿಸಲಾದ ಲಾಲ್‌ಬಾಗ್, ಕಬ್ಬನ್ ಉದ್ಯಾನವನ ಬೆಂಗಳೂರಿನಲ್ಲಿದೆ. ಈ ನಗರದಿಂದ 50 ಕಿ.ಮೀ. ದೂರದಲ್ಲಿ ನಂದಿ ಬೆಟ್ಟ ಬೇಸಿಗೆ ವಿಹಾರಧಾಮವಿದೆ. ಎಚ್.ಎಮ್.ಟಿ, ಬಿ.ಇ.ಎಲ್ ಮುಂತಾದ ಬೃಹತ್ ಸಾರ್ವಜನಿಕ ವಲಯದ ಉದ್ದಿಮೆಗಳಿವೆ. ಇನ್ಫೋಸಿಸ್, ಬಯೋಕಾನ್ ಮುಂತಾದ ಖಾಸಗಿ ಉದ್ದಿಮೆಗಳಿವೆ. ಈ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳಿವೆ. ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಮತ್ತು ಆನೇಕಲ್. ಈ ನಗರದ ಆಡಳಿತ ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿದೆ. ಈ ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ.

© KTBS Not to be republished

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮಕ್ಕಳು ನೋಡಲೇಬೇಕಾದ ಸ್ಥಳ. ಇಲ್ಲಿ ನಾವು ಸಫಾರಿ ಹೋಗಬಹುದು. ಮುಕ್ತವಾಗಿ ವಿಹರಿಸುತ್ತಿರುವ ವನ್ಯಮೃಗಗಳನ್ನು ನೋಡಬಹುದು. ಅದರೊಳಗೆ ಹಾವುಗಳ ಉದ್ಯಾನವನವಿದೆ.

**ಪ್ರಸಿದ್ಧ ದೇವಾಲಯಗಳು :** ಹಲಸೂರಿನಲ್ಲಿರುವ ಸೋಮೇಶ್ವರ ದೇವಾಲಯ, ನಾಡಪ್ರಭು ಕೆಂಪೇಗೌಡರ ಕಾಲದ ಗವಿಗಂಗಾಧರೇಶ್ವರ ದೇವಾಲಯ, ದೊಡ್ಡಬಸವಣ್ಣನ ದೇವಾಲಯ, ಧರ್ಮರಾಯಸ್ವಾಮಿ ದೇವಾಲಯ, ಕೋಟೆ ವೆಂಕಟರಮಣ ದೇವಾಲಯ ಮುಂತಾದವು. ಈ ನಗರದಲ್ಲಿ ನೂರಾರು ವರ್ಷ ಹಳೆಯದಾದ ಚರ್ಚುಗಳಿವೆ. ಅವುಗಳಲ್ಲಿ ಹೆಸರುವಾಸಿಯಾದವು: ಸೆಂಟ್ ಆಂಡ್ರೂಸ್ ಚರ್ಚ್, ಸೆಂಟ್ ಜೋಸೆಫ್ ಚರ್ಚ್. ಅದೇ ರೀತಿಯಲ್ಲಿ ಮುಸ್ಲಿಮರಿಗೆ ಪವಿತ್ರವಾದ ಪ್ರಸಿದ್ಧ ಮಸೀದಿಗಳಿವೆ. ಸಂಗೀನ್ ಜಾಮಿಯಾ ಮಸೀದಿ, ಜುಮ್ಮಾ ಮಸೀದಿ, ಜಾಮಿಯಾ ಮಸೀದಿ. ಇತ್ತೀಚಿಗೆ ನಿರ್ಮಿಸಿರುವ ಮಸೀದಿಯೆಂದರೆ 1981 ರಲ್ಲಿ ನಿರ್ಮಿಸಿರುವ ಖಾದ್ರಿಯಾ ಮಸೀದಿ ಮತ್ತು ಬನ್ನೇರುಘಟ್ಟ ರಸ್ತೆಯಲ್ಲಿ 2015ರಲ್ಲಿ ನಿರ್ಮಿಸಿರುವ ಬಿಲಾಲ್ ಮಸೀದಿ.


**ಟಿಪ್ಪು ಅರಮನೆ**

**ಬೆಂಗಳೂರಿನ ಪ್ರಸಿದ್ಧ ಚರ್ಚುಗಳು :** ಸೆಂಟ್ ಮೇರೀಸ್ ಬ್ಯಾಸಿಕಲ್, ಸೆಂಟ್ ಮಾರ್ಕ್ ಕೆಥಡ್ರಲ್, ಇನ್‌ಫ್ಯಾಂಟ್ ಜೀಸಸ್ ಚರ್ಚ್, ಸೆಂಟ್ ಫ್ರಾನ್ಸಿಸ್ ಜೇವಿಯರ್ ಕೆಥೆಡ್ರಲ್ ಮುಂತಾದವು


**ವಿಧಾನಸೌಧ**


**ಸೆಂಟ್ ಮೇರೀಸ್ ಚರ್ಚ್**


**ಜಾಮೀಯ ಮಸೀದಿ**

**ಬೆಂಗಳೂರು ಗ್ರಾಮೀಣ ಜಿಲ್ಲೆ :** ಈ ಜಿಲ್ಲೆಯು 1986ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳಿವೆ. ಅವುಗಳು: ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆ. ನೆಲಮಂಗಲ ತಾಲ್ಲೂಕಿನಲ್ಲಿರುವ ಶಿವಗಂಗೆ ಪ್ರಸಿದ್ಧವಾದ ಯಾತ್ರಾಕ್ಷೇತ್ರವಾಗಿದೆ. ದೇವನಹಳ್ಳಿಯಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ.

## ರಾಮನಗರ ಜಿಲ್ಲೆ

ಈ ಜಿಲ್ಲೆಯನ್ನು ಆಗಸ್ಟ್ 23, 2007ರಲ್ಲಿ ರಚಿಸಲಾಯಿತು. ಈ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳಿವೆ. ಚನ್ನಪಟ್ಟಣ, ಕನಕಪುರ, ರಾಮನಗರ ಮತ್ತು ಮಾಗಡಿ. ಈ ಜಿಲ್ಲೆಯು ರಾಜ್ಯದ ಪ್ರಮುಖ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ. ಬಿಡದಿ ಕೈಗಾರಿಕಾ ಪ್ರದೇಶವು ರಾಜ್ಯದ ಪ್ರಮುಖ ಕೇಂದ್ರವಾಗಿದೆ. ಅಲ್ಲಿ ಸಾವಿರಾರು ಸಣ್ಣ ಮತ್ತು ಮಧ್ಯಮಗಾತ್ರದ ಉದ್ದಿಮೆಗಳು ಕಾರ್ಯನಿರತವಾಗಿವೆ. ಈ ಜಿಲ್ಲೆಯು ಎರಡು ಮುಖ್ಯ ಉತ್ಪನ್ನಗಳಿಗೆ ಹೆಸರುವಾಸಿ. ಮೊದಲನೆಯದು ಚನ್ನಪಟ್ಟಣದ ಆಟದ ಗೊಂಬೆಗಳು. ಎರಡನೆಯದು ರೇಷ್ಮೆ ಉತ್ಪಾದನೆ.

©KTBS Not to be Republished







ಚನ್ನಪಟ್ಟಣ ಗೊಂಬೆಗಳು

### ಚಿಕ್ಕಬಳ್ಳಾಪುರ ಜಿಲ್ಲೆ

ಕೋಲಾರ ಜಿಲ್ಲೆಯನ್ನು ವಿಭಜಿಸಿ ನವೆಂಬರ್ 10, 2007ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಹೊಸದಾಗಿ ರಚಿಸಲಾಯಿತು. ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ, ಶಿಡ್ಲಘಟ್ಟ, ಗುಡಿಬಂಡೆ, ಚಿಂತಾಮಣಿ – ಈ ಜಿಲ್ಲೆಯ ತಾಲ್ಲೂಕುಗಳು. ನಂದಿದುರ್ಗ ಇಲ್ಲಿ ಪ್ರಸಿದ್ಧ ಗಿರಿಧಾಮ. ಇಲ್ಲಿ ಯೋಗನಂದೀಶ್ವರ ಮತ್ತು ಭೋಗನಂದೀಶ್ವರ ದೇವಾಲಯಗಳಿವೆ. ಚಿಂತಾಮಣಿ ತಾಲ್ಲೂಕಿನ ಕೈವಾರವು ತಾತಯ್ಯ ಅನ್ನುವ ಅನುಭಾವಿಗಳ ಕೇಂದ್ರವಾಗಿದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ವಿಧುರಾಶ್ವತ್ಥ ಎಂಬ ಚಾರಿತ್ರಿಕ ಸ್ಥಳವಿದೆ. ಇಲ್ಲಿ 1938ರಲ್ಲಿ ಬ್ರಿಟಿಷರ ವಿರುದ್ಧ ಧ್ವಜ ಸತ್ಯಾಗ್ರಹ



ಕೈವಾರ ತಾತಯ್ಯ



ಕೈವಾರ ದೇವಾಲಯ



ವಿಧುರಾಶ್ವತ್ಥ (ವೀರಸೌಧ)



ನಂದಿದುರ್ಗ

ನಡೆದಿತ್ತು. ಅದರ ಸ್ಮಾರಕವಾಗಿ ಅಲ್ಲಿ ವೀರಸೌಧವನ್ನು ನಿರ್ಮಿಸಲಾಗಿದೆ. ಬಾಗೇಪಲ್ಲಿ ತಾಲ್ಲೂಕಿನ ನಿಡುಮಾಮಿಡಿ ಮಠ ಪ್ರಸಿದ್ಧವಾಗಿದೆ. ಈ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕು ವ್ಯಾಪಾರ ಕೇಂದ್ರವಾಗಿದೆ. ಇದು ರೇಷ್ಮೆ ವ್ಯಾಪಾರಕ್ಕೆ ಪ್ರಸಿದ್ಧಿಯಾಗಿದೆ.

### ಕೋಲಾರ ಜಿಲ್ಲೆ



ಅಂತರಗಂಗೆ



ಹೈದರಾಲಿ ದರ್ಗಾ

©KTBS Not to be republished

ಕೋಲಾರ ಅಂದ ತಕ್ಷಣ ನೆನಪಿಗೆ ಬರುವ ಸಂಗತಿಯೆಂದರೆ ಅಲ್ಲಿನ ಚಿನ್ನದ ಗಣಿಗಳು. ದುರದೃಷ್ಟದ ಸಂಗತಿಯೆಂದರೆ 2003ರಲ್ಲಿ ಚಿನ್ನದ ಗಣಿಯನ್ನು ಮುಚ್ಚಲಾಯಿತು. ಬಂಗಾರಪೇಟೆ, ಕೋಲಾರ, ಮಾಲೂರು, ಮುಳಬಾಗಲು ಮತ್ತು ಶ್ರೀನಿವಾಸಪುರ ಇಲ್ಲಿನ ತಾಲ್ಲೂಕುಗಳು. ಈ ಜಿಲ್ಲೆಯಲ್ಲಿ ಜನರ ಮುಖ್ಯ ಕಸುಬು ವ್ಯವಸಾಯ, ಹೈನುಗಾರಿಕೆ, ಪುಷ್ಪೋದ್ಯಮ ಮತ್ತು ರೇಷ್ಮೆ ಉತ್ಪಾದನೆ. ಇದು ಒಣಭೂಮಿಯಿಂದ ಕೂಡಿದ ಬರ ಪೀಡಿತ ಜಿಲ್ಲೆ. ಈ ಜಿಲ್ಲೆಯ ಚಿಕ್ಕತಿರುಪತಿಯು ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಈ ಜಿಲ್ಲೆಯಲ್ಲಿ ಅನೇಕ ಕೆರೆಗಳಿವೆ. ಅಂತರಗಂಗೆ ಎಂಬ ಸ್ಥಳವು ಮಹತ್ವದ ಚಾರಿತ್ರಿಕ ಸ್ಥಳವಾಗಿದೆ. ಹಜರತ್ ಬಾಬಾ, ಹೈದರಾಲಿ ದರ್ಗಾ, ಶ್ರೀಪಾದರಾಯರ ಬೃಂದಾವನ ಸಹ ಕೋಲಾರ ಜಿಲ್ಲೆಯಲ್ಲಿದೆ.

## ತುಮಕೂರು ಜಿಲ್ಲೆ


ಏಕಶಿಲಾ ಬೆಟ್ಟ, ಮಧುಗಿರಿ


ದೇವರಾಯನ ದುರ್ಗ

ಈ ಜಿಲ್ಲೆಯು 1832ರಲ್ಲಿ ಅಸ್ತಿತ್ವಕ್ಕೆ ಬಂತು. ಇದು ತೆಂಗಿನಕಾಯಿ ಬೆಳೆಗೆ ಪ್ರಸಿದ್ಧವಾಗಿದೆ. ನಮ್ಮ ರಾಜ್ಯದ ಒಂದು ದೊಡ್ಡ ಜಿಲ್ಲೆ. ಈ ಜಿಲ್ಲೆಯು ಹತ್ತು ತಾಲ್ಲೂಕುಗಳನ್ನು ಹೊಂದಿದೆ. ಅವುಗಳು: ಕೊರಟಗೆರೆ, ಗುಬ್ಬಿ, ಚಿಕ್ಕನಾಯಕನಹಳ್ಳಿ, ಪಾವಗಡ, ಕುಣಿಗಲ್, ತುರುವೇಕೆರೆ, ತಿಪಟೂರು, ಮಧುಗಿರಿ, ತುಮಕೂರು ಮತ್ತು ಸಿರಾ. ಅನೇಕ ಪಾಳೆಗಾರರು ಕಟ್ಟಿಸಿರುವ ಅನೇಕ ಕೋಟೆಗಳು ಇಲ್ಲಿವೆ. ಮಧುಗಿರಿ, ಮಿಡಿಗೇಶಿ, ಪಾವಗಡ, ನಿಡುಗಲ್, ದೇವರಾಯನದುರ್ಗ, ಹುಲಿಯೂರುದುರ್ಗ ಮತ್ತು ಸಿರಾಗಳಲ್ಲಿ ಅಂತಹ ಕೋಟೆಗಳಿವೆ. ಈ ಜಿಲ್ಲೆಯು ಶಿಕ್ಷಣ ಸಂಸ್ಥೆಗಳಿಗೆ ಹೆಸರುವಾಸಿಯಾಗಿದೆ. ಶ್ರೀ ಶಿವಕುಮಾರಸ್ವಾಮಿಗಳ ನೇತೃತ್ವದಲ್ಲಿ ಸಿದ್ಧಗಂಗೆಯಲ್ಲಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅನ್ನ ಮತ್ತು ಅಕ್ಷರ ದಾಸೋಹ ನಡೆಯುತ್ತದೆ. ಪ್ರಸಿದ್ಧ ಸಿದ್ದಾರ್ಥ ಶಿಕ್ಷಣ ಸಂಸ್ಥೆಯನ್ನು ಇಲ್ಲಿ ನೆನೆಯಬಹುದು. ಇಡೀ ದೇಶದಲ್ಲಿ ವಿಶಿಷ್ಟವಾದ ಕುದುರೆ ತಳಿ ಅಭಿವೃದ್ಧಿ ಕೇಂದ್ರ ಕುಣಿಗಲ್ಲಿನಲ್ಲಿದೆ. ಇಂದು ಇದು ರಾಜ್ಯದ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ. ಮಧುಗಿರಿಯಲ್ಲಿ ಏಷಿಯಾ ಖಂಡದಲ್ಲಿಯೇ ಅತ್ಯಂತ ಎತ್ತರವಾದ ಏಕಶಿಲಾ ಬೆಟ್ಟವಿದೆ. ದೇವರಾಯನದುರ್ಗವು ಪುರಾಣ ಪ್ರಸಿದ್ಧ ಪಡೆದಿದೆ. ಕುಣಿಗಲ್ ಕೆರೆಯ ಬಗ್ಗೆ ಪ್ರಸಿದ್ಧ ಜನಪದ ಗೀತೆಯಿದೆ. ಕೊರಟಗೆರೆ ತಾಲ್ಲೂಕಿನ ಗೊರವನಹಳ್ಳಿಯ ಲಕ್ಷ್ಮೀ ದೇವಾಲಯ ಪ್ರಸಿದ್ಧವಾಗಿದೆ.

© KTBS Not to be republished

## ಚಿತ್ರದುರ್ಗ ಜಿಲ್ಲೆ



ಚಿತ್ರದುರ್ಗ ಬೆಟ್ಟ



ಮದಕರಿ ನಾಯಕ

ಚಿತ್ರದುರ್ಗ ಜಿಲ್ಲೆಯು ಏಳುಸುತ್ತಿನ ಅಭೇದ್ಯ ಕೋಟೆಗೆ ಹೆಸರುವಾಸಿಯಾಗಿದೆ. ಈ ಕೋಟೆಯೊಳಗೆ ನೀರಿನ ಕೊಳಗಳಿವೆ ಮತ್ತು ದೇವಾಲಯಗಳಿವೆ. ಈ ಜಿಲ್ಲೆಯಲ್ಲಿನ ತಾಲ್ಲೂಕುಗಳು ಹೀಗಿವೆ: ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ, ಹೊಸದುರ್ಗ, ಹೊಳಲ್ಕೆರೆ ಮತ್ತು ಮೊಳಕಾಲ್ಮೂರು. ಈ ಜಿಲ್ಲೆಯು ಪಾಳೆಗಾರರಿಗೆ ಪ್ರಸಿದ್ಧವಾಗಿದೆ. ಮದಕರಿ ನಾಯಕ ಎಂಬ ಪಾಳೆಗಾರರು ಹೆಸರುವಾಸಿಯಾಗಿದ್ದಾರೆ. ಒನಕೆ ಓಬವ್ವ ಸಾಹಸಕ್ಕೆ ಹೆಸರಾಗಿದ್ದಾಳೆ. ಎಸ್. ನಿಜಲಿಂಗಪ್ಪ, ಮಲ್ಲಾಡಿಹಳ್ಳಿ ರಾಘವೇಂದ್ರಸ್ವಾಮಿ, ತಳುಕಿನ ವೆಂಕಣ್ಣಯ್ಯ, ತರಾಸು, ಶ್ರೀ ಶಿವಮೂರ್ತಿ ಮುರುಘಾ ಶರಣರು, ತರಳಬಾಳು ಸ್ವಾಮೀಜಿಗಳು, ಕಬೀರಾನಂದಾಶ್ರಮದ ಶಿವಲಿಂಗಾನಂದಸ್ವಾಮಿ, ಜಗಳೂರ ಇಮಾಂಸಾಬ್ ಮುಂತಾದವರು ಜಿಲ್ಲೆಯ ಪ್ರಸಿದ್ಧ ವ್ಯಕ್ತಿಗಳು.

## ದಾವಣಗೆರೆ ಜಿಲ್ಲೆ



ಶಾಂತಿ ಸಾಗರ ಕೆರೆ

ಚಿತ್ರದುರ್ಗ ಜಿಲ್ಲೆಯನ್ನು ವಿಭಜಿಸಿ 1997ರಲ್ಲಿ ದಾವಣಗೆರೆ ಜಿಲ್ಲೆಯನ್ನು ರಚಿಸಲಾಯಿತು. ಹೊಸದಾಗಿ ರಚನೆಯಾದ ಜಿಲ್ಲೆಗೆ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳನ್ನು ಸೇರಿಸಲಾಯಿತು. ಈ ಜಿಲ್ಲೆಯು ಆರು ತಾಲ್ಲೂಕುಗಳನ್ನು ಹೊಂದಿದೆ. ಅವುಗಳು ಯಾವುವೆಂದರೆ: ಹರಿಹರ, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ, ಜಗಳೂರು ಮತ್ತು ದಾವಣಗೆರೆ. ದಾವಣಗೆರೆ ನಗರವು ಕರ್ನಾಟಕದ ಮ್ಯಾಂಚೆಸ್ಟರ್ ಎಂಬ ಹೆಸರನ್ನು ಪಡೆದಿತ್ತು. ಇದು 1960ರ ದಶಕದಲ್ಲಿ ಜವಳಿ ಉತ್ಪನ್ನಕ್ಕೆ ಹೆಸರುವಾಸಿಯಾಗಿತ್ತು. ಆದರೆ ಕಚ್ಚಾ ಹತ್ತಿಯ ಕೊರತೆಯಿಂದ ಜವಳಿ ಮಿಲ್ಲುಗಳೆಲ್ಲ ಈಗ ಮುಚ್ಚಿ ಹೋಗಿವೆ. ಇಂದು ಜಿಲ್ಲೆಯಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳು

©KTBS Not to be republished

ಕೆಲಸ ಮಾಡುತ್ತಿವೆ. ನೂರಾರು ಆಹಾರ ಸಂಸ್ಕರಣಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕದ ಪ್ರಸಿದ್ಧ ಶಿಕ್ಷಣ ಕೇಂದ್ರ ಎಂಬ ಹೆಸರನ್ನು ಅದು ಗಳಿಸಿದೆ. ಪ್ರಸಿದ್ಧ ಬಾಪೂಜಿ ಶಿಕ್ಷಣ ಸಂಸ್ಥೆಯು ಇಲ್ಲಿದೆ.

ಇಡೀ ದಕ್ಷಿಣ ಭಾರತದಲ್ಲಿ ಅತಿ ದೊಡ್ಡ ಕೆರೆ 'ಶಾಂತಿ ಸಾಗರ' ಚನ್ನಗಿರಿಯಲ್ಲಿದೆ. ಇದರ ಸುತ್ತಳತೆ ಸುಮಾರು 64 ಕಿ.ಮೀಟರ್‌ಗಳು. ಹರಿಹರ ನಗರದಲ್ಲಿ ಹೊಯ್ಸಳ ಕಾಲದ ಹರಿಹರೇಶ್ವರ ದೇವಾಲಯವಿದೆ.

## ಶಿವಮೊಗ್ಗ ಜಿಲ್ಲೆ

ಕರ್ನಾಟಕದ ಒಂದು ಪ್ರಸಿದ್ಧ ಜಿಲ್ಲೆ ಇದಾಗಿದೆ. ಪ್ರಾಕೃತಿಕ ಸೌಂದರ್ಯಕ್ಕೆ ಇದು ಹೆಸರುವಾಸಿಯಾಗಿದೆ. ಈ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿವೆ. ಅವು: ತೀರ್ಥಹಳ್ಳಿ, ಸಾಗರ, ಸೊರಬ, ಭದ್ರಾವತಿ, ಶಿವಮೊಗ್ಗ, ಶಿಕಾರಿಪುರ ಮತ್ತು ಹೊಸನಗರ. ಇದನ್ನು ಕರ್ನಾಟಕದ ಭತ್ತದ ಕಣಜ ಎಂದು ಹೇಳಲಾಗುತ್ತದೆ. ತುಂಗಭದ್ರ, ಶರಾವತಿ, ವರದಾ ಮತ್ತು ಕುಮದ್ವತಿ ನದಿಗಳು ಜಿಲ್ಲೆಯಲ್ಲಿವೆ. ಇಲ್ಲಿನ ಜೋಗ್ ಜಲಪಾತವು ವಿಶ್ವ ಪ್ರಸಿದ್ಧವಾಗಿದೆ. ಜಿಲ್ಲೆಯ ಶಂಕರಘಟ್ಟದಲ್ಲಿ ಕುವೆಂಪು ವಿಶ್ವವಿದ್ಯಾಲಯವಿದೆ. ಈ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಕುವೆಂಪು ಅವರ ಮನೆಯಿದೆ. ಅದೊಂದು ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ. ಭದ್ರಾವತಿಯು ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ. ನಾಡಿಗೆ ಅಗತ್ಯವಾದ ವಿದ್ಯುತ್ತನ್ನು ಇಲ್ಲಿನ ಶರಾವತಿ ಜಲ ವಿದ್ಯುತ್ ಮತ್ತು ವರಾಹಿ ಜಲ ವಿದ್ಯುತ್ ಕೇಂದ್ರಗಳು ಒದಗಿಸುತ್ತವೆ.



ಜೋಗ್ ಜಲಪಾತ



ಕುವೆಂಪುರವರ ಮನೆ, ಕುಪ್ಪಳ್ಳಿ

ಶಿವಮೊಗ್ಗ ನಗರವನ್ನು ಕೆಳದಿ ಅರಸರು ಸ್ಥಾಪಿಸಿದರು ಎಂದು ಹೇಳಲಾಗುತ್ತದೆ. ಕೆಳದಿಯಲ್ಲಿ ಒಂದು ಪ್ರಾಚ್ಯ ವಸ್ತು ಸಂಗ್ರಹಾಲಯವಿದೆ. ಶಿವನ ಮುಖದಂತಿರುವ ನಗರ ಶಿವಮೊಗ್ಗ ಎಂದು ಪ್ರತೀತಿಯಿದೆ. ಏಷ್ಯಾ ಖಂಡದಲ್ಲಿಯೇ ಅತಿ ಉದ್ದ ಶರಾವತಿ ಜಲಪಾತ ಶಿವಮೊಗ್ಗ ಜಿಲ್ಲೆಯ ಗೇರುಸೊಪ್ಪೆಯಲ್ಲಿದೆ. ಸೊರಬ ತಾಲ್ಲೂಕಿನ ಗುಡವಿ ಎಂಬಲ್ಲಿ ಪ್ರಸಿದ್ಧ ಪಕ್ಷಿ ಧಾಮವಿದೆ. ಭದ್ರ ವನ್ಯ ಮೃಗ ಧಾಮವು ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ. ಬಳ್ಳಿಗಾವಿಯ ತ್ರಿಪುರಾಂತಕೇಶ್ವರ ಮತ್ತು ಕೇದಾರೇಶ್ವರ ದೇವಾಲಯಗಳು ಪ್ರಸಿದ್ಧವಾಗಿವೆ. ಕೆಳದಿ ಅರಸ ಶಿವಪ್ಪ ನಾಯಕನು ಕೆಳದಿಯಲ್ಲಿ ಸುಂದರವಾದ ಅರಮನೆಯನ್ನು

©KTBS Not to be republished

ಕಟ್ಟಿಸಿದ್ದ. ಜ್ಞಾನಪೀಠ ಪ್ರಶಸ್ತಿ ಪಡೆದ ಇಬ್ಬರು ಸಾಹಿತಿಗಳಾದ ರಾಷ್ಟ್ರಕವಿ ಕುವೆಂಪು ಮತ್ತು ಡಾ. ಯು. ಆರ್. ಅನಂತಮೂರ್ತಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದವರು. ರಾಷ್ಟ್ರಪ್ರಶಸ್ತಿ ಪುರಸ್ಕೃತ ಹಾಡುಗಾರ ಶಿವಮೊಗ್ಗ ಸುಬ್ಬಣ್ಣ ಈ ಜಿಲ್ಲೆಯವರು.

**ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**

1. ಬೆಂಗಳೂರು ವಿಭಾಗದಲ್ಲಿ ಎಷ್ಟು ಜಿಲ್ಲೆಗಳಿವೆ?
2. ದಕ್ಷಿಣ ಭಾರತದ ಅತಿ ದೊಡ್ಡ ಕೆರೆ ಶಾಂತಿಸಾಗರ ಯಾವ ಜಿಲ್ಲೆಯಲ್ಲಿದೆ?
3. ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಕಾಡು ಇರುವ ಜಿಲ್ಲೆ ಯಾವುದು?
4. ರಾಷ್ಟ್ರಕವಿ ಕುವೆಂಪು ಹೆಸರಿನ ವಿಶ್ವವಿದ್ಯಾಲಯ ರಾಜ್ಯದಲ್ಲಿ ಯಾವ ಜಿಲ್ಲೆಯಲ್ಲಿದೆ?

**ಚಟುವಟಿಕೆಗಳು**

- ಬನ್ನೇರುಘಟ್ಟ ರಾಷ್ಟ್ರೀಯ ಪಾರ್ಕಿಗೆ ಭೇಟಿ ನೀಡಿ ಅಲ್ಲಿರುವ ಪ್ರಾಣಿಗಳ ಪಟ್ಟಿಯನ್ನು ಸಿದ್ಧಪಡಿಸಿ. ಅವುಗಳ ಚಿತ್ರಗಳನ್ನು ಸಂಗ್ರಹಿಸಿ. ಇದರ ಒಂದು ವರದಿಯನ್ನು ತಯಾರಿಸಿ.
- ಬೆಂಗಳೂರು ನಗರದಲ್ಲಿರುವ ಪ್ರಮುಖ ಕಾರ್ಖಾನೆಗಳ ಪಟ್ಟಿ ಮಾಡಿ. ಅವುಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ವರದಿ ಸಿದ್ಧಪಡಿಸಿ.

## ಮೈಸೂರು ವಿಭಾಗ

ನಮ್ಮ ನಾಡಿನ ಮತ್ತೊಂದು ಆಡಳಿತ ವಿಭಾಗವೆಂದರೆ ಮೈಸೂರು ವಿಭಾಗ. ಮೈಸೂರು ಆರಂಭದಲ್ಲಿ ಒಡೆಯರ್ ರಾಜ್ಯದ ರಾಜಧಾನಿಯಾಗಿತ್ತು. ಈ ವಿಭಾಗದಲ್ಲಿ ಎಂಟು ಜಿಲ್ಲೆಗಳಿವೆ. ಅವು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಉಡುಪಿ, ದಕ್ಷಿಣಕನ್ನಡ, ಚಾಮರಾಜನಗರ ಮತ್ತು ಕೊಡಗು. ಈ ವಿಭಾಗದ ಆಡಳಿತ ಕೇಂದ್ರ ಮೈಸೂರು. ಕರ್ನಾಟಕದ ಅನೇಕ ಶ್ರೀಮಂತ ಜಿಲ್ಲೆಗಳು ಮೈಸೂರು ವಿಭಾಗದಲ್ಲಿವೆ. ಈ ವಿಭಾಗವು ನದಿಗಳಿಗೆ, ಪರ್ವತ ಶ್ರೇಣಿಗಳಿಗೆ, ಅರಣ್ಯಗಳಿಗೆ, ವನ್ಯಮೃಗಗಳಿಗೆ, ಕಾಫಿ ತೋಟಗಳಿಗೆ, ಕರಾವಳಿಗೆ, ಬಂದರುಗಳಿಗೆ ಪ್ರಸಿದ್ಧವಾಗಿದೆ.




ಮೈಸೂರು ವಿಭಾಗದ ಜಿಲ್ಲಾವಾರು ಭೂಪಟ

©KTBS Not to be republished

## ಚಾರಿತ್ರಿಕ ಹಿನ್ನೆಲೆ

ಮೈಸೂರಿನ ರಾಜೇತಿಹಾಸ, ಸ್ಪಷ್ಟವಾಗಿ ಆರಂಭವಾಗುವುದು ಗಂಗರ ಕಾಲದಿಂದ ಎಂದು ಹೇಳಲಾಗುತ್ತದೆ. ತಲಕಾಡು ಗಂಗರ ರಾಜಧಾನಿಯಾಗಿತ್ತು. ಆನಂತರ ಚೋಳರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಮೈಸೂರು ಪ್ರದೇಶದಲ್ಲಿ ಆಳ್ವಿಕೆ ನಡೆಸಿದರು.

ಮೈಸೂರು ಅನೇಕ ಶತಮಾನಗಳ ಕಾಲ ಒಡೆಯರ್ ಅವರ ಮನೆತನದ ಆಳ್ವಿಕೆಯಲ್ಲಿತ್ತು. ಕೆಲವು ವರ್ಷಗಳ ಕಾಲ ಅದು ಹೈದರಾಲಿ ಮತ್ತು ಅವರ ಮಗ ಟಿಪ್ಪುಸುಲ್ತಾನ್ ಅವರುಗಳ ಆಡಳಿತದ ವಶದಲ್ಲಿತ್ತು. ಚಾರಿತ್ರಿಕವಾಗಿ ಮತ್ತು ಪೌರಾಣಿಕವಾಗಿ ಮೈಸೂರನ್ನು ಮಹಿಷನಾಡು ಎಂದು ಕರೆಯಲಾಗುತ್ತದೆ. ಪುರಾಣ ಕಥೆಯ ಪ್ರಕಾರ ದೇವಿ ಪಾರ್ವತಿಯು ಚಾಮುಂಡೇಶ್ವರಿ ರೂಪ ಧರಿಸಿ ಮಹಿಷಾಸುರನನ್ನು ಕೊಂದಳು. ಮಹಿಷಾಸುರನನ್ನು ಕೊಂದ ಸ್ಥಳವೇ ಮೈಸೂರಾಯಿತು. ಯದುರಾಯ ಅನ್ನುವವರು ಒಡೆಯರ್ ಮನೆತನದ ಮೊದಲ ಅರಸು. ಚಿಕ್ಕದೇವರಾಯ ಒಡೆಯರ್ ಅವರು ಪ್ರಸಿದ್ಧ ದೊರೆಯಾಗಿದ್ದರು. ಅವರ ನಂತರ ಸಿಂಹಾಸನಕ್ಕೆ ಬಂದ ಅರಸರು ದುರ್ಬಲರಾಗಿದ್ದರು. ಆ ಸಮಯದಲ್ಲಿ ಸೇನಾಧಿಪತಿಯಾಗಿದ್ದ ಹೈದರಾಲಿಯು ಆಳ್ವಿಕೆಯನ್ನು ವಶಪಡಿಸಿಕೊಂಡ. ಅವನು ಮತ್ತು ಅವನ ಮಗ ಟಿಪ್ಪುಸುಲ್ತಾನ್ 1761 ರಿಂದ 1799 ರವರೆಗೆ ಆಡಳಿತ ನಡೆಸಿದರು. ಬ್ರಿಟಿಷರ ವಿರುದ್ಧ ಅನೇಕ ಹೋರಾಟಗಳನ್ನು ಟಿಪ್ಪು ನಡೆಸಿದನು. ಫ್ರೆಂಚ್‌ರ ಜೊತೆಯಲ್ಲಿ ಸಹಾಯಕ್ಕೆ ಸಂಧಾನ ನಡೆಸಿ ಬ್ರಿಟಿಷರನ್ನು ದೇಶದಿಂದ ಹೊರಹಾಕಲು ಟಿಪ್ಪುಸುಲ್ತಾನ್ ಪ್ರಯತ್ನಿಸಿದ. ಟಿಪ್ಪುಸುಲ್ತಾನನು ಅನೇಕ ಜನಪರ ಕಾರ್ಯಗಳನ್ನು ಕೈಗೊಂಡನು.


ಟಿಪ್ಪುಸುಲ್ತಾನ

ಟಿಪ್ಪುಸುಲ್ತಾನನು 1799ರಲ್ಲಿ ಬ್ರಿಟಿಷರ ಜೊತೆಗಿನ ಯುದ್ಧದಲ್ಲಿ ಪ್ರಾಣ ತೆತ್ತನು. ನಂತರ ಬ್ರಿಟಿಷರು ಆಡಳಿತವನ್ನು ಮತ್ತೆ ಒಡೆಯರ ವಶಕ್ಕೆ ನೀಡಿದರು. ಆಡಳಿತದಲ್ಲಿ ದೌರ್ಬಲ್ಯವನ್ನು ಕಂಡು ಬ್ರಿಟಿಷರು 1831ರಲ್ಲಿ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆದರೆ 1881ರಲ್ಲಿ ಮತ್ತೆ ಆಳ್ವಿಕೆಯನ್ನು ಒಡೆಯರ ವಶಕ್ಕೆ ನೀಡಿದರು. ಕಳೆದ 20ನೆಯ ಶತಮಾನದ ಆದಿ ಭಾಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತದಲ್ಲಿ ಅನೇಕ ಜನಪರ ಕಾರ್ಯಗಳಾದವು ವಿಶೇಷವಾಗಿ ಶಿಕ್ಷಣ, ಸಂಸ್ಕೃತಿ, ನೀರಾವರಿಗೆ ಇವರು ಆದ್ಯತೆ ನೀಡಿದರು. ಸರ್. ಎಮ್. ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾ ಇಸ್ಮಾಯಿಲ್ ಅವರ ದಿವಾನಗಿರಿಯಲ್ಲಿ ಮೈಸೂರು ಅಪೂರ್ವ ಯಶಸ್ಸನ್ನು ಪಡೆಯಿತು. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಮೈಸೂರು ಸಂಸ್ಥಾನವು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು.


ನಾಲ್ವಡಿ ಕೃಷ್ಣರಾಜ ಒಡೆಯರ್


ಸರ್. ಮಿರ್ಜಾ ಇಸ್ಮಾಯಿಲ್

© KTBS Not to be republished

ಈ ವಿಭಾಗದ ಬೇರೆ ಬೇರೆ ಜಿಲ್ಲೆಗಳಲ್ಲಿ ವಿವಿಧ ರಾಜ ಮನೆತನಗಳು ಆಳ್ವಿಕೆ ನಡೆಸಿದ ಚರಿತ್ರೆಯಿದೆ. ಕೊಡಗು ಪ್ರದೇಶವನ್ನು ಅನೇಕ ರಾಜ ಮನೆತನಗಳು ಆಡಳಿತ ನಡೆಸಿದವು. ಹಾಲೇರಿ ಮನೆತನವು 17ನೆಯ ಶತಮಾನದಲ್ಲಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿತು. ಬಿದನೂರು ಇವರ ರಾಜಧಾನಿಯಾಗಿತ್ತು. ಹಾಲೇರಿ ಅರಸರಲ್ಲಿ ದೊಡ್ಡವೀರಪ್ಪ ಪ್ರಸಿದ್ಧ ದೊರೆ. ಚಿಕ್ಕವೀರರಾಜ ಕೊನೆಯ ಅರಸ. ಇವನು ದುರ್ಬಲನಾಗಿದ್ದ. ಇದನ್ನು ಬಳಸಿಕೊಂಡು ಬ್ರಿಟಿಷರು ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಸ್ವಾತಂತ್ರ್ಯಾನಂತರ ಕೊಡಗು ಪ್ರತ್ಯೇಕ ರಾಜ್ಯವಾಗಿತ್ತು. ಆದರೆ 1956ರಲ್ಲಿ ಅದು ಕರ್ನಾಟಕದಲ್ಲಿ ವಿಲೀನಗೊಂಡಿತು. ಕೆಳದಿ ಸಂಸ್ಥಾನ ಮತ್ತೊಂದು ರಾಜಮನೆತನವಾಗಿದೆ.

ಕರ್ನಾಟಕದ ಕರಾವಳಿ ಪ್ರದೇಶವನ್ನು ತುಳುನಾಡು ಎಂದು ಕರೆಯುತ್ತಿದ್ದರು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡ ತುಳುನಾಡನ್ನು 7ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಅಳುಪ ಮನೆತನದ ಅರಸರು ಆಳ್ವಿಕೆ ನಡೆಸಿದರು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಉದ್ಯಾವರ, ಮಂಗಲಪುರ, ಹುಂಚ ಮತ್ತು ಬನವಾಸಿಗಳು ಅಳುಪರ ರಾಜಧಾನಿಗಳಾಗಿದ್ದವು. ತುಳುನಾಡಿನಲ್ಲಿ ಅನೇಕ ಪಾಳೆಗಾರರು ಆಡಳಿತ ನಡೆಸಿದರು. ಅವರಲ್ಲಿ ಪ್ರಸಿದ್ಧರಾದವರೆಂದರೆ ಪುತ್ತಿಗೆಯ ಚೌಟರು, ಬಂಗವಾಡಿಯ ಬಂಗರು, ಕಾರ್ಕಳದ ಬೈರವರಸರು, ಕಾಸರಗೋಡಿನ ಕುಂಬಳೆ ಅರಸರು ಮುಂತಾದವರು.

ಕರಾವಳಿ ಪ್ರದೇಶವನ್ನು ಬ್ರಿಟಿಷರು ಕೆನರ ಎಂದು ಕರೆದರು. ಈ ಪ್ರದೇಶವನ್ನು ಅವರು 1801ರಲ್ಲಿ ವಶಪಡಿಸಿಕೊಂಡರು. ಬ್ರಿಟಿಷರು ಕರಾವಳಿಯನ್ನು 1860ರಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಎಂದು ವಿಭಜಿಸಿದರು. ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ 1997ರಲ್ಲಿ ಉಡುಪಿ ಜಿಲ್ಲೆಯನ್ನು ರಚಿಸಲಾಯಿತು.

©KTBS Not to be republished

## I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಮೈಸೂರು ವಿಭಾಗದಲ್ಲಿ ಇಂದು ಎಷ್ಟು ಜಿಲ್ಲೆಗಳಿವೆ?
2. ಮೈಸೂರು ಎಂಬ ಹೆಸರು ಬರಲು ಕಾರಣವನ್ನು ತಿಳಿಸಿ.
3. ಮೈಸೂರು ಸಂಸ್ಥಾನದ ಬೆಳವಣಿಗೆಗೆ 20ನೆಯ ಶತಮಾನದ ಆದಿ ಭಾಗದಲ್ಲಿ ಕಾರಣರಾದ ಒಡೆಯರ್ ಹೆಸರನ್ನು ಬರೆಯಿರಿ.
4. ಕರಾವಳಿ ಪ್ರದೇಶವನ್ನು ಬ್ರಿಟಿಷರು ಮೊದಲು ಏನೆಂದು ಕರೆದರು?

## II. ಖಾಲಿ ಜಾಗಗಳನ್ನು ಭರ್ತಿ ಮಾಡಿ.

1. ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ ---------- ವರ್ಷ ಉಡುಪಿ ಜಿಲ್ಲೆಯನ್ನು ರಚಿಸಲಾಯಿತು.
2. ಮೈಸೂರು ವಿಭಾಗದ ------------ ಮತ್ತು --------------- ಕರಾವಳಿ ಜಿಲ್ಲೆಗಳು

## ಪ್ರಾಕೃತಿಕ ಸಂಪನ್ಮೂಲ

ಈ ವಿಭಾಗವು ವಿವಿಧ ಹವಾಮಾನಗಳಿಂದ ಕೂಡಿದ ಪ್ರದೇಶವಾಗಿದೆ. ಈ ವಿಭಾಗಕ್ಕೆ ಸೇರಿದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ವಿಶಾಲವಾದ ಕರಾವಳಿ ಪ್ರದೇಶವನ್ನು ಹೊಂದಿದೆ. ಪರ್ವತ ಶ್ರೇಣಿ, ದಟ್ಟ ಕಾಡುಗಳು ಮತ್ತು ಕರಾವಳಿ ಪ್ರದೇಶಗಳು ಒಟ್ಟಿಗೆ ಇಲ್ಲಿರುವುದರಿಂದ ಇಲ್ಲಿನ ವಾಯುಗುಣವನ್ನು ಉಷ್ಣ ವಲಯದ ಮಳೆಮಾರುತ ವಾತಾವರಣ ಎಂದು ಕರೆಯಲಾಗುತ್ತದೆ.

ಈ ವಿಭಾಗದಲ್ಲಿನ ಹವಾಮಾನವು ತೀವ್ರ ಚಳಿ ಮತ್ತು ಸರಾಸರಿ ಉಷ್ಣ ವಲಯದಿಂದ ಕೂಡಿದೆ. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳು ಒಣ ಹವಾಮಾನದಿಂದ ಕೂಡಿವೆ. ಈ ವಿಭಾಗದಲ್ಲಿ ಉಡುಪಿಯು ಅತಿ ಹೆಚ್ಚು ಮಳೆಯನ್ನು ಪಡೆದರೆ ಮಂಡ್ಯ ಜಿಲ್ಲೆಯು ಅತಿ ಕಡಿಮೆ ಮಳೆಯನ್ನು ಪಡೆಯುತ್ತದೆ. ವಿವಿಧ ಹವಾಮಾನ, ವಿವಿಧ ಪ್ರಮಾಣ ಮಳೆ, ಪರ್ವತಗಳು, ಅರಣ್ಯ ಮುಂತಾದ ವಿಭಿನ್ನತೆಯಿಂದಾಗಿ ಇಲ್ಲಿ ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಇಲ್ಲಿ ಬೆಳೆಯುವ ಮುಖ್ಯ ಕೃಷಿ ಬೆಳೆಗಳೆಂದರೆ ರಾಗಿ, ಭತ್ತ, ಉದ್ದು, ಹೆಸರು, ಹುರುಳಿಕಾಳು, ಜೋಳ ಮುಂತಾದವು. ಇಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳೆಂದರೆ ಕಾಫಿ, ಕಬ್ಬು, ತಂಬಾಕು, ಅಡಕೆ, ಏಲಕ್ಕಿ, ಕಿತ್ತಳೆಹಣ್ಣು, ಪೈನಾಫಲ್, ಗೋಡಂಬಿ ಮುಂತಾದವು. ಭಾರತದಲ್ಲಿ ಕಾಫಿಯನ್ನು ಮೊದಲು ಚಿಕ್ಕಮಗಳೂರಿನಲ್ಲಿ ಬೆಳೆಯಲಾಯಿತು. ಈ ವಿಭಾಗದ ಅನೇಕ ಪ್ರದೇಶಗಳಲ್ಲಿ ವೀಳ್ಯದೆಲೆಗಳನ್ನು ಬೆಳೆಯಲಾಗುತ್ತದೆ.

ಪ್ರಾಕೃತಿಕ ಸಂಪನ್ಮೂಲದ ದೃಷ್ಟಿಯಿಂದ ಇದು ಸಮೃದ್ಧ ವಿಭಾಗವಾಗಿದೆ. ಕೊಡಗು, ದಕ್ಷಿಣ ಕನ್ನಡ, ಮೈಸೂರು, ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿ ವಿವಿಧ ಬಗೆಯ ಅರಣ್ಯಗಳಿವೆ. ತೇಗ, ಶ್ರೀಗಂಧ, ಹೊಂಗೆ, ನಂದಿ, ಮತ್ತಿ, ಮುಂತಾದವು ಇಲ್ಲಿ ಬೆಳೆಯುವ ಮರಗಳು. ಈ ಅರಣ್ಯಗಳು ಅನೇಕ ಬಗೆಯ ಉತ್ಪನ್ನಗಳಿಗೆ ಹೆಸರುವಾಸಿಯಾಗಿವೆ. ಗೋಂದು, ಜೇನುತುಪ್ಪ ಮತ್ತು ಮೇಣ, ಕಾಡುಹಣ್ಣು ಮುಂತಾದವು ಕಿರು ಅರಣ್ಯ ಉತ್ಪನ್ನಗಳು.

ಈ ವಿಭಾಗವು ಅನೇಕ ದೊಡ್ಡ ಮತ್ತು ಸಣ್ಣ ಪರ್ವತಗಳನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾದವು ಸುಬ್ರಹ್ಮಣ್ಯ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಮಲೈಮಹದೇಶ್ವರ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿ, ಚಾಮುಂಡಿ ಬೆಟ್ಟ, ಶ್ರವಣಬೆಳಗೊಳದ ಚಂದ್ರಗಿರಿ, ಇಂದ್ರಗಿರಿ ಮುಂತಾದವು ಪ್ರಸಿದ್ಧ ಬೆಟ್ಟಗಳು.

ದಟ್ಟವಾದ ಅರಣ್ಯಗಳಿಗೆ ಹೆಸರುವಾಸಿಯಾದ ಮೈಸೂರು ವಿಭಾಗವು ಜೀವವೈವಿಧ್ಯಕ್ಕೂ ಹೆಸರುವಾಸಿಯಾಗಿದೆ. ಹುಲಿ, ಚಿರತೆ, ಕಾಡುನಾಯಿ, ಜಿಂಕೆ, ನರಿ, ಕಾಡೆಮ್ಮೆ ವಿವಿಧ ಬಗೆಯ ಹಾವುಗಳು ಮುಂತಾದ ವನ್ಯಮೃಗಗಳು ಇಲ್ಲಿನ ಅರಣ್ಯಗಳಲ್ಲಿ ವಾಸವಾಗಿವೆ. ಮಂಡ್ಯ ಜಿಲ್ಲೆಯ ಬನ್ನೂರು ಉತ್ತಮ ತಳಿಯ ಟಗರುಗಳಿಗೆ ಹೆಸರುವಾಸಿಯಾಗಿದೆ.

ಈ ವಿಭಾಗದ ಪ್ರಸಿದ್ಧ ನದಿಗಳು: ಕಾವೇರಿ, ಹೇಮಾವತಿ, ಹಾರಂಗಿ, ನೇತ್ರಾವತಿ, ಕುಮಾರಧಾರ, ವೇದಾವತಿ, ಕಪಿಲ, ಯಗಚಿ, ಗಂಗೊಳ್ಳಿ ಮುಂತಾದವು. ಇಲ್ಲಿ ಅನೇಕ ಪ್ರಸಿದ್ಧ ಜಲಪಾತಗಳಿವೆ.



**ಗಗನಚುಕ್ಕಿ – ಭರಚುಕ್ಕಿ ಜಲಪಾತ**

Not to be republished ©KTBS

ಅವು: ಗಗನಚುಕ್ಕಿ ಬರಚುಕ್ಕಿ, ಅಬ್ಬೆ ಜಲಪಾತ, ಇರ್ಪು ಜಲಪಾತ, ಹೆಬ್ಬೆ ಜಲಪಾತ ಮುಂತಾದವು.

ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ದೊರೆಯುವ ಮುಖ್ಯ ಖನಿಜಗಳೆಂದರೆ ಬಾಕ್ಸೈಟ್, ಫೆಲ್‌ಸೈಟ್, ಕ್ರೋಮೈಟ್, ಸುಣ್ಣಕಲ್ಲು, ಗ್ರಾನೈಟ್, ಮ್ಯಾಂಗನೀಸ್ ಮುಂತಾದವು. ನಮ್ಮ ದೇಶದಲ್ಲಿ ಫೆಲ್‌ಸೈಟ್ ಅದಿರು ಮೈಸೂರು ಜಿಲ್ಲೆಯಲ್ಲಿ ಮಾತ್ರ ದೊರೆಯುತ್ತದೆ. ಈ ವಿಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಕರಾವಳಿ ಜಿಲ್ಲೆಗಳಾಗಿವೆ. ಇಲ್ಲಿ ಬಂದರುಗಳಿವೆ. ಈ ಜಿಲ್ಲೆಗಳು ಸಮುದ್ರ ಮೀನುಗಾರಿಕೆಗೆ ಹೆಸರುವಾಸಿಯಾಗಿವೆ. ಇಲ್ಲಿ ಸಂಸ್ಕರಿಸಿದ ಮೀನನ್ನು ರಫ್ತು ಮಾಡಲಾಗುತ್ತದೆ. ಸಾವಿರಾರು ಮೀನುಗಾರರಿಗೆ ಇದು ವರಮಾನದ ಮೂಲವಾಗಿದೆ. ಕೊಡಗು, ಚಿಕ್ಕಮಗಳೂರು, ಮೈಸೂರು ಜಿಲ್ಲೆಗಳು ಮರಗಳ ದಿಮ್ಮಿಗಳ ಮಾರಾಟದ ಕೇಂದ್ರಗಳಾಗಿವೆ.



ಕರಾವಳಿಯಲ್ಲಿ ಮೀನುಗಾರಿಕೆ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಮೈಸೂರು ವಿಭಾಗದ ಎರಡು ಪ್ರಸಿದ್ಧ ನದಿಗಳ ಹೆಸರು ಬರೆಯಿರಿ.
2. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಹಾಗೂ ಅತಿ ಕಡಿಮೆ ಮಳೆ ಬೀಳುವ ಜಿಲ್ಲೆ ಯಾವುದು?
3. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ದೊರೆಯುವ ಎರಡು ಖನಿಜಗಳ ಹೆಸರನ್ನು ಬರೆಯಿರಿ.
4. ಮೈಸೂರು ವಿಭಾಗದ ಕರಾವಳಿ ಜಿಲ್ಲೆಗಳಲ್ಲಿ ಜನರ ಮುಖ್ಯ ಉದ್ಯೋಗವೇನು?

## ಅರಣ್ಯಗಳು, ವನ್ಯಮೃಗಗಳು, ರಾಷ್ಟ್ರೀಯ ಉದ್ಯಾನಗಳು



ಬುಡಕಟ್ಟು ಸಮುದಾಯ

ಮೈಸೂರು ಅರಣ್ಯಗಳ ನಾಡು. ಮೈಸೂರು, ಕೊಡಗು, ಚಿಕ್ಕಮಗಳೂರು, ಹಾಸನ ಮುಂತಾದ ಜಿಲ್ಲೆಗಳು ವೈವಿಧ್ಯಮಯವಾದ ದಟ್ಟ ಅರಣ್ಯ ಪ್ರದೇಶದಿಂದ ಕೂಡಿವೆ. ಬಂಡೀಪುರ, ನಾಗರಹೊಳೆ, ಮಲೈಮಹದೇಶ್ವರ ಬೆಟ್ಟ, ಪುಷ್ಪಗಿರಿ, ಮುಂತಾದವು ಪ್ರಸಿದ್ಧ ಅರಣ್ಯ ಪ್ರದೇಶಗಳಾಗಿವೆ. ಇಲ್ಲಿ ಹತ್ತಾರು ಬಗೆಯ ಕಿರು ಅರಣ್ಯ ಉತ್ಪನ್ನಗಳು

© Not to be republished

ದೊರೆಯುತ್ತವೆ. ಸಾವಿರಾರು ಬುಡಕಟ್ಟು ಜನರಿಗೆ ಕಿರು ಅರಣ್ಯ ಉತ್ಪನ್ನಗಳು ವರಮಾನದ, ಆಹಾರದ ಮೂಲಗಳಾಗಿವೆ. ಮೈಸೂರು ವಿಭಾಗದ ಜಿಲ್ಲೆಗಳು ಅನೇಕ ಬುಡಕಟ್ಟು ಸಮುದಾಯಗಳಿಗೆ ನೆಲೆಯಾಗಿವೆ. ಜೇನುಕುರುಬರು ಅತಿ ಹೆಚ್ಚು ಜನಸಂಖ್ಯೆಯ ಬುಡಕಟ್ಟು ಸಮುದಾಯವಾಗಿದೆ. ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿ ನೆಲೆಸಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೊರಗ ಬುಡಕಟ್ಟು ಸಮುದಾಯವಿದೆ. ಅತ್ಯಂತ ಹಿಂದುಳಿದ ಸಮುದಾಯ ಇದಾಗಿದೆ. ಕೊಡಗು ಜಿಲ್ಲೆಯಲ್ಲಿ ಕಂಡು ಬರುವ ಬುಡಕಟ್ಟು ಸಮುದಾಯವೆಂದರೆ ಮಲೆಕುಡಿಯರು. ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕಂಡು ಬರುತ್ತಾರೆ. ಚಾಮರಾಜನಗರ ಜಿಲ್ಲೆಯಲ್ಲಿ ವಾಸಿಸುವ ಸೋಲಿಗರು ಮತ್ತೊಂದು ಬುಡಕಟ್ಟು ಸಮುದಾಯ. ಇವರಲ್ಲದೆ ಯರವರು, ಹಕ್ಕಿಪಿಕ್ಕಿಗಳು, ಹಲಸರು, ಮೇದಾರರು ಮುಂತಾದ ಬುಡಕಟ್ಟು ಸಮುದಾಯಗಳಿವೆ.


ಹುಲಿ


ಆನೆ


ಕಾಡೆಮ್ಮೆ

ಹುಲಿ ನಮ್ಮ ರಾಷ್ಟ್ರ ಪ್ರಾಣಿ. ಹುಲಿಸಂರಕ್ಷಣಾ ಯೋಜನೆಯು ರಾಜ್ಯದಲ್ಲಿ ಜಾರಿಯಲ್ಲಿದೆ. ರಾಜ್ಯದಲ್ಲಿರುವ ಐದು ಹುಲಿ ಸಂರಕ್ಷಣಾ ವನ್ಯಮೃಗ ಧಾಮಗಳಲ್ಲಿ ಮೂರು ಮೈಸೂರು ವಿಭಾಗದಲ್ಲಿವೆ. ಬಂಡೀಪುರ, ನಾಗರಹೊಳೆ, ಭದ್ರಾ ಹುಲಿ ಸಂರಕ್ಷಣಾ ಮೀಸಲು ಪ್ರದೇಶಗಳಾಗಿವೆ. ಇದೇ ರೀತಿಯಲ್ಲಿ ಆನೆಗಳ ಸಂರಕ್ಷಣಾ ಯೋಜನೆಯು ಇಲ್ಲಿ ಅನುಷ್ಠಾನದಲ್ಲಿದೆ. ಆನೆಗಳ ದಂತಕ್ಕಾಗಿ, ಹುಲಿ ಚರ್ಮಕ್ಕಾಗಿ ಅವುಗಳನ್ನು ಅಕ್ರಮವಾಗಿ ಕೊಲ್ಲಲಾಗುತ್ತಿದೆ. ಅದನ್ನು ತಡೆದು ಅವುಗಳ ಸಂತತಿಯನ್ನು ರಕ್ಷಿಸುವ ಉದ್ದೇಶದಿಂದ ಹುಲಿ ಸಂರಕ್ಷಣಾ ಯೋಜನೆ ಮತ್ತು ಆನೆ ಸಂರಕ್ಷಣಾ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ದೇಶದಲ್ಲಿ ಹುಲಿಗಳ ಸಂಖ್ಯೆಯು ಅತಿ ಹೆಚ್ಚಿರುವ ರಾಜ್ಯ ಕರ್ನಾಟಕ.


ರಂಗನತಿಟ್ಟು ಪಕ್ಷಿಧಾಮ

ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ವನ್ಯಮೃಗ ಧಾಮಗಳು, ಪಕ್ಷಿ ಸಂರಕ್ಷಣಾ ಧಾಮಗಳು ಮೈಸೂರು ವಿಭಾಗದಲ್ಲಿವೆ. ರಂಗನತಿಟ್ಟು ಪಕ್ಷಿಧಾಮ, ಗುಡವಿ ಪಕ್ಷಿಧಾಮ, ಕೊಕ್ಕರೆ ಬೆಳ್ಳೂರು ಮುಖ್ಯ ಪಕ್ಷಿಧಾಮಗಳಾದರೆ ಮೇಲುಕೋಟೆ ವನ್ಯಮೃಗಧಾಮ, ಕಾವೇರಿ ವನ್ಯಮೃಗಧಾಮ, ಮಲೈಮಹದೇಶ್ವರ ವನ್ಯಮೃಗಧಾಮ, ಪುಷ್ಪಗಿರಿ ವನ್ಯಮೃಗಧಾಮ ಮುಂತಾದವು ಮೈಸೂರು ವಿಭಾಗದಲ್ಲಿರುವ

ಪ್ರಸಿದ್ದ ವನ್ಯಮೃಗಧಾಮಗಳು. ಮೈಸೂರು ಜಿಲ್ಲೆಯಲ್ಲಿ ರಾಜೀವಗಾಂಧಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವಿದ್ದರೆ ಚಾಮರಾಜನಗರ ಜಿಲ್ಲೆಯಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನವಿದೆ. ಖೆಡ್ಡ ಎಂಬ ಕಾರ್ಯಾಚರಣೆ ಮೂಲಕ ಕಾಡಾನೆಗಳನ್ನು ಅಲ್ಲಿ ಪಳಗಿಸಲಾಗುತ್ತದೆ.

## I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಮೈಸೂರು ವಿಭಾಗದಲ್ಲಿರುವ ಎರಡು ಪ್ರಸಿದ್ಧ ಅರಣ್ಯ ಪ್ರದೇಶಗಳಾವುವು?
2. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ನೆಲೆಸಿರುವ ಎರಡು ಬುಡಕಟ್ಟು ಸಮುದಾಯಗಳ ಹೆಸರನ್ನು ಬರೆಯಿರಿ
3. ಎರಡು ಪಕ್ಷಿಧಾಮ ಮತ್ತು ಎರಡು ವನ್ಯಮೃಗಧಾಮಗಳ ಹೆಸರನ್ನು ಬರೆಯಿರಿ.

## II. ಖಾಲಿ ಜಾಗವನ್ನು ಭರ್ತಿ ಮಾಡಿ.

1. ನಮ್ಮ ರಾಷ್ಟ್ರೀಯ ಪ್ರಾಣಿ ------.
2. ಕಾಡಾನೆಗಳನ್ನು ಪಳಗಿಸುವ ವಿಧಾನವನ್ನು ------- ಎಂದು ಕರೆಯುತ್ತಾರೆ.

## ಕೃಷಿ ಮತ್ತು ಉದ್ದಿಮೆಗಳು

ಕೃಷಿಯು ನಮ್ಮ ಜನರ ಜೀವದ್ರವ್ಯ. ಇದಕ್ಕೆ ಮೈಸೂರು ವಿಭಾಗದ ಜಿಲ್ಲೆಗಳು ಅಪವಾದವಲ್ಲ. ಮೈಸೂರು ಜಿಲ್ಲೆಯು ರೇಷ್ಮೆ ಬೆಳೆಗೆ, ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಕಾಫಿ ತೋಟಗಳಿಗೆ, ಮಂಡ್ಯ ಜಿಲ್ಲೆಯು ಕಬ್ಬು ಬೆಳೆಗೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಗಳು ಗೋಡಂಬಿ, ಮೆಣಸು, ಏಲಕ್ಕಿ, ರಬ್ಬರ್ ಬೆಳೆಗಳಿಗೆ ಪ್ರಸಿದ್ಧಿಯಾಗಿವೆ. ದೇಶದಲ್ಲಿ ಅತಿ ಹೆಚ್ಚು ಕಾಫಿಯನ್ನು ಚಿಕ್ಕಮಗಳೂರಿನಲ್ಲಿ ಬೆಳೆಯುತ್ತಾರೆ. ಕೃಷಿ ಚಟುವಟಿಕೆಗಳು ಕೇವಲ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಮೀಸಲಾಗಿಲ್ಲ. ಈ ವಿಭಾಗದ ಜಿಲ್ಲೆಗಳಲ್ಲಿ ಕೃಷಿ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ ಮತ್ತು ತೋಟಗಾರಿಕೆಗಳ ಸಂಯುಕ್ತ ಚಟುವಟಿಕೆಗಳಿವೆ. ಈ ವಿಭಾಗದಲ್ಲಿ ಬೆಳೆಯುವ ಮುಖ್ಯ ಬೆಳೆಗಳೆಂದರೆ ಭತ್ತ, ರಾಗಿ, ಜೋಳ, ಅವರೆ, ಹೆಸರು, ಉದ್ದು ಮುಂತಾದವು. ಇಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳೆಂದರೆ ತಂಬಾಕು, ಕಾಫಿ, ಗೋಡಂಬಿ, ಅಡಕೆ, ಆಲೂಗಡ್ಡೆ, ಕಬ್ಬು, ಹತ್ತಿ, ಕಿತ್ತಳೆ, ತೆಂಗು ಮುಂತಾದವು.



ಹೈನುಗಾರಿಕೆ

©KTBS Not to be republished

ಈ ವಿಭಾಗದಲ್ಲಿನ ಕೃಷಿಗೆ ನಾಲ್ಕು ಯೋಜನೆಗಳಿಂದ ನೀರಾವರಿ ದೊರೆಯುತ್ತಿದೆ. ಅವುಗಳಾವುವೆಂದರೆ ಕೃಷ್ಣರಾಜಸಾಗರ, ಹಾರಂಗಿ, ಹೇಮಾವತಿ ಮತ್ತು ಕಬಿನಿ ನೀರಾವರಿ ಯೋಜನೆಗಳು. ಈ ವಿಭಾಗದಲ್ಲಿ ಕೃಷಿಯ ಬೆಳವಣಿಗೆಗೆ ಅನುಕೂಲವಾಗಲು ಅನೇಕ ಕೃಷಿ ಫಾರಂಗಳನ್ನು, ಕೃಷಿ ಕಾಲೇಜುಗಳನ್ನು ಸ್ಥಾಪಿಸಲಾಗಿದೆ.

ಈ ವಿಭಾಗದ ಮೈಸೂರು, ಮಂಗಳೂರು, ಹಾಸನ, ಚಿಕ್ಕಮಗಳೂರು, ಮಂಡ್ಯ, ಮಡಿಕೇರಿ ಮುಂತಾದವು ಕೈಗಾರಿಕಾ ಕೇಂದ್ರಗಳಾಗಿವೆ. ಔಷಧಿ ಕಾರ್ಖಾನೆಗಳು, ಕಾಫಿ ಕ್ಯೂರಿಂಗ್ ಉದ್ದಿಮೆಗಳು, ಆಹಾರ ಸಂಸ್ಕರಣಾ ಘಟಕಗಳು, ಫರ್ಟಿಲೈಸರ್ ಕಾರ್ಖಾನೆಗಳು, ಪೆಟ್ರೋಲಿಯಮ್ ಸಂಸ್ಕರಣಾ ಕಾರ್ಖಾನೆ, ಕ್ಯಾಂಪಕೋ ಚಾಕಲೇಟ್ ಕಾರ್ಖಾನೆ, ಸಕ್ಕರೆ ಕಾರ್ಖಾನೆ, ಸಿಮೆಂಟ್ ಉದ್ಯಮ ಮುಂತಾದವು ಮೈಸೂರು ವಿಭಾಗದ ಜಿಲ್ಲೆಗಳಲ್ಲಿರುವ ಉದ್ದಿಮೆಗಳು. ಈ ವಿಭಾಗದಲ್ಲಿರುವ ಬೃಹತ್ ಉದ್ದಿಮೆಗಳ ಸಂಖ್ಯೆ ಕಡಿಮೆ. ಆದರೆ ಸಾವಿರಾರು ಸಣ್ಣ ಮತ್ತು ಮಧ್ಯಮ ಗಾತ್ರ ಉದ್ದಿಮೆಗಳು ಇಲ್ಲಿವೆ.

## I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಮೈಸೂರು ವಿಭಾಗದಲ್ಲಿರುವ ಎರಡು ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.
2. ಮೈಸೂರು ವಿಭಾಗದ ಆಯ್ದ ಆರು ಮುಖ್ಯ ಬೆಳೆಗಳನ್ನು ತಿಳಿಸಿ.
3. ಮೈಸೂರು ವಿಭಾಗದಲ್ಲಿ ಕೃಷಿಗೆ ನೀರಾವರಿ ಒದಗಿಸುವ ಎರಡು ನೀರಾವರಿ ಯೋಜನೆಗಳಾವುವು?
4. ಮೈಸೂರು ವಿಭಾಗದಲ್ಲಿರುವ ಮೂರು ಮುಖ್ಯ ಉದ್ದಿಮೆಗಳನ್ನು ಹೆಸರಿಸಿ.

## II. ಖಾಲಿ ಜಾಗವನ್ನು ಭರ್ತಿ ಮಾಡಿ.

1. ಮೈಸೂರು ವಿಭಾಗದ ---------------- ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕಾಫಿ ಬೆಳೆಯುತ್ತಾರೆ.

## ಕಲೆ, ಸಾಹಿತ್ಯ, ಸಂಗೀತ, ಜಾನಪದ, ನಾಟಕ, ನೃತ್ಯ

ಈ ವಿಭಾಗವು ಕಲೆ, ಸಾಹಿತ್ಯ, ನಾಟಕ, ನೃತ್ಯ ಮುಂತಾದ ಕಲೆಗಳಿಂದ ಶ್ರೀಮಂತವಾಗಿದೆ. ಮೈಸೂರು ನಗರವನ್ನು ಕಲೆಯ ತವರೂರು ಎಂದು ಹೇಳುತ್ತಾರೆ. ಕರಾವಳಿ ಜಿಲ್ಲೆಗಳು ಯಕ್ಷಗಾನ ಬಯಲಾಟಕ್ಕೆ ಹೆಸರುವಾಸಿಯಾಗಿವೆ. ಯಕ್ಷಗಾನವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮನ್ನಣೆ ಗಳಿಸಿಕೊಂಡಿದೆ. ಕಂಸಾಳೆ ಕುಣಿತ, ಚೌಡಿಕೆ ಕಲೆ, ವೀರಗಾಸೆ ಕುಣಿತ, ಪಟ ಕುಣಿತ, ನಂದಿಕೋಲು ಮುಂತಾದವು ಜನಪ್ರಿಯ ಜನಪದ ಕಲೆಗಳಾಗಿವೆ. ಕೊಡವರ ಉತ್ತರಿ ಹಬ್ಬ, ಕರಾವಳಿ ಜಿಲ್ಲೆಗಳಲ್ಲಿನ ಭೂತಾರಾಧನೆ, ಕಂಬಳ ಮುಂತಾದವು ವಿಶಿಷ್ಟವಾದ ಜನಪ್ರಿಯ ಆಚರಣೆಗಳಾಗಿವೆ.

ಮೈಸೂರು ಅರಮನೆಯು ಕಲೆ, ನೃತ್ಯ, ಸಂಗೀತ ಮುಂತಾದವುಗಳಿಗೆ ಪ್ರೋತ್ಸಾಹ ನೀಡುತ್ತಿತ್ತು. ಇದರಿಂದ ಮೈಸೂರು ಸಂಪ್ರದಾಯದ ವಿಶಿಷ್ಟತೆಯ ನೃತ್ಯ, ಸಂಗೀತ, ವರ್ಣಕಲೆ ಮುಂತಾದವು ರೂಪುಗೊಂಡವು. ಭರತನಾಟ್ಯ, ಕರ್ನಾಟಕ ನಾಟಕ, ಸಂಗೀತ, ನಾಟಕಗಳಿಗೆ ಅರಮನೆಯು ಪ್ರೋತ್ಸಾಹ ನೀಡುತ್ತಿತ್ತು. ಮೈಸೂರು ನಗರದಲ್ಲಿ ಸರ್ಕಾರಿ ಅನುದಾನಿತ ನಾಟಕ ತಂಡ (ರೆಪರ್ಟರಿ) ರಂಗಾಯಣ ಸ್ಥಾಪನೆಯಾಗಿದೆ. ಅದು ವರ್ಷಪೂರ್ತಿ ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸುತ್ತದೆ. ಈಗ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ರಂಗಾಯಣ ಕೇಂದ್ರಗಳು ಆರಂಭಗೊಂಡಿವೆ. ಮೈಸೂರಿನಲ್ಲಿ ಬೃಹತ್ ಕಲಾಮಂದಿರವನ್ನು ಕಟ್ಟಲಾಗಿದೆ.

©KTBS Not to be republished



ಮೈಸೂರು ಅರಮನೆ

ಮೈಸೂರು ವಿಭಾಗದ ಜಿಲ್ಲೆಗಳು ಅನೇಕ ಪ್ರಸಿದ್ಧ ಸಾಹಿತಿಗಳ ತಾಣಗಳಾಗಿವೆ. ಹಾಸನದ ರಾಜಾರಾವ್ ಇಂಗ್ಲೀಷಿನಲ್ಲಿ ಪ್ರಸಿದ್ಧ ಕಾದಂಬರಿಗಾರರು. ಆರ್. ಕೆ. ನಾರಾಯಣ್ ಅವರು ಮತ್ತೊಬ್ಬ ಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ವಿಜೇತ ಶಿವರಾಮ ಕಾರಂತ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರು. ಕನ್ನಡದ ಭಾವಗೀತೆಗಳಿಗೆ ಜೀವ ತುಂಬಿದ ಕೆ. ಎಸ್. ನರಸಿಂಹಸ್ವಾಮಿ ಮೈಸೂರು ನಗರಕ್ಕೆ ಸೇರಿದವರು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ. ಎಸ್.ಎಲ್. ಭೈರಪ್ಪ, ಎಂ. ಗೋಪಾಲಕೃಷ್ಣ ಅಡಿಗ, ಬಿ.ಎಂ.ಶ್ರೀ, ಎ.ಎನ್. ಮೂರ್ತಿರಾವ್, ದೇವನೂರ ಮಹಾದೇವ, ಅಕಬರ್ ಆಲಿ, ಸಾರಾ ಅಬೂಬಕರ್, ಆಲನಹಳ್ಳಿ ಕೃಷ್ಣ, ಪೂರ್ಣಚಂದ್ರತೇಜಸ್ವಿ, ಕೊಡಗಿನ ಗೌರಮ್ಮ, ತಿರುಮಲಾಂಬ, ತ್ರಿವೇಣಿ, ನಿರಂಜನ ಮುಂತಾದವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಈ ವಿಭಾಗಮೂಲದ ಮಹನೀಯರು. ಆರ್. ಕೆ. ಶ್ರೀಕಂಠನ್, ವೀಣೆ ಶೇಷಣ್ಣ, ಪಿಟೀಲ್ ಚೌಡಯ್ಯ, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಕದ್ರಿ ಗೋಪಾಲನಾಥ್ ಮುಂತಾದವರು ಸಂಗೀತ ಕ್ಷೇತ್ರದ ದಿಗ್ಗಜರು. ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷ್ಮಣ್, ರಂಗಭೂಮಿಯ ಮಹಮದ್ ಪೀರ್, ಚಿತ್ರಕಲೆಯ ಕೆ.ಕೆ. ಹೆಬ್ಬಾರ್, ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರದ ಬಿ.ವಿ. ಕಾರಂತ, ಆಧುನಿಕ ಪೂರ್ವ ಸಾಹಿತ್ಯದ ಸಂಚಿಹೊನ್ನಮ್ಮ, ರತ್ನಾಕರವರ್ಣಿ, ಸಿಂಗಾರಾರ್ಯ ಮುಂತಾದವರು ಮೈಸೂರು ವಿಭಾಗಕ್ಕೆ ಸೇರಿದ ಸಾಂಸ್ಕೃತಿಕ ಸಾಧಕರು. ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ, ಜನರಲ್ ಕೆ.ಎಸ್. ತಿಮ್ಮಯ್ಯ ಅವರು ರಾಷ್ಟ್ರಕ್ಕೆ ಕೀರ್ತಿತಂದ ಸೈನಿಕ ದಂಡಾಧಿಪತಿಗಳು. ವಿಜ್ಞಾನಿಗಳಾದ ರಾಜಾರಾಮಣ್ಣ, ಯು.ಆರ್. ರಾವ್ ಅವರ ಸಾಧನೆ ಉಲ್ಲೇಖನೀಯ. ಸಾಮಾಜಿಕ ನ್ಯಾಯದ ಹರಿಕಾರರಾದ ದೇವರಾಜ ಅರಸು ಮೈಸೂರು ವಿಭಾಗದಿಂದ ಬಂದವರು.



ಬಿ.ಎಂ.ಶ್ರೀ



ದೇವನೂರು ಮಹದೇವ



ಪಿಟೀಲು ಚೌಡಯ್ಯ



ಕೆ.ಎಸ್. ನರಸಿಂಹಸ್ವಾಮಿ

©KTBS Not to be republished



ಕೆ.ಕೆ. ಹೆಬ್ಬಾರ್



ಆರ್.ಕೆ. ನಾರಾಯಣ್



ಜನರಲ್ ಕಾರ್ಯಪ್ಪ



ದೇವರಾಜ ಅರಸು

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಕೊಡವರು ಆಚರಿಸುವ ಸುಗ್ಗಿ ಹಬ್ಬದ ಹೆಸರೇನು?
2. ಕರ್ನಾಟಕ ಸರ್ಕಾರದ ನಾಟಕ ಸಂಸ್ಥೆ ರಂಗಾಯಣದ ಕೇಂದ್ರ ಸ್ಥಾನ ಯಾವ ನಗರದಲ್ಲಿದೆ?
3. ಮೈಸೂರು ವಿಭಾಗದ ಇಬ್ಬರು ಇಂಗ್ಲೀಷ್ ಕಾದಂಬರಿಕಾರರ ಹೆಸರನ್ನು ಬರೆಯಿರಿ.
4. ಕನ್ನಡದ ಇಬ್ಬರು ಪ್ರಸಿದ್ಧ ಕಾದಂಬರಿಕಾರರ ಹೆಸರನ್ನು ಬರೆಯಿರಿ.

## ಶಿಕ್ಷಣ ಮತ್ತು ಆರೋಗ್ಯ

ಮೈಸೂರು ಒಂದು ಶಿಕ್ಷಣದ ಕೇಂದ್ರವಾಗಿದೆ. ಈ ವಿಭಾಗದಲ್ಲಿ ಸಾಕ್ಷರತೆಯ ಮಟ್ಟ ಉತ್ತಮವಾಗಿದೆ. ಮೈಸೂರು ಒಡೆಯರ ಆಳ್ವಿಕೆಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿತು. ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಮೈಸೂರು ವಿಶ್ವವಿದ್ಯಾಲಯವು 1915ರಲ್ಲಿ ಆರಂಭವಾಯಿತು. ಈ ವಿಭಾಗದ ಅನೇಕ ಜಿಲ್ಲೆಗಳಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳಿವೆ. ಈ ವಿಭಾಗದ ಪ್ರಮುಖ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯವಿದೆ. ಈ ವಿಭಾಗದಲ್ಲಿ ಅನೇಕ ಖಾಸಗಿ ವಿಶ್ವವಿದ್ಯಾಲಯಗಳಿವೆ. ಮೈಸೂರು ನಗರದಲ್ಲಿ ಆಹಾರ ಸಂಶೋಧನಾ ಸಂಸ್ಥೆ ಸಿಎಫ್‌ಟಿಆರ್‌ಐ (ಸೆಂಟ್ರಲ್ ಫುಡ್ ಟೆಕ್ನಾಲಜಿ ರೀಸರ್ಚ್ ಇನ್ಸ್ಟಿಟ್ಯೂಟ್) ಇದೆ. ಶಿಕ್ಷಣ ಕ್ಷೇತ್ರಕ್ಕೆ ಸುತ್ತೂರು ಮಠದ ಕೊಡುಗೆ ಅಪಾರ. ಪದವಿ ಕಾಲೇಜುಗಳ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ವಾಮೀಜಿಯವರು ನಡೆಸುತ್ತಿದ್ದಾರೆ. ಈ ವಿಭಾಗದಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಧರ್ಮಸ್ಥಳ ಮತ್ತು ಮಣಿಪಾಲ ಸಂಸ್ಥೆಗಳ ಕೊಡುಗೆ ಗಮನಾರ್ಹವಾದುದು.



ಹುತ್ತರಿ ಹಬ್ಬ, ಕೊಡಗು



ಸುತ್ತೂರು ಮಠ

©KTBS Not to be republished

ಈ ವಿಭಾಗದ ಎಲ್ಲ ಜಿಲ್ಲೆಗಳಲ್ಲಿಯೂ ಜಿಲ್ಲಾ ಆಸ್ಪತ್ರೆಗಳಿವೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಸೇವೆ ಒದಗಿಸುವ ಆರೋಗ್ಯ ಉಪಕೇಂದ್ರಗಳಿವೆ. ಇಲ್ಲಿ ಮಕ್ಕಳಿಗೆ ರೋಗನಿರೋಧಕ ಚುಚ್ಚು ಮದ್ದು ನೀಡಲಾಗುತ್ತದೆ. ಗರ್ಭಿಣಿ ಮತ್ತು ಬಾಣಂತಿಯ ಆರೋಗ್ಯ ನಿರ್ವಹಿಸಲು ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತರು ಇದ್ದಾರೆ. ಈ ವಿಭಾಗದಲ್ಲಿ ಶಿಶು ಮರಣ ಪ್ರಮಾಣ ಕೆಳಮಟ್ಟದಲ್ಲಿದೆ. ಜನರ ಜೀವನಾಯುಷ್ಯ ಉತ್ತಮವಾಗಿದೆ. ತಾಯಂದಿರ ಮರಣ ಪ್ರಮಾಣವೂ ಕೆಳಮಟ್ಟದಲ್ಲಿದೆ. ಇವೆಲ್ಲ ಜನರ ಆರೋಗ್ಯ ಸೂಚಿಗಳಾಗಿವೆ.



**ರೋಗ ನಿರೋಧಕ ಚುಚ್ಚುಮದ್ದು ನೀಡುತ್ತಿರುವುದು**

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಮೈಸೂರಿನಲ್ಲಿ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ವಿಶ್ವವಿದ್ಯಾಲಯದ ಹೆಸರನ್ನು ಬರೆಯಿರಿ.
2. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಸೇವೆ ಒದಗಿಸುವ ಕೇಂದ್ರಗಳ ಹೆಸರೇನು?
3. ಎರಡು ಆರೋಗ್ಯ ಸೂಚಿಗಳನ್ನು ಹೆಸರಿಸಿ.

## ಮೈಸೂರು ವಿಭಾಗದ ಸಾಂಸ್ಕೃತಿಕ ಸಂಪತ್ತು

ಸಾಂಸ್ಕೃತಿಕವಾಗಿ ಶ್ರೀಮಂತ ವಿಭಾಗ ಮೈಸೂರು ವಿಭಾಗ. ಈ ಜಿಲ್ಲೆಗಳಲ್ಲಿ ಪ್ರಕೃತಿ ಸಂಪತ್ತು ತುಂಬಿ ತುಳುಕುತ್ತಿದೆ. ಸಮೃದ್ಧ ನದಿಗಳು, ದಟ್ಟವಾದ ಅರಣ್ಯಗಳು, ವೈವಿಧ್ಯಮಯವಾದ ವನ್ಯಪ್ರಾಣಿಗಳು, ಮೈನವಿರೇಳಿಸುವ ಜಲಪಾತಗಳು, ಕಲೆ-ವಾಸ್ತು ವೈಭವ, ಸಾಹಿತ್ಯ, ಕಲೆಗಳ ತವರೂರು ಮೈಸೂರು ವಿಭಾಗದ ಜಿಲ್ಲೆಗಳು. ಮಂಡ್ಯ ಜಿಲ್ಲೆಯು ಸಕ್ಕರೆಗೆ ಪ್ರಸಿದ್ಧಿಯಾಗಿದ್ದರೆ ಹಾಸನ, ಚಿಕ್ಕಮಗಳೂರು ಜಿಲ್ಲೆಗಳು ಕಾಫಿಗೆ ಪ್ರಸಿದ್ಧವಾಗಿವೆ. ಯಕ್ಷಗಾನ ಕಲೆಗೆ ಕರಾವಳಿ ಜಿಲ್ಲೆಗಳು ಪ್ರಸಿದ್ಧವಾಗಿದ್ದರೆ ಕಂಸಾಳೆ ಕುಣಿತಕ್ಕೆ ಚಾಮರಾಜನಗರ ಪ್ರಸಿದ್ಧವಾಗಿದೆ. ಸೋಮನಾಥಪುರ, ಬೇಲೂರು ಚನ್ನಕೇಶವ ದೇವಾಲಯದ ಮದನಿಕೆ ವಿಗ್ರಹಗಳು, ಶ್ರವಣಬೆಳಗೊಳದ ಗೊಮ್ಮಟೇಶ್ವರನ ಏಕಶಿಲಾ ವಿಗ್ರಹ, ಹಳೇಬಿಡು, ಮೂಡುಬಿದ್ರೆ ಮುಂತಾದವು ವಿಶ್ವವಿಖ್ಯಾತ ಕಲಾಕುಸರಿ ಮೆರೆದಿರುವ ದೇವಾಲಯಗಳಿಗೆ ಹೆಸರುವಾಸಿಯಾಗಿವೆ. ಮೈಸೂರು ವಿಭಾಗದ ಜಿಲ್ಲೆಗಳೆಲ್ಲವೂ ಪ್ರವಾಸೋದ್ಯಮಕ್ಕೆ ಫಲವತ್ತಾದ ಕ್ಷೇತ್ರಗಳಾಗಿವೆ. ಕಾವೇರಿ ನದಿಯು ನಮ್ಮ ರಾಜ್ಯದ ಜೀವಧಾರೆಯಾಗಿದೆ. ಇದು ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಹುಟ್ಟುತ್ತದೆ. ನೂರಾರು ಕಿಲೋಮೀಟರ್ ಉದ್ದದ ಕರಾವಳಿ ತೀರ

© KTBS Not to be republished

ಇಲ್ಲಿದೆ. ಮೀನುಗಾರಿಕೆ, ಬಂದರು, ಸಮುದ್ರದ ಮೇಲಿನ ಸಾಹಸ ಕ್ರೀಡೆಗಳು, ಶೈಕ್ಷಣಿಕ ಕೇಂದ್ರಗಳು ಮುಂತಾದವು ಇಲ್ಲಿವೆ. ಸಾಂಸ್ಕೃತಿಕವಾಗಿ ಸಮೃದ್ಧವಾದ ವಿಭಾಗ ಮೈಸೂರು ವಿಭಾಗ.



ಗೊಮ್ಮಟೇಶ್ವರ ವಿಗ್ರಹ – ಶ್ರವಣಬೆಳಗೊಳ

## ಮೈಸೂರು ವಿಭಾಗದ ಸ್ವಾತಂತ್ರ್ಯ ಹೋರಾಟಗಾರರು

ಈ ವಿಭಾಗದ ಜಿಲ್ಲೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವು. ಗಾಂಧೀಜಿಗೆ ಪ್ರಿಯವಾಗಿದ್ದ ಖಾದಿ ಕೇಂದ್ರಗಳು, ಗೃಹ ಕೈಗಾರಿಕೆಗಳು ಕೂಡ ಇಲ್ಲಿ ವ್ಯಾಪಕವಾಗಿ ಚಾಲನೆಯಲ್ಲಿದ್ದವು. ಮಂಗಳೂರಿನ ಕುದ್ಮಲ್ ರಂಗರಾವ್ ಅವರು ಅಸ್ಪೃಶ್ಯತೆ ನಿವಾರಣೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ತಗಡೂರು ರಾಮಚಂದ್ರರಾವ್ ಅವರು ಗಾಂಧೀಜಿ ಅನುಯಾಯಿಗಳು. ಇವರೂ ಅಸ್ಪೃಶ್ಯತೆಯ ನಿವಾರಣೆಗಾಗಿ ಹೋರಾಟ ಮಾಡಿದರು. ಎಚ್. ಸಿ. ದಾಸಪ್ಪ, ಯಶೋಧರಮ್ಮ ದಾಸಪ್ಪ, ಕಾರ್ನಾಡ್ ಸದಾಶಿವರಾವ್, ಎಚ್. ಕೆ. ವೀರಣ್ಣಗೌಡ, ಕೆ. ಟಿ. ಭಾಷ್ಯಂ, ಕಮಲಾದೇವಿ ಚಟ್ಟೋಪಾಧ್ಯಾಯ, ಕೆ. ವಿ. ಶಂಕರೇಗೌಡ, ಕೆ. ರಾಮಕೃಷ್ಣ ಕಾರಂತ, ಸಿ. ಎಮ್. ಪೂಣಚ್ಚ ಮುಂತಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಅನೇಕರು ಕರ್ನಾಟಕ ಏಕೀಕರಣದಲ್ಲಿಯೂ ಭಾಗವಹಿಸಿದ್ದರು. ಹೀಗೆ ಮೈಸೂರು ವಿಭಾಗದ ಜಿಲ್ಲೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗಳಿಸಿದ್ದವು. ಮೈಸೂರಿನ ದಸರಾ ಉತ್ಸವವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯವಾದ ಉತ್ಸವವಾಗಿದೆ.

## I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಮೈಸೂರು ವಿಭಾಗಕ್ಕೆ ಸೇರಿದ ಇಬ್ಬರು ಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರರ ಹೆಸರನ್ನು ಬರೆಯಿರಿ.
2. ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಅಸ್ಪೃಶ್ಯತಾ ನಿವಾರಣೆ ಚಳುವಳಿಯಲ್ಲಿ ತೊಡಗಿದ್ದ ಇಬ್ಬರು ಸಮಾಜ ಸುಧಾರಕರ ಹೆಸರು ಬರೆಯಿರಿ.
3. ಶ್ರವಣಬೆಳಗೊಳವು ಯಾವುದಕ್ಕೆ ಪ್ರಸಿದ್ಧಿಯಾಗಿದೆ?
4. ಮೈಸೂರು ಜಿಲ್ಲೆಗೆ ಸೇರಿದ ನಾಲ್ವರು ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಬರೆಯಿರಿ.

## II. ಖಾಲಿ ಜಾಗ ಭರ್ತಿ ಮಾಡಿ.

1. ಕೊಡಗು ಜಿಲ್ಲೆಯ --------- ನಲ್ಲಿ ಕಾವೇರಿ ನದಿ ಹುಟ್ಟುತ್ತದೆ.
2. ಕುದ್ಮಲ್ ರಂಗರಾವ್ ಅವರು ---------- ನಿವಾರಣೆಗಾಗಿ ಹೋರಾಟ ಮಾಡಿದರು.

© KTBS Not to be republished

3. ಮೈಸೂರಿನಲ್ಲಿ ನಡೆಯುವ ವಿಶ್ವವಿಖ್ಯಾತ ಉತ್ಸವದ ಹೆಸರು --------.

4. ಮೈಸೂರು ವಿಭಾಗದ --------- ಮತ್ತು --------- ಜಿಲ್ಲೆಗಳಲ್ಲಿ ಬಂದರುಗಳಿವೆ.

## ಮೈಸೂರು ವಿಭಾಗದ ಜಿಲ್ಲೆಗಳ ವಿಶಿಷ್ಟತೆಗಳು

ಈ ಭಾಗದಲ್ಲಿ ಮೈಸೂರು ವಿಭಾಗದ ಜಿಲ್ಲೆಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ. ಈ ಜಿಲ್ಲೆಯ ವಿಶಿಷ್ಟತೆ, ಪ್ರೇಕ್ಷಣೀಯ ಸ್ಥಳಗಳು, ಕೃಷಿ, ಉದ್ದಿಮೆ, ಗಣ್ಯವ್ಯಕ್ತಿಗಳು ಮುಂತಾದ ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

## ಮೈಸೂರು ಜಿಲ್ಲೆ



ಸಂತ ಫಿಲೊಮಿನ ಚರ್ಚ್ – ಮೈಸೂರು

ಮೈಸೂರು ಸಂಸ್ಥಾನದ ರಾಜಧಾನಿಯಾಗಿದ್ದ ಮೈಸೂರು ಸುಂದರ ನಗರ. ಇಂದು ಅದು ರಾಜಧಾನಿ ಸ್ಥಾನವನ್ನು ಕಳೆದುಕೊಂಡಿದೆ. ಆದರೆ ಅದು ನಮ್ಮ ರಾಜ್ಯದ ಸಾಂಸ್ಕೃತಿಕ ಕೇಂದ್ರವಾಗಿದೆ. ನಮ್ಮ ರಾಜ್ಯದ ಅತ್ಯಂತ ಹಳೆಯ ವಿಶ್ವವಿದ್ಯಾಲಯ ಎಂಬ ಕೀರ್ತಿ ಮೈಸೂರು ವಿಶ್ವವಿದ್ಯಾಲಯಕ್ಕಿದೆ. ಇಲ್ಲಿ ವಾರ್ಷಿಕವಾಗಿ ನಡೆಯುವ ದಸರಾ ಉತ್ಸವವು ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದೆ. ನಮ್ಮ ಪರಂಪರೆಯನ್ನು ಪ್ರತಿನಿಧಿಸುವ ಅರಮನೆ, ದೇವಾಲಯಗಳು, ಚರ್ಚುಗಳು, ಪುರಾತತ್ವ ಮತ್ತು ವಾಸ್ತು ಸ್ಮಾರಕಗಳು ಇಲ್ಲಿವೆ. ಇಲ್ಲಿನ ಪ್ರಮುಖ ಆಕರ್ಷಣೆ ಚಾಮುಂಡಿಬೆಟ್ಟ ಮತ್ತು ಅಲ್ಲಿನ ನಂದಿ ಮೂರ್ತಿ. ಈ ಜಿಲ್ಲೆಯ ಸೋಮನಾಥಪುರ, ನಂಜನಗೂಡು, ತಲಕಾಡು, ಬೆಟ್ಟದೂರಿನ ಗೊಮ್ಮಟಗಿರಿ, ಖಾದಿ ಮತ್ತು ಗುಡಿ ಕೈಗಾರಿಕೆಗೆ ಹೆಸರುವಾಸಿಯಾಗಿದ್ದ ಬದನವಾಳು ಮುಂತಾದವು ಪ್ರವಾಸಿಗರನ್ನು ದೇಶ–ವಿದೇಶಗಳಿಂದ ಆಕರ್ಷಿಸುತ್ತವೆ. ಇಲ್ಲಿನ ಪ್ರಸಿದ್ಧ ಮೃಗಾಲಯದಲ್ಲಿ ಅನೇಕ ಪ್ರಾಣಿಗಳು, ಪಕ್ಷಿಗಳು, ಜಲಚರಪ್ರಾಣಿಗಳು ಮುಂತಾದವು ಮಕ್ಕಳನ್ನು ಮತ್ತು ಹಿರಿಯರನ್ನು ಆಕರ್ಷಿಸುತ್ತವೆ. ಇಲ್ಲಿ ರೈಲು ವಸ್ತು ಸಂಗ್ರಹಾಲಯವಿದೆ. ಏಷ್ಯಾಖಂಡದಲ್ಲಿ ದೊಡ್ಡದು ಎನ್ನಲಾದ ಜಾನಪದ ವಸ್ತುಸಂಗ್ರಹಾಲಯ ಇಲ್ಲಿದೆ. ಕೆ.ಆರ್. ಸಾಗರ ಅಣೆಕಟ್ಟೆಯ ಮುಂಭಾಗದಲ್ಲಿ ಬೃಂದಾವನ ಉದ್ಯಾನವನವಿದೆ. ಈ ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೈಲುಕುಪ್ಪೆ ಎಂಬಲ್ಲಿ ಟಿಬೆಟ್ಟಿಯನ್ನರ ಪುನರ್ವಸತಿ ಕೇಂದ್ರವಿದೆ. ಇಲ್ಲಿ ಅತ್ಯಂತ ಆಕರ್ಷಣೀಯವಾದ ಬುದ್ಧ ದೇವಾಲಯಗಳಿವೆ. ಬೈಲುಕುಪ್ಪೆಯಲ್ಲಿ ಬುದ್ಧವಿಹಾರವಿದ್ದು ತುಂಬಾ ಪ್ರಸಿದ್ಧವಾಗಿದೆ. ನಮ್ಮ ರಾಜ್ಯವನ್ನು 1973ರವರೆಗೆ ಮೈಸೂರು ರಾಜ್ಯ ಎಂದು ಕರೆಯಲಾಗುತ್ತಿತ್ತು.



ಜಗನ್ ಮೋಹನ ಪ್ಯಾಲೇಸ್



ಚಾಮುಂಡಿಬೆಟ್ಟ



ಬುದ್ಧವಿಹಾರ, ಬೈಲುಕುಪ್ಪೆ

©KTBS Not to be republished

## ಚಾಮರಾಜನಗರ ಜಿಲ್ಲೆ

ಇದಕ್ಕೆ ಪ್ರಾಚೀನಕಾಲದಲ್ಲಿ ಅರಿಕುಠಾರ ಎಂಬ ಹೆಸರಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ತಂದೆ ಚಾಮರಾಜ ಒಡೆಯರ್ ಅವರ ನೆನಪಿಗೆ ಇದನ್ನು ಚಾಮರಾಜನಗರ ಎಂದು ನಾಮಕರಣ ಮಾಡಿದರು. ಇಲ್ಲಿ ಚಾಮರಾಜೇಶ್ವರ ಎಂಬ ಹೆಸರಿನ ಪ್ರಸಿದ್ಧ ದೇವಾಲಯವನ್ನು ಕಟ್ಟಿಸಿದರು. ಈ ಜಿಲ್ಲೆಯು ಹಿಪ್ಪುನೇರಳೆ ಸೊಪ್ಪಿನ ಕೃಷಿಗೆ ಮತ್ತು ರೇಷ್ಮೆ ಗೂಡು ಉತ್ಪಾದನೆಗೆ ಹೆಸರುವಾಸಿಯಾಗಿತ್ತು. ಈಗ ಅದರ ಉಳುಮೆಯ ಪ್ರದೇಶ ಕಡಿಮೆಯಾಗಿದೆ.

ಈ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನವಿದೆ. ಆನೆ, ಹುಲಿ, ಚಿರತೆ ಮತ್ತು ಇತರೆ ವನ್ಯಮೃಗಗಳನ್ನು ಪ್ರವಾಸಿಗರು ಇಲ್ಲಿ ನೋಡಬಹುದು. ಇದಲ್ಲದೆ ಬಿಳಿಗಿರಿರಂಗನಬೆಟ್ಟವೆಂಬ ವನ್ಯಮೃಗಗಳ ಧಾಮ ಇಲ್ಲಿ ಇದೆ. ಇದು ಆನೆಗಳ ವಾಸಸ್ಥಳದ ಪ್ರಮುಖ ಕ್ಷೇತ್ರವಾಗಿದೆ. ಬಿಳಿಗಿರಿರಂಗನಬೆಟ್ಟದ ಮೇಲೆ ಬಿಳಿಗಿರಿರಂಗನ ದೇವಾಲಯವಿದೆ. ಮಲೈಮಹದೇಶ್ವರ ಮತ್ತು ಹಿಮವದ್ ವೇಣುಗೋಪಾಲಸ್ವಾಮಿ ದೇವಸ್ಥಾನಗಳು ಈ ಭಾಗದ ಪ್ರಸಿದ್ಧ ದೇವಾಲಯಗಳಿವೆ.



ಮಲೈಮಹದೇಶ್ವರ ದೇವಾಲಯ


ಬಂಡೀಪುರ

ಈ ಜಿಲ್ಲೆಯಲ್ಲಿ ಅನೇಕ ಧಾರ್ಮಿಕ ಸ್ಥಳಗಳಿವೆ. ಹರದನಹಳ್ಳಿಯಲ್ಲಿ ಲಿಂಗಾಯತ ಸಾಧಕರ ಗದ್ದುಗೆಗಳಿವೆ. ಈ ಜಿಲ್ಲೆಯ ಪ್ರಮುಖ ತಾಲ್ಲೂಕಾದ ಕೊಳ್ಳೆಗಾಲವು ರೇಷ್ಮೆ ನೇಯ್ಗೆಗೆ ಹೆಸರುವಾಸಿಯಾಗಿದೆ. ಈ ತಾಲ್ಲೂಕಿನ ಚಿಕ್ಕಲೂರಿನಲ್ಲಿ ಸಿದ್ದಪ್ಪಾಜಿ ಅವರ ಗದ್ದುಗೆಯಿದೆ. ಸತ್ತೇಗಾಲ ಎಂಬಲ್ಲಿ ಪ್ರಸಿದ್ಧ ಬಂಡಳ್ಳಿ ದರ್ಗವಿದೆ. ಇಲ್ಲಿ ಪ್ರಸಿದ್ಧ ಹೊಗೇನಕಲ್ಲು ಜಲಪಾತವಿದೆ. ಕನ್ನಡದ ಪ್ರಸಿದ್ಧ ಕವಿ ಷಡಕ್ಷರದೇವನ ಗದ್ದುಗೆ ಯಳಂದೂರಿನಲ್ಲಿದೆ.

## ಹಾಸನ ಜಿಲ್ಲೆ


ಚನ್ನಕೇಶವ ದೇವಾಲಯ, ಬೇಲೂರು


ಹೊಯ್ಸಳೇಶ್ವರ ದೇವಾಲಯ, ಹಳೇಬೀಡು

Not to be Republished

ಹಾಸನಾಂಬ ದೇವಾಲಯದಿಂದ ಇದಕ್ಕೆ ಹಾಸನ ಎಂಬ ಹೆಸರು ಬಂದಿದೆ. ಈ ದೇವಾಲಯದ ಗರ್ಭಗುಡಿ ಬಾಗಿಲನ್ನು ವರ್ಷದಲ್ಲಿ ಒಮ್ಮೆ ಮಾತ್ರ ತೆರೆಯಲಾಗುತ್ತದೆ. ಈ ಜಿಲ್ಲೆಯಲ್ಲಿ ದೇವಾಲಯಗಳು ಹೊಯ್ಸಳ ವಾಸ್ತುಶಿಲ್ಪಕ್ಕೆ ಹೆಸರುವಾಸಿಯಾಗಿವೆ. ಗೊರೂರು, ಮೊಸಳೆ, ಮುಂತಾದವು ಪ್ರಸಿದ್ಧ ಗ್ರಾಮಗಳು. ಯಗಚಿ ನದಿ ದಂಡೆಯಲ್ಲಿರುವ ಬೇಲೂರಿನಲ್ಲಿ ಪ್ರಸಿದ್ಧ ಚನ್ನಕೇಶವ ದೇವಾಲಯವಿದೆ. ಕುಸುರಿ ಕೆತ್ತನೆಗೆ ಇದು ಹೆಸರುವಾಸಿಯಾಗಿದೆ. ಇದನ್ನು ವೇಲಾಪುರಿ ಎಂದು ಕರೆಯಲಾಗುತ್ತಿತ್ತು. ಹಳೆಬೀಡಿನಲ್ಲಿ ಕೇದಾರೇಶ್ವರ ಮತ್ತು ಹೊಯ್ಸಳೇಶ್ವರ ದೇವಾಲಯಗಳಿವೆ. ಈ ದೇವಾಲಯಗಳಿಗೆ ಒಂದು ಸಾವಿರ ವರ್ಷಗಳ ಚರಿತ್ರೆಯಿದೆ. ಈ ಸ್ಥಳವನ್ನು ದ್ವಾರಸಮುದ್ರ ಎಂದು ಕರೆಯುತ್ತಿದ್ದರು. ಈ ಜಿಲ್ಲೆಯ ಮತ್ತೊಂದು ಅದ್ಭುತ ಸ್ಥಳ ಶ್ರವಣಬೆಳಗೊಳ. ಇಲ್ಲಿ ಒಂದು ಸಾವಿರ ವರ್ಷಗಳ ಹಿಂದೆ ನಿರ್ಮಿಸಿರುವ ಪ್ರಸಿದ್ಧ ಏಕಶಿಲಾ ಬಾಹುಬಲಿ ಮೂರ್ತಿಯಿದೆ. ಇದರ ಎತ್ತರ 58 ಅಡಿಗಳು. ಹನ್ನೆರಡು ವರ್ಷಗಳಿಗೊಮ್ಮೆ ಇಲ್ಲಿ ಬಾಹುಬಲಿ ವಿಗ್ರಹಕ್ಕೆ ಮಹಾಮಸ್ತಕಾಭಿಷೇಕ ನಡೆಯುತ್ತದೆ. ದೇಶ-ವಿದೇಶಗಳಿಂದ ಪ್ರವಾಸಿಗರು ಅಪಾರ ಸಂಖ್ಯೆಯಲ್ಲಿ ಇದಕ್ಕೆ ನೆರೆಯುತ್ತಾರೆ. ಹಾಸನ-ಮಂಗಳೂರು ನಡುವಿನ ರೈಲು ಮಾರ್ಗದಲ್ಲಿ 58 ಸುರಂಗಗಳಿವೆ. ಈ ರೈಲು ಮಾರ್ಗದಲ್ಲಿ ಯಾತ್ರೆ ಮಾಡುವುದು ಒಂದು ಸಾಹಸ ಯಾತ್ರೆಯಾಗುತ್ತದೆ. ಕರ್ನಾಟಕದಿಂದ ಪ್ರಧಾನಮಂತ್ರಿಯಾಗಿದ್ದ ಶ್ರೀ ಹೆಚ್.ಡಿ. ದೇವೇಗೌಡರವರು ಈ ಜಿಲ್ಲೆಯವರು.


**ಹೆಚ್.ಡಿ. ದೇವೇಗೌಡ**

## ಚಿಕ್ಕಮಗಳೂರು ಜಿಲ್ಲೆ

ಆದಿಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶಾರದಾದೇವಿ ದೇವಾಲಯ ಶೃಂಗೇರಿಯಲ್ಲಿದೆ. ಇದು ತುಂಗಾ ನದಿಯ ದಂಡೆಯಲ್ಲಿದೆ. ಚಿಕ್ಕಮಗಳೂರು ನಗರವು ಸಮುದ್ರಮಟ್ಟದಿಂದ 1034 ಮೀಟರ್ ಎತ್ತರದಲ್ಲಿದೆ. ಇಲ್ಲಿನ ಹವಾಮಾನ ಸದಾ ತಂಪಾಗಿರುತ್ತದೆ. ಜಿಲ್ಲೆಯು ಮಲೆನಾಡಿನ ಕೇಂದ್ರದಲ್ಲಿದೆ. ಈ ಜಿಲ್ಲೆಯು ದಟ್ಟ ಅರಣ್ಯ ಪ್ರದೇಶದಿಂದ ಕೂಡಿದೆ. ಜಿಲ್ಲೆಯಲ್ಲಿ ಭದ್ರಾ ವನ್ಯಮೃಗ ಧಾಮವಿದೆ. ಇದನ್ನು ಮುತ್ತೋಡಿ ಪ್ರಾಣಿಧಾಮ ಎಂದೂ ಕರೆಯಲಾಗುತ್ತದೆ. ಇದಲ್ಲದೆ ಉಳಿವಿ ಪಕ್ಷಿಧಾಮವಿದೆ. ಇಲ್ಲಿ 19ನೆಯ ಶತಮಾನದಲ್ಲಿ ನಿರ್ಮಿಸಲಾದ ಸೇಂಟ್ ಆಂಡ್ರೂಸ್ ಚರ್ಚ್ ಇದೆ. ಪ್ರಸಿದ್ಧ ಜಾಮಿಯಾ ಮಸೀದಿ ಇಲ್ಲಿದೆ. ಕೆಮ್ಮಣ್ಣುಗುಂಡಿಯ ನಿತ್ಯಹರಿದ್ವರ್ಣ ಕಾಡಿನಿಂದ ಕೂಡಿದ ಪ್ರದೇಶ ಇದಾಗಿದೆ. ಸಮುದ್ರಮಟ್ಟದಿಂದ 1400 ಮೀಟರ್ ಎತ್ತರದಲ್ಲಿರುವ ಇದು ಅನೇಕ ಜಲಪಾತಗಳನ್ನು ಹೊಂದಿದೆ. ನಾಲ್ವಡಿ ಕೃಷರಾಜ ಒಡೆಯರ್ ಅವರು ಇಲ್ಲಿ ಬೇಸಿಗೆಯಲ್ಲಿ ತಂಗಲು ಬಂಗಲೆ ಕಟ್ಟಿಸಿದ್ದಾರೆ. ಅಬ್ಬೆ ಜಲಪಾತ, ಮುಳ್ಳಯ್ಯನಗಿರಿ, ಕಲ್ಹತ್ತಗಿರಿ ಮುಂತಾದ ಪ್ರಕೃತಿ ರಮ್ಯ ತಾಣಗಳು ಇಲ್ಲಿವೆ. ಇದೊಂದು ಪ್ರಸಿದ್ಧ ಪ್ರವಾಸಿತಾಣವಾಗಿದೆ. ಇಲ್ಲಿ 1500ಕ್ಕೂ ಮಿಕ್ಕಿದ ವೈವಿಧ್ಯಮಯ ಗುಲಾಬಿ ಹೂವಿನ ತೋಟವಿದೆ. ಇದೊಂದು ಸಾಹಸ ಕ್ರೀಡೆಗಳ ಕೇಂದ್ರವಾಗಿದೆ. ಪಶ್ಚಿಮಘಟ್ಟ ಪ್ರದೇಶದಲ್ಲಿರುವ ಬಾಬಾಬುಡನ್‌ಗಿರಿಯನ್ನು ಚಂದ್ರದ್ರೋಣ ಪರ್ವತ ಎಂದೂ ಕರೆಯಲಾಗುತ್ತದೆ. ಸೂಫಿಸಂತ ಬಾಬಾಬುಡನ್ ದರ್ಗಾ ಇಲ್ಲಿದೆ. ಅವನು ಭಾರತಕ್ಕೆ ಕಾಫಿ ಪರಿಚಯಿಸಿದ ಎಂದು ಹೇಳಲಾಗುತ್ತದೆ. ಬಾಬಾಬುಡನ್‌ಗಿರಿ ದರ್ಗಾ ಮುಸ್ಲಿಮರು ಮತ್ತು ಹಿಂದೂಗಳ ಯಾತ್ರಾಸ್ಥಳವಾಗಿದೆ. ಇಲ್ಲಿರುವ ಒಂದು ಗವಿಯಲ್ಲಿ ದತ್ತಾತ್ರೇಯ ಪೀಠವಿದೆ.

©KTBS Not to be republished



ಶೃಂಗೇರಿ ಶಾರದಾಂಬಾ ದೇವಾಲಯ



ಬಾಬಾಬುಡನ್‌ಗಿರಿ ದರ್ಗಾ



ಸೇಂಟ್ ಆಂಡ್ರೂಸ್ ಚರ್ಚ್

ಕನ್ನಡದ ಪ್ರಸಿದ್ಧ ಕವಿ ಲಕ್ಷ್ಮೀಶ ಹುಟ್ಟಿದ ದೇವನೂರು ಈ ಜಿಲ್ಲೆಯಲ್ಲಿದೆ. ಇವನು ಬರೆದ ಜೈಮಿನಿ ಭಾರತ ಕನ್ನಡದ ಪ್ರಸಿದ್ಧ ಕೃತಿಯಾಗಿದೆ.

ಈ ಜಿಲ್ಲೆಯ ಪರ್ವತಗಳಿಂದ ತುಂಗಭದ್ರ, ಹೇಮಾವತಿ, ನೇತ್ರಾವತಿ ಮತ್ತು ವೇದಾವತಿ ನದಿಗಳು ಹುಟ್ಟುತ್ತವೆ.

## ಮಂಡ್ಯ ಜಿಲ್ಲೆ

ಮೈಸೂರು ಜಿಲ್ಲೆಯನ್ನು ವಿಭಜಿಸಿ 1938ರಲ್ಲಿ ಮಂಡ್ಯ ಜಿಲ್ಲೆಯನ್ನು ರಚಿಸಲಾಯಿತು. ಮಾಂಡವ್ಯ ಋಷಿಯು ಇಲ್ಲಿ ತಪಸ್ಸು ಮಾಡಿದ್ದ ಎಂದು ಹೇಳಲಾಗುತ್ತದೆ. ಅದರಿಂದ ಇದಕ್ಕೆ ಮಂಡ್ಯ ಅನ್ನುವ ಹೆಸರು ಬಂದಿದೆ. ಈ ಜಿಲ್ಲೆಯ ಮುಖ್ಯ ಬೆಳೆಗಳು ಕಬ್ಬು ಮತ್ತು ಭತ್ತ. ಭಾರತದಲ್ಲಿ ಅತಿ ದೊಡ್ಡ ಸಕ್ಕರೆ ಕಾರ್ಖಾನೆ ಇಲ್ಲಿ 1933ರಲ್ಲಿ ಆರಂಭವಾಯಿತು. ಈ ಜಿಲ್ಲೆಯಲ್ಲಿ ಹತ್ತಾರು ಅಕ್ಕಿ ಗಿರಣಿಗಳಿವೆ. ಕೃಷಿಯನ್ನು ಪ್ರೋತ್ಸಾಹಿಸಲು ಸರ್ಕಾರವು ಗುಂಡಲು ಎಂಬಲ್ಲಿ 1951ರಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದೆ. ಶಿವಳ್ಳಿ ಎಂಬಲ್ಲಿ ಬೀಜೋತ್ಪಾದನೆ ಕೇಂದ್ರವಿದೆ.

ಈ ಜಿಲ್ಲೆಯ ಶ್ರೀರಂಗಪಟ್ಟಣವು ಇದೊಂದು ಚಾರಿತ್ರಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿದೆ. ಬ್ರಿಟಿಷರು ಇದನ್ನು 1799ರಲ್ಲಿ ತಮ್ಮ ವಶಪಡಿಸಿಕೊಳ್ಳುವವರೆಗೆ ಇದು ಒಡೆಯರ್ ಅರಸರ ರಾಜಧಾನಿಯಾಗಿತ್ತು. ಟಿಪ್ಪುಸುಲ್ತಾನ್ ಕಟ್ಟಿಸಿದ ಅನೇಕ ಮಸೀದಿ, ಕೋಟೆಗಳು, ಮದ್ದುಗುಂಡುಗಳ ಕೋಠಿ ಮುಂತಾದವು ಇಲ್ಲಿವೆ. ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಸಮಾಧಿಗಳು ಗುಂಬಜ್‌ನಲ್ಲಿವೆ. ಟಿಪ್ಪುಸುಲ್ತಾನ್ ಕಟ್ಟಿಸಿರುವ ಬೇಸಿಗೆ ಅರಮನೆ ದರಿಯಾ ದೌಲತ್ ಆಕರ್ಷಣೀಯವಾಗಿದೆ.



ಕೃಷ್ಣರಾಜಸಾಗರ ಅಣೆಕಟ್ಟು



ಶ್ರೀರಂಗಪಟ್ಟಣ ದೇವಾಲಯ



ದರಿಯಾ ದೌಲತ್ ಬಾಗ್

©KTBS Not to be republished

ಈ ಪಟ್ಟಣವು ಕಾವೇರಿ ನದಿಯ ದಂಡೆಯಲ್ಲಿದೆ. ಈ ಪಟ್ಟಣದ ಆರಾಧ್ಯ ದೈವವೆಂದರೆ ಶ್ರೀರಂಗನಾಥಸ್ವಾಮಿ. ಶ್ರೀರಂಗನಾಥಸ್ವಾಮಿ ದೇವಾಲಯವು ವಿಶಾಲ ಪ್ರದೇಶದಲ್ಲಿ ನೆಲೆಗೊಂಡಿದೆ. ಕಾವೇರಿ ನದಿಯು ಉಂಟು ಮಾಡಿರುವ ಮೂರು ದ್ವೀಪಗಳಲ್ಲಿ ಮೂರು ಶ್ರೀರಂಗನಾಥಸ್ವಾಮಿ ದೇವಾಲಯಗಳಿವೆ. ಮೊದಲನೆಯದು ಶ್ರೀರಂಗಪಟ್ಟಣ, ಎರಡನೆಯದು ಶಿವನಸಮುದ್ರದಲ್ಲಿನ ಶ್ರೀರಂಗನಾಥಸ್ವಾಮಿ ದೇವಾಲಯ. ಮೂರನೆಯದು ತಮಿಳುನಾಡಿನಲ್ಲಿರುವ ಶ್ರೀರಂಗಂದಲ್ಲಿನ ಶ್ರೀರಂಗನಾಥಸ್ವಾಮಿ ದೇವಾಲಯ. ಪಶ್ಚಿಮವಾಹಿನಿಯು ಹಿಂದೂಗಳಿಗೆ ಪವಿತ್ರ ಕ್ಷೇತ್ರವಾಗಿದೆ. ಇವಲ್ಲದೆ ಇಲ್ಲಿ ಆದಿನಾಥ ತೀರ್ಥಂಕರನ ಬಸದಿಯಿದೆ. ಜುಮ್ಮಾ ಮಸೀದಿಯಿದೆ. ಗಂಜಾಮ್ ಎಂಬಲ್ಲಿ ಫ್ರೆಂಚ್ ಪ್ರವಾಸಿ ಅಬ್ಬೆ ದುಬಾಯಿ ಕಟ್ಟಿಸಿದ ಚರ್ಚ್ ಇದೆ. ಈ ಊರು ಎತ್ತಿನ ಬಂಡಿಗಳನ್ನು ತಯಾರಿಸುವ ಕೇಂದ್ರವಾಗಿದೆ.

ಈ ಜಿಲ್ಲೆಯ ಇತರೆ ಪ್ರಮುಖ ಕೇಂದ್ರಗಳೆಂದರೆ ಮಂಟೆಸ್ವಾಮಿ ಗದ್ದಿಗೆಯಿರುವ ಬೊಪ್ಪಗೌಡನಪುರ, ರಂಗನತಿಟ್ಟು ಪಕ್ಷಿಧಾಮ, ಪಾಂಡವಪುರ, ಮೇಲುಕೋಟೆ, ಗಗನಚುಕ್ಕಿ-ಭರಚುಕ್ಕಿ ಜಲಪಾತಗಳಿರುವ ಶಿವನಸಮುದ್ರ, ಚುಂಚನಗಿರಿ ಮುಂತಾದವು. ಆದಿಚುಂಚನಗಿರಿ ಮಠವು ಅನೇಕ ಶಾಲೆ, ಕಾಲೇಜುಗಳನ್ನು ತಾಂತ್ರಿಕ ಶಿಕ್ಷಣ ಕೇಂದ್ರಗಳನ್ನು ನಡೆಸುತ್ತಿದೆ. ಮೇಲುಕೋಟೆಯಲ್ಲಿ 1854ರಲ್ಲಿ ಸ್ಥಾಪಿಸಿರುವ ಸಂಸ್ಕೃತ ಪಾಠಶಾಲೆಯಿದೆ. ಇಲ್ಲಿ ಪರಕಾಲ ಮಠ, ಅಹೋಬಲ ಮಠ ಮತ್ತು ಯತಿರಾಜಮಠಗಳಿವೆ.

ಮಂಡ್ಯ ಜಿಲ್ಲೆಯ ಅಭಿವೃದ್ಧಿಯ ಜೀವದ್ರವ್ಯ ಕೃಷ್ಣರಾಜಸಾಗರ ಅಣೆಕಟ್ಟು. ಕಾವೇರಿ ನದಿಗೆ ಅಡ್ಡವಾಗಿ ನಿರ್ಮಿಸಿರುವ ಈ ಅಣೆಕಟ್ಟೆಯು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಕೃಷಿಗೆ ನೀರನ್ನು ಒದಗಿಸುತ್ತದೆ. ಇದನ್ನು ಸರ್.ಎಂ.ವಿಶ್ವೇಶ್ವರಯ್ಯ ಅವರ ಮಾರ್ಗದರ್ಶನದಲ್ಲಿ ನಿರ್ಮಿಸಲಾಯಿತು. ಇದರ ನಿರ್ಮಾಣಕ್ಕೆ ಕಾರಣಕರ್ತರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಇದಕ್ಕೆ ಇಡಲಾಗಿದೆ. ಇದನ್ನು 1932ರಲ್ಲಿ ನಿರ್ಮಿಸಲಾಯಿತು. ಇದು ಕೇವಲ ನೀರಾವರಿ ಯೋಜನೆ ಮಾತ್ರವಲ್ಲ. ಮೈಸೂರು ಮತ್ತು ಬೆಂಗಳೂರು ನಗರಗಳಿಗೆ ಕುಡಿಯುವ ನೀರನ್ನು ಇಲ್ಲಿಂದ ಸರಬರಾಜು ಮಾಡಲಾಗುತ್ತದೆ. ಇಲ್ಲಿಂದ ಮುಂದೆ ಹರಿದು ಹೋಗುವ ಕಾವೇರಿ ನದಿಗೆ ತಮಿಳುನಾಡಿನಲ್ಲಿ ಸೇಲಮ್ ಬಳಿ ಮೆಟ್ಟೂರು ಅಣೆಕಟ್ಟೆಯನ್ನು ನಿರ್ಮಿಸಲಾಗಿದೆ.

**ಕೊಡಗು ಜಿಲ್ಲೆ**

ಕರ್ನಾಟಕದ ಕಾಶ್ಮೀರ ಎಂದು ಇದಕ್ಕೆ ಪ್ರಸಿದ್ಧಿಯಿದೆ. ಕೆಳದಿ ನಾಯಕರ ಅಳ್ವಿಕೆಯು ಪತನವಾದ ನಂತರ ಇಲ್ಲಿ ಹಾಲೇರಿ ಅರಸರು 1600 ರಿಂದ 1834ರವರೆಗೆ ಆಡಳಿತ ನಡೆಸುತ್ತಾರೆ. ಬ್ರಿಟಿಷರು 1834ರಲ್ಲಿ ಕೊಡಗನ್ನು ತಮ್ಮ ವಶಕ್ಕೆ ಪಡೆಯುತ್ತಾರೆ. ಇದು 1956ರಲ್ಲಿ ಕರ್ನಾಟಕದಲ್ಲಿ ವಿಲೀನಗೊಂಡಿತು. ಇದೊಂದು ಬೆಟ್ಟ-ಗುಡ್ಡಗಳಿಂದ, ಕಣಿವೆ-ಪರ್ವತ ಸಾಲುಗಳಿಂದ ಕೂಡಿದ ಜಿಲ್ಲೆ. ಇವರ ಸಾಂಪ್ರದಾಯಿಕ ಉಡುಪು ವಿಶಿಷ್ಟವಾದುದು. ಸುಗ್ಗಿಯ ಸಂದರ್ಭದಲ್ಲಿ ಹುತ್ತರಿ ಹಬ್ಬವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಗುತ್ತದೆ.

ಕೊಡಗು ಪ್ರಸಿದ್ಧ ಪ್ರವಾಸಿ ಕೇಂದ್ರವಾಗಿದೆ. ಇಲ್ಲಿನ ಕಾವೇರಿ ನದಿಯ ಉಗಮ ಸ್ಥಾನವಾದ ತಲಕಾವೇರಿ, ಅಬ್ಬೆ ಜಲಪಾತ, ಇರ್ಪು ಜಲಪಾತ, ದುಬಾರೆ ಆನೆ ಪಳಗಿಸುವ ಕೇಂದ್ರ, ನಾಗರಹೊಳೆ ಮುಂತಾದವು ಪ್ರಮುಖ ಪ್ರವಾಸಿ ಕೇಂದ್ರಗಳು.

©KTBS Not to be republished



ಚರ್ಚ್, ವಿರಾಜಪೇಟೆ

ದೇಶದಲ್ಲಿ ಚಿಕ್ಕಮಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕಾಫಿ ಬೆಳೆಯುವ ಜಿಲ್ಲೆ ಕೊಡಗು. ಕರ್ನಾಟಕ ರಾಜ್ಯದಲ್ಲಿನ ಅತಿ ಚಿಕ್ಕ ಜಿಲ್ಲೆ ಕೊಡಗು. ಇಲ್ಲಿ ಮೂರು ತಾಲ್ಲೂಕುಗಳಿವೆ. ಈ ಜಿಲ್ಲೆಯಲ್ಲಿ ಅಪಾರ ಸಂಖ್ಯೆಯ ಕೊಡವರು, ಕುಡಿಯ, ಮಲೆಕುಡಿಯ ಮುಂತಾದ ಬುಡಕಟ್ಟು ಜನರು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಿದ್ದಾರೆ. ವಿರಾಜಪೇಟೆಯಲ್ಲಿರುವ ಚರ್ಚ್ ಆಕರ್ಷಣೀಯವಾಗಿದೆ.

## ದಕ್ಷಿಣ ಕನ್ನಡ ಜಿಲ್ಲೆ

ಇದು ಕರ್ನಾಟಕದ ಪ್ರಸಿದ್ಧ ಕರಾವಳಿ ಜಿಲ್ಲೆ. ಇಲ್ಲಿ ಪ್ರಸಿದ್ಧ ಬಂದರಿದೆ. ರಫ್ತು ಮತ್ತು ಆಮದು ವ್ಯಾಪಾರಕ್ಕೆ ಇದು ಸಹಾಯಕವಾಗಿದೆ. ಮೀನುಗಾರಿಕೆ, ಬೀಡಿ ಕಟ್ಟುವುದು, ಗೋಡಂಬಿ ಸಂಸ್ಕರಣ, ಕೃಷಿ ಇಲ್ಲಿನ ಜನರ ಮುಖ್ಯ ಉದ್ಯೋಗ. ಕರಾವಳಿ ಪ್ರದೇಶವು ಅಖಂಡವಾಗಿ ಮದರಾಸು ಸಂಸ್ಥಾನದ ಭಾಗವಾಗಿತ್ತು. ಆದರೆ ಬ್ರಿಟಿಷರು 1860ರಲ್ಲಿ ಕೆನರ ಪ್ರದೇಶವನ್ನು ವಿಭಜಿಸಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಎಂಬ ಜಿಲ್ಲೆಗಳನ್ನು ರಚಿಸಿದರು. ದಕ್ಷಿಣಕನ್ನಡ ಜಿಲ್ಲೆಯು ಮದರಾಸು ಪ್ರಾಂತದಲ್ಲಿ ಉಳಿಯಿತು. ಉತ್ತರ ಕನ್ನಡ ಜಿಲ್ಲೆಯ ಆಡಳಿತವನ್ನು ಬಾಂಬೆ ಪ್ರಾಂತಕ್ಕೆ ವರ್ಗಾಯಿಸಲಾಯಿತು. ಈ ಜಿಲ್ಲೆಗಳು 1956ರಲ್ಲಿ ಕರ್ನಾಟಕದಲ್ಲಿ ವಿಲೀನಗೊಂಡವು.



ಸಾವಿರ ಕಂಬಗಳ ಬಸದಿ, ಮೂಡಬಿದರೆ



ಮಂಜುನಾಥ ದೇವಾಲಯ, ಧರ್ಮಸ್ಥಳ



ಉಳ್ಳಾಲ ಜಮ್ಮಾ ಮಸೀದಿ



ಸಂತ ಅಲೋಸಿಯಸ್ ಚರ್ಚ್

Not to be Republished © KTBS

ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾಕೃತಿಕವಾಗಿ ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಮಂಗಳೂರು ಮತ್ತು ಭಂಟ್ವಾಳ ತಾಲ್ಲೂಕುಗಳು ಕರಾವಳಿ ಪ್ರದೇಶವಾದರೆ ಪುತ್ತೂರು, ಬೆಳ್ತಂಗಡಿ ಮತ್ತು ಸುಳ್ಯ ಮಲೆನಾಡು ಪ್ರದೇಶ.

ಇದು ಪ್ರಸಿದ್ಧವಾದ ವ್ಯಾಪಾರ ಕೇಂದ್ರವಾಗಿದೆ. ಪಣಂಬೂರು ಬಂದರು ಪ್ರಸಿದ್ಧ ರಫ್ತು ಕೇಂದ್ರವಾಗಿದೆ. ಇಲ್ಲಿ ನವ ಮಂಗಳೂರು ಬಂದರನ್ನು ರಚಿಸಲಾಗಿದೆ. ಮಂಗಳೂರಿನ ಬಜ್ಪೆಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ.

ನೇತ್ರಾವತಿ, ಪಯಸ್ವಿನಿ, ಕುಮಾರಧಾರಾ– ಜಿಲ್ಲೆಯಲ್ಲಿ ಹರಿಯುವ ಪ್ರಮುಖ ನದಿಗಳು.

ಜಿಲ್ಲೆಯಲ್ಲಿ ಅನೇಕ ಧಾರ್ಮಿಕ ಕೇಂದ್ರಗಳಿವೆ. ವೇಣೂರಿನಲ್ಲಿ ಏಕಶಿಲಾ ಗೊಮ್ಮಟೇಶ್ವರನ ವಿಗ್ರಹವಿದೆ. ಕದ್ರಿಯಲ್ಲಿ ಶ್ರೀ ಮಂಜುನಾಥ ದೇವಾಲಯವಿದೆ. ಮೂಡಬಿದಿರೆಯು ಜೈನರ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿ ಅನೇಕ ಬಸದಿಗಳಿವೆ. ಧರ್ಮಸ್ಥಳವು ಪ್ರಸಿದ್ಧ ತೀರ್ಥಸ್ಥಳವಾಗಿದೆ. ಕಟೀಲಿನ ದುರ್ಗಾಪರಮೇಶ್ವರಿ ದೇವಾಲಯವು ಅಪಾರ ಖ್ಯಾತಿಯನ್ನು ಗಳಿಸಿದೆ. ಕುದ್ರೋಳಿಯ ಗೋಕರ್ಣನಾಥೇಶ್ವರ ದೇವಾಲಯವು ಮತ್ತೊಂದು ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಇವಲ್ಲದೆ ಸೇಂಟ್ ಅಲೋಶಿಯಸ್ ಚರ್ಚ್, ಮಿಲಾಗ್ರಿಸ್ ಚರ್ಚ್ ಪ್ರಸಿದ್ಧವಾಗಿವೆ. ಉಳ್ಳಾಲದ ಜುಮ್ಮಾ ಮಸೀದಿಯು ಮುಸ್ಲಿಮರ ಶ್ರದ್ಧಾಕೇಂದ್ರವಾಗಿದೆ.

ಪಿಲಿಕುಳ ನಿಸರ್ಗಧಾಮವು ಇದು ಸುಮಾರು 350ಕ್ಕಿಂತಲೂ ಅಧಿಕ ಪ್ರದೇಶದಲ್ಲಿ ನೆಲೆಗೊಂಡಿದೆ. ಇಲ್ಲಿ ಡಾ. ಶಿವರಾಮಕಾರಂತ ಜೈವಿಕ ಉದ್ಯಾನವಿದೆ. ವಿಜ್ಞಾನ ಕೇಂದ್ರ, ವಾಸ್ತುಶಿಲ್ಪ ಕೇಂದ್ರ, ಜಾನಪದ ವಸ್ತು ಸಂಗ್ರಹಾಲಯ ಮುಂತಾದವು ಇಲ್ಲಿವೆ. ಮಕ್ಕಳನ್ನು ಮತ್ತು ಹಿರಿಯರನ್ನು ಇದು ಆಕರ್ಷಿಸುತ್ತಿದೆ.

ಈ ಜಿಲ್ಲೆಯು ಸಾಂಪ್ರದಾಯಿಕ ನಾಗಾರಾಧನೆ, ಕಂಬಳ, ಭೂತಕೋಲ ಮುಂತಾದ ಆಚರಣೆಗಳಿಗೆ ಪ್ರಸಿದ್ಧವಾಗಿದೆ. ಇಂದು ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿ ಬೆಳೆಯುತ್ತಿದೆ. ಮಂಗಳೂರು, ಸುರತ್ಕಲ್, ಸುಳ್ಯ ಮುಂತಾದವು ಪ್ರಮುಖ ಶೈಕ್ಷಣಿಕ ಕೇಂದ್ರಗಳಾಗಿವೆ. ಇಲ್ಲಿ ಅನೇಕ ಸಂಶೋಧನಾ ಕೇಂದ್ರಗಳಿವೆ. ಈ ಜಿಲ್ಲೆಯಲ್ಲಿ ಸುಂದರ ಸಮುದ್ರ ಕಿನಾರೆಗಳಿವೆ. ಇವು ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

## ಉಡುಪಿ ಜಿಲ್ಲೆ


ಉಡುಪಿ ಶ್ರೀಕೃಷ್ಣ ದೇವಾಲಯ


ಕಾರ್ಕಳದ ಗೊಮ್ಮಟ


ಸೇಂಟ್ ಲಾರೆನ್ಸ್ ಚರ್ಚ್

©KTBS Not to be republished

ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ 1997ರಲ್ಲಿ ಉಡುಪಿ ಜಿಲ್ಲೆಯನ್ನು ರಚಿಸಲಾಯಿತು. ಈ ಜಿಲ್ಲೆಯ ಪಶ್ಚಿಮಕ್ಕೆ ಅರಬ್ಬಿ ಸಮುದ್ರವಿದ್ದರೆ ಪೂರ್ವಕ್ಕೆ ಪಶ್ಚಿಮಘಟ್ಟ ಪರ್ವತ ಶ್ರೇಣಿಯಿದೆ. ಅನೇಕ ನದಿಗಳು, ತೆಂಗಿನ ತೋಟಗಳು, ಅಡಕೆ ತೋಟಗಳು, ಭತ್ತದ ಗದ್ದೆಗಳಿಂದ ಕೂಡಿದ ಜಿಲ್ಲೆ ಉಡುಪಿ. ರಾಷ್ಟ್ರಮಟ್ಟದಲ್ಲಿ ಜನರನ್ನು ಆಕರ್ಷಿಸುತ್ತಿರುವ ಶ್ರೀ ಕೃಷ್ಣ ದೇವಾಲಯ ಇಲ್ಲಿದೆ. ದ್ವೈತ ಸಿದ್ಧಾಂತದ ಪ್ರತಿಪಾದಕ ಮಧ್ವಾಚಾರ್ಯ ಅವರಿಂದ ಇಲ್ಲಿ ಶ್ರೀ ಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು ಎಂದು ಹೇಳಲಾಗುತ್ತದೆ. ಪ್ರಸಿದ್ಧ ಸಂತ ಕನಕದಾಸನಿಗೆ ಪೂರ್ವದಿಂದ ಪಶ್ಚಿಮಕ್ಕೆ ತಿರುಗಿ ಶ್ರೀಕೃಷ್ಣ ದರ್ಶನ ನೀಡಿದ್ದ ಎಂದು ಹೇಳಲಾಗುತ್ತದೆ. ಹೀಗೆ ದರ್ಶನ ನೀಡಿದ ಸ್ಥಳವನ್ನು ಕನಕನ ಕಿಂಡಿ ಎಂದು ಕರೆಯಲಾಗುತ್ತದೆ. ಕೊಡಚಾದ್ರಿ ಬೆಟ್ಟದ ಮೇಲೆ ಮೂಕಾಂಬಿಕ ದೇವಾಲಯವಿದೆ. ಕಾರ್ಕಳದಲ್ಲಿನ 42 ಅಡಿ ಎತ್ತರದ ಗೊಮ್ಮಟೇಶ್ವರ ವಿಗ್ರಹವು ಲೋಕ ಪ್ರಸಿದ್ಧ ಪಡೆದಿದೆ.

ಉಡುಪಿಯಲ್ಲಿ ರಾಷ್ಟ್ರಕವಿ ಗೋವಿಂದ ಪೈಗಳ ಸಂಶೋಧನ ಕೇಂದ್ರವಿದೆ. ಮಲ್ಪೆ, ಮಣಿಪಾಲ, ಕುಂದಾಪುರ, ಮಂದರ್ತಿ, ಕೋಟ, ಕಾಪು, ಬಾರಕೂರು, ಮರವಂತೆ ಮುಂತಾದವು ಇಲ್ಲಿನ ಪ್ರಸಿದ್ಧ ಸ್ಥಳಗಳು. ಮಣಿಪಾಲ ಶೈಕ್ಷಣಿಕ ಕೇಂದ್ರವಾಗಿ ಬೆಳೆಯುತ್ತಿದೆ. ಬಸರೂರು ಎಂಬುದು ಪ್ರಸಿದ್ಧ ರೇವು ಪಟ್ಟಣವಾಗಿತ್ತು. ಡಚ್ ಮತ್ತು ಪೋರ್ಚುಗೀಸರು ಇಲ್ಲಿ ವ್ಯಾಪಾರ ಮಾಡುತ್ತಿದ್ದರು. ಭತ್ತ, ತೆಂಗು, ಅಡಕೆ, ಗೋಡಂಬಿ ಇಲ್ಲಿನ ಮುಖ್ಯ ಬೆಳೆಗಳು.

ಮಲ್ಪೆಯು ಸರ್ವಋತು ಮೀನುಗಾರಿಕೆ ಬಂದರಾಗಿದೆ. ಇಲ್ಲಿರುವ ಪ್ರಸಿದ್ಧ ದ್ವೀಪವನ್ನು ಸೇಂಟ್ ಮೇರಿ ದ್ವೀಪ ಎಂದು ಕರೆಯಲಾಗುತ್ತದೆ.


ಮೈಸೂರು ವಿಶ್ವವಿದ್ಯಾಲಯ


ತಲಕಾವೇರಿ



ಮಂಗಳೂರು ಬಂದರು

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳನ್ನು ಪಟ್ಟಿ ಮಾಡಿ.
2. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಎರಡು ಬಂದರುಗಳನ್ನು ಹೆಸರಿಸಿ.
3. ಮೈಸೂರು ವಿಭಾಗದ ಯಾವ ಯಾವ ಸ್ಥಳಗಳಲ್ಲಿ ಗೊಮ್ಮಟೇಶ್ವರ ವಿಗ್ರಹಗಳಿವೆ?
4. ಕಾವೇರಿ ನದಿಯು ಯಾವ ಜಿಲ್ಲೆಯ ಯಾವ ಸ್ಥಳದಲ್ಲಿ ಹುಟ್ಟುತ್ತದೆ?

**ಚಟುವಟಿಕೆಗಳು**

- ಈ ವಿಭಾಗದ ಜಿಲ್ಲೆಗಳಲ್ಲಿರುವ ಪ್ರಾಚೀನ ದೇವಾಲಯಗಳನ್ನು ಮತ್ತು ಅವುಗಳನ್ನು ಕಟ್ಟಿಸಿದ ಅರಸು ಮನೆತನಗಳನ್ನು ಪಟ್ಟಿ ಮಾಡಿ. ಅವುಗಳ ಚಿತ್ರಗಳನ್ನು ಸಂಗ್ರಹಿಸಿ.
- ಈ ವಿಭಾಗದ ಬೇರೆ ಬೇರೆ ಜಿಲ್ಲೆಗಳಲ್ಲಿರುವ ಗೊಮ್ಮಟೇಶ್ವರನ ವಿಗ್ರಹಗಳ ಪಟ್ಟಿ ಮಾಡಿ. ಪ್ರತಿ ವಿಗ್ರಹದ ಉದ್ದವನ್ನು ಸಂಗ್ರಹಿಸಿ. ಈ ವರದಿಯಲ್ಲಿ ವಿಗ್ರಹಗಳ ಚಿತ್ರಗಳನ್ನು ಹಾಕಿ.

©KTBS Not to be republished

| ಪಾಠ 3 | # ಆರಂಭಿಕ ಸಮಾಜ |
|---|---|

**ಪಾಠದ ಪರಿಚಯ**

ಈ ಪಾಠದಲ್ಲಿ ಇತಿಹಾಸಕಾಲ ಮತ್ತು ಪ್ರಾಗೈತಿಹಾಸ ಕಾಲಗಳ ನಡುವಿನ ವ್ಯತ್ಯಾಸವನ್ನು ತಿಳಿಸಲಾಗಿದೆ. ಭೂಮಿಯ ಉಗಮ ಮತ್ತು ಜೀವಿಗಳ ಬೆಳವಣಿಗೆ ಕುರಿತು ವಿವರಿಸಲಾಗಿದೆ. ಹಳೆಯ ಶಿಲಾಯುಗ, ಮಧ್ಯಶಿಲಾಯುಗ ಮತ್ತು ನವಶಿಲಾಯುಗ ಹಾಗೂ ಲೋಹಗಳ ಯುಗಗಳಲ್ಲಿ ಮಾನವನ ಬದುಕಿನಲ್ಲಿ ಉಂಟಾದ ಬದಲಾವಣೆಗಳನ್ನು ಗುರುತಿಸಲಾಗಿದೆ.

**ಸಾಮರ್ಥ್ಯಗಳು**

1] ಇತಿಹಾಸದ ವರ್ಗೀಕರಣದಲ್ಲಿ ಅಕ್ಷರಗಳ ಪಾತ್ರವನ್ನು ಅರಿತುಕೊಳ್ಳುವುದು.

2] ಭೂಮಿಯ ಮೇಲೆ ಜೀವವಿಕಾಸದ ಹಂತಗಳನ್ನು ತಿಳಿಯುವುದು.

3] ಶಿಲಾಯುಗದ ಹಂತಗಳನ್ನು ಮತ್ತು ಪ್ರಮುಖ ನೆಲೆಗಳನ್ನು ಗುರುತಿಸುವುದು.

4] ನಾಗರಿಕತೆಯ ಬೆಳವಣಿಗೆಯಲ್ಲಿ ಲೋಹಗಳ ಪಾತ್ರವನ್ನು ವಿಶ್ಲೇಷಿಸುವುದು.

©KTBS Not to be republished

ಸಾಮಾನ್ಯವಾಗಿ ಇತಿಹಾಸವನ್ನು ಮೂರು ಪ್ರಧಾನಕಾಲಗಳಾಗಿ ವರ್ಗೀಕರಿಸಿಕೊಳ್ಳಬಹುದು. ಅವುಗಳೆಂದರೆ: 1. ಪ್ರಾಗೈತಿಹಾಸ ಕಾಲ (Pre historic Period) 2. ಪೂರ್ವಭಾವಿ ಇತಿಹಾಸಕಾಲ (Proto historic Period) ಮತ್ತು 3. ಇತಿಹಾಸಕಾಲ (Historic Period). ಮಾನವರ ಇತಿಹಾಸದಲ್ಲಿ ಪ್ರಾಗೈತಿಹಾಸ ಕಾಲವೇ ಶೇಕಡ 99.9 ರಷ್ಟು ಕಾಲಾವಧಿಯನ್ನು ಒಳಗೊಂಡಿದೆ. ಆದರೆ ಆ ಕಾಲದ ಕುರಿತು ಅಧ್ಯಯನ ಮಾಡಲು ಇರುವ ಆಧಾರಗಳು ಬಹಳ ಕಡಿಮೆ. ಆದ್ದರಿಂದ ಇತಿಹಾಸದಲ್ಲಿ ಪ್ರಾಗೈತಿಹಾಸಕ್ಕೆ ಕೊಟ್ಟಿರುವ ಸ್ಥಳಾವಕಾಶವೂ ಕಡಿಮೆಯೇ ಆಗಿದೆ. ಮೇಲಿನ ಮೂರು ಕಾಲಗಳನ್ನು ವರ್ಗೀಕರಿಸಲು ಬಳಸುವ ಮಾನದಂಡವೇ ಅಕ್ಷರ ಜ್ಞಾನವಾಗಿದೆ. ಅಕ್ಷರ ಪರಿಚಯವೇ ಇಲ್ಲದ ಕಾಲಘಟ್ಟವನ್ನು ಪ್ರಾಗೈತಿಹಾಸಿಕ ಕಾಲ ಎಂದು ಕರೆಯಲಾಗುವುದು (ಉದಾಹರಣೆಗೆ: ಶಿಲಾಯುಗಗಳು). ಯಾವೊಂದು ಕಾಲದಲ್ಲಿ ಅಕ್ಷರಗಳ ತಿಳುವಳಿಕೆ ಇದ್ದು ಅವುಗಳನ್ನು ಇಂದು ಓದಲು ಸಾಧ್ಯವಾಗಿಲ್ಲದಿದ್ದರೆ ಆ ಕಾಲಘಟ್ಟವನ್ನು ಪೂರ್ವಭಾವಿ ಇತಿಹಾಸಕಾಲ ಎಂದು ಕರೆಯಲಾಗುವುದು (ಉದಾಹರಣೆಗೆ: ಹರಪ್ಪ ನಾಗರಿಕತೆಯ ಕಾಲ). ಯಾವ ಕಾಲಘಟ್ಟದಲ್ಲಿ ಅಕ್ಷರ ಪರಿಚಯವಿರುವುದೊ ಮತ್ತು ಆ ಅಕ್ಷರಗಳನ್ನು ಇಂದು ಓದಲಾಗುವುದೊ ಆ ಕಾಲವನ್ನು ಇತಿಹಾಸಕಾಲ ಎಂದು ಕರೆಯಲಾಗುವುದು.

**ಮಾನವರ ಉಗಮ ಮತ್ತು ಬೆಳವಣಿಗೆ:** ಭೂಮಿಯು 4600 ದಶಲಕ್ಷ ವರ್ಷಗಳ ಹಿಂದೆ ಹುಟ್ಟಿತು ಎಂದು ವಿಜ್ಞಾನಿಗಳು ಹೇಳುತ್ತಾರೆ. ಭೂಮಿಯ ಮೇಲೆ ಕಾಣಿಸಿಕೊಂಡ ಮೊದಲ ಜೀವಿಗಳೆಂದರೆ ಏಕಕೋಶ ಬ್ಯಾಕ್ಟೀರಿಯಾಗಳಾದ ಪ್ರೊಕ್ಯಾರಿಯೋಟ್ (Prokaryote) ಗಳು. ಇವು ಆಮ್ಲಜನಕ ಇಲ್ಲದ ವಾತಾವರಣದಲ್ಲಿ ಬದುಕಬಲ್ಲವಾಗಿದ್ದವು. ತಮಗೆ ಬೇಕಾದ ಶಕ್ತಿ ಮತ್ತು ಪೌಷ್ಟಿಕಾಂಶಗಳನ್ನು ಪರಿಸರದಿಂದ ಪಡೆದುಕೊಳ್ಳುತ್ತಿದ್ದವು. ನಂತರ ಸುಮಾರು 4000 ರಿಂದ 2500 ದಶಲಕ್ಷ ವರ್ಷಗಳ ಹಿಂದೆ ಶೈವಲ ಅಥವಾ ಆಲ್ಗೆಗಳು ಕಾಣಿಸಿಕೊಂಡವು. ಇವು ಮುಂದೆ ಸಸ್ಯ ಮತ್ತು ಜೀವಗಳ ವಿಕಾಸಕ್ಕೆ ಕಾರಣವಾದವು.

ಜೀವಿಗಳ ಪ್ರಪಂಚಕ್ಕೆ ಬಂದಾಗ 3500 ದಶಲಕ್ಷ ವರ್ಷಗಳ ಹಿಂದಿನ ಸೂಕ್ಷ್ಮ ಜೀವಕಣಗಳು ಪಳೆಯುಳಿಕೆಗಳು ಆಸ್ಟ್ರೇಲಿಯಾದಲ್ಲಿ ಪತ್ತೆಯಾಗಿವೆ. ನಮ್ಮ ಕರ್ನಾಟಕದ ಸಂಡೂರು ತಾಲ್ಲೂಕಿನಲ್ಲಿ 'ಧಾರವಾಡ ಜಲಜ ಶಿಲೆ'ಗಳಲ್ಲಿ 2000 ದಶಲಕ್ಷ ವರ್ಷಗಳಿಗೂ ಹಿಂದಿನ ಸೂಕ್ಷ್ಮಾಣುಗಳ ಪಳೆಯುಳಿಕೆಗಳು ಕಂಡುಬಂದಿವೆ. ಹೀಗೆ ಆರಂಭವಾದ ಜೀವವಿಕಾಸದ ಹಾದಿಯಲ್ಲಿ 570 ದಶಲಕ್ಷ ವರ್ಷಗಳ ಹಿಂದೆ ಮೀನು ಮತ್ತಿತರ ಜಲಚರಗಳು, 438 ರಿಂದ 408 ದಶಲಕ್ಷ ವರ್ಷಗಳ ನಡುವೆ ಕೀಟಗಳು, 408ರಿಂದ 360 ದಶಲಕ್ಷ ವರ್ಷಗಳ ನಡುವೆ ಉಭಯವಾಸಿಗಳು, ಸುಮಾರು 320 ದಶಲಕ್ಷವರ್ಷಗಳ ಹಿಂದೆ ಸರಿಸೃಪಗಳು, 248 ದಶಲಕ್ಷ ವರ್ಷಗಳ ಹಿಂದೆ ಡೈನೋಸರಸ್, 213 ದಶಲಕ್ಷ ವರ್ಷಗಳ ಹಿಂದೆ ಪಕ್ಷಿಗಳು ಮತ್ತು ಸಸ್ತನಿಗಳು, 65 ದಶಲಕ್ಷ ವರ್ಷಗಳ ಹಿಂದೆ ಬೃಹತ್ ಸಸ್ತನಿಗಳು ಮತ್ತು 25 ದಶಲಕ್ಷ ವರ್ಷಗಳ ಹಿಂದೆ ವಾನರಗಳ ವಿಕಾಸವಾಯಿತು. 5 ದಶಲಕ್ಷ ವರ್ಷಗಳ ಹಿಂದೆ ದ್ವಿಪಾದಿಗಳು, 18 ಲಕ್ಷ ವರ್ಷಗಳ ಹಿಂದೆ ಮಾನವನ ವಿಕಾಸವಾಯಿತು.

ಹೀಗೆ ಆರಂಭವಾದ ಜೀವ ವಿಕಾಸದ ಹಾದಿಯಲ್ಲಿ ಮೊದಲು ಏಕಕೋಶ ಜೀವಿಗಳು ನಂತರ ಮೃದ್ವಂಗಿಗಳು, ಮೀನು, ಸಸ್ಯ, ಕೀಟ, ಉಭಯವಾಸಿ, ರೆಕ್ಕೆಯುಳ್ಳ ಕೀಟ, ಸರಿಸೃಪ, ಪಕ್ಷಿಗಳು, ಸಸ್ತನಿಗಳು, ಹೂಬಿಡುವ ಸಸ್ಯ, ಹುಲ್ಲು, ವಾನರ, ದ್ವಿಪಾದಿಗಳು ವಿಕಾಸ ಹೊಂದಿದವು. ಸುಮಾರು 18 ಲಕ್ಷ ವರ್ಷಗಳ ಹಿಂದೆ ಮಾನವರ ವಿಕಾಸವಾಯಿತು. ಆಧುನಿಕ ಮಾನವರ ದೈಹಿಕ ರಚನೆಯನ್ನು ಹೊಂದಿದ್ದ ಮಾನವರು ಮೊದಲು ದಕ್ಷಿಣ ಆಫ್ರಿಕಾದಲ್ಲಿ ಕಾಣಿಸಿಕೊಂಡರು. ಇವರು ಆಫ್ರಿಕಾದಿಂದ ಪ್ರಪಂಚದ ವಿವಿಧ ಭೂಭಾಗಗಳಿಗೆ ವಲಸೆ ಹೋಗಿ ನೆಲೆಸಿದರೆಂದು ಹೇಳಲಾಗುತ್ತದೆ. ಈ ವಾದವು ಇಂದು ಸಾಕಷ್ಟು ವಿಮರ್ಶೆಗೂ ಒಳಗಾಗಿದೆ.

### ಜೀವಿಗಳ ಮತ್ತು ಸಸ್ಯಗಳ ವಿಕಾಸದ ಹಂತಗಳು

| ವರ್ಷಗಳು (ದಶಲಕ್ಷಗಳಲ್ಲಿ) | ಜೀವಿಗಳು | ಸಸ್ಯಗಳು |
|---|---|---|
| 4000 –2500 | ಸೂಕ್ಷ್ಮ ಜೀವಕಣಗಳು | ಶೈವಾಲ |
| 2500–570 | ಮೃದ್ವಂಗಿಗಳು | ಆಲ್ಗೆ |
| 570–505 | ಮೀನುಗಳು | |
| 438–408 | ಕೀಟಗಳು | ಭೂಸಸ್ಯಗಳು |

©KTBS Not to be republished

| | | |
|---|---|---|
| 408–360 | ಉಭಯವಾಸಿಗಳು | ಫೇರ್ನ್, ಪಾಚಿ |
| 320–248 | ಸರಿಸೃಪಗಳು | |
| 248–213 | ಡೈನಾಸರ್‌ಗಳು | |
| 213–144 | ಪಕ್ಷಿಗಳು, ಸಸ್ತನಿಗಳು | |
| 144–65 | | ಹೂಬಿಡುವ ಸಸ್ಯಗಳು |
| 65–38 | ಬೃಹತ್ ಸಸ್ತನಿಗಳು | ಹುಲ್ಲುಗಳು |
| 25–5 | ವಾನರಗಳು | |
| 5 | ದ್ವಿಪಾದಿಗಳು | |
| 1.8 | ಮಾನವ | |

ಪ್ರಾಗೈತಿಹಾಸಿಕ ಕಾಲದಲ್ಲಿ ಮೂರು ಹಂತಗಳಿವೆ. 1. ಹಳೆಯ ಶಿಲಾಯುಗ 2. ಮಧ್ಯಶಿಲಾಯುಗ 3. ನವಶಿಲಾಯುಗ.

### ಹಳೆಯ ಶಿಲಾಯುಗ :



ಈ ಕಾಲವು ಮಾನವರ ಇತಿಹಾಸದ ಆರಂಭಿಕ ಪುರಾತತ್ವಿಕ (Archaeological) ಹಂತವಾಗಿದೆ. ಈ ಕಾಲದ ಮಾನವರು ಹಣ್ಣು, ಹಂಪಲು, ಗೆಡ್ಡೆ ಗೆಣಸುಗಳನ್ನು ತಿಂದು ಬದುಕುತ್ತಿದ್ದರು. ಅಲೆಮಾರಿಗಳಾಗಿದ್ದ ಇವರು ಆಹಾರವನ್ನು ಅರಸುತ್ತಾ ಗವಿಗಳಲ್ಲಿ, ಕಲ್ಲಾಸರೆಗಳಲ್ಲಿ ವಾಸಿಸುತ್ತಿದ್ದರು. ಹೆರೆಚಕ್ಕೆ, ಚಾಕು, ಕಲ್ಲುಳಿ, ಮೊನೆ ಮುಂತಾದ ದೊಡ್ಡ ದೊಡ್ಡ ಶಿಲಾ ಉಪಕರಣಗಳನ್ನು ಬೆಣಚುಕಲ್ಲುಗಳಿಂದ ತಯಾರಿಸಿಕೊಳ್ಳುತ್ತಿದ್ದರು. ಎಲೆ ಮತ್ತು ತೊಗಟೆಗಳನ್ನು ಹೊದಿಕೆಗಳಾಗಿ ಬಳಸುತ್ತಿದ್ದರು. ಎಲ್ಲಾ ಕಾಲಗಳಲ್ಲಿಯೂ ಹಣ್ಣು, ಹಂಪಲು, ಗೆಡ್ಡೆ ಗೆಣಸುಗಳು ದೊರಕುತ್ತಿರಲಿಲ್ಲ. ಹಳೆಯ ಶಿಲಾಯುಗದ ಕೊನೆಯ ಘಟ್ಟದಲ್ಲಿ ಆಹಾರಕ್ಕಾಗಿ ಬೇಟೆಯಾಡುವುದು ಮತ್ತು ಮೀನು ಹಿಡಿಯುವುದನ್ನು ಕಲಿತರು. ಮೊದಲ ಬಾರಿಗೆ ಬೆಂಕಿಯ ಪರಿಚಯವಾಯಿತು. ಹಳೆಯ ಶಿಲಾಯುಗದ ಪ್ರಮುಖ ನೆಲೆಗಳೆಂದರೆ ಮಧ್ಯಪ್ರದೇಶದ ಬೇಲಾನ್ ಕಣಿವೆ, ಕರ್ನಾಟಕದ ಹುಣಸಗಿ ಮತ್ತು ಬೈಚ್‌ಬಾಳ್ ಪ್ರದೇಶ, ಆಂಧ್ರಪ್ರದೇಶದ ಕರ್ನೂಲ್, ಅಮರಾವತಿ, ತಮಿಳುನಾಡಿನ ಅತ್ತಿರಾಮ್‌ಪಕ್ಕಂ ಮುಂತಾದವುಗಳು. ಸಾಮಾನ್ಯವಾಗಿ ಹಳೆಯ ಶಿಲಾಯುಗದ ಕಾಲವನ್ನು 5 ಲಕ್ಷ ವರ್ಷಗಳಿಂದ 12 ಸಾವಿರ ವರ್ಷಗಳವರೆಗೆ ಗುರುತಿಸಲಾಗುತ್ತದೆ.

©KTBS Not to be republished

## ಮಧ್ಯ ಶಿಲಾಯುಗ (Mesolithic age):


ಪ್ರಾಗೈತಿಹಾಸಿಕ ಮಾನವರ ಜನಜೀವನದ ಕಾಲ್ಪನಿಕ ದೃಶ್ಯ

ಇದು ಹಳೆಯ ಶಿಲಾಯುಗ ಮತ್ತು ನವಶಿಲಾಯುದ ನಡುವಿನ ಸ್ಥಿತ್ಯಂತರ ಕಾಲವಾಗಿದೆ. ಆದ್ದರಿಂದ ಇದನ್ನು ಮಧ್ಯಶಿಲಾಯುಗ ಎಂದು ಕರೆಯಲಾಗುವುದು. ಈ ಕಾಲದ ಮಾನವರು ದೊಡ್ಡ ದೊಡ್ಡ ಶಿಲಾ ಉಪಕರಣಗಳ ಬದಲು ಕೌಶಲ್ಯಭರಿತ ಕಿರು ಶಿಲಾಯುಧಗಳನ್ನು ಬಳಸಲಾರಂಭಿಸಿದರು. ಆದ್ದರಿಂದ ಈ ಕಾಲವನ್ನು ಸೂಕ್ಷ್ಮ ಶಿಲಾಯುಗ (Microlithic age) ಎಂದೂ ಕರೆಯಲಾಗುವುದು. ಈ ಕಿರು ಆಯುಧಗಳನ್ನು ಬಾಣದ ತುದಿಗೆ ಅಥವಾ ಕಟ್ಟಿಗೆಯ ತುದಿಗೆ ಸಿಕ್ಕಿಸಿ ಭರ್ಜಿಯಂತೆ ಬಳಸಿ ಬೇಟೆಯಾಡುತ್ತಿದ್ದರು. ಕಾಡು ಧಾನ್ಯಗಳನ್ನು ಆಹಾರಕ್ಕಾಗಿ ಸಂಗ್ರಹಿಸುತ್ತಿದ್ದರು. ಧಾನ್ಯಗಳಾಗಲಿ, ಬೇಟೆಗಳಾಗಲಿ ನಿರಂತರ ದೊರಕುತ್ತಿರಲಿಲ್ಲ. ಅನೇಕ ವೇಳೆ ಹಸಿವಿನಿಂದ ಕಾಲಕಳೆಯಬೇಕಾದ ಸಂದರ್ಭಗಳು ಬರುತ್ತಿದ್ದವು. ಅದಕ್ಕಾಗಿ ಇವರು ಕಂಡು ಕೊಂಡ ಮಾರ್ಗ ಎಂದರೆ, ಬೇಟೆಯ ಸಂದರ್ಭದಲ್ಲಿ ಗಾಯಗೊಂಡು ಬದುಕುಳಿದ ಪ್ರಾಣಿಗಳು ಅಥವಾ ದೊರೆತ ಮರಿಗಳನ್ನು ತಂದು ತಮ್ಮೊಟ್ಟಿಗೆ ಸಾಕುವುದು. ಒಂದು ವಿಧದಲ್ಲಿ ಈ ಪ್ರಾಣಿಗಳು ಅವರಿಗೆ ಕಾಯ್ದಿರಿಸಿದ ತುರ್ತುಕಾಲದ ಆಹಾರಗಳಾಗಿ ಬಳಕೆಯಾಗುತ್ತಿದ್ದವು. ಇದು ನಿಧಾನವಾಗಿ ಪಶುಪಾಲನೆಗೆ ಚಾಲನೆ ಕೊಟ್ಟಿತು. ಮಧ್ಯಶಿಲಾಯುಗದ ಮಾನವರು ತಮ್ಮ ಮತ್ತು ಪಶುಗಳ ಆಹಾರಕ್ಕಾಗಿ ನಿರಂತರ ಅಲೆದಾಡುತ್ತಿದ್ದರು. ಬಿಡುವಿನ ವೇಳೆಗಳಲ್ಲಿ ಬೀಡುಬಿಟ್ಟ ಸ್ಥಳಗಳ ಕಲ್ಲಾಸರೆಗಳ ಮೇಲೆ ಚಿತ್ರಗಳನ್ನು ಬಿಡಿಸುತ್ತಿದ್ದರು. ಪ್ರಾಣಿಗಳ ಚರ್ಮಗಳನ್ನು ತಮ್ಮ ಮೇಲೊದಿಕೆಗಳಾಗಿ ಬಳಸುತ್ತಿದ್ದರು. ಬೆಂಕಿಯ ಪರಿಚಯ ಚೆನ್ನಾಗಿ ಇದ್ದಿತು. ಈ ಕಾಲದ ನೆಲೆಗಳಲ್ಲಿ ಮಧ್ಯಪ್ರದೇಶದ ಭೀಮ್‌ಬೇಟ್ಕ, ಆದಮ್‌ಗರ್, ಕರ್ನಾಟಕದ ಬ್ರಹ್ಮಗಿರಿ, ಕನಗನಹಳ್ಳಿ, ರಾಜಸ್ಥಾನದ ಬಾಗೊರ್, ಗಣೇಶ್ವರ್, ಪಶ್ಚಿಮ ಬಂಗಾಳದ ಬಿರ್‌ಭಾನ್‌ಪುರ್, ಆಂಧ್ರಪ್ರದೇಶದ ವಾನ್‌ಪಸಾರಿ, ಉತ್ತರ ಪ್ರದೇಶದ ಸರಾಯ್ ನಹರ್ ರಾಯ್, ಮಹಾದಹ ಮುಂತಾದವು ಪ್ರಮುಖವಾದವು. ಮಧ್ಯಶಿಲಾಯುಗದ ಕಾಲವು ಇಂದಿಗೆ 12000 ವರ್ಷಗಳಿಂದ 9000 ವರ್ಷಗಳವರೆಗೆ ಇದ್ದಿತ್ತೆಂದು ಸಾಮಾನ್ಯವಾಗಿ ಗುರುತಿಸುವುದುಂಟು.

©KTBS Not to be republished

## ನವ ಶಿಲಾಯುಗ:

ಮಧ್ಯಶಿಲಾಯುಗದ ಮಾನವರು ಪಶುಪಾಲಕರಾದ್ದರಿಂದ ಅವರಿಗೂ ಅವರ ಪಶುಗಳಿಗೂ ಆಗಾಗ ಆಹಾರದ ಅಭಾವ ಸೃಷ್ಟಿಯಾಗುತ್ತಿತ್ತು. ಆದ್ದರಿಂದ ಆ ಜನರು ಆಹಾರಕ್ಕಾಗಿ ಅಲೆಯುವುದನ್ನು ಬಿಟ್ಟು ನವಶಿಲಾಯುಗದಲ್ಲಿ ಆಹಾರ ಉತ್ಪಾದನೆಗೆ ಮುಂದಾದರು. ನದಿತೀರಗಳಲ್ಲಿ ಫಲವತ್ತಾದ ಮೆಕ್ಕಲು ಮಣ್ಣಿನಲ್ಲಿ ಕೃಷಿಯನ್ನು ಆರಂಭಿಸಿದರು. ಕೃಷಿಯು ನವಶಿಲಾಯುಗದ ಜನರಿಗೆ ಧಾನ್ಯವನ್ನು ಮತ್ತು ಅವರ ಪಶುಗಳಿಗೆ ಮೇವನ್ನು ಪೂರೈಸಿತು. ಆದ್ದರಿಂದ ಅಲೆಮಾರಿ ಬದುಕನ್ನು ತೊರೆದು ಸೂಕ್ತ ಪ್ರದೇಶದಲ್ಲಿ ನೆಲೆಸಲಾರಂಭಿಸಿದರು. ಹೀಗೆ ಕೃಷಿಯು ಸಂಸ್ಕೃತಿ ಮತ್ತು ನಾಗರಿಕತೆಗಳ ಉದಯಕ್ಕೆ ಮೊದಲ ಹೆಜ್ಜೆಯಾಯಿತು. ಭಾರತ ಉಪಖಂಡದಲ್ಲಿ ಕೃಷಿಯ ಆರಂಭಿಕ ಕುರುಹುಗಳು ಪಾಕಿಸ್ತಾನದ ಮೆಹರ್‌ಗರ್ ನೆಲೆಯಲ್ಲಿ ಕಂಡುಬಂದಿದೆ.


ನವ ಶಿಲಾಯುಗದ ಆಯುಧಗಳು

ಇಲ್ಲಿನ ಜನರು ವಾಸಕ್ಕೆ ಒಣ ಇಟ್ಟಿಗೆಗಳಿಂದ ಮನೆಗಳನ್ನು ನಿರ್ಮಿಸಿದರೆ, ಕಾಶ್ಮೀರದ ಬುರ್ಜ್‌ಹೋಮ್ ಪ್ರದೇಶದ ಜನರು ನೆಲದೊಳಗೆ ಗುಹೆಗಳನ್ನು ನಿರ್ಮಿಸಿಕೊಂಡಿದ್ದರು. ಕೃಷಿಯಲ್ಲಿ ಉತ್ಪಾದಿಸಿದ ಧಾನ್ಯವನ್ನು ಸಂಗ್ರಹಿಸಿಡುವ ಸಮಸ್ಯೆ ಎದುರಾದಾಗ ಕೈಯಿಂದ ಮಣ್ಣಿನ ಮಡಕೆ ಮಾಡುವ ವಿಧಾನ ಕಂಡುಕೊಂಡರು. ಅಲ್ಲದೆ ಹೆರೆಯುವ, ಕುಟ್ಟುವ, ಬೀಸುವ ಸಾಧನಗಳನ್ನು ಬಳಕೆಗೆ ತಂದರು. ಈ ಕಾಲದಲ್ಲಿಯೇ ಆರಂಭಿಕ ಹಳ್ಳಿಗಳು ಏಳಿಗೆಗೆ ಬಂದವು. ಚಕ್ರದ ಪರಿಚಯವಾದ ನಂತರ ಗುಣಾತ್ಮಕ ಮತ್ತು ವೈವಿಧ್ಯಮಯ ಮಡಕೆಗಳ ತಯಾರಿಕೆ ಸಾಧ್ಯವಾಯಿತು. ಈ ಕಾಲದಲ್ಲಿ ಕಲ್ಲಿನ ಆಯುಧಗಳನ್ನು ಚೆನ್ನಾಗಿ ಉಜ್ಜಿ ನಯಗೊಳಿಸಿ ಬಳಸುತ್ತಿದ್ದರು. ಬಳ್ಳಾರಿ ಸಮೀಪದ ಸಂಗನಕಲ್ಲು ಈ ರೀತಿಯ ಆಯುಧ ಉತ್ಪಾದನಾ ನೆಲೆಯಾಗಿತ್ತು. ವಿಶೇಷವಾಗಿ ಕೈಗೊಡಲಿ, ಮೂಳೆಗಳಿಂದ ತಯಾರಿಸಿದ ಆಯುಧಗಳನ್ನು ಬಳಸುತ್ತಿದ್ದರು. ಕರ್ನಾಟಕದ ಬನಹಳ್ಳಿ, ಬ್ರಹ್ಮಗಿರಿ, ಬೂದಿಹಾಳ, ಹಳ್ಳೂರು, ಪಿಕ್ಲಿಹಾಳ, ಟಿ.ನರಸಿಪುರ, ಉತ್ನೂರು, ಬಿಹಾರದ ಚಿರಾಂಡ್ ಮುಂತಾದ ಕಡೆಗಳಲ್ಲಿ ನವಶಿಲಾಯುಗದ ನೆಲೆಗಳು ಕಂಡು ಬಂದಿವೆ. ಸಾಮಾನ್ಯವಾಗಿ ಇದರ ಕಾಲವನ್ನು ಇಂದಿಗೆ 9000 ಇಂದ 5000 ವರ್ಷಗಳವರೆಗೆ ಗುರುತಿಸಬಹುದು.

©KTBS Not to be republished

©KTBS Not to be republished

## ಭಾರತದಲ್ಲಿ ಶಿಲಾಯುಗದ ನೆಲೆಗಳು




**ಲೋಹಗಳ ಯುಗ:** ನವಶಿಲಾಯುಗದ ಕೊನೆಯ ಕಾಲಕ್ಕೆ ಲೋಹಗಳ ಬಳಕೆ ಆರಂಭವಾಗಿತ್ತು. ಮೊದಲು ಮಾನವರು ಬಳಸಿದ ಲೋಹ ತಾಮ್ರ. ತಾಮ್ರಕ್ಕೆ ತವರವನ್ನು ಸೇರಿಸಿ ಕಂಚು ಉತ್ಪಾದಿಸುವುದನ್ನು ಕಲಿತರು. ಕಂಚು ತಾಮ್ರಕ್ಕಿಂತ ಗಡುಸಾದ ಒಂದು ಮಿಶ್ರಲೋಹ.

**ತಾಮ್ರ ಮತ್ತು ಕಂಚಿನ ಶಿಲಾಯುಗ:** ತಾಮ್ರ ಮತ್ತು ಕಂಚಿನ ಆಯುಧಗಳ ಪ್ರಮಾಣ ಅತ್ಯಲ್ಪವಾಗಿದ್ದರಿಂದ ಅವುಗಳ ಜೊತೆಯಲ್ಲಿಯೇ ಶಿಲಾಯುಧಗಳೂ ಮುಂದುವರೆದವು. ಆದ್ದರಿಂದ ಈ ಕಾಲವನ್ನು ತಾಮ್ರ ಮತ್ತು ಕಂಚಿನ ಶಿಲಾಯುಗ ಎಂದು ಕರೆಯಲಾಗುವುದು. ಇದು 5000 ವರ್ಷಗಳಿಂದೀಚೆಗೆ ಕಂಡುಬರುತ್ತದೆ. ಕೃಷಿ ಮತ್ತು ಪಶುಪಾಲನೆ ಪ್ರಧಾನ ಉದ್ಯೋಗವಾಗಿತ್ತು. ಚಕ್ರಗಳಿಂದ ಮಾಡಿದ ಅಲಂಕೃತ ಮಡಕೆಗಳು ಈ ಕಾಲದಲ್ಲಿ ಕಂಡು ಬರುತ್ತವೆ. ತಾಮ್ರದ ಉಪಕರಣಗಳು, ಆಭರಣಗಳೂ ದೊರಕಿವೆ. ಭೂಮಿಯನ್ನು ಆಳವಾಗಿ ಉಳಲು ಮತ್ತು ಅರಣ್ಯ ಕಡಿದು ಕೃಷಿ ಭೂಮಿಯಾಗಿ ಪರಿವರ್ತಿಸಲು ಕಂಚಿನ ಉಪಕರಣಗಳು ನೆರವಾದವು. ಇದರಿಂದಾಗಿ

ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ಹೆಚ್ಚಳ ಕಂಡಿತು. ಹೆಚ್ಚುವರಿ ಧಾನ್ಯವನ್ನು ಅಗತ್ಯವಿರುವ ಪ್ರದೇಶಗಳಿಗೆ ಕಳುಹಿಸಿಕೊಡುವ ಮೂಲಕ ವ್ಯಾಪಾರ ವಹಿವಾಟು ಆರಂಭವಾದವು. ಪರಿಣಾಮವಾಗಿ ವಾಯವ್ಯ ಭಾರತದಲ್ಲಿ ಸಿಂಧೂ ಮತ್ತು ಅದರ ಉಪನದಿಗಳ ಕೊಳ್ಳದಲ್ಲಿ ಹರಪ್ಪ ನಾಗರಿಕತೆಯಂತಹ ಬೃಹತ್ ಸಂಸ್ಕೃತಿಯು ತಲೆ ಎತ್ತಲು ಸಾಧ್ಯವಾಯಿತು. ಇದನ್ನು ಮೊದಲ ನಗರೀಕರಣವೆಂದು ಇತಿಹಾಸಕಾರರು ಗುರುತಿಸುತ್ತಾರೆ. ದಕ್ಷಿಣ ಭಾರತದಲ್ಲಿ ತಾಮ್ರಕ್ಕೆ ಹೋಲಿಸಿದಾಗ ಕಂಚಿನ ಬಳಕೆ ಹೆಚ್ಚಾಗಿರಲಿಲ್ಲ. ಕರ್ನಾಟಕದ ಹಳ್ಳೂರು, ಬನಹಳ್ಳಿ, ಬ್ರಹ್ಮಗಿರಿ ಮುಂತಾದ ಕಡೆಗಳಲ್ಲಿ ತಾಮ್ರ ಮತ್ತು ಕಂಚಿನ ಶಿಲಾಯುಗದ ಆಧಾರಗಳು ದೊರೆತಿವೆ.



ಬೃಹತ್ ಶಿಲಾ ಸಂಸ್ಕೃತಿಯ ಶಿಲಾಗೋರಿಗಳು

**ಕಬ್ಬಿಣ ಶಿಲಾಯುಗ:** ಕಬ್ಬಿಣ ಅತ್ಯಂತ ಗಡುಸಾದ ಲೋಹ. ಇದು ದಕ್ಷಿಣ ಭಾರತದಲ್ಲಿ ತಾಮ್ರಕ್ಕೂ ಮೊದಲೇ ಬಳಕೆಯಲ್ಲಿತ್ತು. ಕಬ್ಬಿಣವು 3500 ವರ್ಷಗಳ ಹಿಂದೆಯೇ ದಕ್ಷಿಣ ಭಾರತದಲ್ಲಿ ಬಳಕೆಗೆ ಬಂದಿತ್ತು. ಈ ಕಾಲವನ್ನು ಬೃಹತ್ ಶಿಲಾ ಸಂಸ್ಕೃತಿಯ ಕಾಲವೆಂದೂ ಕರೆಯುತ್ತಾರೆ. ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿಗಳಲ್ಲಿ ಶವದ ಕೋಣೆಯ ಸುತ್ತಲು ಕಲ್ಲುವೃತ್ತಗಳನ್ನು (Stone circle) ನಿರ್ಮಿಸಲಾಗುತ್ತಿತ್ತು. ಶವದ ಕೋಣೆಗಳಲ್ಲಿ ಕಪ್ಪು ಮತ್ತು ಕೆಂಪು ವರ್ಣದ ಮಡಕೆಗಳು (Black and Red ware) ಸಾಮಾನ್ಯವಾಗಿ ಕಂಡುಬರುತ್ತವೆ. ಈ ಸಮಾಧಿಗಳನ್ನು ಕರ್ನಾಟಕದಲ್ಲಿ ಜನಸಾಮಾನ್ಯರು ಪಾಂಡವರ ಗುಡಿ / ಮನೆ, ಮೌರ್ಯರಕಲ್ಲು ಎಂದು ಕರೆಯುತ್ತಾರೆ. ಕಬ್ಬಿಣದ ಆಯುಧ ಮತ್ತು ಸಲಕರಣೆಗಳು ಕೃಷಿ ಹಾಗೂ ಕರಕುಶಲ ಉತ್ಪಾದನೆಯಲ್ಲಿ ನೆರವಾದವು. ಉತ್ತರ ಭಾರತದಲ್ಲಿ ಕಬ್ಬಿಣದ ಬಳಕೆ ತೀವ್ರಗೊಂಡಂತೆ ಕೃಷಿ ಚಟುವಟಿಕೆಗಳು ಗರಿಗೆದರಿತು. ಇದರಿಂದ ಹೆಚ್ಚುವರಿ ಉತ್ಪಾದನೆ ಉಂಟಾಯಿತು. ಹೆಚ್ಚುವರಿ ಉತ್ಪಾದನೆಯನ್ನು ನಿಯಂತ್ರಿಸುವ ವರ್ಗ ಪ್ರಭುತ್ವವಾಗಿ 2600 ವರ್ಷಗಳ ಹಿಂದೆ ಉದಯವಾದವು. ಅವುಗಳೇ ಗಣರಾಜ್ಯಗಳು. ಆನಂತರ ನಂದ, ಮೌರ್ಯ ಸಾಮ್ರಾಜ್ಯಗಳು ಪ್ರವರ್ಧಮಾನಕ್ಕೆ ಬಂದವು. ಕಬ್ಬಿಣ ಶಿಲಾಯುಗಕ್ಕೆ ಸೇರಿದ ಕರ್ನಾಟಕದ ಪ್ರಮುಖ ನೆಲೆಗಳೆಂದರೆ ಬನಹಳ್ಳಿ, ಹಿರೆಬೆನಕಲ್ಲು, ಬ್ರಹ್ಮಗಿರಿ, ಕೊಪ್ಪ, ಹೆಗ್ಗಡೆಹಳ್ಳಿ, ಟಿ.ನರಸಿಪುರ, ಹೆಮ್ಮಿಗೆ, ಹಳ್ಳೂರು, ಜಡಿಗೇನಹಳ್ಳಿ, ಸಾವನದುರ್ಗ, ಹುತ್ರಿದುರ್ಗ, ಪಾಂಡವರದಿಣ್ಣೆ, ಮೊದಲಾದವುಗಳು.

ಬೃಹತ್ ಶಿಲಾಯುಗದ ಸಮಾಧಿಗಳಲ್ಲಿ ಹಲವು ಮಾದರಿಗಳಿವೆ. ಅವುಗಳಲ್ಲಿ ಕಲ್ಲು ವೃತ್ತ (Stone Circle), ನಿಲಸುಗಲ್ಲು (Menhir), ಕಲ್ಮನೆ (Dolmen), ಕಲ್ಗುಪ್ಪೆ (Cairn) ಅಸ್ಥಿ ಮಡಕೆಗಳು (Urn) ಮೊದಲಾದವು ಪ್ರಮುಖವಾದವು.

©KTBS Not to be republished

**ಹೊಸ ಪದಗಳ ಪರಿಚಯ:**

ಸರಿಸೃಪ : ನೆಲದ ಮೇಲೆ ಹರಿದಾಡುವ ಜೀವಿಗಳು. ಉದಾ: ಹಾವುಗಳು, ಸಹಸ್ರಪದಿ.

ಉಭಯವಾಸಿ : ನೀರು ಮತ್ತು ನೆಲ ಎರಡರ ಮೇಲೆ ವಾಸಿಸುವ ಜೀವಿ. ಉದಾ: ಆಮೆ, ಕಪ್ಪೆ.

ಸಸ್ತನಿ : ತನ್ನ ಮರಿಗಳಿಗೆ ಹಾಲುಣಿಸುವ ಜೀವಿಗಳು. ಉದಾ. ಹಸು, ಮೇಕೆ.

ದ್ವಿಪಾದಿ : ಎರಡು ಕಾಲುಗಳಲ್ಲಿ ನೆಲದ ಮೇಲೆ ನಡೆಯುವ ಮತ್ತು ಓಡುವ ಜೀವಿಗಳು. ಉದಾ. ಗೊರಿಲ್ಲ, ಮನುಷ್ಯ.

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಅಕ್ಷರಗಳ ಪರಿಚಯವಿಲ್ಲದ ಕಾಲಘಟ್ಟವನ್ನು______________ ಕಾಲ ಎನ್ನುತ್ತಾರೆ.
2. ಸೂಕ್ಷ್ಮಶಿಲಾಯುಗವನ್ನು ___________ ಶಿಲಾಯುಗವೆಂದು ಕರೆಯಲಾಗುವುದು.
3. ಭಾರತ ಉಪಖಂಡದಲ್ಲಿ ಕೃಷಿಯ ಆರಂಭಿಕ ಕುರುಹುಗಳು_________ ನೆಲೆಯಲ್ಲಿ ಕಂಡುಬಂದಿದೆ.

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಇತಿಹಾಸದ ಮೂರು ಪ್ರಧಾನ ಕಾಲಗಳು ಯಾವುವು?
2. ಭೂಮಿಯು ಯಾವಾಗ ಹುಟ್ಟಿತು?
3. ಹಳೆಯ ಶಿಲಾಯುಗದ ಮಾನವರ ಉಪಕರಣಗಳನ್ನು ಹೆಸರಿಸಿ.
4. ಮಧ್ಯಶಿಲಾಮಯುಗವನ್ನು ಏಕೆ ಸೂಕ್ಷ್ಮ ಶಿಲಾಯುಗ ಎಂದು ಕರೆಯುತ್ತಾರೆ?
5. ಯಾವ ಯುಗದಲ್ಲಿ ಮಾನವರು ಕೃಷಿ ಮಾಡಲಾರಂಭಿಸಿದರು?
6. ಮಾನವರು ಬಳಸಿದ ಮೊದಲ ಲೋಹ ಯಾವುದು?
7. ಬೃಹತ್ ಶಿಲಾಯುಗದ ಸಮಾಧಿಗಳನ್ನು ಜನಸಾಮಾನ್ಯರು ಏನೆಂದು ಕರೆಯುತ್ತಾರೆ?
8. ಕರ್ನಾಟಕದಲ್ಲಿರುವ ಪ್ರಮುಖ ಬೃಹತ್ ಶಿಲಾಯುಗದ ನೆಲೆಗಳನ್ನು ಹೆಸರಿಸಿ.

## III. ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

1. ನವಶಿಲಾಯುಗದಲ್ಲಿ ಕೃಷಿಯ ಉಗಮಕ್ಕೆ ಕಾರಣವಾದ ಅಂಶಗಳು ಯಾವುವು?
2. ಕಬ್ಬಿಣದ ಪರಿಚಯದಿಂದ ಕಬ್ಬಿಣ ಯುಗದಲ್ಲಿ ಉಂಟಾದ ಬದಲಾವಣೆಗಳೇನು?

**ಚಟುವಟಿಕೆ.**

- ಚಕ್ರಗಳ ಸಹಾಯದಿಂದ ಮಡಕೆ ಮಾಡುವುದನ್ನು ನೋಡಿ. ಮಡಕೆ ಮಾಡುವ ವಿಧಾನ ಕುರಿತು ಕುಂಬಾರರಿಂದ ಮಾಹಿತಿ ಪಡೆಯಿರಿ.
- ಜೇಡಿ ಮಣ್ಣಿನಿಂದ ಪಾತ್ರೆಗಳನ್ನು ತಯಾರಿಸಿ.

*****

©KTBS Not to be republished

| ಪಾಠ 4 | ## ಪ್ರಾಚೀನ ನಾಗರಿಕತೆಗಳು |
|---|---|

**ಪಾಠದ ಪರಿಚಯ**

ಈ ಪಾಠದಲ್ಲಿ ಜಗತ್ತಿನ ಪ್ರಮುಖ ನಾಗರಿಕತೆಗಳಾದ ಈಜಿಪ್ಟ್, ಮೆಸೊಪೊಟೇಮಿಯಾ, ಚೀನಾ ಮತ್ತು ಹರಪ್ಪ ನಾಗರಿಕತೆಗಳನ್ನು ಕುರಿತು ಪರಿಚಯಿಸಲಾಗಿದೆ. ಅಲ್ಲದೆ, ಗ್ರೀಕ್ ಮತ್ತು ರೋಮನ್ ನಾಗರಿಕತೆಗಳನ್ನು ಕುರಿತು ತಿಳಿಸಲಾಗಿದೆ. ಈ ಎಲ್ಲಾ ನಾಗರಿಕತೆಗಳ ಕೊಡುಗೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಸಾಮರ್ಥ್ಯಗಳು**

1] ಜಗತ್ತಿನ ಪ್ರಮುಖ ನಾಗರಿಕತೆಗಳು ಏಳಿಗೆಗೆ ಬಂದ ನದಿ ಬಯಲುಗಳನ್ನು ಅರಿಯುವುದು.

2] ಈಜಿಪ್ಟ್, ಮೆಸೊಪೊಟೇಮಿಯಾ, ಚೀನಾ ಹಾಗೂ ಹರಪ್ಪ ನಾಗರಿಕತೆಗಳ ರಾಜಕೀಯ ಇತಿಹಾಸ ಮತ್ತು ಕೊಡುಗೆಗಳನ್ನು ತಿಳಿಯುವುದು.

3] ಗ್ರೀಕ್ ನಾಗರಿಕತೆಯ ನಗರರಾಜ್ಯಗಳು ಮತ್ತು ಅವುಗಳ ಕೊಡುಗೆಗಳನ್ನು ಪರಿಚಯ ಮಾಡಿಕೊಳ್ಳುವುದು.

4] ರೋಮ್ ನಾಗರಿಕತೆಯಲ್ಲಿ ಪ್ರಸಿದ್ಧರಾದ ಜೂಲಿಯಸ್ ಮತ್ತು ಅಗಸ್ಟಸ್ ಸಿಸರ್ ಅವರ ಸಾಧನೆಯನ್ನು ಅರಿಯುವುದು.

©KTBS Not to be republished

ಯಾವುದೇ ಜೀವಿಯು ಬದುಕಬೇಕಾದರೆ ಆಹಾರ, ನೀರು, ಗಾಳಿ, ಬೆಳಕು ಅತ್ಯವಶ್ಯಕವಾಗಿದೆ. ಇವುಗಳ ಜೊತೆಗೆ ವಸತಿ–ವಸ್ತ್ರಗಳೂ ಮಾನವರ ಮೂಲಭೂತ ಅವಶ್ಯಕತೆಗಳಾಗಿವೆ. ಸಾಮಾನ್ಯವಾಗಿ ದೈನಂದಿನ ಬಳಕೆಗೆ ಬೇಕಾದ ನೀರು ಹಾಗೂ ಉತ್ತಮ ವಾಯುಗುಣವು ನದಿತೀರಗಳಲ್ಲಿ ಕಂಡು ಬರುತ್ತದೆ. ಆದ್ದರಿಂದ ಪ್ರಾಗೈತಿಹಾಸದ ಮಾನವರು ನದಿತೀರಗಳಲ್ಲಿಯೇ ನೆಲೆಸುತ್ತಿದ್ದರು. ಪರಿಣಾಮವಾಗಿ, ಮುಂದೆ ನಾಗರಿಕತೆಗಳು ಕೂಡ ನದಿ ತೀರಗಳಲ್ಲಿಯೇ ಏಳಿಗೆಗೆ ಬಂದವು. ಹೀಗೆ ನದಿ ತೀರಗಳು ಪ್ರಾಚೀನ ನಾಗರಿಕತೆಯ ತೊಟ್ಟಿಲುಗಳಾಗಿವೆ. ನೈಲ್ ನದಿ ತೀರದಲ್ಲಿ ಈಜಿಪ್ಟ್ ನಾಗರಿಕತೆ, ಯುಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ತೀರದಲ್ಲಿ ಮೆಸೊಪೊಟೇಮಿಯ ನಾಗರಿಕತೆ, ಹ್ವಾಂಗ್‌ಹೋ ಮತ್ತು ಸಿಕಿಯಾಂಗ್ ನದಿಗಳ ದಂಡೆಯಲ್ಲಿ ಚೀನಾ ನಾಗರಿಕತೆ, ಸಿಂಧೂ ಮತ್ತು ಅದರ ಉಪನದಿಗಳ ಕೊಳ್ಳದಲ್ಲಿ ಹರಪ್ಪ ನಾಗರಿಕತೆಗಳು ಏಳಿಗೆಗೆ ಬಂದವು.




**ಭೂಪಟದಲ್ಲಿ ಪ್ರಾಚೀನ ಜಗತ್ತಿನ ನಾಗರಿಕತೆಗಳು**

## ಈಜಿಪ್ಟ್ ನಾಗರಿಕತೆ

ಈಜಿಪ್ಟ್ ಪ್ರಾಚೀನ ಜಗತ್ತಿನ ಮೊದಲ ನಾಗರಿಕತೆ. ಇದು ನೈಲ್ ನದಿಯ ತೀರದಲ್ಲಿ ಹುಟ್ಟಿತು. ನೈಲ್ ಜಗತ್ತಿನ ಅತ್ಯಂತ ಉದ್ದವಾದ ನದಿ. ಇದು ಆಫ್ರಿಕಾ ಖಂಡದಲ್ಲಿ ಉತ್ತರಾಭಿಮುಖವಾಗಿ ಹರಿದು ಮೆಡಿಟೆರೇನಿಯನ್ ಸಮುದ್ರವನ್ನು ಸೇರುತ್ತದೆ. ಹೀಗೆ ಹರಿಯುವ ಮಾರ್ಗದಲ್ಲಿ ಈಜಿಪ್ಟನ್ನು ಹಾದು ಹೋಗುತ್ತದೆ. ನೈಲ್ ನದಿ ಇಲ್ಲದೇ ಹೋಗಿದ್ದಲ್ಲಿ ಈಜಿಪ್ಟ್ ಸಂಪೂರ್ಣ ಮರುಭೂಮಿಯಾಗಿರುತ್ತಿತ್ತು. ಆದ್ದರಿಂದ 'ಈಜಿಪ್ಟನ್ನು ನೈಲ್ ನದಿಯ ವರಪ್ರಸಾದ' (Egypt the gift of the Nile) ಎಂದು ಕರೆಯುತ್ತಾರೆ.

**ರಾಜಕೀಯ ಇತಿಹಾಸ:** ಇಂದಿಗೆ ಸುಮಾರು 5400 ವರ್ಷಗಳ ಹಿಂದೆ ಈಜಿಪ್ಟ್‌ನಲ್ಲಿ ರಾಜವಂಶಗಳ ಆಳ್ವಿಕೆಯು ಆರಂಭವಾಯಿತು. ಈಜಿಪ್ಟಿನ ರಾಜರನ್ನು ಫೆರೋ ಎಂದು ಕರೆಯುತ್ತಿದ್ದರು. ಮೆನೆಸ್ (Menes) ಎಂಬಾತ ಮೊದಲ ಫೆರೋ. ಮೆಂಫಿಸ್ (Memphis) ನಗರ ಇವನ ರಾಜಧಾನಿಯಾಗಿತ್ತು. ಇವನ ನಂತರ ಬಂದ ಫೆರೋಗಳಲ್ಲಿ ಖುಫು, ಅಮೇನ್‌ಹೋಟೆಫ್, ಥಟ್ಮೋಸ್ ಪ್ರಮುಖರು.

©KTBS Not to be republished

ಖುಫು ಗಿಜ್ಞೆ ಎಂಬಲ್ಲಿ ಜಗತ್ತಿನ ಅತ್ಯಂತ ದೊಡ್ಡ ಪಿರಮಿಡ್ ಕಟ್ಟಿಸಿದನು. ಅಮೇನ್‌ಹೋಟೆಪ್ (Amenhotep)ನು ದಿಗ್ವಿಜಯದ ಮೂಲಕ ರಾಜ್ಯವನ್ನು ವಿಸ್ತರಿಸಿ ಸಾಮ್ರಾಜ್ಯವಾಗಿಸಿದನು. ಮುಂದೆ ಬಂದ ಫೆರೋಗಳಲ್ಲಿ ಥಟ್ಮೋಸ್ ಮಹಾನ್ ದಿಗ್ವಿಜಯಿ. ಅವನ ನಂತರ ಅವನ ಮಗಳಾದ ಹ್ಯಾಷೆಪ್‌ಸುಟ್ (Hatshepsut) ಅಧಿಕಾರಕ್ಕೆ ಬಂದಳು. ಆ ಮೂಲಕ ಜಗತ್ತಿನ ಮೊಟ್ಟಮೊದಲ ಸಾಮ್ರಾಜ್ಞೆ ಎನಿಸಿದಳು.



ಪಿರಮಿಡ್, ಗಿಜ್ಞೆ

ಅಂತಿಮವಾಗಿ ಸುಮಾರು 2300 ವರ್ಷಗಳ ಹಿಂದೆ ಈಜಿಪ್ಟನ್ನು ಗ್ರೀಸಿನ ದೊರೆ ಅಲೆಕ್ಸಾಂಡರನು ಗೆದ್ದುಕೊಂಡನು. ಅಲ್ಲಿಗೆ ತನ್ನ ಪ್ರತಿನಿಧಿಯನ್ನು ನೇಮಿಸುವ ಮೂಲಕ ಟಾಲೆಮಿ (Ptolemy) ಎಂಬ ಮನೆತನದ ಆರಂಭಕ್ಕೆ ಕಾರಣನಾದನು. ಪ್ರಸಿದ್ಧ ರಾಣಿ ಕ್ಲಿಯೋಪಾತ್ರ (Cleopatra) ಈ ಮನೆತನ ಕೊನೆಯ ಆಡಳಿತಗಾರ್ತಿ. ಇವಳ ಕಾಲದಲ್ಲಿ ಈಜಿಪ್ಟ್ ರೋಮ್ ಸಾಮ್ರಾಜ್ಯಕ್ಕೆ ಒಳಪಟ್ಟಿತು.

**ಈಜಿಪ್ಟ್ ನಾಗರಿಕತೆಯ ಕೊಡುಗೆಗಳು:** ಗೋಧಿ ಮತ್ತು ಬಾರ್ಲಿ ಈಜಿಪ್ಟಿನ ಜನರ ಆಹಾರ ಬೆಳೆಗಳಾಗಿದ್ದವು. ಕೃಷಿಗೆ ನೈಲ್ ನದಿಯ ನೀರನ್ನು ಕಾಲುವೆಗಳ ಮೂಲಕ ಹಾಯಿಸುತ್ತಿದ್ದರು.

ಈಜಿಪ್ಟಿನ ಸಮಾಜದಲ್ಲಿ ಗುಲಾಮರ ಸ್ಥಿತಿ ದಯನೀಯವಾಗಿತ್ತು. ಗುಲಾಮರಿಂದ ಬೃಹತ್ ಪಿರಮಿಡ್‌ಗಳ ನಿರ್ಮಾಣ ಸಾಧ್ಯವಾಯಿತು. ಸಮಾಜದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನಮಾನವಿತ್ತು. ಈಜಿಪ್ಟ್ ನಾಗರಿಕತೆಯ ಜನರಿಗೆ ಮರುಜನ್ಮದಲ್ಲಿ ನಂಬಿಕೆ ಇತ್ತು. ಆದ್ದರಿಂದ ಶವಗಳನ್ನು ಸಂರಕ್ಷಿಸಿಡುತ್ತಿದ್ದರು. ಸಂರಕ್ಷಿಸಿಟ್ಟ ಶವಗಳನ್ನು 'ಮಮ್ಮಿ' ಎನ್ನುತ್ತಾರೆ.

ನಮ್ಮಲ್ಲಿ ಗ್ರಾಮದೇವತೆಗಳು ಇರುವಂತೆ ಪ್ರಾಚೀನ ಈಜಿಪ್ಟಿನಲ್ಲಿ ಪ್ರತಿ ನಗರಕ್ಕೊಂದು ನಗರದೇವತೆಗಳಿದ್ದವು. ಅಲ್ಲದೆ ಸೂರ್ಯ ಮತ್ತು ನದಿಗಳನ್ನೂ ದೇವರೆಂದು ಪರಿಗಣಿಸಿದ್ದರು. ಪ್ರಾಚೀನ ಈಜಿಪ್ಟಿಯನ್ನರು ಹೈರೋಗ್ಲಿಫಿಕ್ಸ್ (Hieroglyphic) ಎಂಬ ಚಿತ್ರಲಿಪಿಗಳನ್ನು ಬಳಸುತ್ತಿದ್ದರು. ಹೈರೋಗ್ಲಿಫ್ ಎಂದರೆ 'ಪವಿತ್ರಲಿಪಿ' ಅಕ್ಷರ ಎಂದರ್ಥ. ನೈಲ್ ನದಿಯಲ್ಲಿ ಬೆಳೆಯುತ್ತಿದ್ದ ಪ್ಯಾಪಿರಸ್ ಎಂಬ ಜೊಂಡು ಹುಲ್ಲಿನ ಮೇಲೆ ಮಸಿಯಿಂದ ಬರೆಯುತ್ತಿದ್ದರು. ಇವರಿಗೆ ರೇಖಾಗಣಿತದಲ್ಲಿ ಅಪಾರ ಜ್ಞಾನವಿತ್ತೆಂದು ತಿಳಿಯುತ್ತದೆ. ಈ ಜ್ಞಾನದಿಂದಲೇ ಬೃಹತ್ ಪಿರಮಿಡ್‌ಗಳ ರಚನೆ ಸಾಧ್ಯವಾಗಿದೆ. ಈಜಿಪ್ಟಿನ ಶಿಲ್ಪಗಳಲ್ಲಿ ಸ್ಫಿಂಕ್ಸ್ ಎಂಬ ಬೃಹತ್ ಪ್ರತಿಮೆಯು ಆಕರ್ಷಕವಾಗಿದೆ. ಇದು ಸಿಂಹದೇಹ ಮತ್ತು ಮನುಷ್ಯ ಮುಖವನ್ನೂ ಹೊಂದಿದೆ.

©KTBS Not to be republished

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಈಜಿಪ್ಟ್ ನಾಗರಿಕತೆ__________ ನದಿ ತೀರದಲ್ಲಿ ಹುಟ್ಟಿತು.
2. ಗಿಜ್ಜೆ ಎಂಬಲ್ಲಿ ಜಗತ್ತಿನ ದೊಡ್ಡ ಪಿರಮಿಡ್ ಕಟ್ಟಿಸಿದ ಫೆರೋ__________
3. ಜಗತ್ತಿನ ಮೊತ್ತಮೊದಲ ಸಾಮ್ರಾಜ್ಞೆ __________
4. ಸಿಂಹದೇಹ, ಮನುಷ್ಯ ಮುಖವನ್ನು ಹೊಂದಿರುವ ಈಜಿಪ್ಟಿನ ಶಿಲ್ಪವನ್ನು ______ ಎನ್ನುತ್ತಾರೆ.

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಜಗತ್ತಿನ ಉದ್ದವಾದ ನದಿ ಯಾವುದು?
2. ಈಜಿಪ್ಟ್ ನೈಲ್ ನದಿಯ ವರಪ್ರಸಾದ ಎಂದು ಕರೆಯುತ್ತಾರೆ ಏಕೆ?
3. ಫೆರೋ ಎಂದರೆ ಯಾರು? ಪ್ರಮುಖ ಫೆರೋಗಳನ್ನು ಹೆಸರಿಸಿ.
4. ಜಗತ್ತಿನ ದೊಡ್ಡ ಪಿರಮಿಡ್ ಯಾವುದು? ಅದನ್ನು ಕಟ್ಟಿಸಿದವರು ಯಾರು?
5. 'ಮಮ್ಮಿ' ಎಂದರೇನು?
6. ಪ್ರಾಚೀನ ಈಜಿಪ್ಟಿಯನ್ನರ ಲಿಪಿ ಯಾವುದು?

### ಚಟುವಟಿಕೆ

- ಈಜಿಪ್ಟ್ ನಾಗರಿಕತೆಯ ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಮಾಡಿ.

## ಮೆಸೊಪೊಟೇಮಿಯ ನಾಗರಿಕತೆ

ಇಂದಿನ ಇರಾಕ್ ದೇಶದ ಟೈಗ್ರಿಸ್ ಮತ್ತು ಯುಫ್ರೆಟಿಸ್ ನದಿಗಳ ನಡುವಿನ ಬಯಲಿನಲ್ಲಿ ಮೆಸೊಪೊಟೇಮಿಯ ನಾಗರಿಕತೆ ಏಳಿಗೆಗೆ ಬಂದಿತು. ಗ್ರೀಕ್ ಭಾಷೆಯಲ್ಲಿ ಮೆಸೊಪೊಟೇಮಿಯ ಎಂದರೆ ಎರಡು ನದಿಗಳ ನಡುವಿನ ಪ್ರದೇಶ. ಈ ಪ್ರದೇಶವನ್ನು ಸುಮೇರರು, ಬ್ಯಾಬಿಲೋನಿಯರು, ಹಿಟ್ಟೈಟರು, ಅಸ್ಸಿರಿಯನ್ನರು ಮತ್ತು ನವ ಬ್ಯಾಬಿಲೋನಿಯನ್ನರು ಮೊದಲಾದ ಜನಾಂಗಗಳ ಜನರು ಆಳಿದರು.

**ರಾಜಕೀಯ ಇತಿಹಾಸ:** ಸುಮೇರಿಯನ್ನರಿಂದ ಮೊಟ್ಟಮೊದಲು ಇಲ್ಲಿ ನಾಗರಿಕತೆಯೊಂದು ಏಳಿಗೆಗೆ ಬಂದಿತು. ಉರ್ (ಗಡಿ), ಕಿಶ್ (Kish), ಲಗಾಶ್ (Lagash) ಮೊದಲಾದ ನಗರ ರಾಜ್ಯಗಳು ಆರಂಭವಾದವು. ಸುಮೇರಿಯನ್ನರು ಕ್ಯೂನಿಫಾರಂ (Cuneiform) ಲಿಪಿಗಳಲ್ಲಿ ಹಸಿ ಜೇಡಿಮಣ್ಣಿನ ಫಲಕಗಳ ಮೇಲೆ ಬರೆಯುತ್ತಿದ್ದರು. ಮೆಸೊಪೊಟೇಮಿಯನ್ನರಿಗೆ ಭಾರತದೊಡನೆ ಸಂಪರ್ಕವಿತ್ತು. ಸುಮೇರಿಯನ್ನರ ನಂತರ ಅಕ್ಕಾಡಿಯನ್ನರು ಬಂದರು. ಅಕ್ಕಾಡಿಯನ್ನರ ಸಾಮ್ರಾಜ್ಯವು ಅನಾಗರಿಕರ

©KTBS Not to be republished

ದಾಳಿಗೆ ತುತ್ತಾಗಿ ಪತನಗೊಂಡಿತು. ನಂತರ ಅಮೋರೈಟರು (Amorites) ಎಂಬ ಮತ್ತೊಂದು ಜನಾಂಗವು ಬ್ಯಾಬಿಲಾನ್ ಎಂಬ ಪಟ್ಟಣದಿಂದ ಆಳುತ್ತಿದ್ದರು. ಇವರು ಅಕ್ಕಾಡಿಯನ್ ರಾಜ್ಯವನ್ನು ತಮ್ಮ ನಿಯಂತ್ರಣಕ್ಕೆ ಪಡೆದು ವಿಶಾಲ ರಾಜ್ಯ ಸ್ಥಾಪಿಸಿದರು.



ಹಮ್ಮುರಬಿ

**ಹಮ್ಮುರಬಿ (Hammurabi) :** ಬ್ಯಾಬಿಲೋನಿಯನ್ನರಲ್ಲಿ ಪ್ರಸಿದ್ಧನಾದ ರಾಜ ಹಮ್ಮುರಬಿ. ಈತನು ತನ್ನ ಕಾನೂನು ಸಂಹಿತೆಗಳ ಮೂಲಕ ಜಗತ್ಪ್ರಸಿದ್ಧನಾಗಿದ್ದಾನೆ. 'ಮುಯ್ಯಿಗೆ ಮುಯ್ಯಿ' ಎಂಬ ತತ್ವದ ಮೇಲೆ ಈ ಕಾನೂನುಗಳಿವೆ. ಬ್ಯಾಬಿಲೋನಿಯನ್ನರ ನಂತರ ಕಾಸ್ಸೈಟ್ (Kassite) ಮತ್ತು ಹಿಟ್ಟೈಟ್ ಎಂಬ ಜನಾಂಗಗಳು ಮೆಸೊಪೊಟೇಮಿಯವನ್ನು ಕೆಲಕಾಲ ಆಳಿದರು.

**ಅಸುರ್‌ಬನಿಪಾಲ್:** ಹಿಟ್ಟೈಟರ ನಂತರ ಮೆಸೊಪೊಟೇಮಿಯವನ್ನು ಅಸ್ಸೀರಿಯನ್ನರು ಆಳಿದರು. ಅಸ್ಸೀರಿಯನ್ನರಲ್ಲಿ ಅತ್ಯಂತ ಪ್ರಸಿದ್ಧ ಚಕ್ರವರ್ತಿ ಎಂದರೆ ಅಸುರ್‌ಬನಿಪಾಲ್ (Assurbanipal). ಇವನು ಮಹಾನ್ ಕಲಿಯೂ ಮತ್ತು ಕವಿಯೂ ಆಗಿದ್ದನು. 'ನಿನೆವ್ಹ' ನಗರದಲ್ಲಿ ಉತ್ತಮ ಗ್ರಂಥಾಲಯವನ್ನು ನಿರ್ಮಿಸಿದನು.

**ನೆಬುಖಡ್ನೆಜರ್:** ನಂತರ ಬಂದ ಚಾಲ್ಡಿಯನ್ನರಲ್ಲಿ ನೆಬುಖಡ್ನೆಜರ್ (Nebuchadnezzar) ಪ್ರಸಿದ್ಧನಾಗಿದ್ದಾನೆ. ಇವನು ಪ್ರಾಚೀನ ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾದ 'ತೂಗು ಉದ್ಯಾನ' (Hanging Garden) ವನ್ನು ಬ್ಯಾಬಿಲೋನ್ ನಗರದಲ್ಲಿ ನಿರ್ಮಿಸಿದನು.

ಅಂತಿಮವಾಗಿ, ಇಂದಿಗೆ 2500 ವರ್ಷಗಳ ಹಿಂದೆ ಪರ್ಷಿಯಾದ ಚಕ್ರವರ್ತಿ ಸೈರಸ್‌ನು (Cyrus) ಬ್ಯಾಬಿಲೋನ್ ನಗರವನ್ನು ಗೆಲ್ಲುವ ಮೂಲಕ ಪ್ರಾಚೀನ ಮೆಸೊಪೊಟೇಮಿಯ ನಾಗರಿಕತೆಯು ಅಂತ್ಯಗೊಂಡಿತು.



ಜಿಗ್ಗುರಾತ್

**ಮೆಸೊಪೊಟೇಮಿಯ ನಾಗರಿಕತೆಯ ಕೊಡುಗೆಗಳು:** ಜಗತ್ತಿನಲ್ಲಿಯೇ ಮೊಟ್ಟಮೊದಲು ಕಾನೂನು ಸಂಹಿತೆಗಳನ್ನು ಅಳವಡಿಸಿಕೊಂಡವರು ಮೆಸಪೊಟೇಮಿಯನ್ನರು. ಹಮ್ಮುರಬಿಯು ಜಗತ್ತಿನಲ್ಲಿ ಮೊದಲ ಬಾರಿಗೆ ಕಾನೂನು ಸಂಹಿತೆಗಳನ್ನು ಜಾರಿಗೆ ತಂದನು. ಇವನ ಕಾನೂನುಗಳಲ್ಲಿ ಗುಲಾಮರ ಮೇಲಿನ ದೌರ್ಜನ್ಯವನ್ನೂ ನಿಷೇಧಿಸಿದ್ದನು. ಮೆಸೊಪೊಟೇಮಿಯನ್ನರು ಹರಪ್ಪ ಮತ್ತು

©KTBS Not to be republished

ಈಜಿಪ್ಟ್ ನಾಗರಿಕತೆಗಳ ಜೊತೆಗೆ ವ್ಯಾಪಾರ ಸಂಬಂಧ ಹೊಂದಿದ್ದರು. ಈಜಿಪ್ಟ್‌ನಂತೆ ಇಲ್ಲಿಯೂ ಪ್ರತಿ ನಗರಗಳಿಗೂ ಒಂದೊಂದು ಅಧಿದೇವತೆಗಳಿದ್ದವು. ಇಲ್ಲಿ 'ಜಿಗ್ಗುರಾತ್' (Ziggurat) ಎಂಬ ಎತ್ತರವಾದ ದೇವಾಲಯಗಳನ್ನು ಕಟ್ಟುತ್ತಿದ್ದರು. ಕೋನಲಿಪಿ (ಕ್ಯೂನಿಫಾರ್ಮ್) ಬರಹಗಳನ್ನು ಈ ಜನರು ಬಳಸುತ್ತಿದ್ದರು. 'ಗಿಲ್ಗಮೇಶ್' ಎಂಬುದು ಮೆಸೊಪೊಟೇಮಿಯನ್ನರ ಒಂದು ಮಹಾಕಾವ್ಯವಾಗಿದೆ.

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಅಸುರ್‌ಬನಿಪಾಲನು__________ ನಗರದಲ್ಲಿ ಗ್ರಂಥಾಲಯ ನಿರ್ಮಿಸಿದನು.
2. ಸುಮೇರಿಯನ್ನರು ___________ ಲಿಪಿಗಳಲ್ಲಿ ಬರೆಯುತ್ತಿದ್ದರು.
3. ಜಗತ್ತಿನಲ್ಲಿ ಮೊದಲ ಬಾರಿಗೆ ಕಾನೂನು ಸಂಹಿತೆಗಳನ್ನು ಜಾರಿಗೆ ತಂದ ರಾಜ_______

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಮೆಸೊಪೊಟೇಮಿಯಾ ಯಾವ ನದಿಗಳ ತೀರದಲ್ಲಿ ಏಳಿಗೆಗೆ ಬಂದಿತು?
2. ಮೆಸೊಪೊಟೇಮಿಯವನ್ನು ಆಳಿದ ಜನಾಂಗಗಳು ಯಾವುವು?
3. ಮೆಸೊಪೊಟೇಮಿಯಾದ ನಗರ ರಾಜ್ಯಗಳು ಯಾವುವು?
4. ಹಮ್ಮುರಬಿ ಕುರಿತು ಟಿಪ್ಪಣಿ ಬರೆಯಿರಿ.
5. ಬ್ಯಾಬಿಲಾನ್ ನಗರದ ತೂಗು ಉದ್ಯಾನ ನಿರ್ಮಿಸಿದವರು ಯಾರು?
6. 'ಜಿಗ್ಗುರಾತ್ ಎಂದರೇನು?
7. ಮೆಸೊಪೊಟೇಮಿಯನ್ನರ ಮಹಾಕಾವ್ಯವನ್ನು ಹೆಸರಿಸಿ.

**ಚಟುವಟಿಕೆ:**

- ಪ್ರಾಚೀನ ಜಗತ್ತಿನ ಏಳು ಅದ್ಭುತಗಳ ಬಗೆಗೆ ಮಾಹಿತಿ ಸಂಗ್ರಹಿಸಿ.

## ಚೀನಾ ನಾಗರಿಕತೆ

ಭಾರತದ ಈಶಾನ್ಯ ದಿಕ್ಕಿನಲ್ಲಿರುವ ದೇಶವೇ ಚೀನಾ. ಇಲ್ಲಿನ ಜನರು ಮಂಗೋಲಿಯನ್ ಎಂಬ ಹಳದಿ ಮೈಬಣ್ಣದ ಬುಡಕಟ್ಟಿಗೆ ಸೇರಿದವರು. ಯಾಂಗ್‌ತ್ಸೆ (Yangtze) ಮತ್ತು ಹ್ವಾಂಗ್‌ಹೊ (ಹಳದಿ ನದಿ) (Hwango) ಇಲ್ಲಿನ ಪ್ರಮುಖ ನದಿಗಳಾಗಿವೆ. ಮೊದಲು 'ಹಳದಿ ನದಿ' ತೀರದಲ್ಲಿ ಚೀನಾ ನಾಗರಿಕತೆಯು ಹುಟ್ಟಿತು. ಆದ್ದರಿಂದ ಅದನ್ನು 'ಚೀನಾ ನಾಗರಿಕತೆಯ ತೊಟ್ಟಿಲು' ಎಂದು ಕರೆಯುತ್ತಾರೆ. ಆರಂಭದಲ್ಲಿ ಗ್ರಾಮಗಳಿಂದಲೇ ಅವರ ಆಡಳಿತ ಆರಂಭವಾಯಿತು. ನಿಧಾನವಾಗಿ ಭತ್ತ, ರೇಷ್ಮೆ ಉತ್ಪಾದಿಸಿ ವಿದೇಶಿ ವ್ಯಾಪಾರವನ್ನು ಹೆಚ್ಚಿಸಿಕೊಂಡರು.

©KTBS Not to be republished

**ರಾಜಕೀಯ ಇತಿಹಾಸ:** ಚೀನಾದ ಮೊದಲ ಮನೆತನ ಷಾಂಗ್. ಈ ಮನೆತನವು ಇಂದಿಗೆ 3600 ರಿಂದ 3000 ವರ್ಷಗಳವರೆಗೂ ಆಳಿತು. ಇವರು ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದರು. ಈ ಕಾಲದ ಜನರು ಪಿಂಗಾಣಿ ಮತ್ತು ಕಂಚಿನ ಪಾತ್ರೆಗಳನ್ನು ಉತ್ಪಾದಿಸುವ ಕರಕುಶಲ ಕಲೆಗಳಲ್ಲಿ ಪರಿಣತಿ ಸಾಧಿಸಿದ್ದರು. ಷಾಂಗ್ ಮನೆತನದ ನಂತರ ಚೌ ಮನೆತನ ಹೆಚ್ಚುಕಾಲ ಆಳಿತು.

ಚೌ ಮನೆತನದ ಪ್ರಸಿದ್ಧ ರಾಜ ಹೂವಾಂಗ್ (Wu wang). ಪ್ರಸಿದ್ಧ ಚೀನಿ ತತ್ವಜ್ಞಾನಿಗಳಾದ ಕನ್‌ಫ್ಯೂಶಿಯಸ್, ಲಾವೋತ್ಸೆ (Lao Tze) ಅವರು ಚೌ ಮನೆತನದ ಕಾಲದಲ್ಲಿಯೇ ಇದ್ದರು. ಚೌ ಮನೆತನದ ಆಳ್ವಿಕೆಯನ್ನು ಕೊನೆಗೊಳಿಸಿ ಚಿನ್ (Qin) ಮನೆತನ ಅಧಿಕಾರಕ್ಕೆ ಬಂದಿತು. ಚಿನ್ ಮನೆತನದಿಂದಲೇ ಆ ದೇಶಕ್ಕೆ 'ಚೀನಾ' ಎಂಬ ಹೆಸರು ಬಂದಿತು.

**ಷಿ–ಹ್ವಾಂಗ್–ತಿ (Shi-Huang-Ti):** ಚಿನ್ ಮನೆತನದ ಸುಪ್ರಸಿದ್ಧ ರಾಜ ಷಿ–ಹ್ವಾಂಗ್–ತಿ. ಇವನು ಚೀನಾವನ್ನು ಒಗ್ಗೂಡಿಸಿ, ಒಂದೇ ರೀತಿಯ ಕಾನೂನು ಜಾರಿಗೆ ತಂದನು. ಆದ್ದರಿಂದ ಇವನನ್ನು ಚೀನಾದ ಮೊದಲ ರಾಜನೆಂದು ಕರೆಯುತ್ತಾರೆ. ಶತ್ರುಗಳ ದಾಳಿಯನ್ನು ತಡೆಯಲು 1500 ಮೈಲಿ ಉದ್ದದ ಚೀನಾ ಮಹಾಗೋಡೆಯನ್ನು ನಿರ್ಮಾಣ ಮಾಡಿಸಿದನು. ಷಿ–ಹ್ವಾಂಗ್–ತಿ ನಿಧನ ಹೊಂದಿದ ನಂತರ ಚೀನವು ಹಾನ್ ವಂಶದ ಆಳ್ವಿಕೆಗೆ ಒಳಪಟ್ಟಿತ್ತು. ಈ ಕಾಲವನ್ನು ಚೀನಾದ ಸುವರ್ಣಯುಗವೆಂದು ಕರೆಯಲಾಗುತ್ತದೆ.

**ವು–ತಿ (Wu-Ti):** ಹಾನ್ ವಂಶದ ಪ್ರಸಿದ್ಧ ದೊರೆ ವು–ತಿ ಯ ಕಾಲದಲ್ಲಿ ವಿಶಾಲ ಚೀನಾ ಸಾಮ್ರಾಜ್ಯ ಸ್ಥಾಪನೆಗೊಂಡಿತು. ವಿದೇಶಿ ವಾಣಿಜ್ಯ ವ್ಯಾಪಾರಕ್ಕೆ ಉತ್ತೇಜನ ದೊರೆಯಿತು. ರೋಮನ್ ಸಾಮ್ರಾಜ್ಯದಲ್ಲಿ ಚೀನಾದ ರೇಷ್ಮೆಗೆ ಅಪಾರ ಬೇಡಿಕೆ ಇತ್ತು. ಪರಿಣಾಮವಾಗಿ ಚೀನಾ ಮತ್ತು ರೋಮ್ ನಡುವಿನ ವ್ಯಾಪಾರ ಮಾರ್ಗವು 'ರೇಷ್ಮೇ ಮಾರ್ಗ'ವೆಂದೇ ಪ್ರಸಿದ್ಧಿ ಹೊಂದಿತು. ಬೌದ್ಧ ಧರ್ಮವು ಇದೇ ಕಾಲದಲ್ಲಿ ಚೀನಾವನ್ನು ಪ್ರವೇಶಿಸಿತು. ಹಾನ್ ವಂಶದ ಕಾಲದಲ್ಲಿ ಕಲೆ ಮತ್ತು ಸಾಹಿತ್ಯಕ್ಕೂ ಹೆಚ್ಚಿನ ಪ್ರೋತ್ಸಾಹ ದೊರಕಿತು. ಆದ್ದರಿಂದ ಈ ವಂಶದ ಕಾಲವು ಚೀನಾದ ಚರಿತ್ರೆಯಲ್ಲಿ ಸುವರ್ಣಯುಗ ಎಂದೇ ಪ್ರಸಿದ್ಧಿ ಪಡೆದಿದೆ.

ನಂತರ ಬಂದ ಸುಂಗ್ ಮನೆತನದ ಕಾಲದಲ್ಲಿ ಮರದ ಮುದ್ರಣಯಂತ್ರ ಹಾಗೂ ಪಿಂಗಾಣಿ ತಯಾರಿಕೆ ಆರಂಭವಾಯಿತು. ಮಂಗೋಲರು ಸುಂಗರ ರಾಜಧಾನಿ ಪೀಕಿಂಗ್ (ಇಂದಿನ ಚೀನಾದ ರಾಜಧಾನಿ ಬೀಜಿಂಗ್) ಅನ್ನು ಗೆಲ್ಲುವ ಮೂಲಕ ಸುಂಗರ ಆಳ್ವಿಕೆಯನ್ನು ಅಂತ್ಯಗೊಳಿಸಿದರು.

©KTBS Not to be republished

**ಚೀನಾ ನಾಗರಿಕತೆಯ ಕೊಡುಗೆಗಳು:**



ಚೀನಿಯರ ಚಿತ್ರಲಿಪಿ

ಪ್ರಾಚೀನ ಜಗತ್ತಿಗೆ ಚೀನಿಯರು ನೀಡಿದ ಕೊಡುಗೆ ಅಪಾರವಾದುದು. ಚಹಾ (ಟೀ) ಮತ್ತು ರೇಷ್ಮೆ ವಸ್ತ್ರವನ್ನು ಪರಿಚಯಿಸಿದರು. ಇವಲ್ಲದೆ ಬಿದಿರಿನಿಂದ ಮಾಡಿದ ಕಾಗದ, ಸಿಡಿಮದ್ದು, ಚಿತ್ರ ಕುಂಚ (ಪೇಯಿಂಟಿಂಗ್ ಬ್ರೆಷ್), ಪಿಂಗಾಣಿ, ದಿಕ್ಸೂಚಿ ಮೊದಲಾದವುಗಳನ್ನು ಕಂಡುಹಿಡಿದ ಕೀರ್ತಿ ಚೀನಿಯರಿಗೆ ಸಲ್ಲುತ್ತವೆ. ಚೀನಿಯರು ಚಿತ್ರಲಿಪಿಯ ಮೂಲಕ ಬರೆಯುತ್ತಿದ್ದರು. ಇವುಗಳನ್ನು ಬಿದಿರಿನ ಬೊಂಬಿನ ಮೇಲೆ ಮೇಲಿನಿಂದ ಕೆಳಮುಖವಾಗಿ ಬರೆಯುತ್ತಿದ್ದರು.

ಚೀನಾದ ತತ್ವಜ್ಞಾನ ಕ್ಷೇತ್ರವನ್ನು ಲಾವೋತ್ಸೆ ಮತ್ತು ಕನ್‌ಫ್ಯೂಶಿಯುಸರು ಶ್ರೀಮಂತಗೊಳಿಸಿದ್ದಾರೆ.

ಲಾವೋತ್ಸೆ (Lao Tze)ಯು ಚೀನಿಯರಿಗೆ ಸರಳ ಜೀವನ, ತ್ಯಾಗ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬಾಳುವುದನ್ನು ಬೋಧಿಸಿದನು. ಮತ್ತೊಬ್ಬ ತತ್ವಜ್ಞಾನಿಯಾದ ಕನ್‌ಫ್ಯೂಶಿಯಸನು ಸಮಾಜದಲ್ಲಿ ಕಳೆದು ಹೋಗಿದ್ದ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಮರು ಸ್ಥಾಪಿಸುವ ಕೆಲಸ ಮಾಡಿದನು.

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಚೀನಾ ಮತ್ತು ರೋಮ್ ನಡುವಿನ ವ್ಯಾಪಾರ ಮಾರ್ಗವು________ಮಾರ್ಗವೆಂದು ಪ್ರಸಿದ್ಧಿ ಹೊಂದಿತ್ತು.
2. ಚೀನಿಯರು __________ ಲಿಪಿಯ ಮೂಲಕ ಬರೆಯುತ್ತಿದ್ದರು.

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಚೀನಾ ನಾಗರಿಕತೆ ಯಾವ ನದಿತೀರದಲ್ಲಿ ವಿಕಾಸ ಹೊಂದಿತು?
2. ಚೀನಾವನ್ನು ಆಳಿದ ಪ್ರಮುಖ ಮನೆತನಗಳನ್ನು ಹೆಸರಿಸಿ.
3. ಚೀನಾದ ಮಹಾಗೋಡೆಯನ್ನು ಯಾರು ನಿರ್ಮಿಸಿದರು? ಏಕೆ?
4. ವು–ತಿ ದೊರೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

©KTBS Not to be republished

5. ಪ್ರಾಚೀನ ಜಗತ್ತಿಗೆ ಚೀನಿಯರು ನೀಡಿದ ಕೊಡುಗೆಗಳನ್ನು ಪಟ್ಟಿಮಾಡಿ.

6. ಚೀನಾ ದೇಶದ ಪ್ರಮುಖ ತತ್ವಜ್ಞಾನಿಗಳನ್ನು ಹೆಸರಿಸಿ.

**ಚಟುವಟಿಕೆ.**

- ಪ್ರಾಚೀನ ಮತ್ತು ಆಧುನಿಕ ಜಗತ್ತಿನ ಏಳು ಅದ್ಭುತಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಮಾಡಿ.

## ಗ್ರೀಕ್ ನಾಗರಿಕತೆ

ಗ್ರೀಕ್–ಮೆಡಿಟರೇನಿಯನ್ ಸಮುದ್ರದಲ್ಲಿರುವ ಒಂದು ಪರ್ಯಾಯ ದ್ವೀಪ. ಸಣ್ಣಪುಟ್ಟ ಪರ್ವತ ಮತ್ತು ಕಣಿವೆಗಳು ಗ್ರೀಕನ್ನು ವಿಭಜಿಸಿವೆ. ಗ್ರೀಕರು ಇಂಡೋ–ಯೂರೋಪಿಯನ್ ಜನಾಂಗಕ್ಕೆ ಸೇರಿದವರು. ಪ್ರಾಚೀನ ಗ್ರೀಕರಲ್ಲಿ ಅಯೋಲಿಯನ್, ಅಯೋನಿಯನ್, ಡೋರಿಯನ್ ಎಂಬ ಪಂಗಡಗಳಿದ್ದವು.

**ನಗರ ರಾಜ್ಯಗಳು:** ಮೂರು ಸಾವಿರ ವರ್ಷಗಳ ಹಿಂದೆ ಗ್ರೀಕಿನ ಪ್ರತಿ ಪಂಗಡಕ್ಕೆ ಒಬ್ಬ ರಾಜ, ಅವನಿಗೆ ಹಿರಿಯರ ಸಲಹಾ ಮಂಡಳಿ ಇರುತ್ತಿತ್ತು. ಕೈಗಾರಿಕೆ ಮತ್ತು ವ್ಯಾಪಾರ ವೃದ್ಧಿಸಿದಂತೆ ಈ ಪಂಗಡಗಳು ನೆಲೆಸಿದ್ದ ಗ್ರಾಮಗಳು ನಿಧಾನವಾಗಿ ಪಟ್ಟಣ, ನಗರಗಳಾಗಿ ವಿಕಾಸಗೊಂಡವು. ಮುಂದೆ ಇವುಗಳೇ ನಗರ ರಾಜ್ಯಗಳೆನಿಸಿದವು. ಪ್ರತಿಯೊಂದು ನಗರರಾಜ್ಯಗಳೂ ತನ್ನದೇ ಆದ ಸೇನೆ, ಆಡಳಿತ, ನಗರದೇವತೆ ಮೊದಲಾದವುಗಳನ್ನು ಹೊಂದಿದ್ದವು. ಹೀಗೆ ಗ್ರೀಸಿನ ನಗರರಾಜ್ಯಗಳು ಪ್ರತ್ಯೇಕತೆಯನ್ನು ಕಾಪಾಡಿಕೊಂಡಿದ್ದರೂ ಸಾಂಸ್ಕೃತಿಕವಾಗಿ ಒಂದಾಗಿದ್ದವು. ಗ್ರೀಸಿನ ನಗರ ರಾಜ್ಯಗಳಲ್ಲಿ ಅಥೆನ್ಸ್ ಮತ್ತು ಸ್ಪಾರ್ಟಾ ಅತ್ಯಂತ ಪ್ರಮುಖವಾದುವು.

**ರಾಜಕೀಯ ಇತಿಹಾಸ:**

**ಅಥೆನ್ಸ್:** ಅಥೆನ್ಸ್ ಗ್ರೀಸ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ ಆದರ್ಶ ನಗರರಾಜ್ಯ. ಅಥೆನ್ಸ್‌ನಲ್ಲಿದ್ದ ರಾಜಪ್ರಭುತ್ವವನ್ನು ತೊಲಗಿಸಿ ಕ್ಲೈಸ್ತನೀಸ್ (Cleisthenes) ಎಂಬಾತನು 2500 ವರ್ಷಗಳ ಹಿಂದೆ ಪ್ರಜಾಪ್ರಭುತ್ವವನ್ನು ನೆಲೆಗೊಳಿಸಿದನು. ನಂತರ ಅಥೆನ್ಸ್‌ನಲ್ಲಿ ಪೆರಿಕ್ಲಿಸ್‌ನ ಕಾಲ ಆರಂಭವಾಯಿತು. ಇವನ ಕಾಲವನ್ನು ಗ್ರೀಸಿನ ಸುವರ್ಣಯುಗವೆಂದೇ ಕರೆಯಲಾಗುತ್ತದೆ. ಏಕೆಂದರೆ ಪೆರಿಕ್ಲಿಸನ ಕಾಲದಲ್ಲಿ ಕಲೆ, ಸಾಹಿತ್ಯ, ವಿಜ್ಞಾನ, ತತ್ವಜ್ಞಾನ ಮುಂತಾದ ಕ್ಷೇತ್ರಗಳು ಅಸಾಧಾರಣ ಪ್ರಗತಿಯನ್ನು ಕಂಡವು. ಆದ್ದರಿಂದ ಅಥೆನ್ಸನ್ನು 'ಹೆಲ್ಲಾಸ್‌ನ ಶಾಲೆ' (School of Hellas) ಎಂದು ಪೆರಿಕ್ಲಿಸ್ ಕರೆದಿದ್ದಾನೆ.

**ಸ್ಪಾರ್ಟಾ:** ಡೋರಿಯನ್ ಪಂಗಡದ ನಗರರಾಜ್ಯವಾದ ಸ್ಪಾರ್ಟಾವು ಗ್ರೀಸಿನ ಸೈನಿಕ ರಾಜ್ಯವಾಗಿತ್ತು. ಪರ್ಶಿಯಾದ ಸಾಮ್ರಾಟನಾದ ಡೇರಿಯಸ್ಸನು ಗ್ರೀಸಿನ ಮೇಲೆ ದಾಳಿ ಮಾಡಿದಾಗ ಅಥೆನ್ಸ್ ಮತ್ತು ಸ್ಪಾರ್ಟಾ ನಗರರಾಜ್ಯಗಳು ಒಗ್ಗೂಡಿ ಪರ್ಶಿಯವನ್ನು ಮ್ಯಾರಾಥಾನ್ ಕದನದಲ್ಲಿ ಮಣಿಸಿದವು. ಮುಂದೆ ಅಥೆನ್ಸ್ ಮತ್ತು ಸ್ಪಾರ್ಟಾಗಳ ನಡುವೆ ಸಂಘರ್ಷ ಏರ್ಪಟ್ಟಿತು. ಅಂತಿಮವಾಗಿ ಅಥೆನ್ಸ್ ಸೋತು ಸ್ಪಾರ್ಟಾದ ಅಧೀನ ರಾಜ್ಯವಾಯಿತು.

©KTBS Not to be republished

## ಗ್ರೀಕರ ಕೊಡುಗೆಗಳು:

ಪ್ರಾಚೀನ ಗ್ರೀಕರು ಜಗತ್ತಿಗೆ ನೀಡಿದ ಕೊಡುಗೆ ಅಪಾರವಾದುದು. 'ಅಥೆನಾ' ಅಥೆನ್ಸ್ ನಗರದ ಅಧಿದೇವತೆ. ಒಲಂಪಿಯಾದಲ್ಲಿ ಜ್ಯೂಸ್ ಎಂಬ ದೇವರ ದೇವಾಲಯವಿದೆ. ಇಲ್ಲಿ ನಡೆಯುತ್ತಿದ್ದ ಪ್ರಾಚೀನ ಒಲಂಪಿಕ್ ಕ್ರೀಡೆಗಳಲ್ಲಿ ಗ್ರೀಕ್‌ನ ಎಲ್ಲ ನಗರರಾಜ್ಯಗಳು ಪಾಲ್ಗೊಳ್ಳುತ್ತಿದ್ದವು. ಇಂದು ಆಧುನಿಕ ಒಲಂಪಿಕ್ ಕ್ರೀಡೆಯಲ್ಲಿ ಜಗತ್ತಿನ ಬಹುತೇಕ ದೇಶಗಳು ಪಾಲ್ಗೊಳ್ಳುತ್ತವೆ. ತತ್ವಶಾಸ್ತ್ರಕ್ಕೆ ಗ್ರೀಕರ ಕೊಡುಗೆ ಅಪಾರವಾಗಿದೆ. ಗ್ರೀಕಿನ ಶ್ರೇಷ್ಠ ತತ್ವಜ್ಞಾನಿ ಸಾಕ್ರಟಿಸ್. ಅವನ ಶಿಷ್ಯ ಪ್ಲೇಟೋ. ಪ್ಲೇಟೋನ ಶಿಷ್ಯ ಅರಿಸ್ಟಾಟಲ್. ಮತ್ತವನ ಶಿಷ್ಯ ಮ್ಯಾಸಿಡೋನಿಯಾದ ರಾಜನಾದ ಅಲೆಕ್ಸಾಂಡರ್ ಮಹಾಶಯ. ಇವರದು ಜಗತ್ತಿನ ಶ್ರೇಷ್ಠ ಗುರುಪರಂಪರೆಯಾಗಿದೆ. ಪ್ಲೇಟೊ 'ಅಕಾಡೆಮಿ' ಎಂಬ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿದನು. ಡೆಮೊಸ್ತೆನಿಸ್ ಗ್ರೀಕಿನ ಅತ್ಯುತ್ತಮ ಭಾಷಣಕಾರನಾಗಿದ್ದನು. ಹೋಮರ್ ಎಂಬ ಕಣ್ಣಿಲ್ಲದ ಕವಿಯು 'ಇಲಿಯಾಡ್' ಮತ್ತು 'ಒಡಿಸ್ಸಿ' ಎಂಬ ಮಹಾಕಾವ್ಯಗಳನ್ನು ರಚಿಸಿದನು. ಇತಿಹಾಸದ ಪಿತಾಮಹ ಹೆರೋಡೊಟಸ್ ಮತ್ತು ಥುಸಿಡೀಡಿಸ್ ಪ್ರಮುಖ ಇತಿಹಾಸಕಾರರು. ಈಸ್ಕಿಲಸ್, ಸೊಪೋಕ್ಲಿಸ್ ಮತ್ತು ಯುರಿಪಿಡಿಸ್ ಪ್ರಮುಖ ನಾಟಕಕಾರರು ಇವರು ಜಗತ್ತಿನ ಸಾಹಿತ್ಯ ಕ್ಷೇತ್ರಕ್ಕೆ ಅಪೂರ್ವ ಕೊಡುಗೆಯನ್ನು ಸಲ್ಲಿಸಿದ್ದಾರೆ.

ಪೆರಿಕ್ಲಿಸನು ಕಟ್ಟಿಸಿದ ಅಥೆನ್ಸ್‌ನ ಪಾರ್ಥೆನಾನ್ ದೇವಾಲಯವು ಗ್ರೀಕರ ಸುಂದರ ವಾಸ್ತುಶಿಲ್ಪಕ್ಕೆ ಉದಾಹರಣೆಯಾಗಿದೆ. ಗ್ರೀಕ್ ಶಿಲ್ಪಿಗಳು ಮಾನವನ ದೇಹ ರಚನೆಯನ್ನು ನೈಜವಾಗಿ ಚಿತ್ರಿಸುತ್ತಿದ್ದರು. ಮೈರಾನ್ ಅಂದಿನ ಪ್ರಮುಖ ಶಿಲ್ಪಿಯಾದರೆ, ಪಾಲಿಗ್ನಾಟಸ್ ಅಂದಿನ ಪ್ರಮುಖ ಚಿತ್ರಕಾರನಾಗಿದ್ದನು. ಥೇಲ್ಸ್, ಪೈಥಾಗರಸ್ ಗಣಿತ ಕ್ಷೇತ್ರದ ದಿಗ್ಗಜರು. 'ವೈದ್ಯಶಾಸ್ತ್ರದ ಪಿತಾಮಹ' ಹಿಪ್ಪಾಕ್ರಿಟಸ್ ಕೂಡ ಗ್ರೀಕ್ ದೇಶದವನು.

> ಗ್ರೀಕರಿಗೂ ಪರ್ಷಿಯನ್ನರಿಗೂ 2500 ವರ್ಷಗಳ ಹಿಂದೆ ನಡೆದ ಮ್ಯಾರಥಾನ್ ಕದನದಲ್ಲಿ ಗ್ರೀಕರು ಜಯಗಳಿಸಿದರು. ಯುದ್ಧಭೂಮಿಯಿಂದ 24 ಮೈಲು ದೂರದಲ್ಲಿದ್ದ ಅಥೆನ್ಸ್‌ಗೆ ಈ ಸಂತೋಷದ ಸುದ್ದಿಯನ್ನು ಮುಟ್ಟಿಸಲು 'ಫಿಲಿಪ್ಪಿಡೆಸ್' (Philippides) ಎಂಬ ಸೈನಿಕ ಓಡಿದ. ಅಂತಿಮವಾಗಿ ವಿಜಯದ ಸುದ್ದಿಯನ್ನು ಅಥೆನ್ಸ್‌ಗೆ ಮುಟ್ಟಿಸಿ ಕುಸಿದು ಬಿದ್ದು ಸತ್ತನು. ಅವನ ಸ್ಮರಣಾರ್ಥ ಒಲಂಪಿಕ್ ಕ್ರೀಡೆಗಳಲ್ಲಿ ಮ್ಯಾರಾಥಾನ್ ಓಟ ಸೇರಿಸಿದರು.

ಗ್ರೀಸಿನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗ್ರೀಸ್‌ನ ಮ್ಯಾಸಿಡೋನಿನ ದೊರೆ ಫಿಲಿಪ್ ನಾಶಪಡಿಸಿದನು. ಅವನ ಮಗನೇ ಅಲೆಕ್ಸಾಂಡರ್. ಅಲೆಕ್ಸಾಂಡರ್ ಮಹಾನ್ ದಿಗ್ವಿಜಯಿ. ಚಿಕ್ಕವಯಸ್ಸಿನಲ್ಲಿಯೇ ಜಗತ್ತನ್ನು ಗೆಲ್ಲಲು ದಂಡಯಾತ್ರೆ ಕೈಗೊಂಡನು. ಪರಿಣಾಮವಾಗಿ ಈಜಿಪ್ಟ್, ಬ್ಯಾಬಿಲೋನ್, ಪರ್ಶಿಯಾಗಳನ್ನು

©KTBS Not to be republished

ಗೆದ್ದು ಭಾರತದವರೆಗೂ ಬಂದನು. ನಂತರ ತನ್ನ ದೇಶಕ್ಕೆ ಹಿಂತಿರುಗುವ ಮಾರ್ಗದಲ್ಲಿ ಮಡಿದನು. ಇವನು ಈಜಿಪ್ಟ್‌ನಲ್ಲಿ ಅಲೆಕ್ಸಾಂಡ್ರಿಯಾ ಎಂಬ ನಗರವನ್ನು ಕಟ್ಟಿಸಿದನು.

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಪ್ರಾಚೀನ ಗ್ರೀಕರಲ್ಲಿದ್ದ ಪಂಗಡಗಳು ಯಾವುವು?
2. ಪ್ರಾಚೀನ ಗ್ರೀಕಿನ ನಗರ ರಾಜ್ಯಗಳು ಯಾವುವು?
3. ಅಥೆನ್ಸ್ ಕುರಿತು ಟಿಪ್ಪಣಿ ಬರೆಯಿರಿ.
4. ಗ್ರೀಸಿನ ಪ್ರಮುಖ ಇತಿಹಾಸಕಾರರು ಯಾರು?
5. ಹೋಮರನ ಕೃತಿಗಳನ್ನು ಹೆಸರಿಸಿ.
6. 'ವೈದ್ಯಶಾಸ್ತ್ರದ ಪಿತಾಮಹ' ಯಾರು?

**II. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| ಅಥೆನ್ಸ್ | ಪಾರ್ಥೆನಾನ್ ದೇವಾಲಯ |
| ಪ್ಲೇಟೋ | ಮ್ಯಾಸಿಡೋನಿಯಾದ ದೊರೆ |
| ಪೆರಿಕ್ಲಿಸ್ | ಗ್ರೀಕ್ ನಾಟಕಕಾರ |
| ಅಲೆಕ್ಸಾಂಡರ್ | ಅಕಾಡೆಮಿ |
| ಈಸ್ಕಿಲಸ್ | ನಗರ ರಾಜ್ಯ |

**ಚಟುವಟಿಕೆ:**

- ಆಧುನಿಕ ಒಲಂಪಿಕ್ ಕುರಿತು ಮಾಹಿತಿ ಸಂಗ್ರಹಿಸಿ.

## ರೋಮನ್ ನಾಗರಿಕತೆ

ಯೂರೋಪಿನ ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರದಲ್ಲಿ ಉದ್ದವಾಗಿ ಚಾಚಿಕೊಂಡಿರುವ ಪರ್ಯಾಯ ದ್ವೀಪವೇ ಇಟಲಿ. ಇಲ್ಲಿ ಲ್ಯಾಟಿನ್ನರು ಎಂಬ ಬುಡಕಟ್ಟು ಸಮುದಾಯ ವಾಸಿಸುತ್ತಿತ್ತು. 2700 ವರ್ಷಗಳ ಹಿಂದೆ ಟೈಬರ್ ನದಿಯ ದಂಡೆಯಲ್ಲಿ ರೋಮ್ ಎಂಬ ಜನವಸತಿ ಪ್ರದೇಶ ಹುಟ್ಟಿಕೊಂಡಿತು. ರೋಮನ್ನರ ಮೂಲ ಪುರುಷರು ರೋಮುಲಸ್ ಮತ್ತು ರೀಮಸ್.

**ರಾಜಕೀಯ ಇತಿಹಾಸ:** ಮುಂದೆ ರೋಮಿನ ರಾಜಕೀಯ ಇತಿಹಾಸದಲ್ಲಿ ಜೂಲಿಯಸ್ ಸಿಸರ್ ಮತ್ತು ಅಗಸ್ಟಸ್ ಸಿಸರ್ ಪ್ರಮುಖರಾದವರು. ಕ್ರಾಸಸ್, ಪಾಂಪೆ ಮತ್ತು ಜೂಲಿಯಸ್

©KTBS Not to be republished

ಅವರುಗಳನ್ನು ಒಳಗೊಂಡ ಮೊದಲ ತ್ರಿಮೂರ್ತಿಗಳ ಆಡಳಿತ (First Triumvirate) ರೋಮಿನಲ್ಲಿ ಆರಂಭವಾಯಿತು. ಈ ಮೂವರು ದಂಡನಾಯಕರಾಗಿ ರೋಮ್ ಸಾಮ್ರಾಜ್ಯದ ವಿವಿಧ ಪ್ರದೇಶಗಳನ್ನು ನೋಡಿಕೊಳ್ಳುತ್ತಿದ್ದರು.

**ಜೂಲಿಯಸ್ ಸಿಸರ್:** ಕ್ರಾಸಸ್‌ನ ಮರಣದ ನಂತರ ಅಧಿಕಾರಕ್ಕಾಗಿ ಪಾಂಪೆ ಮತ್ತು ಜೂಲಿಯಸ್ ನಡುವೆ ಸ್ಪರ್ಧೆ ಏರ್ಪಟ್ಟಿತು. ಅಂತಿಮವಾಗಿ ಪಾಂಪೆಯನ್ನು ಜೂಲಿಯಸ್ ಕೊಂದನು. ನಂತರ ಜೂಲಿಯಸ್‌ನು ಈಜಿಪ್ಟ್ ಗೆದ್ದು ಅಲ್ಲಿನ ರಾಣಿ ಕ್ಲಿಯೋಪಾತ್ರಳ ಪ್ರೀತಿಗಳಿಸಿದನು. ಜೂಲಿಯಸ್ ಸಿಸರ್ ಸರ್ವಾಧಿಕಾರಿಯಾಗುವ ಮೂಲಕ ರೋಮ್‌ನ ಗಣರಾಜ್ಯ ವ್ಯವಸ್ಥೆಯನ್ನು ನಾಶಪಡಿಸಿದನು. ಇದನ್ನು ನೆಪಮಾಡಿಕೊಂಡು ಜೂಲಿಯಸ್ ಸಿಸರನ ವಿರೋಧಿಗಳು ಹತ್ಯೆಗೈದರು. ಜೂಲಿಯಸ್‌ನ ಕಾಲದಲ್ಲಿ ರೋಮಿನ ಕೃಷಿ, ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರಗಳು ಸಾಕಷ್ಟು ಪ್ರಗತಿ ಸಾಧಿಸಿದವು. ಜ್ಯೂಲಿಯನ್ ಕ್ಯಾಲೆಂಡರನ್ನು ಜಾರಿಗೆ ತಂದನು. ಈ ಜೂಲಿಯಸ್‌ನ ಎಲ್ಲಾ ಕಾರ್ಯಗಳನ್ನು ಅಗಸ್ಟಸ್ ಸಿಸರ್ ಮುಂದುವರೆಸಿದನು.

**ಅಗಸ್ಟಸ್ ಸಿಸರ್:** ಅಗಸ್ಟಸ್ ಸಿಸರನ ಮೊದಲ ಹೆಸರು ಆಕ್ಟೇವಿಯಸ್. ಅವನು ಮಾರ್ಕ್ ಆಂಟೋನಿ, ಲೆಪಿಡಸ್ ಜೊತೆಗೆ ಸೇರಿ ಎರಡನೇ ತ್ರಿಮೂರ್ತಿಗಳ ಆಡಳಿತವನ್ನು (Second Triumvirate) ಆರಂಭಿಸಿದನು. ಲೆಪಿಡಸ್ಸನನ್ನು ಓಡಿಸಿ ಆಂಟೋನಿಯ ಜೊತೆಗೆ ರಾಜ್ಯವನ್ನು ಹಂಚಿಕೊಂಡನು. ನಂತರ ಆಂಟೋನಿಯನ್ನೂ ಅಗಸ್ಟಸ್ ಸೋಲಿಸಿದನು. ಅನಂತರ ಅಗಸ್ಟಸ್‌ನು ಎಲ್ಲಾ ಅಧಿಕಾರಗಳನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡು ಆಳ್ವಿಕೆ ನಡೆಸಿದನು. ಅಗಸ್ಟಸ್ ಸಿಸರ್‌ನ ಕಾಲವನ್ನು ರೋಮಿನ ಸುವರ್ಣಯುಗವೆಂದು ಕರೆಯಲಾಗುವುದು. ಯೇಸು ಕ್ರಿಸ್ತ ಕೂಡ ಇವನ ಕಾಲದಲ್ಲಿಯೇ ಬದುಕಿದ್ದನು. ಅಗಸ್ಟಸ್‌ನು ಅನೇಕ ಲೋಕೋಪಯೋಗಿ ಕಾರ್ಯಗಳನ್ನು ಕೈಗೊಂಡನು. ಈ ಕಾಲವನ್ನು ರೋಮಿನ ಶಾಂತಿಯ ಕಾಲ ಎಂದು ಕರೆಯಲಾಗುತ್ತದೆ. ಆದ್ದರಿಂದ ಈ ಅವಧಿಯಲ್ಲಿ ರೋಮ್ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿ ಸಾಧಿಸಿತು.

ಅಗಸ್ಟಸ್ ನಂತರದ ದೊರೆಗಳು ಅಸಮರ್ಥರಾಗಿದ್ದರು. ಮುಂದೆ ಬುಡಕಟ್ಟು ಜನಾಂಗದ ದಾಳಿಗೆ ತುತ್ತಾಗಿ ಪ್ರಾಚೀನ ರೋಮನ್ ಸಾಮ್ರಾಜ್ಯ ಕಣ್ಮರೆಯಾಯಿತು.

**ಕೊಡುಗೆಗಳು:**

ಜಗತ್ತಿನ ಸಾಹಿತ್ಯಕ್ಕೆ ರೋಮನ್ನರ ಕೊಡುಗೆ ಅಪಾರವಾಗಿದೆ. ವರ್ಜಿಲ್ ರೋಮಿನ ಶ್ರೇಷ್ಠ ಕವಿ. 'ಈನಿಯಡ್' ಅವನ ಮಹಾಕಾವ್ಯ. ಒವಿಡ್ ಮತ್ತೊಬ್ಬ ಶ್ರೇಷ್ಠ ಕವಿ. ಇವರಲ್ಲದೆ ಸಿಸಿರೊ, ಪ್ಲೌಟಸ್ ಮೊದಲಾದವರು ಪ್ರಸಿದ್ಧ ಸಾಹಿತಿಗಳು. ಜೂಲಿಯಸ್ ಸಿಸರ್ ಕೂಡ ಒಳ್ಳೆಯ ಇತಿಹಾಸಕಾರನಾಗಿದ್ದನು. ತತ್ವಶಾಸ್ತ್ರ ಕ್ಷೇತ್ರದಲ್ಲಿ ಕ್ಯಾಟೊ ಪ್ರಮುಖನಾದವನು. ಸಿಸೆರೊ, ಸೆನೆಕಾ, ಇತರ ತತ್ವಜ್ಞಾನಿಗಳು. ಇವರು 'ನಿಸರ್ಗದೊಂದಿಗೆ ಹೊಂದಿಕೊಂಡು ಬಾಳಿ' ಎಂದು ಸಾರಿದರು. ರೋಮಿನ ಶ್ರೇಷ್ಠ ವಾಸ್ತುಶಿಲ್ಪಕ್ಕೆ

©KTBS Not to be republished

ಕಲೋಸಿಯಂ ಮತ್ತು ಎಂಪಿಥೇಟರ್ ಉತ್ತಮ ಉದಾಹರಣೆಯಾಗಿವೆ. ಕ್ಯುಪಿಡ್‌ನ ಪ್ರತಿಮೆ, ಅರಾ ಪೆಸಿಸ್ ಶಿಲ್ಪಗಳು ರೋಮಿನ ಶಿಲ್ಪಕಲೆಗೆ ಉದಾಹರಣೆಗಳಾಗಿವೆ. ರೋಮನ್ನರಿಗೆ ವಿಜ್ಞಾನ ಮತ್ತು ಗಣಿತ ಕ್ಷೇತ್ರದಲ್ಲಿ ಆಳವಾದ ಜ್ಞಾನವಿತ್ತು. ಹಿರಿಯ ಪ್ಲಿನಿಯು 'ನ್ಯಾಚುರಲ್ ಹಿಸ್ಟರಿ' ಎಂಬ ವಿಶ್ವಕೋಶವನ್ನೇ ರಚಿಸಿದ್ದನು. ಗ್ಯಾಲನ್ ರೋಮಿನ ಪ್ರಸಿದ್ಧ ತಜ್ಞ ವೈದ್ಯ. ಸ್ಟ್ರಾಬೋ, ಟಾಲೆಮಿ ಅಂದಿನ ಕಾಲದ ಖ್ಯಾತ ಭೂಗೋಳ ತಜ್ಞರಾಗಿದ್ದರು. ರೋಮನ್ನರ ಕಾನೂನುಗಳು ಮುಂದಿನ ಎಲ್ಲಾ ಕಾನೂನುಗಳಿಗೆ ಬುನಾದಿಯಾಗಿದೆ. ಇದು ಕಾನೂನು ಕ್ಷೇತ್ರಕ್ಕೆ ಅವರು ಕೊಟ್ಟ ಅಮೂಲ್ಯವಾದ ಕೊಡುಗೆಯಾಗಿದೆ. ಲ್ಯಾಟಿನ್ ರೋಮನ್ ಸಾಮ್ರಾಜ್ಯದ ಭಾಷೆಯಾಗಿತ್ತು. ಇಂದಿಗೂ ಕಾನೂನು, ವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಲ್ಯಾಟಿನ್ ಭಾಷೆಯ ಶಬ್ದಗಳನ್ನೆ ಬಳಸುವುದುಂಟು.

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ರೋಮನ್ನರ ಮೂಲ ಪುರುಷರು ಯಾರು?
2. ಮೊದಲ ತ್ರಿಮೂರ್ತಿಗಳನ್ನು ಹೆಸರಿಸಿ.
3. ಜೂಲಿಯಸ್ ಸೀಸರ್‌ನ ಕಾಲದಲ್ಲಿ ಪ್ರಗತಿಸಾಧಿಸಿ, ಕ್ಷೇತ್ರಗಳು ಯಾವುವು?
4. ಅಗಸ್ಟಸ್ ಸಿಸರ್ ಕುರಿತು ಟಿಪ್ಪಣಿ ಬರೆಯಿರಿ.
5. ರೋಮ್ ನಾಗರಿಕತೆಯ ಕಾಲದ ಪ್ರಮುಖ ಕವಿಗಳನ್ನು ಹೆಸರಿಸಿ.
6. ರೋಮನ್ ತತ್ವಜ್ಞಾನಿಗಳನ್ನು ಹೆಸರಿಸಿ.
7. ರೋಮನ್ನರ ಕೊಡುಗೆಗಳನ್ನು ಪಟ್ಟಿಮಾಡಿ.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಅಗಸ್ಟಸ್ ಸೀಸರನ ಸಾಧನೆಗಳನ್ನು ತಿಳಿಸಿ.
2. ರೋಮನ್ನರ ಕೊಡುಗೆಗಳನ್ನು ಪಟ್ಟಿ ಮಾಡಿ.

**III. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| ರೋಮ್ | ನ್ಯಾಚುರಲ್ ಹಿಸ್ಟರಿ |
| ಅಗಸ್ಟಸ್ ಸೀಸರ್ | ಟೈಬರ್ ನದಿ |
| ಹಿರಿಯ ಪ್ಲಿನಿ | ರೋಮಿನ ಸುವರ್ಣಯುಗ |
| ಗ್ಯಾಲನ್ | ರೋಮಿನ ವಾಸ್ತುಶಿಲ್ಪ |
| ಕಲೋಸಿಯಂ | ರೋಮಿನ ತಜ್ಞವೈದ್ಯ |

©KTBS Not to be republished

**ಚಟುವಟಿಕೆ.**

- ರೋಮ್ ನಾಗರಿಕತೆಯ ಕಲೆ ಮತ್ತು ವಾಸ್ತುಶಿಲ್ಪದ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಮಾಡಿ.

## ಹರಪ್ಪ ನಾಗರಿಕತೆ

ಒಂದು ಶತಮಾನದ ಹಿಂದಿನವರೆಗೂ ಭಾರತದ ಚರಿತ್ರೆಯನ್ನು ವೇದಗಳ ಕಾಲಗಳಿಂದ ಅಧ್ಯಯನ ಮಾಡಲಾಗುತ್ತಿತ್ತು. ಕೆಲವು ವರ್ಷಗಳ ನಂತರ ದಯಾರಾಂ ಸಾಹ್ನಿ ಮತ್ತು ರಖಲ್‌ದಾಸ್ ಬ್ಯಾನರ್ಜಿ ಅವರು ಇಂದಿನ ಪಾಕಿಸ್ಥಾನದ ಹರಪ್ಪ ಮತ್ತು ಮೊಹೆಂಜೊದಾರೋ ಎಂಬಲ್ಲಿ ಪ್ರಾಚೀನ ನಗರಗಳ ಅವಶೇಷಗಳನ್ನು ಶೋಧಿಸಿದರು. ಈ ಶೋಧವು ಭಾರತದ ಇತಿಹಾಸವನ್ನು ವೇದಗಳಿಗೂ ಸುಮಾರು 2000 ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದಿತು. ಆರಂಭದಲ್ಲಿ ಸಿಂಧೂ ಮತ್ತು ಅದರ ಉಪನದಿಗಳ ಬಯಲಿನಲ್ಲಿ ಇವು ಪತ್ತೆಯಾದ್ದರಿಂದ ಸಿಂಧೂ ಬಯಲಿನ ನಾಗರಿಕತೆ ಎಂದು ಕರೆದರು. ಆದರೆ ಅಂದಿನಿಂದ ಇಂದಿನವರೆಗೂ ನಡೆದಿರುವ ಸಂಶೋಧನೆಗಳಲ್ಲಿ ಸುಮಾರು 1500ಕ್ಕೂ ಹೆಚ್ಚು ನೆಲೆಗಳು ಕಂಡು ಬಂದಿವೆ. ಪರಿಣಾಮವಾಗಿ ಸಿಂಧೂ ನದಿಬಯಲಿನ ಆಚೆಗೂ ಈ ನಾಗರಿಕತೆಯ ನೆಲೆಗಳು ಗುರುತಿಸಲ್ಪಟ್ಟಿವೆ.

> 13 ಲಕ್ಷ ಚದರ ಕಿ.ಮೀ ವ್ಯಾಪ್ತಿಯಲ್ಲಿ ಹರಪ್ಪ ನಾಗರಿಕತೆಯು ಹರಡಿದೆ. ಇದರ ವ್ಯಾಪ್ತಿಯ ಉತ್ತರದ ಕೊನೆಯ ನೆಲೆ ಕಾಶ್ಮೀರದ ಮಾಂಡ, ಪಶ್ಚಿಮದ ಕೊನೆಯ ನೆಲೆ ಬಲುಚಿಸ್ತಾನದ ಸುಕ್ತಜೆಂದಾರ್, ಪೂರ್ವದ ಕೊನೆಯ ನೆಲೆ ಉತ್ತರ ಪ್ರದೇಶದ ಆಲಂಗೀರ್‌ಪುರ್ ಮತ್ತು ದಕ್ಷಿಣದ ನೆಲೆ ಮಹಾರಾಷ್ಟ್ರದ ದೈಮಾಬಾದ್‌ಗಳಾಗಿವೆ. ಆದ್ದರಿಂದ ಇತ್ತೀಚೆಗೆ ಈ ನಾಗರಿಕತೆಯನ್ನು ಸಿಂಧೂ ಬಯಲಿನ ನಾಗರಿಕತೆ ಎನ್ನುವ ಬದಲು; ಮೊದಲ ನೆಲೆಯಾದ ಹರಪ್ಪ ಹೆಸರಿನಿಂದ 'ಹರಪ್ಪ ನಾಗರಿಕತೆ' ಎಂದು ಗುರುತಿಸಲಾಗುತ್ತಿದೆ.

©KTBS Not to be republished




ಹರಪ್ಪ ನಾಗರಿಕತೆಯ ಅನೇಕ ನಗರಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಪಾಕಿಸ್ತಾನದಲ್ಲಿರುವ ಹರಪ್ಪ ಮತ್ತು ಮೊಹೆಂಜೊದಾರೋ, ಭಾರತದಲ್ಲಿರುವ ಕಾಲಿಬಂಗನ್ (ರಾಜಸ್ಥಾನ), ದೋಲಾವೀರಾ, ಲೋಥಾಲ್ (ಗುಜರಾತ್) ಮತ್ತು ರಾಖಿಘರಿ (ಹರ್ಯಾಣ) ಪ್ರಮುಖವಾಗಿವೆ (ಭೂಪಟ ನೋಡಿ).

**ನಗರ ಯೋಜನೆ:** ಹರಪ್ಪ ನಾಗರಿಕತೆಯ ನಗರಗಳು ಯೋಜನಾಬದ್ಧವಾಗಿ ನಿರ್ಮಾಣಗೊಂಡಿದ್ದವು. ಅವುಗಳ ರಕ್ಷಣೆಗಾಗಿ ಕೋಟೆಗಳನ್ನು ಕಟ್ಟಲಾಗಿತ್ತು. ಅಗಲವಾದ ರಸ್ತೆಗಳು, ಸಾರ್ವಜನಿಕ ಬಾವಿಗಳು, ಉಪ್ಪರಿಗೆಯ ಮನೆಗಳು, ಅಚ್ಚುಕಟ್ಟಾದ ಒಳಚರಂಡಿ ವ್ಯವಸ್ಥೆ–ಇವು ಹರಪ್ಪ ನಗರಗಳ ವಿಶೇಷ ಲಕ್ಷಣಗಳು. ಒಳಚರಂಡಿ ವ್ಯವಸ್ಥೆಯಂತೂ ನಮ್ಮ ಪ್ರಾಚೀನರ ಅಪೂರ್ವ ಸಾಧನೆಯಾಗಿದೆ. ಅವರು ಸ್ವಚ್ಛತೆಗೆ ನೀಡಿರುವ ಆದ್ಯತೆಯು ಇಂದಿಗೂ ಮಾದರಿಯಾಗಿದೆ. ಇಲ್ಲಿನ ನಗರ ಯೋಜನೆ ವ್ಯವಸ್ಥೆಯನ್ನು ಜಗತ್ತಿನ ಬೇರೆ ಯಾವ ಪ್ರಾಚೀನ ನಾಗರಿಕತೆಯಲ್ಲೂ ಕಾಣಲಾರೆವು. ಮೊಹೆಂಜೊದಾರೋ ನಗರದಲ್ಲಿ ಸಾರ್ವಜನಿಕ ಸ್ನಾನಗೃಹವಿದೆ. ಅದರ ಸುತ್ತಲೂ ಕೊಠಡಿಗಳಿವೆ. ಹರಪ್ಪ ನಗರದಲ್ಲಿ ಆರು ಕಣಜಗಳಿದ್ದು ಸಮೀಪದಲ್ಲಿ ಕಾರ್ಮಿಕರ ಮನೆಗಳಿವೆ. ಲೋಥಾಲ್ ಅಂದಿನ ಪ್ರಸಿದ್ಧ ಬಂದರಾಗಿತ್ತು.

©KTBS Not to be republished



**ಸಾರ್ವಜನಿಕ ಸ್ನಾನಗೃಹ, ಮೊಹೆಂಜೊದಾರೊ**

**ಆರ್ಥಿಕ ಜೀವನ:** ಹತ್ತಿ ಹಾಗೂ ಉಣ್ಣೆ ಬಟ್ಟೆಯನ್ನು ನೂಲುವುದು ಹರಪ್ಪನ್ನರ ಒಂದು ಕಸುಬು. ಅವರ ಇನ್ನೊಂದು ಕಸಬು ಸುಟ್ಟ ಇಟ್ಟಿಗೆಗಳ ತಯಾರಿ. ಇವರು ಪಶುಪಾಲನೆಯನ್ನು ಮಾಡುತ್ತಿದ್ದರು. ಎತ್ತು, ಕೋಣ, ಆಡು, ಕುರಿ, ಹಂದಿ, ಬೆಕ್ಕು, ನಾಯಿ, ಒಂಟೆ, ಕತ್ತೆಗಳನ್ನು ಸಾಕುತ್ತಿದ್ದರು ಮತ್ತು ಹತ್ತಿ ಬೆಳೆಯುತ್ತಿದ್ದರು. ಜಗತ್ತಿನಲ್ಲಿ ಮೊದಲ ಬಾರಿಗೆ ಹತ್ತಿಯನ್ನು ಬೆಳೆದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ಸಿಂಧೂ ಪ್ರದೇಶದಿಂದ ಉತ್ಪಾದಿಸಲಾಗುತ್ತಿದ್ದ ಕಾರಣ ಹತ್ತಿಯನ್ನು ಗ್ರೀಕ್ ಭಾಷೆಯಲ್ಲಿ 'ಸಿಂಧೂನ್' ಎಂದೇ ಕರೆಯಲಾಗುತ್ತಿತ್ತು. ಹರಪ್ಪನ್ನರು ಮೆಸೊಪೊಟೇಮಿಯಾ ನಾಗರಿಕತೆಯೊಂದಿಗೂ ವ್ಯಾಪಾರ ಸಂಪರ್ಕ ಹೊಂದಿದ್ದರು. ಮೆಸೊಪೊಟೇಮಿಯನ್ನರು ಈ ನಾಗರಿಕತೆಯನ್ನು 'ಮೆಲುಹ' ಎಂದು ಕರೆಯುತ್ತಿದ್ದರು. ಲೋಥಾಲ್ ಬಂದರಿನ ಮೂಲಕ ಅರಬ್ಬಿ ಸಮುದ್ರದ ಮಾರ್ಗದಲ್ಲಿ ವ್ಯಾಪಾರ ನಡೆಸುತ್ತಿದ್ದರು.

© KTBS Not to be republished



ಪಶುಪತಿಯ ಮುದ್ರೆ



ಡುಬ್ಬದ ಗೂಳಿ ಮುದ್ರೆ ಮತ್ತು ಲಿಪಿಗಳು



ಒಂದೇ ಕೊಂಬಿರುವ ಕಾಲ್ಪನಿಕ ಪ್ರಾಣಿಯ ಮುದ್ರೆ



ನರ್ತಕಿಯ ಲೋಹದ ಮೂರ್ತಿ



ಮಾತೃದೇವತೆಯ ಮಣ್ಣಿನ ಮೂರ್ತಿ



ಗಡ್ಡಧಾರಿ ಮನುಷ್ಯನ ಶಿಲಾಮೂರ್ತಿ

**ಸಾಮಾಜಿಕ ಜೀವನ:** ಹರಪ್ಪ ನಾಗರಿಕತೆಯಲ್ಲಿ ಸ್ತ್ರೀ–ಪುರುಷರಿಬ್ಬರೂ ಅಲಂಕಾರ ಪ್ರಿಯರಾಗಿದ್ದರು. ಸ್ತ್ರೀಯರು ಅನೇಕ ವಿಧದ ಕಂಠಿಹಾರ, ಬಳೆ, ಉಂಗುರ ಕಿವಿಯ ಓಲೆ, ಸೊಂಟಪಟ್ಟಿ, ಕಾಲಿನ ಕಡಗಗಳು (ನೂಪುರ) ಮೊದಲಾದ ಆಭರಣಗಳನ್ನು ಧರಿಸುತ್ತಿದ್ದರು. ಕಾಂತಿವರ್ಧಕಗಳನ್ನೂ ಬಳಸುತ್ತಿದ್ದರು. ಸುಗಂಧದ್ರವ್ಯಗಳ ಬಳಕೆಯೂ ಅವರಿಗೆ ತಿಳಿದಿತ್ತು. ಸ್ತ್ರೀಯರಷ್ಟೇ ಪುರುಷರು ಕೂಡ ಅಲಂಕಾರ ಪ್ರಿಯರಾಗಿದ್ದರು.

ಗೋಲಿ, ಚೆಂಡು ಮತ್ತು ಪಗಡೆ ಅವರ ಆಟಗಳಾಗಿದ್ದವು. ಗೂಳಿ ಕಾಳಗ ಜನರ ಮನರಂಜನೆಯ ಕ್ರೀಡೆಯಾಗಿತ್ತು. ಮಕ್ಕಳಿಗಾಗಿ ಆಟಿಕೆಯ ಎತ್ತಿನ ಬಂಡಿಗಳು ಹಾಗೂ ಗೊಂಬೆಗಳಿದ್ದವು.

**ಕಲೆ:** ಅವಶೇಷಗಳ ಪೈಕಿ ಜೇಡಿಮಣ್ಣಿನ ಮಾತೃದೇವತೆಗಳ ಚಿಕ್ಕ ಮೂರ್ತಿಗಳು ಭಾರಿ ಸಂಖ್ಯೆಯಲ್ಲಿ ದೊರಕಿವೆ. ಸುಮಾರು 2,000 ಕ್ಕೂ ಹೆಚ್ಚು ಮುದ್ರೆಗಳು ಕೂಡ ಸಿಕ್ಕಿವೆ. ಅವುಗಳಲ್ಲಿ

© KTBS Not to be republished

ದುಬ್ಬದ ಗೂಳಿ, ಏಕಶೃಂಗಿ ಮುದ್ರೆಗಳು ಪ್ರಮುಖವಾದುವು. ನರ್ತಕಿಯ ಲೋಹದ ಮೂರ್ತಿ ಮತ್ತು ಗಡ್ಡದಾರಿ ಮನುಷ್ಯನ ಶಿಲಾಮೂರ್ತಿಗಳು ಇಲ್ಲಿ ದೊರಕಿದ ಸುಂದರ ಮೂರ್ತಿಶಿಲ್ಪಗಳಾಗಿವೆ.

**ಧರ್ಮ:** ಹರಪ್ಪನ್ನರು ಪಶುಪತಿ (ಶಿವ) ಮತ್ತು ಮಾತೃದೇವತೆಯನ್ನು ಪೂಜಿಸುತ್ತಿದ್ದರು. ಅಶ್ವತ್ಥಮರ, ಸೂರ್ಯ, ಅಗ್ನಿ, ಭೂಮಿ, ಜಲ ಮತ್ತು ನಾಗರ ಹಾವುಗಳನ್ನು ಕೂಡ ಆರಾಧಿಸುತ್ತಿದ್ದರು. ಕಾಲಿಬಂಗನ್ ಮತ್ತು ಲೋಥಾಲ್ ಮುಂತಾದ ನಗರಗಳಲ್ಲಿ ಬೆಂಕಿಯ ಕುಂಡಗಳು ಕಂಡುಬಂದಿವೆ.

**ಲಿಪಿ:** ಹರಪ್ಪ ಜನರು ತಮ್ಮದೇ ಆದ ಲಿಪಿ ಮತ್ತು ಭಾಷೆಯನ್ನು ಬಳಸುತ್ತಿದ್ದರು. ವಿದ್ವಾಂಸರು ಮುದ್ರೆಗಳ ಮೇಲಿರುವ ಬರಹಗಳನ್ನು ಓದಲು ಅನೇಕ ದಶಕಗಳಿಂದ ಶ್ರಮಿಸುತ್ತಾ ಬಂದಿದ್ದಾರೆ. ಆದರೂ ಹರಪ್ಪ ಲಿಪಿಯನ್ನು ಅರ್ಥೈಸುವುದು ಇನ್ನೂ ಸಾಧ್ಯವಾಗಿಲ್ಲ.

**ನಗರಗಳ ಅವನತಿ:** ಕಾಲಕ್ರಮೇಣ ಹರಪ್ಪ ನಾಗರಿಕತೆಯ ನಗರಗಳು ಅವನತಿ ಹೊಂದಲಾರಂಭಿಸಿದವು. ಇದಕ್ಕೆ ಅನೇಕ ಕಾರಣಗಳಿವೆ:

- ಸಿಂಧೂ ಮತ್ತು ಅದರ ಉಪನದಿಗಳಲ್ಲಿ ಆಗಾಗ ಉಂಟಾಗುತ್ತಿದ್ದ ನೆರೆ ಹಾವಳಿಗಳು.
- ಇಟ್ಟಿಗೆಗಳನ್ನು ಸುಡಲು ಮರಮುಟ್ಟುಗಳ ಅತಿಯಾದ ಬಳಕೆಯಿಂದ ಕಾಡುಗಳ ನಾಶ ಮತ್ತು ಇದರ ಪರಿಣಾಮವಾಗಿ ಜನರ ವಲಸೆ.
- ಹೊರಗಿನಿಂದ ಬಂದ ಆರ್ಯರು ಹರಪ್ಪನ್ನರ ಮೇಲೆ ನಡೆಸಿರಬಹುದಾದ ಆಕ್ರಮಣ.
- ಸಾಂಕ್ರಾಮಿಕ ರೋಗದ ಪ್ರಸಾರ.

ಈ ಮೇಲಿನ ಕಾರಣಗಳಿಂದ ಭವ್ಯವಾದ ನಾಗರಿಕತೆಯೊಂದು ಕಣ್ಮರೆಯಾಗಿದ್ದಿರಬಹುದೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಒಟ್ಟಾರೆ, ನಮ್ಮ ಪೂರ್ವಜರ ಅದ್ಭುತ ನಗರ ಯೋಜನೆ ಮತ್ತು ಶುಚಿತ್ವದ ಕಾಳಜಿ ಇಂದಿಗೂ ಮಾದರಿಯಾಗಿದೆ.

**ಹೊಸ ಪದಗಳು:**

ನಾಗರಿಕತೆ – ನಗರ ಜೀವನ, ವಾಣಿಜ್ಯದ ಬೆಳವಣಿಗೆ, ಬರವಣಿಗೆಯ ಕಲೆ, ಲೋಹಗಳ ಬಳಕೆ ಇವೆಲ್ಲವೂ ನಾಗರಿಕತೆಯನ್ನು ಸೂಚಿಸುತ್ತದೆ.

ನೆಲೆಗಳು – ಪ್ರಾಚೀನ ಕಾಲದ ವಾಸಸ್ಥಳಗಳು,

ದುಬ್ಬ– ಗೂಳಿ ಮೊದಲಾದವುಗಳ ಹಿಣಿಲು.

**ನಿಮಗೆ ತಿಳಿದಿರಲಿ:**

1. ಈಸ್ಟ್ ಇಂಡಿಯಾ ಕಂಪನಿಯ ಸೇನೆಯಲ್ಲಿದ್ದ ಚಾರ್ಲ್ಸ್ ಮ್ಯಾಸನ್ (Charles masson) ಮೊದಲ ಬಾರಿಗೆ 1826 ರಲ್ಲಿ ಹರಪ್ಪ ನೆಲೆಗೆ ಭೇಟಿ ನೀಡಿದನು. ಆತ ಅದನ್ನು ಮ್ಯಾಸಿಡೋನಿಯಾದ ರಾಜ ಅಲೆಕ್ಸಾಂಡರನು ಪುರೂರವನನ್ನು 2300 ವರ್ಷಗಳ ಹಿಂದೆ ಸೋಲಿಸಿದ ಸ್ಥಳ ಎಂದು ಭಾವಿಸಿದ್ದನು. ಮ್ಯಾಸನ್ ಹರಪ್ಪ ನೆಲೆಯನ್ನು ಗುರುತಿಸಿದ ಮೊದಲಿಗನಾದರೂ ತಪ್ಪಾದ ನಿರ್ಣಯ ಮಾಡಿದ್ದನು.

©KTBS Not to be republished

2. ಹರಪ್ಪ ನಾಗರಿಕತೆಯ ಜನರು ಬಳಸುತ್ತಿದ್ದ ಚಿನ್ನವು ಕೋಲಾರದ ಚಿನ್ನದ ಗಣಿಯಿಂದ ಪೂರೈಕೆಯಾಗುತ್ತಿತ್ತು.

**I. ಖಾಲಿ ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಲೋಥಾಲ್ ಹರಪ್ಪ ನಾಗರಿಕತೆಯ ಪ್ರಸಿದ್ಧ __________ ಆಗಿತ್ತು.
2. ಮೆಸೊಪೊಟೇಮಿಯನ್ನರು ಹರಪ್ಪ ನಾಗರಿಕತೆಯನ್ನು ______ಎಂದು ಕರೆಯುತ್ತಿದ್ದರು.
3. ಹರಪ್ಪನ್ನರು __________ ದೇವತೆಯನ್ನು ಪೂಜಿಸುತ್ತಿದ್ದರು.

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಹರಪ್ಪ ನಾಗರಿಕತೆಯ ಎರಡು ಮುಖ್ಯ ನಗರಗಳು ಯಾವುವು?
2. ಜಗತ್ತಿನಲ್ಲಿ ಹತ್ತಿಯನ್ನು ಬೆಳೆದ ಮೊದಲ ದೇಶ ಯಾವುದು?
3. ಹರಪ್ಪ ನಾಗರಿಕತೆಯ ಜನರು ಯಾವ ದೇವರುಗಳನ್ನು ಪೂಜಿಸುತ್ತಿದ್ದರು?
4. ಹರಪ್ಪ ನಾಗರಿಕತೆಯ ಸಾರ್ವಜನಿಕ ಸ್ನಾನಗೃಹ ಎಲ್ಲಿ ಕಂಡು ಬಂದಿದೆ?
5. ಹರಪ್ಪ ನಾಗರಿಕತೆಯ ಹಡಗುಕಟ್ಟೆ ಕಂಡುಬಂದ ಸ್ಥಳವನ್ನು ಹೆಸರಿಸಿ.
6. ಹರಪ್ಪ ನಾಗರಿಕತೆಯ ನಗರಗಳು ಅವನತಿ ಹೊಂದಲು ಯಾವುದಾದರೂ ಎರಡು ಕಾರಣಗಳನ್ನು ಬರೆಯಿರಿ.

**III. ಕೆಳಗಿನ ಪ್ರಶ್ನೆಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಹರಪ್ಪ ನಾಗರಿಕತೆಯು ಅವನತಿ ಹೊಂದಲು ಕಾರಣಗಳೇನು?
2. ಹರಪ್ಪ ನಾಗರಿಕತೆ ಮತ್ತು ನಿಮ್ಮ ಊರಿನ / ನಗರದ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಜೀವನದಲ್ಲಿ ಕಾಣುವ ಸಮಾನ ಅಂಶಗಳನ್ನು ಚರ್ಚಿಸಿ.

**ಚಟುವಟಿಕೆ**

- ಹರಪ್ಪ ನಾಗರಿಕತೆಯ ನಗರಗಳಿಗೂ ಮತ್ತು ಇಂದಿನ ನಗರಗಳಿಗೂ ಇರುವ ಹೋಲಿಕೆಗಳನ್ನು ಪಟ್ಟಿ ಮಾಡಿ.
- ಜಗತ್ತಿನ ಪ್ರಾಚೀನ ನಾಗರಿಕತೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.

*****

©KTBS Not to be republished

| ಪಾಠ 5 | ವೇದಕಾಲದ ಸಂಸ್ಕೃತಿ |
|---|---|

**ಪಾಠದ ಪರಿಚಯ**

ಈ ಪಾಠದಲ್ಲಿ ವೇದಗಳನ್ನು ಪರಿಚಯಿಸಲಾಗಿದೆ. ಪೂರ್ವ ವೇದಕಾಲದ ಮತ್ತು ಉತ್ತರ ವೇದಕಾಲದ ಸಮಾಜ, ಆರ್ಥಿಕತೆ, ರಾಜಕೀಯ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿನ ವ್ಯತ್ಯಾಸಗಳನ್ನು ತಿಳಿಸಲಾಗಿದೆ.

**ಸಾಮರ್ಥ್ಯಗಳು**

1] ನಾಲ್ಕು ವೇದಗಳ ಹೆಸರುಗಳನ್ನು ತಿಳಿಯುವುದು.

2] ಪೂರ್ವ ವೇದಕಾಲ ಮತ್ತು ಉತ್ತರ ವೇದಗಳ ಕಾಲದ ಸಮಾಜದಲ್ಲಿ ಉಂಟಾದ ಬದಲಾವಣೆಗಳನ್ನು ಗುರುತಿಸುವುದು.

3] ವೇದಗಳ ಕಾಲದ ರಾಜಕೀಯ ಸಂಸ್ಥೆಗಳನ್ನು ಅರಿಯುವುದು.

4] ವೇದಗಳೊಳಗಿನ ಸಂದೇಶಗಳನ್ನು ಅರ್ಥಮಾಡಿಕೊಳ್ಳುವುದು.

5] ಭಾರತೀಯ ಮಹಾಕಾವ್ಯಗಳನ್ನು ಹೆಸರಿಸುವುದು.

ಮಧ್ಯ ಏಷ್ಯಾ ಮೂಲದ ಆರ್ಯ ಜನಾಂಗದ ಆಗಮನದೊಂದಿಗೆ ಭಾರತದಲ್ಲಿ ಹೊಸ ಸಂಸ್ಕೃತಿಯೊಂದು ಆರಂಭವಾಯಿತು. ಅದನ್ನು ವೇದಕಾಲದ ಸಂಸ್ಕೃತಿ ಎಂದು ಕರೆಯಲಾಗಿದೆ. ವೇದಗಳ ಸಂಸ್ಕೃತಿಯು ಮೊದಲು ಸರಸ್ವತಿ ನದಿ ಬಯಲಿನಲ್ಲಿ, ನಂತರ ಗಂಗಾ ನದಿ ಬಯಲಿನಲ್ಲಿ ತಲೆ ಎತ್ತಿತು. ವೇದಸಾಹಿತ್ಯ ರೂಪುಗೊಂಡ ಕಾಲವನ್ನು 'ವೇದಕಾಲ'ವೆಂದು ಕರೆಯುತ್ತಾರೆ.

'ವೇದ' ಎಂದರೆ ಜ್ಞಾನ. ವೇದಗಳು ನಾಲ್ಕು – ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ. ಇವುಗಳಲ್ಲಿ ಋಗ್ವೇದವು ಪ್ರಾಚೀನವಾದದ್ದು. ಸಂಸ್ಕೃತ ಭಾಷೆಯಲ್ಲಿರುವ ಈ ವೇದಗಳು ಸಾವಿರಾರು ವರ್ಷಗಳ ಕಾಲ ಮೌಖಿಕವಾಗಿಯೇ ಇದ್ದವು. ಋಗ್ವೇದದಲ್ಲಿ ಹೆಚ್ಚು ಬಾರಿ ಉಲ್ಲೇಖಗೊಂಡಿರುವ ನದಿ–ಸರಸ್ವತಿ. ಪ್ರಸ್ತುತ ರಾಜಸ್ಥಾನದ ಥಾರ್ ಮರುಭೂಮಿಯಲ್ಲಿ ಕಣ್ಮರೆಯಾಗಿರುವ 'ಘಗ್ಗರ್ – ಆಕ್ರಾ' ನದಿಯೇ ಪ್ರಾಚೀನ ಸರಸ್ವತಿ ನದಿ ಎಂದು ನಂಬಲಾಗಿದೆ. ಆದರೂ, ಆಫ್ಘಾನಿಸ್ತಾನದಲ್ಲಿ ಹರಿಯುವ ಹೇಲ್ಮಂಡ್ (Helmand) ನದಿಯೇ ಪ್ರಾಚೀನ ಸರಸ್ವತಿ ನದಿ ಎಂಬ ಅಭಿಪ್ರಾಯವೂ ಇದೆ.

ಆರ್ಯರ ಕಾಲದಲ್ಲಿ ನಾಲ್ಕು ವೇದಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಸಾಹಿತ್ಯ ರಚನೆಯಾಯಿತು. ವೇದಕಾಲದ ಇತಿಹಾಸವನ್ನು ತಿಳಿಯಲು ವೈದಿಕ ಸಾಹಿತ್ಯವೇ ಆಧಾರ. ಋಗ್ವೇದದ ಕಾಲವನ್ನು 'ಪೂರ್ವ ವೇದಕಾಲ'ವೆಂದೂ, ಅನಂತರದ ವೇದಗಳ ಕಾಲವನ್ನು 'ಉತ್ತರ ವೇದಕಾಲ'ವೆಂದೂ ಕರೆಯಲಾಗುವುದು.

©KTBS Not to be republished

## ಪೂರ್ವ ವೇದಕಾಲ

**ಸಾಮಾಜಿಕ ಜೀವನ:** ಪೂರ್ವ ವೇದಕಾಲದಲ್ಲಿ ಕುಟುಂಬವು ಸಮಾಜದ ಮೂಲ ಘಟಕವಾಗಿತ್ತು. ತಂದೆಯು ಕುಟುಂಬದ ಮುಖ್ಯಸ್ಥನಾಗಿದ್ದನು. ಅವಿಭಕ್ತ ಕುಟುಂಬ ವ್ಯವಸ್ಥೆ ಸಮಾಜದಲ್ಲಿ ರೂಢಿಯಲ್ಲಿತ್ತು. ಯುದ್ಧದಲ್ಲಿ ತಾವು ಗೆದ್ದ ದಾಸ, ದಸ್ಯುಗಳನ್ನು ಗುಲಾಮರಂತೆ ನೋಡುತ್ತಿದ್ದರು. ಆರ್ಯರಿಗೆ ಸೋಮ ಮತ್ತು ಸುರ ಎಂಬ ಪಾನೀಯಗಳ ಪರಿಚಯವಿತ್ತು.

**ಸ್ತ್ರೀಯರ ಸ್ಥಾನಮಾನ:** ಮಹಿಳೆಯರಿಗೆ ಸಮಾಜದಲ್ಲಿ ಸೂಕ್ತ ಸ್ಥಾನಮಾನಗಳಿದ್ದವು. ಇವರು ರಾಜಕೀಯ ಸಂಸ್ಥೆಗಳಲ್ಲಿಯೂ ಭಾಗವಹಿಸುತ್ತಿದ್ದರು. ವಿಧವಾ ವಿವಾಹ ಆಚರಣೆಯಲ್ಲಿತ್ತು. ಹೆಣ್ಣು ಮಕ್ಕಳು ಸಹ ವೇದಾಧ್ಯಯನ ಮಾಡುತ್ತಿದ್ದರು. ಘೋಷಾ, ಅಪಾಲಾ, ಲೋಪಮುದ್ರ, ಇಂದ್ರಾಣಿ, ವಿಶ್ವವರಾ ಮುಂತಾದವರು ವೇದಕಾಲದ ಮಹಿಳಾ ವಿದ್ವನ್ಮಣಿಗಳಾಗಿದ್ದರು. ರಾಜಕೀಯ ಸಂಸ್ಥೆಗಳಾದ ಸಭಾ ಮತ್ತು ಸಮಿತಿಗಳಲ್ಲಿ ಮಹಿಳೆಯರೂ ಭಾಗವಹಿಸುತ್ತಿದ್ದರು. ಬಾಲ್ಯವಿವಾಹವಾಗಲಿ, ಸಹಗಮನ ಪದ್ಧತಿಯಾಗಲಿ ಈ ಕಾಲದಲ್ಲಿರಲಿಲ್ಲ.

**ಆರ್ಥಿಕ ಜೀವನ:** ಪಶುಪಾಲನೆ ಮತ್ತು ಬೇಸಾಯವು ಆರ್ಯರ ಮುಖ್ಯ ಉದ್ಯೋಗವಾಗಿತ್ತು. ಹಲವು ಬಗೆಯ ಧಾನ್ಯಗಳನ್ನು ಅವರು ಬೆಳೆಯುತ್ತಿದ್ದರು. ಬಾರ್ಲಿ, ಅಕ್ಕಿ, ಮೀನು, ಮಾಂಸಗಳನ್ನು ಬಳಸುತ್ತಿದ್ದರು. ಕಬ್ಬಿಣ ಮುಂತಾದ ಲೋಹಗಳ ಉಪಯೋಗವನ್ನು ಅರಿತಿದ್ದರು. ಹತ್ತಿ ಮತ್ತು ಉಣ್ಣೆ ನೇಯುವವರು, ಬಡಗಿಗಳು, ಕಮ್ಮಾರರು ಮತ್ತು ಕುಂಬಾರರು ಇದ್ದರು. ವೃತ್ತಿಗಳಲ್ಲಿ ಕೃಷಿ, ವೈದ್ಯಕೀಯ ಮತ್ತು ಪುರೋಹಿತ ವೃತ್ತಿಗಳು ಮುಖ್ಯವಾಗಿದ್ದವು. ಆದರೆ ಯಾರೇ ಆಗಲಿ ಯಾವ ವೃತ್ತಿಯನ್ನಾದರೂ ಮಾಡಬಹುದಿತ್ತು. ಹಸುಗಳನ್ನು ಸಂಪತ್ತು ಎಂದು ಪರಿಗಣಿಸುತ್ತಿದ್ದರು. ಅವುಗಳಿಗಾಗಿ ಯುದ್ಧಗಳು ನಡೆಯುತ್ತಿದ್ದವು.

**ರಾಜಕೀಯ ಜೀವನ:** ಆರ್ಯರ ಬಣದ ಮುಖ್ಯಸ್ಥನನ್ನು 'ರಾಜನ್' ಎಂದು ಕರೆಯುತ್ತಿದ್ದರು. ರಾಜನ್ ಸರ್ವಾಧಿಕಾರಿಯಾಗಿರಲಿಲ್ಲ ಮತ್ತು ರಾಜತ್ವವು ವಂಶಪಾರಂಪರ್ಯವೂ ಆಗಿರಲಿಲ್ಲ. 'ಸಭಾ', 'ಸಮಿತಿ' ಮತ್ತು 'ವಿಧಾತ'ಗಳೆಂಬ ರಾಜಕೀಯ ಸಂಸ್ಥೆಗಳು ಆಡಳಿತದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದುವು. ರಾಜನು ಹಿರಿಯರ ಸಲಹೆಗಳನ್ನು ಪಡೆದು ತೀರ್ಮಾನಕೊಡುವ ನ್ಯಾಯಾಧೀಶನೂ ಆಗಿದ್ದ. ಯುದ್ಧದಲ್ಲಿ ಹೋರಾಡುವುದು, ಜನರ ಜೀವ, ಸ್ವತ್ತು ಮತ್ತು ಗೋವುಗಳ ರಕ್ಷಣೆ ಹಾಗೂ ಜನಕಲ್ಯಾಣ ರಾಜನ ಕರ್ತವ್ಯಗಳಾಗಿದ್ದವು.

**ಧಾರ್ಮಿಕ ಜೀವನ:** ಆರ್ಯರು ಇಂದ್ರ, ಸೂರ್ಯ, ಸೋಮ, ವರುಣ, ಮಿತ್ರ, ಯಮ, ಅಶ್ವಿನಿ ಮುಂತಾದ ದೇವತೆಗಳನ್ನು ಆರಾಧಿಸುತ್ತಿದ್ದರು. ಆರ್ಯರು ದೇವತಾರಾಧನೆಯನ್ನು ಯಜ್ಞದ ಮೂಲಕ ಮಾಡುತ್ತಿದ್ದರು. "ಸತ್ಯವು ಒಂದೇ ಆಗಿದೆ. ತಿಳಿದವರು ಅದನ್ನು ಹಲವು ರೀತಿಯಲ್ಲಿ ವರ್ಣಿಸುತ್ತಾರೆ. ವಿಶ್ವದ ಎಲ್ಲಾ ಮೂಲೆಗಳಿಂದಲೂ ಉತ್ತಮ ವಿಚಾರಗಳು ನಮ್ಮತ್ತ ಬರಲಿ" – ಇವು ವೇದಗಳೊಳಗಿನ ಸಂದೇಶಗಳಾಗಿವೆ.

©KTBS Not to be republished

## ಉತ್ತರ ವೇದಕಾಲ

ಶತಮಾನಗಳು ಉರುಳಿದಂತೆ ಸಪ್ತಸಿಂಧೂಪ್ರದೇಶದಲ್ಲಿ ಜನಸಂಖ್ಯೆ ಬೆಳೆಯಿತು. ಜೀವನ ಕ್ರಮದಲ್ಲಿ ಬದಲಾವಣೆಗಳಾದವು. ವೇದಕಾಲದ ಜನರು ಹಂತಹಂತವಾಗಿ ಗಂಗಾ, ಯಮುನಾ ನದಿಬಯಲಿಗೆ ವಲಸೆಹೋದರು. ಕೆಲವರು ವಿಂಧ್ಯ ಪರ್ವತ ಶ್ರೇಣಿಗಳನ್ನು ದಾಟಿ ದಕ್ಷಿಣಕ್ಕೆ ಹೋದರು.

**ರಾಜಕೀಯ ಬದಲಾವಣೆಗಳು:** ಉತ್ತರ ವೇದಗಳ ಕಾಲದಲ್ಲಿ ರಾಜನು ಬಲಿಷ್ಠನಾದನು. ವಿಧಾತ ಸಂಪೂರ್ಣವಾಗಿ ಕಣ್ಮರೆಯಾದರೆ ಸಭಾ ಮತ್ತು ಸಮಿತಿಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡವು. ರಾಜನು ತನ್ನ ರಾಜ್ಯದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲಾರಂಭಿಸಿದನು. ರಾಜತ್ವವು ವಂಶಪಾರಂಪರ್ಯವಾಯಿತು. ರಾಜನು ರಾಜ್ಯ ವಿಸ್ತರಣೆಗಾಗಿ ಅಶ್ವಮೇಧ, ರಾಜಸೂಯ ಮೊದಲಾದ ಯಾಗಗಳನ್ನು ಮಾಡಲಾರಂಭಿಸಿದನು.

**ಸಾಮಾಜಿಕ ಬದಲಾವಣೆಗಳು:** ಉತ್ತರ ವೇದಗಳ ಕಾಲದಲ್ಲಿ ಗೋತ್ರ ಪದ್ಧತಿ ಆರಂಭವಾಯಿತು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಆಶ್ರಮಗಳ (ಚಾತುರಾಶ್ರಮ) ವ್ಯವಸ್ಥೆ ಆರಂಭವಾಯಿತು. ಸ್ತ್ರೀಯರ ಸ್ಥಾನಮಾನದಲ್ಲಿ ಭಾರಿ ಕುಸಿತ ಉಂಟಾಯಿತು. ಸ್ತ್ರೀಯರು ಶಿಕ್ಷಣದಿಂದ ವಂಚಿತರಾದರು. ರಾಜಕೀಯ ಸಂಸ್ಥೆಗಳಿಂದ ದೂರವಾದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣ ವ್ಯವಸ್ಥೆ ಸಮಾಜದಲ್ಲಿ ತಲೆ ಎತ್ತಿತು. ಸತಿಸಹಗಮನ ಪದ್ಧತಿ, ಬಾಲ್ಯ ವಿವಾಹಗಳು ಆರಂಭವಾದವು. ರಾಜಶಾಹಿಯೇ ಮೊದಲಾದ ಉನ್ನತ ವರ್ಗದಲ್ಲಿ ಬಹುಪತ್ನಿತ್ವ ರೂಢಿಯಲ್ಲಿತ್ತು.


ಬ್ರಹ್ಮಚರ್ಯ


ಗೃಹಸ್ಥ


ವಾನಪ್ರಸ್ಥ


ಸನ್ಯಾಸ

**ಧಾರ್ಮಿಕ ಜೀವನ:** ಧಾರ್ಮಿಕ ಆಚರಣೆಗಳು ಸಂಕೀರ್ಣವೂ, ಕಠಿಣವೂ ಆದವು. ಯಾಗಯಜ್ಞಗಳ ಆಚರಣೆ ತೀವ್ರವಾಯಿತು. ಹವಿಸ್ಸಿನ ಹೆಸರಿನಲ್ಲಿ ಹಾಲು, ತುಪ್ಪ, ಧಾನ್ಯಗಳನ್ನು ಬೆಂಕಿಗೆ ಅರ್ಪಿಸುವುದು ಹೆಚ್ಚಾದಂತೆ ಆಹಾರದ ಬಿಕ್ಕಟ್ಟು ಉಲ್ಬಣಿಸಿತು. ಬ್ರಹ್ಮ, ವಿಷ್ಣು ಮತ್ತು ಶಿವ ಪ್ರಭಾವಿ ದೇವರುಗಳಾದರು.ಜೊತೆಗೆ ಲಕ್ಷ್ಮಿ, ಸರಸ್ವತಿ, ಪಾರ್ವತಿ, ಗಣೇಶ, ಸ್ಕಂದ ಮೊದಲಾದ ಪರಿವಾರ ದೇವ – ದೇವತೆಗಳು ಪ್ರಾಮುಖ್ಯತೆಗೆ ಬಂದವು.

**ಮಹಾಕಾವ್ಯಗಳು:** ಭಾರತೀಯರಲ್ಲಿ ಅತ್ಯಂತ ಜನಪ್ರಿಯವಾದ ಎರಡು ಮಹಾಕಾವ್ಯಗಳೆಂದರೆ– ವಾಲ್ಮೀಕಿಯ ರಾಮಾಯಣ ಮತ್ತು ವ್ಯಾಸನ ಮಹಾಭಾರತ. ಈ ಮಹಾಕಾವ್ಯಗಳು ಸಾವಿರಾರು ವರ್ಷಗಳ ಕಾಲ ಭಾರತೀಯ ಜನಜೀವನ, ಸಾಹಿತ್ಯ ಮತ್ತು ಕಲೆಗಳನ್ನು ರೂಪಿಸಿವೆ.

©KTBS Not to be republished

**ಹೊಸ ಪದಗಳು:**

ಸಹಗಮನ – ಮರಣ ಹೊಂದಿದ ಗಂಡನೊಡನೆ ಚಿತೆಯಲ್ಲಿ ಪ್ರಾಣಬಿಡುವುದು.

ಹವಿಸ್ಸು – ಹೋಮದಲ್ಲಿ ದೇವತೆಗಳಿಗೆ ಆಹುತಿಯಾಗಿ ಕೊಡುವ ತುಪ್ಪ, ಹಾಲು, ಧಾನ್ಯ ಮೊದಲಾದುವು.

## I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ನಾಲ್ಕು ವೇದಗಳು ಯಾವುವು?
2. ಋಗ್ವೇದ ಕಾಲದ ದೇವರುಗಳನ್ನು ಹೆಸರಿಸಿ.
3. ನಾಲ್ಕು ವರ್ಣಗಳನ್ನು ಹೆಸರಿಸಿ.
4. ವೇದಕಾಲದ ಇಬ್ಬರು ಶ್ರೇಷ್ಠ ಮಹಿಳಾ ವಿದ್ವನ್ಮಣಿಗಳು ಯಾರು?
5. ಭಾರತದ ಪ್ರಾಚೀನ ಮಹಾಕಾವ್ಯಗಳು ಯಾವುವು? ಇವುಗಳನ್ನು ರಚಿಸಿದವರು ಯಾರು?

## II. ಕೆಳಗಿನ ಪ್ರಶ್ನೆಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

1. ಪೂರ್ವ ವೇದಕಾಲದ ಸಮಾಜಕ್ಕೂ, ಉತ್ತರ ವೇದಕಾಲದ ಸಮಾಜಕ್ಕೂ ಇರುವ ವ್ಯತ್ಯಾಸಗಳೇನು?

## III. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ |
|---|---|
| ಸೋಮ | ಬಣದ ಮುಖ್ಯಸ್ಥ |
| ರಾಜನ್ | ಆರ್ಯರಿಗೆ ಪರಿಚಯವಿದ್ದ ಪಾನೀಯ |
| ಸಭಾ | ಒಂದು ಯಾಗ |
| ಅಶ್ವಮೇಧ | ರಾಮಾಯಣ |
| ವಾಲ್ಮೀಕಿ | ರಾಜಕೀಯ ಸಂಸ್ಥೆ |

**ಚಟುವಟಿಕೆಗಳು**

1. ಮಕ್ಕಳ ಸಚಿತ್ರ ರಾಮಾಯಣ ಮತ್ತು ಮಹಾಭಾರತವನ್ನು ಓದಿರಿ.

*****

©KTBS Not to be republished

| ಪಾಠ 6 | ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮ |
|---|---|

**ಪಾಠದ ಪರಿಚಯ**

ಭಾರತವನ್ನು ಜಾತ್ಯತೀತ ರಾಷ್ಟ್ರವೆಂದು ಏಕೆ ಪರಿಗಣಿಸಲಾಗಿದೆ ಎಂಬ ವಿಚಾರ ನಿಮಗೆ ತಿಳಿದಿದೆಯೆ? ಇಲ್ಲಿ ಅನೇಕ ಮತಾವಲಂಬಿಗಳು ಸೌಹಾರ್ದದಿಂದ ಜೀವಿಸುತ್ತಾರೆ. ಭಾರತದಲ್ಲಿರುವ ಕೆಲವು ಮತಗಳ ವಿಚಾರ ಈಗ ತಿಳಿಯೋಣ.

ಮಧ್ಯಯುಗದಲ್ಲಿ ಯುರೋಪ್ ಮತ್ತು ಏಷ್ಯದಲ್ಲಾದ ಭಾರಿ ಸ್ಥಿತ್ಯಂತರಗಳು ಭಾರತದ ಮೇಲೆ ಪ್ರಭಾವ ಬೀರದಿರಲಿಲ್ಲ. ಮುಖ್ಯವಾಗಿ ಕ್ರೈಸ್ತ ಮತ್ತು ಇಸ್ಲಾಂಮತಗಳ ಉದಯ, ಬೆಳವಣಿಗೆ ಹಾಗೂ ಅವು ಬೀರಿರುವ ಪ್ರಭಾವಗಳನ್ನು ಭಾರತದ ಇತಿಹಾಸದ ಸಂದರ್ಭದಲ್ಲಿ ನಾವು ಗುರುತಿಸತಕ್ಕದ್ದು. ಈ ಪಾಠದಲ್ಲಿ ಯೇಸುಕ್ರಿಸ್ತ ಮತ್ತು ಪ್ರವಾದಿ ಮಹಮ್ಮದರ ಜೀವನ ಹಾಗೂ ಬೋಧನೆಗಳನ್ನು ವಿವರಿಸಲಾಗಿದೆ.

**ಸಾಮರ್ಥ್ಯಗಳು**

1] ಯೇಸುಕ್ರಿಸ್ತ ಮತ್ತು ಪ್ರವಾದಿ ಮಹಮ್ಮದರ ಬೋಧನೆಗಳನ್ನು ಅರ್ಥಮಾಡಿಕೊಳ್ಳುವುದು.

2] ಕ್ರೈಸ್ತ ಮತ್ತು ಮುಸಲ್ಮಾನರ ಪವಿತ್ರ ಸ್ಥಳಗಳು ಮತ್ತಿತರ ಸಂಬಂಧಿತ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.

©KTBS Not to be republished

## ಕ್ರೈಸ್ತಧರ್ಮ

ಇಂದು ಜಗತ್ತಿನಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿರುವ ಧರ್ಮಗಳಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳನ್ನು ಹೆಸರಿಸಬಹುದು. ಅವುಗಳ ಉದಯ, ವಿಕಾಸ ಹಾಗೂ ಅವು ಬೀರಿರುವ ಪ್ರಭಾವಗಳನ್ನು ನಾವೀಗ ತಿಳಿಯೋಣ.

ಕ್ರೈಸ್ತಧರ್ಮವು ಎರಡು ಸಾವಿರ ವರ್ಷಗಳಷ್ಟು ಹಿಂದಿನದು. ಅದರ ಸ್ಥಾಪಕ ಯೇಸುಕ್ರಿಸ್ತ (ಜೀಸಸ್ ಕ್ರೈಸ್ಟ್). 'ಬೈಬಲ್' ಕ್ರೈಸ್ತ ಧರ್ಮೀಯರ ಪವಿತ್ರ ಗ್ರಂಥ. ಬೈಬಲ್‌ನಲ್ಲಿ ಯೇಸುಕ್ರಿಸ್ತನ ಜೀವನದ ವಿವರಗಳು ಹಾಗೂ ಉಪದೇಶಗಳಿವೆ.

> 'ಜೀಸಸ್' ಕನ್ನಡದಲ್ಲಿ 'ಯೇಸು', 'ಕ್ರೈಸ್ಟ್' ಪದದ ಅರ್ಥ 'ರಕ್ಷಕ'.

**ಯೇಸುಕ್ರಿಸ್ತನ ಜೀವನ:** ಯೇಸು ಬೆತ್ಲಹೆಂ ಎಂಬಲ್ಲಿ ಮೇರಿ ಎಂಬಾಕೆಯ ಮಗನಾಗಿ ಜನಿಸಿದನು. ಆತನಿಗೆ ಸುಮಾರು ಮೂವತ್ತು ವರ್ಷವಾದಾಗ ಮನೆಯಿಂದ ಹೊರಟು ಬಡವರು ಮತ್ತು ದೀನರ ಸೇವೆ ಮಾಡತೊಡಗಿದನು. ಕರುಣೆಯೇ ಧರ್ಮದ ಮೂಲವೆಂದು, ಕತೆಗಳ ಮೂಲಕ ಉದಾಹರಣೆ ನೀಡಿ ಉಪದೇಶ ಮಾಡುತ್ತಿದ್ದನು.

ಯೇಸುವಿನ ಅನುಯಾಯಿಗಳು ಹೆಚ್ಚಿದಂತೆ ಅವನ ವಿರೋಧಿಗಳ ಸಂಖ್ಯೆಯೂ ಹೆಚ್ಚಿತು. ಧಾರ್ಮಿಕ ಮುಂದಾಳುಗಳು ಯೇಸುವನ್ನು ವಿರೋಧಿಸಿದರು. ಯೇಸು ರಾಜದ್ರೋಹಿಯೆಂಬ ತಪ್ಪು ಹೊರಿಸಿ, ಅವನನ್ನು ಶಿಲುಬೆಗೆ ಏರಿಸಿದರು. (ಅಪರಾಧಿಗಳಿಗೆ ಆ ಕಾಲದಲ್ಲಿ ನೀಡುತ್ತಿದ್ದ ಮರಣ ದಂಡನೆಯೆಂದರೆ ಶಿಲುಬೆಗೇರಿಸುವುದು).

**ಬೋಧನೆಗಳು:** • ನಾವೆಲ್ಲ ದೇವರ ಮಕ್ಕಳು; ನಾವೆಲ್ಲ ಸಹೋದರರು ಎಂದು ಯೇಸು ಸಾರಿ ಹೇಳಿದನು. • ಪಾಪಗಳನ್ನು ಮಾಡದೆ ಶುದ್ಧ ಜೀವನ ನಡೆಸಬೇಕೆಂದು ಬೋಧಿಸಿದನು. "ನಿಮ್ಮ ನೆರೆಯವನನ್ನು ನಿಮ್ಮಂತೆ ಪ್ರೀತಿಸಿ", "ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸಿ". • ಮಾನವ ಸೇವೆಯೇ ದೇವರ ಸೇವೆ ಎಂದನು.

ಯೇಸು ಕಾಲವಾದ ಅನಂತರ ಅವನ ಬೋಧನೆಗಳನ್ನು ಅವನ ಹನ್ನೆರಡು ಮಂದಿ ಪರಮ ಶಿಷ್ಯರು ಉತ್ಸಾಹದಿಂದ ಪ್ರಚಾರ ಮಾಡಿದರು. ಪರಿಣಾಮವಾಗಿ ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತ ಸಮುದಾಯಗಳು ಅಲ್ಲಲ್ಲಿ ನೆಲೆಗೊಂಡವು. ಇದೇ ವೇಳೆ ಕ್ರೈಸ್ತಧರ್ಮೀಯರು ನಾನಾ ರೀತಿಯಲ್ಲಿ ಹಿಂಸೆಗೆ ಒಳಗಾದರು. ಕಾಲಗತಿಯಲ್ಲಿ ರೋಮನ್ ಸಾಮ್ರಾಜ್ಯವು ಕ್ರೈಸ್ತಧರ್ಮಕ್ಕೆ ಮಾನ್ಯತೆ ನೀಡಿತು.

ನಂತರ ಇಟಲಿಯ ರೋಮ್ ನಗರವು ಕ್ರೈಸ್ತರ ಮುಖ್ಯ ಕೇಂದ್ರವಾಗಿ ಬೆಳೆಯಿತು. ಅಲ್ಲಿನ ಪೋಪ್ ಕ್ರೈಸ್ತರ ಪರಮಗುರುಗಳಾದರು. ಯುರೋಪ್ ಮತ್ತು ಜಗತ್ತಿನ ಇತರ ಭಾಗಗಳಿಗೆ ಕ್ರೈಸ್ತಧರ್ಮ ಪ್ರಚಾರಕರು ತೆರಳಿ ಅಲ್ಲಿ ಕ್ರೈಸ್ತಮತವನ್ನು ಹರಡಿದರು. ಕಾಲಕ್ರಮೇಣ ರೋಮನ್ ಕ್ಯಾಥೊಲಿಕ್ ಚರ್ಚ್ ಒಂದು ಪ್ರಬಲ ಸಂಘಟನೆಯಾಗಿ ಬೆಳೆಯಿತು. ಅದರೊಂದಿಗೆ ಪೋಪ್‌ಗುರುಗಳ ಆರ್ಥಿಕ ಮತ್ತು ರಾಜಕೀಯ ಪ್ರಭಾವ ಹೆಚ್ಚಾಗತೊಡಗಿತು.

**ಚಟುವಟಿಕೆ:** ಶಾಂತಿದೂತ ಏಸುಕ್ರಿಸ್ತರನ್ನು ಶಿಲುಬೆಗೆ ಏರಿಸಿದುದು ಒಂದು ಪಾಪ ಕೃತ್ಯ. ಮಿತ್ರರೊಂದಿಗೆ ಚರ್ಚಿಸಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

## ಇಸ್ಲಾಂಧರ್ಮ

ಮಹಮ್ಮದ್ ಪೈಗಂಬರರು ಇಸ್ಲಾಂಧರ್ಮದ ಸ್ಥಾಪಕರು. ಅವರು ಅರಬ್ ದೇಶದ ಮೆಕ್ಕ ನಗರದಲ್ಲಿ ಜನಿಸಿದರು.

ಪೈಗಂಬರ ಎಂದರೆ ದೇವರ ಸಂದೇಶವನ್ನು ಸಾರುವವರು; ಪ್ರವಾದಿ.

ಇಸ್ಲಾಂಪೂರ್ವದ ಅರಬ್‌ದೇಶದಲ್ಲಿ ಅನೇಕ ಚಿಕ್ಕಪುಟ್ಟ ಪಂಗಡಗಳಿದ್ದವು. ಅವುಗಳಲ್ಲಿ ಒಗ್ಗಟ್ಟಿರಲಿಲ್ಲ. ಮೆಕ್ಕದಲ್ಲಿದ್ದ ಕಾಬಾ ಮಂದಿರವು ದೊಡ್ಡ ಯಾತ್ರಾಕ್ಷೇತ್ರವಾಗಿತ್ತು. ಅಲ್ಲಿ ವಿಗ್ರಹಾರಾಧನೆ ರೂಢಿಯಲ್ಲಿತ್ತು.

©KTBS Not to be republished

**ಪ್ರವಾದಿ ಮಹಮ್ಮದರ ಜೀವನ:** ಮಹಮ್ಮದರ ತಂದೆ ಅಬ್ದುಲ್ಲಾ, ತಾಯಿ ಅಮೀನಾ. ಅವರು ಹುಟ್ಟುವುದಕ್ಕೆ ಮುನ್ನವೇ ತಂದೆಯನ್ನು ಕಳೆದುಕೊಂಡಿದ್ದರು. ಪ್ರಾರಂಭದಲ್ಲಿ ಅವರು ಚಿಕ್ಕಪ್ಪನಿಗೆ ವ್ಯಾಪಾರದಲ್ಲಿ ನೆರವಾಗತೊಡಗಿದರು. ಮುಂದೆ, ಖದೀಜಾ ಎಂಬ ಧನಿಕ ವಿಧವೆಯೊಬ್ಬಳು ಇವರನ್ನು ತನ್ನ ವ್ಯಾಪಾರದ ಪ್ರತಿನಿಧಿಯಾಗಿ ನೇಮಿಸಿಕೊಂಡಳು. ಮುಂದೆ ಮಹಮ್ಮದರ ಸರಳತೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡು ಅವರನ್ನು ಮದುವೆಯಾದಳು.

ತಮ್ಮ 40ನೆಯ ವಯಸ್ಸಿನಿಂದ ಮಹಮ್ಮದರು ಪ್ರಾರ್ಥನೆ ಮತ್ತು ಧ್ಯಾನಗಳಲ್ಲಿ ಮಗ್ನರಾಗಿರುತ್ತಿದ್ದರು. ಕಾಲಸರಿದಂತೆ ದೇವರ ಸಂದೇಶಗಳನ್ನು ಸಾರಲು ಆರಂಭಿಸಿದರು. ಅಂತಹ ದಿವ್ಯ ಸಂದೇಶಗಳನ್ನು ಒಳಗೊಂಡ ಗ್ರಂಥವೇ ಇಸ್ಲಾಮಿನ ಮೂಲಗ್ರಂಥ – **ಕುರಾನ್**. ಇದು ಅರೇಬಿಕ್ ಭಾಷೆಯಲ್ಲಿದೆ.

‘ಇಸ್ಲಾಂ’ ಪದದ ಅರ್ಥ ‘ಶರಣಾಗತಿ’. ‘ಮುಸ್ಲಿಮ್’ ಎಂದರೆ ‘ದೇವರಿಗೆ ಶರಣಾದವರು’.

ಕಾಲಕ್ರಮೇಣ ಪ್ರವಾದಿಯವರ ಅನುಯಾಯಿಗಳ ಸಂಖ್ಯೆ ಹೆಚ್ಚಿತು. ಆ ಕಾಲದ ಧಾರ್ಮಿಕ ಆಚಾರ ವಿಚಾರಗಳನ್ನು ಅವರು ಟೀಕಿಸಿದ್ದುದರಿಂದ ಅವರ ವಿರೋಧಿಗಳ ಸಂಖ್ಯೆ ಸಹ ಬೆಳೆಯಿತು. ಹೀಗಾಗಿ ಅವರು ಮೆಕ್ಕದಿಂದ ಮದೀನಾ ನಗರಕ್ಕೆ ಹೋಗಬೇಕಾಯಿತು. ಪ್ರವಾದಿಯವರು ಮೆಕ್ಕದಿಂದ ಮದೀನಕ್ಕೆ ಹೋದ ವರ್ಷದಿಂದಲೇ ಮುಸಲ್ಮಾನರ ‘ಹಿಜರಿ’ (ಹೆಜಿರ) ಶಕೆ ಆರಂಭವಾದದ್ದು.



**ಕಾಬಾ – ಮುಸಲ್ಮಾನರ ಪವಿತ್ರ ಕ್ಷೇತ್ರ, ಮೆಕ್ಕ**

Not to be republished ©KTBS

ಮದೀನಾದಲ್ಲಿ ಜನರು ಮಹಮ್ಮದರನ್ನು ಸ್ವಾಗತಿಸಿದರು. ಮುಂದೆ ಅವರು ಮೆಕ್ಕವನ್ನು ಗೆದ್ದುಕೊಂಡರು. ತನ್ನ ಶತ್ರುಗಳಿಗೆಲ್ಲ ಕ್ಷಮೆ ನೀಡಿದರು. ಅಲ್ಲಿದ್ದ ವಿಗ್ರಹಗಳನ್ನು ತೆಗೆಯಿಸಿದರು. ಅಲ್ಪಕಾಲದಲ್ಲೇ ಇಡೀ ಅರಬ್ ದೇಶದಲ್ಲಿ ಇಸ್ಲಾಂಧರ್ಮ ಹರಡಿತು.

### ಇಸ್ಲಾಮಿನ ಬೋಧನೆಗಳು

- ಅಲ್ಲಾನ ಹೊರತು ಬೇರೆ ದೇವರಿಲ್ಲ; ಮಹಮ್ಮದ್ ಅವರು ದೇವರ ಪ್ರವಾದಿ. ದೇವರನ್ನು ಯಾವ ಮೂರ್ತಿಯ ರೂಪದಲ್ಲೂ ಪೂಜಿಸಬಾರದು.
- ಪ್ರತಿಯೊಬ್ಬ ಮುಸಲ್ಮಾನನೂ ದೇವರ ಸೇವಕನಾಗಬೇಕು. ಪ್ರಾಮಾಣಿಕನಾಗಿರಬೇಕು. ಎಲ್ಲಾ ಮಾನವರೂ ಸಮಾನರು.

ವ್ಯಾಪಾರಿಗಳು ಮೋಸ ಮಾಡಬಾರದು. ಬಡ್ಡಿ ವ್ಯವಹಾರ ಮಾಡಬಾರದು. ಶಿಶುಹತ್ಯೆ, ಹಂದಿ ಮಾಂಸ ತಿನ್ನುವುದು, ಮತ್ತು ಮದ್ಯಪಾನ ಸಲ್ಲದು

- ಪ್ರತಿಯೊಬ್ಬ ಮುಸಲ್ಮಾನನೂ ದಿನಕ್ಕೆ ಐದು ಬಾರಿ ಕಾಬಾದ ದಿಕ್ಕಿಗೆ ಮುಖ ಮಾಡಿ ಪ್ರಾರ್ಥನೆ (ನಮಾಜ್) ಮಾಡಬೇಕು. ರಮ್‌ಜಾನ್ ತಿಂಗಳಲ್ಲಿ ಹಗಲು ಉಪವಾಸ ಮಾಡಬೇಕು. ಶ್ರೀಮಂತರು ಬಡವರಿಗೆ ಕಡ್ಡಾಯವಾಗಿ ದಾನ (ಜಕಾತ್) ನೀಡಬೇಕು. ಸಾಧ್ಯವಾದಲ್ಲಿ ಜೀವಮಾನದಲ್ಲಿ ಒಂದು ಸಲವಾದರೂ 'ಹಜ್' (ಮೆಕ್ಕ) ಯಾತ್ರೆ ಮಾಡಬೇಕು.

**ಚಟುವಟಿಕೆ:** ಕ್ರಿಶ್ಚಿಯನ್ ಹಾಗೂ ಇಸ್ಲಾಂ ಧರ್ಮಗಳು ಏನು ಬೋಧಿಸುತ್ತವೆ? ಅವುಗಳಲ್ಲಿನ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.

### ನಿಮಗೆ ತಿಳಿದಿರಲಿ

ಬೆತ್ಲಹೆಂ – ಜರೂಸಲಮಿನ ಸಮೀಪದ ಒಂದು ಚಿಕ್ಕ ಪಟ್ಟಣ. ಇದು ಇಂದಿನ ಇಸ್ರೇಲ್‌ನ ಜೂಡಿಯ ಎಂಬ ಪ್ರದೇಶದಲ್ಲಿದೆ. ಯೇಸು ಯೆಹೂದಿ (ಹೀಬ್ರೂ) ಸಂತತಿಯವ.

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ಯೇಸುಕ್ರಿಸ್ತ ಎಲ್ಲಿ ಜನಿಸಿದನು? ಅವನ ತಾಯಿ ಯಾರು?
2. ಕ್ರೈಸ್ತಮತದ ಮೂಲಗ್ರಂಥ ಯಾವುದು?
3. ಯೇಸುಕ್ರಿಸ್ತನ ಮುಖ್ಯ ಬೋಧನೆಗಳು ಯಾವುವು?
4. ಮಹಮ್ಮದ್ ಪೈಗಂಬರ ಎಲ್ಲಿ ಜನಿಸಿದರು? ಇಸ್ಲಾಮಿನ ಮೂಲಗ್ರಂಥ ಯಾವುದು?
5. ಪ್ರವಾದಿ ಮಹಮ್ಮದರ ಮುಖ್ಯ ಬೋಧನೆಗಳು ಯಾವುವು?

© KTBS Not to be republished

## ಚಟುವಟಿಕೆಗಳು

1. ಬೈಬಲಿನ ದೃಷ್ಟಾಂತ ಕಥೆಗಳನ್ನು ಓದಿ.
2. ಯೇಸುಕ್ರಿಸ್ತನ ಜೀವನ ಚರಿತ್ರೆಯನ್ನು ಓದಿ.
3. ಕುರಾನ್ ಪಠಣವನ್ನು ಆಲಿಸಿ.
4. ಪ್ರವಾದಿ ಮಹಮ್ಮದರ ಜೀವನ ಚರಿತ್ರೆಯನ್ನು ಓದಿ.
5. ಭೂಪಟದಲ್ಲಿ ಕ್ರೈಸ್ತ ಮತ್ತು ಇಸ್ಲಾಂಮತಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಿ

*****

©KTBS Not to be republished

| ಪಾಠ 7 | # ಹೊಸ ಧರ್ಮಗಳ ಉದಯ |
|---|---|

**ಪಾಠದ ಪರಿಚಯ**

ಸುಮಾರು 2500 ವರ್ಷಗಳ ಹಿಂದೆ, ವೈದಿಕ ಚಿಂತನೆಗೆ ಭಿನ್ನವಾದ ಹಲವಾರು ಚಿಂತನ ಕ್ರಮಗಳು ಮೂಡಿಬಂದವು. ಗೌತಮ ಬುದ್ಧ ಮತ್ತು ಮಹಾವೀರರು ಹೊಸ ಚಿಂತನ ಕ್ರಮದ ಇಬ್ಬರು ಹರಿಕಾರರು. ಅವರ ಜೀವನ ಮತ್ತು ಬೋಧನೆಗಳನ್ನು ಈ ಹಿನ್ನಲೆಯಲ್ಲಿ ಪ್ರಸ್ತಾಪಿಸಲಾಗಿದೆ. ಜೊತೆಗೆ, ಅವರ ಕಾಲದಲ್ಲಿ ಸಿಂಧೂ-ಗಂಗಾ ನದಿಬಯಲಿನಲ್ಲಿದ್ದ ಹದಿನಾರು ಮಹಾಜನಪದಗಳು (ರಾಜತಂತ್ರ) ಮತ್ತು ಹಲವಾರು ಗಣರಾಜ್ಯಗಳು (ಗಣತಂತ್ರ) ಹೇಗೆ ಕಾರ್ಯನಿರ್ವಹಿಸುತ್ತಿದ್ದವು ಎಂಬುದನ್ನು ವಿವರಿಸಲಾಗಿದೆ.

**ಸಾಮರ್ಥ್ಯಗಳು**

1] ಹೊಸ ಧರ್ಮಗಳ ಉದಯಕ್ಕೆ ಕಾರಣಗಳನ್ನು ಅರಿಯುವುದು.

2] ಗೌತಮ ಬುದ್ಧ ಮತ್ತು ಮಹಾವೀರರ ಜೀವನ ಚರಿತ್ರೆಯನ್ನು ತಿಳಿಯುವುದು.

3] ಗೌತಮ ಬುದ್ಧ ಮತ್ತು ಮಹಾವೀರರ ಉಪದೇಶಗಳನ್ನು ಅರ್ಥೈಸಿಕೊಳ್ಳುವುದು.

4] ಬೌದ್ಧ ಮತ್ತು ಜೈನ ಧರ್ಮಗಳ ತತ್ವಗಳು ಎಷ್ಟರ ಮಟ್ಟಿಗೆ ಇಂದಿಗೂ ಪ್ರಸ್ತುತವಾಗಿವೆ ಎಂದು ಗ್ರಹಿಸುವುದು.

5] 2500 ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದ ಗಣರಾಜ್ಯ ಪರಂಪರೆಯನ್ನು ಮೆಚ್ಚಿಕೊಳ್ಳುವುದು.

## ಹೊಸಧರ್ಮಗಳು ಏಕೆ ಉದಯಿಸಿದುವು?

ಉತ್ತರ ವೇದಗಳ ಕಾಲದಲ್ಲಿ ವೈದಿಕ ಆಚರಣೆಗಳಾದ ಯಾಗ, ಯಜ್ಞಗಳ ಹೆಸರಿನಲ್ಲಿ ಕೃಷಿಗೆ ನೆರವಾಗುತ್ತಿದ್ದ ಪ್ರಾಣಿಗಳನ್ನು ಕೊಲ್ಲಲಾಗುತ್ತಿತ್ತು. ಇದರಿಂದ ಆಹಾರದ ಉತ್ಪಾದನೆಯು ಕುಂಠಿತವಾಯಿತು. ಅಷ್ಟು ಮಾತ್ರವಲ್ಲ ಯಾಗ, ಯಜ್ಞಗಳಲ್ಲಿ ಆಹಾರಧಾನ್ಯ, ಹಾಲು, ತುಪ್ಪಗಳನ್ನು 'ಹವಿಸ್ಸು' ಎಂದು ದಹಿಸಲಾಗುತ್ತಿತ್ತು. ಪರಿಣಾಮವಾಗಿ ಆಹಾರದ ಅಭಾವ ಕೂಡ ಸೃಷ್ಟಿಯಾಯಿತು.

ಇನ್ನೊಂದು ಕಡೆ ವೈದಿಕ ಆಚರಣೆಗಳಾದ ಯಾಗ, ಯಜ್ಞ ಮೊದಲಾದ ಆಚರಣೆಗಳಿಂದ ಮಾತ್ರ ಮುಕ್ತಿ ಸಾಧ್ಯ ಎಂಬ ನಂಬಿಕೆ ಜನರಲ್ಲಿ ಮನೆ ಮಾಡಿತ್ತು. ಈ ದುಬಾರಿ ಆಚರಣೆಗಳು ಜನ ಸಾಮಾನ್ಯರಿಗೆ ಸಾಧ್ಯವಿರಲಿಲ್ಲ. ಈ ಆಚರಣೆಗಳನ್ನು ಸಂಸ್ಕೃತ ಮಂತ್ರಗಳ ಮೂಲಕ ನಡೆಸಲಾಗುತ್ತಿತ್ತು. ಸಂಸ್ಕೃತ ಪುರೋಹಿತ ಭಾಷೆಯಾದ್ದರಿಂದ ಅದು ಜನ ಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ. ಜನ ಸಾಮಾನ್ಯರ ಭಾಷೆಯಲ್ಲಿಯೇ ಸರಳಮಾರ್ಗಗಳ ಮೂಲಕ ಮುಕ್ತಿ ತೋರುವ ಹೊಸ ಧರ್ಮಗಳನ್ನು ಜನರು ಅಪೇಕ್ಷಿಸುತ್ತಿದ್ದರು.

©KTBS Not to be republished

ಮತ್ತೊಂದು ಕಡೆ ಉತ್ತರ ವೇದಗಳ ಕಾಲದಲ್ಲಿ ವರ್ಣ ವ್ಯವಸ್ಥೆಯಿಂದ ಸಾಮಾಜಿಕ ವಿಘಟನೆ ಆರಂಭವಾಯಿತು. ಇದು ಸಮಾಜದಲ್ಲಿ ತಾರತಮ್ಯಕ್ಕೂ ಎಡೆಮಾಡಿತು. ಸಮಾಜದಲ್ಲಿ ಬ್ರಾಹ್ಮಣರೆಂದು ಕರೆಯಲ್ಪಡುತ್ತಿದ್ದ ಪುರೋಹಿತ ವರ್ಗವು ಹಲವು ಸವಲತ್ತುಗಳನ್ನು ಹೊಂದಿತ್ತು. ಇದೇ ಕಾಲದಲ್ಲಿ ಕ್ಷತ್ರಿಯರು ಕೂಡ ಪ್ರಾಬಲ್ಯಕ್ಕೆ ಬರಲಾರಂಭಿಸಿದರು. ಪರಿಣಾಮವಾಗಿ ನಂತರದ ಕಾಲದಲ್ಲಿ ಹಲವು ಗಣರಾಜ್ಯಗಳು ಉದಯಿಸಿದವು. ಈ ಗಣರಾಜ್ಯಗಳ ಕ್ಷತ್ರಿಯರು ಬಹು ಸವಲತ್ತನ್ನು ಹೊಂದಿದ್ದ ಬ್ರಾಹ್ಮಣರಿಗೆ ಪ್ರತಿಯಾಗಿ ಹೊಸ ಧರ್ಮಗಳ ಉದಯಕ್ಕೆ ಕಾರಣರಾದರು.

ಇವೆಲ್ಲವುಗಳ ಪರಿಣಾಮವಾಗಿ 2600 ವರ್ಷಗಳ ಹಿಂದೆ ಗಂಗಾ ಬಯಲಿನಲ್ಲಿ ಸುಮಾರು 62 ಹೊಸಧರ್ಮಗಳು ಉದಯಿಸಿದವು. ಅವುಗಳಲ್ಲಿ ಜೈನಧರ್ಮ ಮತ್ತು ಬೌದ್ಧ ಧರ್ಮಗಳು ಪ್ರಮುಖವಾದವು. ಬೌದ್ಧ ಧರ್ಮದ ಸ್ಥಾಪಕ ಗೌತಮ ಬುದ್ಧ ಹಾಗೂ ಜೈನ ಧರ್ಮದ ಪ್ರಮುಖ ತೀರ್ಥಂಕರ ವರ್ಧಮಾನ ಮಹಾವೀರ. ಈ ಇಬ್ಬರೂ ಕೂಡ ಗಣರಾಜ್ಯಗಳ ಕುಲಗಳಿಗೆ ಸೇರಿದ ಕ್ಷತ್ರಿಯರು.

## ಬೌದ್ಧ ಧರ್ಮ

ಗೌತಮ ಬುದ್ಧ ಸ್ಥಾಪಿಸಿದ ಧರ್ಮವೇ ಬೌದ್ಧಧರ್ಮ. ಇದು ಸುಮಾರು 2500 ವರ್ಷಗಳಷ್ಟು ಹಿಂದೆ ಸ್ಥಾಪನೆಯಾಯಿತು.


ಗೌತಮ ಬುದ್ಧ

**ಬುದ್ಧನ ಜೀವನ:** ಗೌತಮ ಬುದ್ಧನು ನೇಪಾಳದ ಕಪಿಲವಸ್ತು ಸಮೀಪದ 'ಲುಂಬಿನಿ' ಯಲ್ಲಿ ಜನಿಸಿದನು. ಅವನ ಬಾಲ್ಯದ ಹೆಸರು ಸಿದ್ಧಾರ್ಥ. ಅವನ ತಂದೆ ಶುದ್ಧೋದನನು ಶಾಕ್ಯ ಗಣರಾಜ್ಯದ ಮುಖ್ಯಸ್ಥನಾಗಿದ್ದನು. ತಾಯಿ ಮಾಯಾದೇವಿ. ಸಿದ್ಧಾರ್ಥನ ಪತ್ನಿ ಯಶೋಧರಾ; ರಾಹುಲ ಅವರ ಪುತ್ರ.

> ಸಿದ್ಧಾರ್ಥನನ್ನು ಮಗುವಿನಲ್ಲಿಯೇ ನೋಡಿದ 'ಅಸಿತ' ಎಂಬ ಮಹರ್ಷಿಯು ಈ ಮಗು ಲೋಕವನ್ನು ಆಳುವ ರಾಜನಾಗುತ್ತಾನೆ ಇಲ್ಲವೇ ಲೋಕದ ಅಳಲನ್ನು ನಿವಾರಿಸುವ ಸನ್ಯಾಸಿಯಾಗುತ್ತಾನೆ ಎಂದು ಭವಿಷ್ಯ ನುಡಿದನು. ಸನ್ಯಾಸಿಯ ಮಾತುಗಳನ್ನಾಲಿಸಿದ ಶುದ್ಧೋದನನು ತನ್ನ ಮಗ ರಾಜನಾಗಬೇಕೆಂದು ಬಯಸಿ, ಸಿದ್ಧಾರ್ಥನಿಗೆ ದುಃಖ, ವೈರಾಗ್ಯಗಳ ಸಂದರ್ಭಗಳೇ ಬಾರದಂತೆ ಸುಖ ಸಂತೋಷದ ವಾತಾವರಣದಲ್ಲಿ ಬೆಳೆಸಿದನು. ಆದರೂ ಸಿದ್ಧಾರ್ಥನ ಮನಸ್ಸು ಅಶಾಂತವಾಗಿಯೇ ಇತ್ತು – ಬುದ್ಧಗುರುವಿನ ಬಾಲ್ಯದ ಬಗ್ಗೆ ಇರುವ ಒಂದು ಮಾಹಿತಿ.

ಒಮ್ಮೆ ನಗರ ಪ್ರದಕ್ಷಿಣೆಯ ಸಂದರ್ಭದಲ್ಲಿ ಅವನ ಕಣ್ಣಿಗೆ ಆಕಸ್ಮಿಕವಾಗಿ ಓರ್ವ ವೃದ್ಧ, ರೋಗಿ, ಸನ್ಯಾಸಿ ಹಾಗೂ ಶವಯಾತ್ರೆಯ ದೃಶ್ಯಗಳು ಬಿದ್ದವು. ಈ ನಾಲ್ಕು ಸನ್ನಿವೇಶಗಳು ಅವನಲ್ಲಿ ವೈರಾಗ್ಯ ಮೂಡಿಸಿ ದುಃಖದ ಮೂಲವನ್ನು ಕಂಡುಹಿಡಿಯಲು ಪ್ರೇರೇಪಿಸಿದವು – ಇವು ಬುದ್ಧಗುರುವಿನ ಕಥಾನಕದಲ್ಲಿ ಬರುವ ಅಂಶಗಳು.

©KTBS Not to be republished

ಒಂದು ದಿನ ರಾತ್ರಿ ಸಿದ್ಧಾರ್ಥನು ಯಾರಿಗೂ ತಿಳಿಸದೆ ಪರಿವಾರ ಮತ್ತು ಅರಮನೆಯನ್ನು ತೊರೆದು ಕುದುರೆಯನ್ನೇರಿ ಹೊರಟನು. ದುಃಖ ನಿವಾರಣೆಗಾಗಿ ಹಲವು ಗುರುಗಳನ್ನು ಕಂಡು ಮಾರ್ಗದರ್ಶನ ಪಡೆದನು. ಆದರೂ ಅವನಿಗೆ ದುಃಖದ ಮೂಲ ಕುರಿತು ಉತ್ತರ ಸಿಗಲಿಲ್ಲ. ಕೊನೆಗೆ ಬಿಹಾರದ 'ಗಯಾ' ಎಂಬಲ್ಲಿ ಅರಳಿ ಮರವೊಂದರ ಕೆಳಗೆ ಕುಳಿತು ಅನೇಕ ದಿನಗಳ ಕಾಲ ಧ್ಯಾನಸ್ಥನಾದನು. ಕೊನೆಗೆ ಅಲ್ಲಿ ಜ್ಞಾನೋದಯ ಪಡೆದು ಸಿದ್ಧಾರ್ಥನು 'ಬುದ್ಧ'ನಾದನು. ಬುದ್ಧನೆಂದರೆ 'ಜ್ಞಾನಿ', 'ತಿಳಿದವನು' ಎಂದರ್ಥ. ಈ ಸ್ಥಳವು ಬುದ್ಧಗಯಾ ಎಂದೇ ಪ್ರಸಿದ್ಧಿ ಪಡೆಯಿತು.

ಬುದ್ಧನು ಉತ್ತರ ಪ್ರದೇಶದ ವಾರಣಾಸಿಯ ಬಳಿ ಸಾರನಾಥ ಎಂಬಲ್ಲಿ ತನ್ನ ಮೊದಲ ಉಪದೇಶವನ್ನು ಐವರು ಶಿಷ್ಯರಿಗೆ ನೀಡಿದನು. ಈ ಘಟನೆಯನ್ನು 'ಧರ್ಮಚಕ್ರ ಪ್ರವರ್ತನ' ಎಂದು ಕರೆಯುತ್ತಾರೆ. ಅಲ್ಲಿಂದ ಮುಂದೆ ಬಿಹಾರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಲ್ವತ್ತು ವರ್ಷಕಾಲ ಸಂಚರಿಸಿ ಉಪದೇಶ ನೀಡಿದನು. ಬುದ್ಧನ ಕೀರ್ತಿ ಕ್ರಮೇಣ ಹಲವೆಡೆ ಪಸರಿಸಿತು. ರಾಜಮಹಾರಾಜರು ಆತನನ್ನು ಗೌರವಿಸಿದರು. ಕೊನೆಗೆ, ಬುದ್ಧನು ಬಿಹಾರದ ಕುಶೀನಗರ ಎಂಬಲ್ಲಿ ದೇಹತ್ಯಾಗ ಮಾಡಿದನು.

**ಬುದ್ಧನ ಉಪದೇಶಗಳು:** ಶುದ್ಧ ಜೀವನ ಮತ್ತು ಚಿಂತನೆಗಳ ಮೂಲಕ ಜ್ಞಾನವನ್ನು ಗಳಿಸುವುದೇ ಬುದ್ಧನ ಉಪದೇಶಗಳ ಗುರಿಯಾಗಿತ್ತು. ಬುದ್ಧನು ಇದನ್ನು 'ಧಮ್ಮ' ಎಂದು ಕರೆದನು. ಜಗತ್ತು ಅಪಾರ ದುಃಖದಿಂದ ಕೂಡಿದೆ, ಆಸೆಯೇ ದುಃಖದ ಮೂಲ. ಆಸೆಯನ್ನು ಜಯಿಸಿದವರು ನಿರ್ವಾಣ (ಮುಕ್ತಿ) ಹೊಂದುವರು. ದುಃಖದ ನಿವಾರಣೆಗಾಗಿ ಒಳ್ಳೆಯ ನೋಟ, ಒಳ್ಳೆಯ ಸಂಕಲ್ಪ, ಒಳ್ಳೆಯ ಮಾತು, ಒಳ್ಳೆಯ ಕಾರ್ಯ ಮೊದಲಾದ ಎಂಟು ಮಾರ್ಗಗಳನ್ನು ಸೂಚಿಸಿದನು. ಇವನ್ನು ಅಷ್ಟಾಂಗ ಮಾರ್ಗ ಎಂದು ಕರೆಯುವರು.

ಬುದ್ಧನ ಜೀವನದ ನಾಲ್ಕು ಘಟ್ಟಗಳು – ಮಹಾಪರಿತ್ಯಾಗ, ಜ್ಞಾನೋದಯ, ಧರ್ಮಚಕ್ರಪ್ರವರ್ತನಾ ಮತ್ತು ಮಹಾಪರಿನಿರ್ವಾಣ. ಬುದ್ಧನ ಮೂಲ ಬೋಧನೆಗಳೆಂದರೆ 'ನಾಲ್ಕು ಆರ್ಯಸತ್ಯಗಳು' ಮತ್ತು 'ಅಷ್ಟಾಂಗಮಾರ್ಗ' ನಾಲ್ಕು ಆರ್ಯ ಸತ್ಯಗಳು ಯಾವುವೆಂದರೆ – ಜಗತ್ತು ದುಃಖಮಯವಾಗಿದೆ, ಆಸೆಯೇ ದುಃಖದ ಮೂಲ, ಆಸೆಯನ್ನು ಗೆದ್ದು ದುಃಖವನ್ನು ದಾಟಬಹುದು, ದುಃಖವನ್ನು ಕೊನೆಗೊಳಿಸುವ ದಾರಿಯೇ ಅಷ್ಟಾಂಗಮಾರ್ಗ. ಸಿದ್ಧಾರ್ಥನನ್ನು ಗೌತಮ ಬುದ್ಧ, ತಥಾಗತ, ಶಾಕ್ಯಮುನಿ ಎಂದೂ ಕರೆಯಲಾಗಿದೆ.

ಇವಲ್ಲದೆ ತನ್ನ ಅನುಯಾಯಿಗಳಿಗೆ ಹಿಂಸೆ, ಮದ್ಯಪಾನ, ಭ್ರಷ್ಟಾಚಾರ ಮಾಡದಿರಲು, ಸುಳ್ಳು ಹೇಳದಿರಲು ನಿಯಮ ವಿಧಿಸಿದನು. ಹೀಗೆ ಬುದ್ಧನ ಉಪದೇಶಗಳು ಸರಳವೂ, ಜನಪ್ರಿಯವೂ ಆಗಿದ್ದವು. ಏಕೆಂದರೆ ತನ್ನ ಉಪದೇಶವನ್ನು ಜನರ ಭಾಷೆಯಾದ ಪಾಲಿ ಭಾಷೆಯಲ್ಲಿ ಬೋಧಿಸಿದನು. ಅವನ ಉಪದೇಶಗಳನ್ನು ಆತನ ಶಿಷ್ಯರು ಮೂರು ಪಿಟಕಗಳಲ್ಲಿ ಸಂಗ್ರಹಿಸಿದರು. ಅವುಗಳೆಂದರೆ ವಿನಯ ಪಿಟಕ, ಸುತ್ತ ಪಿಟಕ ಮತ್ತು ಅಭಿದಮ್ಮ ಪಿಟಕ. ಬೌದ್ಧರ ಪವಿತ್ರ ಗ್ರಂಥಗಳಾದ ಇವುಗಳನ್ನು ತ್ರಿಪಿಟಕಗಳೆಂದು ಕರೆಯುವರು.

©KTBS Not to be republished

ಸಿದ್ದಾರ್ಥನು ಅರಮನೆಯನ್ನು ತೊರೆಯಲು ನದಿ ವಿವಾದ ಕಾರಣವೆಂಬ ಇನ್ನೊಂದು ಮಾಹಿತಿಯಿದೆ. ಎರಡು ರಾಜ್ಯಗಳ ನಡುವೆ ನದಿ ನೀರಿನ ಹಂಚಿಕೆ ಬಗ್ಗೆ ವಿವಾದವುಂಟಾಗಿ ಸಿದ್ದಾರ್ಥನ ಕಡೆಯವರು ಯುದ್ಧಕ್ಕೆ ಸಿದ್ಧವಾಗುವುದು ಆತನಿಗೆ ಇಷ್ಟವಾಗದೆ ವಿರೋಧಿಸಿ ಆನಂತರ ಅರಮನೆಯನ್ನು ತ್ಯಜಿಸಿದನೆಂದು ಹೇಳಲಾಗುತ್ತಿದೆ. ಇದು ಡಾ. ಅಂಬೇಡ್ಕರ್ ಪುಸ್ತಕದ ಮಾಹಿತಿ.

**ಕಿಸಾಗೋತಮಿ :** ಬುದ್ಧಗುರುವಿಗೆ ಸಂಬಂಧಿಸಿದಂತೆ ಈ ಕತೆಯು ಪ್ರಚಲಿತವಾಗಿದೆ. ಕಿಸಾಗೋತಮಿ ತನ್ನ ಪ್ರೀತಿಯ ಪುಟ್ಟ ಮಗುವನ್ನು ಕಳೆದುಕೊಂಡಿದ್ದಳು. ಅವಳೆಷ್ಟು ದುಃಖಿತಳಾಗಿದ್ದಳೆಂದರೆ ಮಗುವಿನ ಮೃತದೇಹವನ್ನು ಹೊತ್ತುಕೊಂಡು ಬೀದಿ ಬೀದಿಗಳಲ್ಲಿ ಅಲೆದಾಡಿ ತನ್ನ ಮಗುವಿಗೆ ಮರುಜೀವ ನೀಡಿರೆಂದು ರೋಧಿಸುತ್ತಿದ್ದಳು. ಇದನ್ನು ಕಂಡು ಮನಸ್ಸು ಕರಗಿದ ಓರ್ವನು ಅವಳನ್ನು ಬುದ್ಧನೆಡೆಗೆ ಒಯ್ಯುತ್ತಾನೆ. ಬುದ್ಧ ಕಿಸಾಗೋತಮಿಗೆ ಹೀಗೆಂದು ಹೇಳಿದ: "ನಿನ್ನ ಕಂದನಿಗೆ ಮರುಜೀವ ನೀಡುವೆ. ಆದರೆ ಸಾವು ಕಾಣದ ಮನೆಯ ಸಾಸಿವೆಯು ಬೇಕೆನಗೆ"

ಬುದ್ಧನ ವಚನವನ್ನು ಕೇಳಿ ಸಂತಸದಿಂದ ಹಿರಿಹಿಗ್ಗಿದ ಕಿಸಾಗೋತಮಿ ಸಾವು ಕಾಣದ ಮನೆಯನ್ನು ಹುಡುಕುತ್ತಾ ಊರೆಲ್ಲ ಸುತ್ತಾಡಿದಳು. ಎಲ್ಲ ಮನೆಗಳಲ್ಲಿ ಒಬ್ಬರಲ್ಲದಿದ್ದರೆ ಇನ್ನೊಬ್ಬರು – ತಂದೆ, ತಾಯಿ, ತಂಗಿ, ತಮ್ಮ, ಪತಿ, ಪತ್ನಿ, ಮಕ್ಕಳು, ಮಾವ, ಅತ್ತೆ, ಅಜ್ಜ, ಅಜ್ಜಿ ಮರಣವನ್ನಪ್ಪಿದರು.

**– ಕಿಸಾಗೋತಮಿಗೆ ಬುದ್ಧನು ನೀಡಿದ ಸಂದೇಶ ಯಾವುದು?**

ಬುದ್ಧನು ಗ್ರಂಥಗಳನ್ನು ರಚಿಸಲಿಲ್ಲ. ಅವನ ಉಪದೇಶಗಳನ್ನು ಆತನ ಶಿಷ್ಯರು ನೆನಪಿನಲ್ಲಿಟ್ಟು ಅವನ್ನು ತಲೆಮಾರಿನಿಂದ ತಲೆಮಾರಿಗೆ ಉಪದೇಶದ ಮೂಲಕ ಕಾಪಾಡಿಕೊಂಡು ಬಂದರು. ಬುದ್ಧನ ಉಪದೇಶಗಳು ಇರುವ ಪ್ರಾಚೀನ ಗ್ರಂಥವೆಂದರೆ 'ಸುತ್ತ ಪಿಟಕ'. ಇದು ಪಾಲಿ ಭಾಷೆಯಲ್ಲಿದೆ.

## ಜೈನಧರ್ಮ

**ಮಹಾವೀರನ ಜೀವನ:** 24ನೇ ತೀರ್ಥಂಕರನಾದ ಮಹಾವೀರನು ಜೈನ ಧರ್ಮವನ್ನು ಪ್ರಚುರಪಡಿಸಿದನು. ಈತನು ಸುಮಾರು 2500 ವರ್ಷಗಳ ಹಿಂದೆ ವೈಶಾಲಿ ಸಮೀಪದ ಕುಂದ ಗ್ರಾಮದಲ್ಲಿ ಜನಿಸಿದನು. ಆತನ ಹಿಂದಿನ ಹೆಸರು ವರ್ಧಮಾನ. ಆತನ ತಂದೆ ಸಿದ್ಧಾರ್ಥನು ಕುಲವೊಂದರ ಮುಖ್ಯಸ್ಥ. ತಾಯಿ ತ್ರಿಶಲಾದೇವಿ. ವರ್ಧಮಾನನು ದಿವ್ಯಜ್ಞಾನವನ್ನು ಪಡೆಯುವುದಕ್ಕಾಗಿ ಮನೆಯನ್ನು ತೊರೆದನು. ಎಲ್ಲವನ್ನೂ ತ್ಯಜಿಸಿ ಕೆಲಕಾಲ ದಿಗಂಬರ ಮುನಿಯಾಗಿ ಸಂಚರಿಸಿದನು. ಅನಂತರ ಹನ್ನೆರಡು ವರ್ಷಕಾಲ ತಪಸ್ಸನ್ನು ಮಾಡಿ ಕೊನೆಗೆ ದಿವ್ಯಜ್ಞಾನವನ್ನು ಪಡೆದು 'ಜಿನ' ಎನಿಸಿದನು. ಜಿನ ಎಂದರೆ 'ಮೋಹವನ್ನು ಗೆದ್ದವನ್ನು' ಎಂದರ್ಥ.



ಮಹಾವೀರ

©KTBS Not to be republished

ಈತನ ಅನುಯಾಯಿಗಳೇ ಜೈನರು. ಮಹಾವೀರನು ಎಲ್ಲ ವರ್ಗದವರಿಗೂ ಉಪದೇಶ ನೀಡಿದನು. ಬಿಹಾರದ 'ಪಾವಾಪುರಿ' ಎಂಬಲ್ಲಿ ಅವನು ದೇಹತ್ಯಾಗ ಮಾಡಿದನು.

**ಮಹಾವೀರನ ಬೋಧನೆಗಳು:** ವರ್ಧಮಾನ ಮಹಾವೀರನು ಹಿಂಸೆ, ಕಳ್ಳತನ, ಸಂಪತ್ತಿನ ಸಂಗ್ರಹ ಮಾಡದಿರಲು, ಸುಳ್ಳು ಹೇಳದಿರಲು ತನ್ನ ಅನುಯಾಯಿಗಳಿಗೆ ಬೋಧಿಸಿದನು. ಅಲ್ಲದೆ ಬ್ರಹ್ಮಚರ್ಯವನ್ನು ಆಚರಿಸಲು ಕರೆ ನೀಡಿದನು. ಅಹಿಂಸೆಗೆ ಜಗತ್ತಿನ ಮತ್ತಾವ ಧರ್ಮವು ನೀಡದಿರುವ ಮಹತ್ವವನ್ನು ಜೈನ ಧರ್ಮ ನೀಡಿದೆ. ಮಹಾವೀರನ ಬೋಧನೆಯು 23ನೇ ತೀರ್ಥಂಕರನಾದ ಪಾರ್ಶ್ವನಾಥನ ಬೋಧನೆಯ ಮುಂದುವರಿಕೆಯಾಗಿತ್ತು.

ಮುಂದೆ ಜೈನಧರ್ಮದಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪಂಥಗಳು ಹುಟ್ಟಿಕೊಂಡವು. ಬಿಳಿಯ ವಸ್ತ್ರತೊಡುವ ಪಾರ್ಶ್ವನಾಥನ ಅನುಯಾಯಿಗಳು ಶ್ವೇತಾಂಬರರಾದರೆ, ಬಟ್ಟೆಯನ್ನೇ ಧರಿಸದ ಮಹಾವೀರನ ಅನುಯಾಯಿಗಳು ದಿಗಂಬರರೆನಿಸಿದರು. ಕರ್ನಾಟಕದ ಶ್ರವಣಬೆಳಗೊಳ ಜೈನರ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿದೆ.

> ಜೈನಮತದಲ್ಲಿ ಐದು ನೈತಿಕ ತತ್ವಗಳಿವೆ. ಅವು – ಅಹಿಂಸೆ, ಸತ್ಯ, ಆಸ್ತೇಯ (ಕದಿಯದಿರುವುದು), ಅಪರಿಗ್ರಹ (ಅವಶ್ಯಕ್ಕಿಂತಲೂ ಹೆಚ್ಚು ಪದಾರ್ಥಗಳನ್ನು ಸಂಗ್ರಹಿಸದೆ ಇರುವುದು), ಮತ್ತು ಬ್ರಹ್ಮಚರ್ಯ (ಇಂದ್ರಿಯಗಳನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವುದು).

## ಮಹಾ ಜನಪದಗಳು ಮತ್ತು ಗಣರಾಜ್ಯಗಳು

**ಮಹಾಜನಪದಗಳು:** ನಾವೀಗ 2500 ವರ್ಷಗಳಷ್ಟು ಹಿಂದಕ್ಕೆ ಹೋಗೋಣ. ಅದು ಬುದ್ಧನ ಕಾಲ. ಆ ಕಾಲದಲ್ಲಿ ಸಿಂಧೂ–ಗಂಗಾ ನದಿಬಯಲಿನಲ್ಲಿ ಹದಿನಾರು ಚಿಕ್ಕಪುಟ್ಟ ರಾಜ್ಯಗಳಿದ್ದವು. ಬೌದ್ಧರ ಸಾಹಿತ್ಯದಲ್ಲಿ ಇವುಗಳನ್ನು ಮಹಾಜನಪದಗಳು ಎಂದು ಕರೆಯಲಾಗಿದೆ. ಅವುಗಳಲ್ಲಿ ಮಗಧ, ಕೋಸಲ ಮತ್ತು ವತ್ಸ ಎಂಬ ಮಹಾಜನಪದ ಪ್ರಮುಖವಾಗಿದ್ದವು. ಅಲ್ಲಿ ರಾಜರ ಆಳ್ವಿಕೆಯಿತ್ತು.

**ಗಣರಾಜ್ಯಗಳು:** ಇದೇ ಕಾಲದಲ್ಲಿ ಹಲವಾರು ರಾಜ್ಯಗಳಲ್ಲಿ ಜನ ಪ್ರತಿನಿಧಿಗಳ ಆಳ್ವಿಕೆಯಿತ್ತು. ಅವುಗಳನ್ನು 'ಗಣರಾಜ್ಯ' ಗಳೆಂದು ಕರೆಯಲಾಗಿತ್ತು.

ಗಣರಾಜ್ಯಗಳಲ್ಲಿ ಪ್ರಮುಖವಾದುದು ವಜ್ಜಿ (ವೃಜಿ) ಗಣರಾಜ್ಯ. ಅದು ಹಲವಾರು ಗಣರಾಜ್ಯಗಳನ್ನು ಒಳಗೊಂಡಿದ್ದ ಒಕ್ಕೂಟವಾಗಿತ್ತು. ಬಿಹಾರದ ವೈಶಾಲಿ ಪಟ್ಟಣವು ಅದರ ರಾಜಧಾನಿ. ವಜ್ಜಿಯ ಒಕ್ಕೂಟದಲ್ಲಿ ಹಿರಿಯ ಮತ್ತು ಕಿರಿಯ ಸದಸ್ಯರನ್ನು ಒಳಗೊಂಡ ಒಂದು 'ಸಭೆ'ಯು ಆಳ್ವಿಕೆ ನಡೆಸುತ್ತಿತ್ತು. ಸಭಾಸದಸ್ಯರನ್ನು 'ರಾಜಾ' ಎಂದು ಸಂಬೋಧಿಸಲಾಗುತ್ತಿತ್ತು. ಸಭೆಯಲ್ಲಿ ಒಕ್ಕೂಟಕ್ಕೆ ಸಂಬಂಧಪಟ್ಟ ಎಲ್ಲ ಪ್ರಮುಖ ವಿಷಯಗಳು ಚರ್ಚೆಗೆ ಬರುತ್ತಿದ್ದವು.

©KTBS Not to be republished

**ಹೊಸಪದಗಳು**

ವೈರಾಗ್ಯ – ಪ್ರಪಂಚದ ಎಲ್ಲ ಬಗೆಯ ಆಸೆಗಳನ್ನೂ ತ್ಯಜಿಸುವಿಕೆ. ದಿಗಂಬರ – ದಿಕ್ಕುಗಳನ್ನೇ ಬಟ್ಟೆಯಾಗಿ ಹೊಂದಿರುವವ. ನಿರ್ವಾಣ – ಹುಟ್ಟು ಸಾವುಗಳ ಚಕ್ರದಿಂದ ಪಾರಾಗುವುದು.

**ನಿಮಗೆ ತಿಳಿದಿರಲಿ**

1. ಜೈನ ಮತ್ತು ಬೌದ್ಧಧರ್ಮಗಳಿಂದಾಗಿ ಯಾಗಗಳಲ್ಲಿ ಪಶುಬಲಿ ನಿಂತುಹೋಯಿತು. ಜೊತೆಗೆ ಸಸ್ಯಾಹಾರ ಕ್ರಮವು ವ್ಯಾಪಕವಾಗಿ ಹರಡಿತು.
2. ಬೌದ್ಧಧರ್ಮದಲ್ಲಿ ಹೀನಯಾನ ಮತ್ತು ಮಹಾಯಾನ ಎಂಬ ಎರಡು ಪಂಥಗಳಿವೆ.

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಗೌತಮ ಬುದ್ಧನು__________ ಎಂಬಲ್ಲಿ ಜನಿಸಿದನು.
2. ಬುದ್ಧನು ತನ್ನ ಉಪದೇಶವನ್ನು ________ ಭಾಷೆಯಲ್ಲಿ ಬೋಧಿಸಿದನು.
3. 'ಜಿನ' ಎಂದರೆ _________ ವನ್ನು ಗೆದ್ದವನು ಎಂದರ್ಥ.
4. ಜೈನಧರ್ಮದ 23ನೇ ತೀರ್ಥಂಕರ__________
5. ಜೈನಧರ್ಮದಲ್ಲಿ ಬಿಳಿಯ ವಸ್ತ್ರ ಧರಿಸುವವರು_________ ಪಂಥೀಯರು.

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಗೌತಮ ಬುದ್ಧನು ಜನಿಸಿದ ಸ್ಥಳ ಯಾವುದು?
2. ಗೌತಮ ಬುದ್ಧನ ತಂದೆ, ತಾಯಿ ಯಾರು?
3. ಗೌತಮ ಬುದ್ಧನು ತನ್ನ ಮೊದಲ ಉಪದೇಶವನ್ನು ಎಲ್ಲಿ ನೀಡಿದನು?
4. 'ಧರ್ಮಚಕ್ರ ಪ್ರವರ್ತನಾ' ಎಂದರೇನು?
5. ಮಹಾವೀರನು ಯಾವ ಸ್ಥಳದಲ್ಲಿ ಜನಿಸಿದನು?
6. ಮಹಾವೀರನ ತಂದೆ, ತಾಯಿ ಯಾರು?
7. ಮಹಾವೀರನು ಏನೆಂದು ಬೋಧಿಸಿದನು?
8. ಜೈನ ಧರ್ಮದ ಎರಡು ಪಂಥಗಳು ಯಾವುವು?
9. ಪ್ರಾಚೀನ ಭಾರತದಲ್ಲಿ ಪ್ರಮುಖವಾಗಿದ್ದ ಗಣರಾಜ್ಯವನ್ನು ಹೆಸರಿಸಿ.

©KTBS Not to be republished

**III. ಕೆಳಗಿನಪ್ರಶ್ನೆಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಬುದ್ಧನ ಉಪದೇಶಗಳೇನು?

**IV. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| ಗೌತಮ ಬುದ್ಧ | ಗಣರಾಜ್ಯ |
| ಮಹಾವೀರ | ಬೌದ್ಧರ ಪವಿತ್ರಗ್ರಂಥಗಳು |
| ವಜ್ಜಿ | ಜೈನರ ಧಾರ್ಮಿಕ ಕೇಂದ್ರ |
| ಶ್ರವಣಬೆಳಗೊಳ | ಬೌದ್ಧಧರ್ಮದ ಸ್ಥಾಪಕ |
| ತ್ರಿಪಿಟಕ | ಜೈನಧರ್ಮದ ಸ್ಥಾಪಕ |

**ಚಟುವಟಿಕೆಗಳು**

1. ನಿಮ್ಮ ಸುತ್ತಮುತ್ತಲಿರುವ ಜೈನ ಬಸದಿಗಳ ಬಗ್ಗೆ ತಿಳಿಯಿರಿ.
2. ಜೈನ ಬಸದಿಗಳ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.

*****

©KTBS Not to be republished

| ಪಾಠ 8 | ಉತ್ತರ ಭಾರತದ ಪ್ರಮುಖ ರಾಜ ಮನೆತನಗಳು |
|---|---|

**ಪಾಠದ ಪರಿಚಯ**

ಮೌರ್ಯ ಸಾಮ್ರಾಜ್ಯವು ಭಾರತದ ಪ್ರಥಮ ಐತಿಹಾಸಿಕ ಸಾಮ್ರಾಜ್ಯ. ವಿವಿಧ ಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಅಪೂರ್ವವಾದುದ್ದು. ಚಂದ್ರಗುಪ್ತ ಮೌರ್ಯ ಮತ್ತು ಅಶೋಕ ಈ ವಂಶದ ಹೆಸರಾಂತ ಸಾಮ್ರಾಟರು. ಇವರ ಜೀವನ ಮತ್ತು ಸಾಧನೆಗಳನ್ನು ಈ ಪಾಠದಲ್ಲಿ ವಿವರಿಸಲಾಗಿದೆ. ಕುಶಾನ ವಂಶದ ಪ್ರಸಿದ್ಧ ದೊರೆ ಕನಿಷ್ಕನ ಕೊಡುಗೆಗಳನ್ನೂ ಸ್ಮರಿಸಲಾಗಿದೆ. ನಂತರ ಗುಪ್ತರಲ್ಲಿ ಶ್ರೇಷ್ಠ ದೊರೆಯಾದ ಸಮುದ್ರಗುಪ್ತನ ದಿಗ್ವಿಜಯ ಮತ್ತು ಎರಡನೇ ಚಂದ್ರಗುಪ್ತನ ಕಾಲದಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಅದ್ಭುತ ಮುನ್ನಡೆಯನ್ನು ವಿವರಿಸಲಾಗಿದೆ. ಹರ್ಷವರ್ಧನ ಸಂಕಷ್ಟಮಯ ಕಾಲದಲ್ಲಿ ಸಾಮ್ರಾಜ್ಯವನ್ನು ರಕ್ಷಿಸಿದ ಬಗೆ ಮತ್ತು ಬೌದ್ಧಧರ್ಮದ ಏಳಿಗೆಗೆ ಸಲ್ಲಿಸಿದ ಕಾಣಿಕೆಯನ್ನು ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1] ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯ ಹಾಗೂ ಅವನ ಮಾರ್ಗದರ್ಶಕ ಚಾಣಕ್ಯನ ಬಗ್ಗೆ ತಿಳಿಯುವುದು.

2] ಅಶೋಕನ ಜೀವನ ಮತ್ತು ಸಾಧನೆಗಳನ್ನು ಅರಿಯುವುದು.

3] ಮೌರ್ಯರ ಆಡಳಿತ ಪದ್ಧತಿಯನ್ನು ಅರ್ಥೈಸಿಕೊಳ್ಳುವುದು.

4] ಕುಶಾನ ವಂಶದ ಪ್ರಸಿದ್ಧ ದೊರೆ ಕನಿಷ್ಕನ ಸಾಧನೆಗಳನ್ನು ಗುರುತಿಸುವುದು.

5] ಮೌರ್ಯರು, ಕುಶಾನರು, ಗುಪ್ತ ಮತ್ತು ವರ್ಧನರ ಕಾಲದ ಕಲೆ, ಸಾಹಿತ್ಯ, ವಿಜ್ಞಾನ, ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಅರಿಯುವುದು.

6] ಗುಪ್ತವಂಶದ ಶ್ರೇಷ್ಠ ಸಾಮ್ರಾಟರಾದ ಸಮುದ್ರಗುಪ್ತ ಮತ್ತು ಎರಡನೇ ಚಂದ್ರಗುಪ್ತರ ಸಾಧನೆಯನ್ನು ತಿಳಿಯುವುದು.

7] ಗುಪ್ತರ ಕಾಲವನ್ನು ಸುವರ್ಣಯುಗವೆಂದು ಕರೆಯಲು ಕಾರಣವಾದ ಅಂಶಗಳನ್ನು ಅರಿಯುವುದು.

8] ಫಾಹಿಯಾನ್ ಮತ್ತು ಹ್ಯೂಯನ್ ತ್ಸಾಂಗ್ ಕಂಡ ಭಾರತದ ಚಿತ್ರಣವನ್ನು ಸ್ಮರಿಸಿಕೊಳ್ಳುವುದು.

9] ಹರ್ಷವರ್ಧನನ ಸಾಧನೆ ಮತ್ತು ಕೊಡುಗೆಯನ್ನು ಅರಿಯುವುದು.

©KTBS Not to be republished

## ಮೌರ್ಯರು



ರಾಷ್ಟ್ರಧ್ವಜ

ಮಕ್ಕಳೇ, ನಮ್ಮ ರಾಷ್ಟ್ರ ಧ್ವಜದ ನಡುವೆ ಒಂದು ಚಕ್ರವಿದೆ. ಅದರ ಹೆಸರೇನು ಗೊತ್ತೆ? ಅದೇ ಅಶೋಕ ಚಕ್ರ. ಪ್ರಗತಿಯ ಸಂಕೇತವಾಗಿ ನಮ್ಮ ರಾಷ್ಟ್ರಧ್ವಜದಲ್ಲಿ ಅದನ್ನು ಅಳವಡಿಸಲಾಗಿದೆ. ಹಾಗಾದರೆ ಈ ಅಶೋಕ ಯಾರು? ಯಾವ ಮನೆತನಕ್ಕೆ ಸೇರಿದವನು? ಆ ಮನೆತನದ ಇತಿಹಾಸವೇನು? ಅಶೋಕನ ಕೊಡುಗೆಗಳೇನು? ಎಂಬುದನ್ನು ತಿಳಿಯೋಣ.

ಭಾರತದ ಮೊಟ್ಟಮೊದಲ ಸಾಮ್ರಾಜ್ಯ ಮೌರ್ಯ ಸಾಮ್ರಾಜ್ಯ. ಈ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯ.




©KTBS
Not to be republished

# ಚಂದ್ರಗುಪ್ತ ಮೌರ್ಯ

ಚಂದ್ರಗುಪ್ರ ಮೌರ್ಯ ಒಬ್ಬ ಸಾಹಸಿ ಯುವಕ. ತಕ್ಷಶಿಲೆಯ ವಿಷ್ಣುಗುಪ್ತನು ನಂದ ವಂಶದ ರಾಜನಾದ ಧನನಂದನಿಂದ ಅವಮಾನಿತನಾಗಿದ್ದನು. ಚಾಣಾಕ್ಷನೂ, ಕುಟಿಲ ತಂತ್ರಗಳಲ್ಲಿ ನಿಪುಣನೂ ಆದ ವಿಷ್ಣುಗುಪ್ತನಿಗೆ ಚಾಣಕ್ಯ, ಕೌಟಿಲ್ಯ ಎಂಬ ಹೆಸರುಗಳೂ ಇದ್ದವು. ಈತನು ಚಂದ್ರಗುಪ್ತ ಮೌರ್ಯನಿಗೆ ಸೈನಿಕ ಮತ್ತು ಯುದ್ಧ ತರಬೇತಿ ನೀಡಿ ಸೇನೆಯನ್ನು ಸಜ್ಜುಗೊಳಿಸಲು ನೆರವಾದನು. ಈ ವೇಳೆಗೆ ಧನನಂದನು ಪ್ರಜೆಗಳ ವಿಶ್ವಾಸ ಕಳೆದುಕೊಂಡಿದ್ದರಿಂದ ಸುಲಭವಾಗಿ ಅವನನ್ನು ಸಿಂಹಾಸನದಿಂದ ಕೆಳಗಿಳಿಸಲು ಚಂದ್ರಗುಪ್ತ ಮೌರ್ಯನಿಗೆ ಸಾಧ್ಯವಾಯಿತು. ಹೀಗೆ ಚಂದ್ರಗುಪ್ರ ಮೌರ್ಯನು 2300 ವರ್ಷಗಳ ಹಿಂದೆ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿ ಪಾಟಲಿಪುತ್ರ(ಈಗಿನ ಬಿಹಾರದ ರಾಜಧಾನಿ ಪಾಟ್ನ)ವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನು. ನಂತರ ಬೃಹತ್ ಸೇನೆಯನ್ನು ಸಂಘಟಿಸಿ ವಾಯವ್ಯ ಭಾರತದ ಕಡೆಗೆ ನುಗ್ಗಿದನು. ಮ್ಯಾಸಿಡೋನಿಯಾದ ದೊರೆ ಅಲೆಗ್ಸಾಂಡರನು ಈ ಮೊದಲು ಆಕ್ರಮಿಸಿಕೊಂಡಿದ್ದ ಈ ಪ್ರದೇಶಗಳನ್ನು ಅವನ ಪ್ರತಿನಿಧಿ ಸೆಲ್ಯೂಕಸ್ ನೋಡಿಕೊಳ್ಳುತ್ತಿದ್ದನು. ಚಂದ್ರಗುಪ್ತ ಮೌರ್ಯನ ಸೈನ್ಯದ ಎದುರು ಸೋತ ಸೆಲ್ಯೂಕಸ್ ಅವನೊಡನೆ ಒಪ್ಪಂದಕ್ಕೆ ಮುಂದಾದನು. ಆಫ್ಘಾನಿಸ್ತಾನ, ಬಲೂಚಿಸ್ತಾನ ಮತ್ತು ಸಿಂಧ್‌ನ ಪಶ್ಚಿಮ ಪ್ರದೇಶಗಳನ್ನು ಚಂದ್ರಗುಪ್ತ ಮೌರ್ಯನಿಗೆ ನೀಡಿದನಲ್ಲದೆ ತನ್ನ ಮಗಳನ್ನೂ ಕೊಟ್ಟು ಮದುವೆ ಮಾಡಿದನು. ಇದಕ್ಕೆ ಪ್ರತಿಯಾಗಿ ಚಂದ್ರಗುಪ್ತ ಮೌರ್ಯನು 500 ಆನೆಗಳನ್ನು ಸೆಲ್ಯೂಕಸ್‌ನಿಗೆ ಬಳುವಳಿಯಾಗಿ ನೀಡಿದನು. ಸೆಲ್ಯೂಕಸನು ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಮೆಗಸ್ತನೀಸ್ ಎಂಬ ರಾಯಭಾರಿಯನ್ನು ಕಳುಹಿಸಿ ಕೊಟ್ಟನು. ಮೆಗಸ್ತನೀಸ್ 'ಇಂಡಿಕಾ' ಎಂಬ ಕೃತಿಯಲ್ಲಿ ಇಲ್ಲಿನ ತನ್ನ ಅನುಭವಗಳನ್ನು ದಾಖಲಿಸಿದ್ದಾನೆ.

> ವಿಷ್ಣುಗುಪ್ತ ಅಥವಾ ಕೌಟಿಲ್ಯನು ಚಂದ್ರಗುಪ್ತ ಮೌರ್ಯನ ಪ್ರಧಾನಮಂತ್ರಿಯಾಗಿದ್ದನು. ಈತನು ಬರೆದ 'ಅರ್ಥಶಾಸ್ತ್ರ' ಕೃತಿಯು ರಾಜತಂತ್ರಗಳಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ತಿಳಿಸುತ್ತದೆ. ಲೋಕ ಪ್ರಸಿದ್ಧವಾದ ಈ ಕೃತಿಯು ಮೈಸೂರಿನ ಒರಿಯಂಟಲ್ ಗ್ರಂಥಾಲಯದ ಹಸ್ತಪ್ರತಿ ಸಂಗ್ರಹಾಲಯದಲ್ಲಿ ಮೊಟ್ಟಮೊದಲು ದೊರಕಿತು. ಇದನ್ನು ಆರ್. ಶಾಮಶಾಸ್ತ್ರಿ ಎಂಬ ವಿದ್ವಾಂಸರು ಶೋಧಿಸಿದರು.

ಚಂದ್ರಗುಪ್ತ ಮೌರ್ಯ ಜೈನಧರ್ಮವನ್ನು ಸ್ವೀಕರಿಸಿದನು. ತನ್ನ ಕೊನೆಯ ದಿನಗಳಲ್ಲಿ ಸಿಂಹಾಸನವನ್ನು ಮಗನಾದ ಬಿಂದುಸಾರನಿಗೆ ವಹಿಸಿಕೊಟ್ಟು ಜೈನ ಯತಿಗಳೊಡನೆ ಕರ್ನಾಟಕಕ್ಕೆ ಬಂದನು. ಇಂದಿನ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಸಲ್ಲೇಖನ ಎಂಬ ಕಠಿಣ ವ್ರತವನ್ನು ಕೈಗೊಂಡು ದೇಹತ್ಯಾಗ ಮಾಡಿದನು. ಬಿಂದುಸಾರನು ಸುಮಾರು 25 ವರ್ಷಗಳ ಕಾಲ ಆಳ್ವಿಕೆ ನಡೆಸಿದನು.

©KTBS Not to be republished

## ಸಾಮ್ರಾಟ ಅಶೋಕ

ಬಿಂದುಸಾರನ ನಂತರ ಅವನ ಮಗ ಅಶೋಕನು ಅಧಿಕಾರಕ್ಕೆ ಬಂದನು. ಜಗತ್ತಿನ ಇತಿಹಾಸದಲ್ಲಿ ಅವನಿಗೆ ವಿಶಿಷ್ಟ ಸ್ಥಾನವಿದೆ. "ಪ್ರಜೆಗಳೆಲ್ಲರು ನನ್ನ ಮಕ್ಕಳಿದ್ದಂತೆ" ಎನ್ನುವ ಮೂಲಕ ಪ್ರಜಾಪಾಲನೆಗೆ ಆದ್ಯತೆ ನೀಡಿದ ಮೊದಲ ದೊರೆ.

**ಅಶೋಕನ ಶಾಸನಗಳು :** ಭಾರತ ಉಪಖಂಡದ ಉದ್ದಗಲಕ್ಕೂ ನೂರಾರು ಅಶೋಕನ ಶಾಸನಗಳು ಹರಡಿಕೊಂಡಿವೆ. ಈ ಶಾಸನಗಳು ಪ್ರಧಾನವಾಗಿ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿ ಕಂಡುಬಂದಿವೆ. ಕರ್ನಾಟಕದ ಒಂಭತ್ತು ಸ್ಥಳಗಳಲ್ಲಿ ಅಶೋಕನ 17 ಶಾಸನಗಳು ದೊರೆತಿವೆ. ಇವುಗಳಲ್ಲಿ ರಾಯಚೂರು ಜಿಲ್ಲೆಯ ಮಸ್ಕಿ ಶಾಸನ ಪ್ರಮುಖವಾದುದು. ಏಕೆಂದರೆ ಈ ಶಾಸನದಲ್ಲಿ ಮೊಟ್ಟಮೊದಲ ಬಾರಿಗೆ ಅಶೋಕನ ಹೆಸರು ಕಂಡುಬಂದಿತು. ಆ ವರೆಗಿನ ಶಾಸನಗಳಲ್ಲಿ 'ದೇವನಾಂಪ್ರಿಯ, ಪ್ರಿಯದರ್ಶಿ' ಎಂದಷ್ಟೇ ಇದ್ದಿತು. ಮಸ್ಕಿಯ ಶಾಸನದಲ್ಲಿ 'ದೇವನಾಂಪ್ರಿಯ, ಪ್ರಿಯದರ್ಶಿ ಅಶೋಕ' ಎಂದು ಬರೆಯಲಾಗಿತ್ತು. ಅಶೋಕನ ಶಾಸನಗಳಿಂದ ಅವನ ಜೀವನ, ಸಾಧನೆ, ಸಾಮ್ರಾಜ್ಯದ ವ್ಯಾಪ್ತಿ ಮೊದಲಾದ ಅಂಶಗಳು ತಿಳಿದುಕೊಳ್ಳಬಹುದು.

© KTBS Not to be republished



ಅಶೋಕನ ಉಬ್ಬುಶಿಲ್ಪ, ಕನಗನಹಳ್ಳಿ



ಅಶೋಕನ ಶಾಸನ, ಸನ್ನತಿ

**ನಿಮಗಿದು ತಿಳಿದಿರಲಿ**

ಇಂದಿಗೆ 180 ವರ್ಷಗಳ ಹಿಂದೆ ಜೇಮ್ಸ್ ಪ್ರಿನ್ಸೆಪ್ ಎಂಬ ಬ್ರಿಟಿಷ್ ಅಧಿಕಾರಿಯು ಮೊಟ್ಟಮೊದಲ ಬಾರಿಗೆ ಅಶೋಕನ ಶಾಸನಗಳನ್ನು ಓದಿದರು. ಆ ಮೊದಲು ಯಾರೂ ಓದಲಾಗಿರಲಿಲ್ಲ. ಆರು ಶತಮಾನಗಳಿಗೂ ಹಿಂದೆ ದೆಹಲಿಯ ಸುಲ್ತಾನನಾದ ಫಿರೋಜ್ ಷಾ ತುಘಲಕ್‌ನು ಅಶೋಕನ ಶಾಸನಗಳನ್ನು ಓದಿಸುವ ಪ್ರಯತ್ನ ನಡೆಸಿ ವಿಫಲನಾದನು.

**ಕಳಿಂಗ ಯುದ್ಧ:** ಅಶೋಕನು ಅಧಿಕಾರಕ್ಕೆ ಬಂದ ಎಂಟನೆಯ ವರ್ಷ ಕಳಿಂಗ ರಾಜ್ಯದ ಮೇಲೆ ಯುದ್ಧ ಸಾರಿದನು. ಇದು ಅವನ ಜೀವನದ ಮಹತ್ವದ ಘಟನೆಯಾಗಿದೆ. ಕಳಿಂಗ ರಾಜ್ಯವು ಇಂದಿನ ಒಡಿಶಾ ರಾಜ್ಯದ ಭಾಗವಾಗಿದ್ದು, ಇದರ ಮೇಲೆ ಅಶೋಕನು ಯುದ್ಧ ನಡೆಸಿದನು. ಯುದ್ಧದಲ್ಲಿ ಒಂದು ಲಕ್ಷ ಜನರು ಪ್ರಾಣ ಕಳೆದುಕೊಂಡರು. ಒಂದು ಲಕ್ಷ ಜನರು ಗಾಯಗೊಂಡರು. ಒಂದೂವರೆ ಲಕ್ಷ ಶತೃ ಸೈನಿಕರು ಬಂಧಿತರಾದರು. ರಣರಂಗದಲ್ಲಿ ಸಾವು ನೋವಿನ ಘೋರ ದೃಶ್ಯಗಳು ಅಶೋಕನ ಮನಕಲಕಿದವು. ಇದರಿಂದ ಮನನೊಂದ ಅಶೋಕನು ಆ ಕ್ಷಣದಿಂದಲೇ ಯುದ್ಧ ಮಾಡದಿರಲು ನಿರ್ಧರಿಸಿದನು. ಈ ರೀತಿ ಮನಪರಿವರ್ತನೆಗೊಂಡ ಮತ್ತೊಬ್ಬ ಸಾಮ್ರಾಟ ಜಗತ್ತಿನ ಇತಿಹಾಸದಲ್ಲಿಯೇ ಇಲ್ಲ. ಯುದ್ಧಮಾರ್ಗದ ಬದಲು ಧರ್ಮಮಾರ್ಗವನ್ನು ಹಿಡಿದ ಸಾಮ್ರಾಟ ಅಶೋಕನನ್ನು ಮಹಾಶಯನೆಂದು ಕರೆಯುವ ಮೂಲಕ ಗೌರವಿಸಲಾಗುವುದು.





**ಉಬ್ಬು ಶಿಲ್ಪಗಳಲ್ಲಿ ಯುದ್ಧ ಸನ್ನಿವೇಶದ ದೃಶ್ಯಗಳು (ಕನಗನಹಳ್ಳಿ)**

**ಚಟುವಟಿಕೆ :** ಕರ್ನಾಟಕದಲ್ಲಿ ಅಶೋಕನ ಶಾಸನಗಳು ದೊರೆತಿರುವ ಸ್ಥಳಗಳನ್ನು ಪಟ್ಟಿ ಮಾಡಿ.

**ಧರ್ಮ ಪ್ರಸಾರ :** ಅಶೋಕನು ಬೌದ್ಧಧರ್ಮದತ್ತ ಆಕರ್ಷಿತನಾಗಿ, ಆ ಧರ್ಮವನ್ನು ಸ್ವೀಕರಿಸಿದನು. ಧರ್ಮದ ಸಂದೇಶಗಳನ್ನು ಪ್ರಜೆಗಳಿಗೆ ಸಾರಹೊರಟನು. ಗುರು–ಹಿರಿಯರು ಮತ್ತು ತಂದೆ–ತಾಯಿಯರಿಗೆ ವಿಧೇಯರಾಗಿರಬೇಕು. ಕರುಣೆ, ಔದಾರ್ಯ, ಸತ್ಯಸಂಧತೆಗಳಿಂದ

Not to be republished ©KTBS

ಕೂಡಿರಬೇಕು. ಹಿಂಸೆ, ಕೋಪ, ಮಾತ್ಸರ್ಯ ಮೊದಲಾದವುಗಳನ್ನು ತೊರೆಯಬೇಕು ಎಂದನು. ಅಶೋಕನು ಪಾಟಲೀಪುತ್ರದಲ್ಲಿ ಮೂರನೇ ಬೌದ್ಧ ಸಮ್ಮೇಳನವನ್ನು ನಡೆಸಿದನು. ಬೌದ್ಧ ಸ್ತೂಪಗಳನ್ನು ನಿರ್ಮಿಸಿದನು. ಬುದ್ಧನ ಸಂದೇಶಗಳನ್ನು ಹರಡಲು ರಾಯಭಾರಿಗಳನ್ನು ದೇಶವಿದೇಶಗಳಿಗೆ ಕಳುಹಿಸಿದನು.

**ಮೌರ್ಯರ ಆಡಳಿತ ಪದ್ಧತಿ :** ರಾಜನೇ ಆಡಳಿತ ವ್ಯವಸ್ಥೆಯ ಮುಖ್ಯಸ್ಥನಾಗಿದ್ದನು. ಎಲ್ಲ ಅಧಿಕಾರಗಳು ಆತನ ಕೈಯಲ್ಲಿದ್ದವು. ರಾಜನಿಗೆ ಸಲಹೆ ನೀಡಲು ಮಂತ್ರಿ ಮಂಡಲವೊಂದಿತ್ತು. ಆಡಳಿತದ ವಿಭಾಗಗಳನ್ನು ನೋಡಿಕೊಳ್ಳಲು ಉನ್ನತ ಅಧಿಕಾರಿಗಳಿದ್ದರು. ಅವರಲ್ಲಿ 'ಧರ್ಮಮಹಾಮಾತ್ರರು' ಎಂಬ ವಿಶೇಷ ಅಧಿಕಾರಿಗಳು ಜನರಲ್ಲಿ ಉತ್ತಮ ನೀತಿ ನಡತೆಯನ್ನು ಪ್ರಚಾರ ಮಾಡುತ್ತಿದ್ದರು. ಅನಾಥರು, ವಿಧವೆಯರು ಮತ್ತು ವಯೋವೃದ್ಧರ ಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿ ಕೂಡ ಅವರಿಗಿತ್ತು. ಆಡಳಿತದ ಅನುಕೂಲಕ್ಕಾಗಿ ವಿಶಾಲವಾದ ಸಾಮ್ರಾಜ್ಯವನ್ನು ಹಲವು ಪ್ರಾಂತಗಳಾಗಿ ವಿಂಗಡಿಸಲಾಗಿತ್ತು. ಗ್ರಾಮಗಳಲ್ಲಿ 'ಗ್ರಾಮಿಕ'ನು ಅಲ್ಲಿಯ ಹಿರಿಯರ ನೆರವಿನಿಂದ ಆಡಳಿತ ಮಾಡುತ್ತಿದ್ದನು. ಗ್ರಾಮಗಳಿಗೆ ಸಾಕಷ್ಟು ಅಧಿಕಾರ ನೀಡಲಾಗಿತ್ತು. ಗ್ರಾಮದ ವಿವಾದಗಳನ್ನು ಗ್ರಾಮಸಭೆಯೇ ಬಗೆಹರಿಸುತ್ತಿತ್ತು. ಮೌರ್ಯರ ಆಡಳಿತವು ಮುಂದಿನ ಅನೇಕ ರಾಜಮನೆತನಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು.

**ವಾಸ್ತು ಮತ್ತು ಮೂರ್ತಿಶಿಲ್ಪ :** ಅಶೋಕನ ಕಾಲದ ಕೆಲವು ವಾಸ್ತು ಮತ್ತು ಮೂರ್ತಿಶಿಲ್ಪಗಳನ್ನು ಇಂದಿಗೂ ಕಾಣಬಹುದಾಗಿದೆ. ಅವುಗಳಲ್ಲಿ ಸ್ತೂಪಗಳು ಮತ್ತು ಸ್ತಂಭಗಳು ಪ್ರಮುಖವಾಗಿವೆ. ಅವುಗಳಲ್ಲಿ ಮಧ್ಯಪ್ರದೇಶದ ಸಾಂಚಿಯ ಸ್ತೂಪ ಮತ್ತು ಸಾರನಾಥದ ಸ್ತಂಭಗಳು ಪ್ರಸಿದ್ಧವಾಗಿವೆ. ಸಾರನಾಥ ಸ್ತಂಭದ ಮೇಲಿನ ನಾಲ್ಕುತಲೆಯ ಸಿಂಹ ಬೋದಿಗೆಯು ನಮ್ಮ ರಾಷ್ಟ್ರ ಲಾಂಛನವಾಗಿದೆ.


ಅಶೋಕನ ಶಿಲಾ ಶಾಸನ


ಸಾಂಚಿಯ ಸ್ತೂಪ (ಮಧ್ಯಪ್ರದೇಶ)

©KTBS Not to be republished



ಅಶೋಕನ ಏಕಶಿಲಾಸ್ತಂಭ



ನಮ್ಮ ರಾಷ್ಟ್ರ ಲಾಂಛನ

© KTBS Not to be republished

## ಕುಶಾನರು

ಸುಮಾರು 2000 ವರ್ಷಗಳ ಹಿಂದೆ ಗಂಧಾರ (ಈಗಿನ ಅಫ್ಘಾನಿಸ್ತಾನ) ಎಂಬ ಪ್ರದೇಶದಲ್ಲಿ ಕುಶಾನ ಎಂಬ ರಾಜವಂಶವು ಆಳ್ವಿಕೆ ನಡೆಸುತ್ತಿತ್ತು. ಕಾಲಕ್ರಮೇಣ ಭಾರತದ ಕೆಲವು ಭಾಗಗಳು ಕುಶಾನರ ವಶವಾದವು. ಕುಶಾನರಲ್ಲಿ ಕನಿಷ್ಕ ಪ್ರಸಿದ್ಧನಾದ ಅರಸ. ಅವನು ಸುದೀರ್ಘಕಾಲ ಯುದ್ಧಗಳನ್ನು ನಡೆಸಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಉತ್ತರ ಭಾರತದಲ್ಲಿ ಅವನ ಸಾಮ್ರಾಜ್ಯವು ಅಫ್ಘಾನಿಸ್ತಾನದಿಂದ ಬಿಹಾರದವರೆಗೂ ಹಬ್ಬಿತ್ತು.

**ಕನಿಷ್ಕ:** ಬೌದ್ಧಧರ್ಮದ ಅನುಯಾಯಿಯಾಗಿದ್ದ ಕನಿಷ್ಕನು ಕೂಡ ಸಾಮ್ರಾಟ ಅಶೋಕನಂತೆ ಹಲವು ಸ್ತೂಪಗಳನ್ನು ಕಟ್ಟಿಸಿದನು. ಬೌದ್ಧಮತ ಪ್ರಚಾರಕರನ್ನು ದೇಶವಿದೇಶಗಳಿಗೆ ಕಳುಹಿಸಿದನು. ಅಲ್ಲದೆ, ಕಾಶ್ಮೀರದಲ್ಲಿ ನಾಲ್ಕನೆಯ ಬೌದ್ಧ ಮಹಾಸಭೆಯನ್ನು ನಡೆಸಿದನು. ಕನಿಷ್ಕನು ತಾನು ಅಧಿಕಾರಕ್ಕೆ ಬಂದ ನೆನಪಿಗಾಗಿ ಶಕ (ಶಾಲಿವಾಹನ ಶಕ) ವರ್ಷವನ್ನು ಪ್ರಾರಂಭ ಮಾಡಿದನು. ಇದೇ ಇಂದು ಭಾರತ ಸರ್ಕಾರದ ಅಧಿಕೃತ ಕ್ಯಾಲೆಂಡರ್ ವರ್ಷವಾಗಿದೆ.




**ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ :** ಕನಿಷ್ಕನು ಹಲವು ಸ್ತೂಪಗಳನ್ನು ನಿರ್ಮಿಸಿದನು. ಪುರಷಪುರ (ಇಂದಿನ ಪೇಷಾವರ) ದಲ್ಲಿ ಅವನು ಕಟ್ಟಿಸಿದ ಸ್ತೂಪಕ್ಕೆ ಹದಿಮೂರು ಅಂತಸ್ತುಗಳ ಗೋಪುರವಿತ್ತು. ಗೋಪುರವು 400 ಅಡಿ ಎತ್ತರವಿದ್ದು ಆ ಕಾಲದ ಒಂದು ಕೌತುಕವೆನಿಸಿತ್ತು. ಕನಿಷ್ಕಪುರ ಎಂಬ ನಗರವನ್ನೂ ನಿರ್ಮಾಣ ಮಾಡಿಸಿದನು.



ಗಾಂಧಾರ ಶೈಲಿಯ ಬುದ್ಧನ ವಿಗ್ರಹ, ಪೇಶಾವರ



ಕನಿಷ್ಕನ ಕಲ್ಲಿನ ವಿಗ್ರಹ ತಲೆ ಭಾಗ ನಾಶವಾಗಿದೆ

© KTBS Not to be republished

ಕನಿಷ್ಕನು ಕಲಾಪೋಷಕನಾಗಿದ್ದನು. ಅವನು ಬೇರೆ ಬೇರೆ ದೇಶಗಳ ಕಲಾಕಾರರನ್ನು ತನ್ನಲ್ಲಿಗೆ ಕರೆಸಿಕೊಂಡನು. ಇದರ ಪರಿಣಾಮವಾಗಿ ವಿವಿಧ ಕಲಾ ಶೈಲಿಗಳು ಬೆರೆತು ಗಂಧಾರ ಮತ್ತು ಮಥುರಾ ಎಂಬ ಹೊಸ ಶೈಲಿಗಳು ಹುಟ್ಟಿಕೊಂಡವು.

ಮಥುರೆಯಲ್ಲಿ ಕನಿಷ್ಕನ ಕಲ್ಲಿನ ವಿಗ್ರಹ ದೊರೆಕಿದೆ. ಇದರ ತಲೆಭಾಗವು ನಾಶವಾಗಿದ್ದು, ಕೆಳಭಾಗದಲ್ಲಿ ಕನಿಷ್ಕನ ಹೆಸರನ್ನು ಕೆತ್ತಲಾಗಿದೆ. ಕುಶಾನರ ಅನೇಕ ನಾಣ್ಯಗಳು ದೊರೆತಿವೆ. ಇವರೇ ಭಾರತದಲ್ಲಿ ಮೊಟ್ಟಮೊದಲು ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದರು.

**ಸಾಹಿತ್ಯ:** ಕನಿಷ್ಕನು ವಿದ್ವಾಂಸರು ಮತ್ತು ಸಾಹಿತಿಗಳಿಗೆ ಆಶ್ರಯ ನೀಡಿದ್ದನು. ಅವರಲ್ಲಿ ಅಶ್ವಘೋಷ ಪ್ರಮುಖನು. ಇವನು 'ಬುದ್ಧ ಚರಿತ' ಎಂಬ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ.

ನಾಗಾರ್ಜುನನು ಕನಿಷ್ಕನ ಆಸ್ಥಾನದಲ್ಲಿದ್ದ ಶ್ರೇಷ್ಠ ತತ್ವಜ್ಞಾನಿ ಹಾಗೂ ವಿಜ್ಞಾನಿ. ವಸುಮಿತ್ರ ಓರ್ವ ವಿದ್ವಾಂಸ ಹಾಗೂ ಕಾಶ್ಮೀರದಲ್ಲಿ ನಡೆದ ಬೌದ್ಧ ಮಹಾಸಭೆಯ ಅಧ್ಯಕ್ಷನಾಗಿದ್ದವನು. ಚರಕ ಎಂಬುವನು ಕಾನಿಷ್ಕನ ಸಮಕಾಲೀನ ವೈದ್ಯನಾಗಿದ್ದನೆಂದು ಹೇಳಲಾಗುತ್ತದೆ.

### ಹೊಸ ಪದಗಳು :

ಶಿಲಾಶಾಸನ– ಕಲ್ಲಿನ ಮೇಲೆ ಕೊರೆದಿಟ್ಟ ಬರಹ.

ಸ್ತೂಪ– ಬುದ್ಧನ ಶರೀರದ ಅವಶೇಷಗಳನ್ನು (ಹಲ್ಲು, ಎಲುಬು ಇತ್ಯಾದಿ) ಕಲಶದಲ್ಲಿ ಶೇಖರಿಸಿ, ಆ ಕಲಶದ ಸುತ್ತಲೂ ಕಟ್ಟಿದ ಅರ್ಧಗೋಲಾಕೃತಿಯ ರಚನೆ.

### ನಿಮಗೆ ತಿಳಿದಿರಲಿ

1. ಅಶೋಕನು ಬೌದ್ಧ ರಾಯಭಾರಿಗಳನ್ನು ಬೇರೆ ಬೇರೆ ರಾಜ್ಯಗಳಿಗೆ ಮಾತ್ರವಲ್ಲದೆ ಬರ್ಮಾ (ಮಯನ್ಮಾರ್), ಶ್ರೀಲಂಕಾ, ಈಜಿಪ್ಟ್, ಪಶ್ಚಿಮ ಏಷ್ಯ ಹಾಗೂ ಪೂರ್ವ ಯೂರೋಪ್ ದೇಶಗಳಿಗೂ ಕಳುಹಿಸಿದನು. ಅಶೋಕನ ಹಿರಿಯ ಮಗ ಮಹೇಂದ್ರ ಮತ್ತು ಹಿರಿ ಪುತ್ರಿ ಸಂಘಮಿತ್ರಾ ಶ್ರೀಲಂಕೆಗೆ ತೆರಳಿದರು. ಕರ್ನಾಟಕದ ಮೈಸೂರಿಗೆ (ಆಗಿನ ಮಹಿಷಮಂಡಲ) ಮಹಾದೇವ ಮತ್ತು ಉತ್ತರ ಕನ್ನಡ ಜಿಲ್ಲೆಯ ಬನವಾಸಿಗೆ ರಕ್ಷಿತ ಎಂಬ ಧರ್ಮಪ್ರಚಾರಕರು ಬಂದಿದ್ದರು.
2. ವಾಸ್ತುಶಿಲ್ಪ ಎಂದರೆ ಕಟ್ಟಡ ನಿರ್ಮಾಣದ ಕಲೆ. ಮೂರ್ತಿಶಿಲ್ಪ ಎಂದರೆ ವಿಗ್ರಹಗಳನ್ನು ನಿರ್ಮಿಸುವ ಕಲೆ. ಅಶೋಕನ ಕಾಲದಲ್ಲಿ ವಾಸ್ತುಶಿಲ್ಪ ನಿರ್ಮಾಣಕ್ಕಾಗಿ ಕಟ್ಟಿಗೆ ಮತ್ತು ಇಟ್ಟಿಗೆಗಳ ಬದಲು ಕಲ್ಲುಗಳ ಬಳಕೆ ಆರಂಭವಾಯಿತು. ಇದರಿಂದಾಗಿಯೇ ಮೌರ್ಯರ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು ಇಂದಿಗೂ ಉಳಿದು ಬಂದಿವೆ.

### I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಸೆಲ್ಯೂಕಸನು ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಕಳುಹಿಸಿಕೊಟ್ಟ ರಾಯಭಾರಿ________
2. ಪ್ರಜೆಗಳೆಲ್ಲರು ನನ್ನ ಮಕ್ಕಳಿದ್ದಂತೆ ಎಂದು ಹೇಳಿದ ಸಾಮ್ರಾಟ________

©KTBS Not to be republished

3. ಅಶೋಕನ ಶಾಸನಗಳು ಪ್ರಧಾನವಾಗಿ __________ಲಿಪಿಯಲ್ಲಿ ಕಂಡುಬಂದಿವೆ.

4. ಅಶೋಕನು ಅಧಿಕಾರಕ್ಕೆ ಬಂದ________ ವರ್ಷದಂದು ಕಳಿಂಗ ರಾಜ್ಯದ ಮೇಲೆ ಯುದ್ಧ ಸಾರಿದ.

5. ನಮ್ಮ ರಾಷ್ಟ್ರ ಲಾಂಛನ__________

6. ಕನಿಷ್ಕನು ಅಧಿಕಾರಕ್ಕೆ ಬಂದ ನೆನಪಿಗಾಗಿ________ ವರ್ಷವನ್ನು ಪ್ರಾರಂಭಿಸಿದ.

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಮೌರ್ಯ ಸಾಮ್ರಾಜ್ಯದ ಸ್ಥಾಪಕನು ಯಾರು?
2. ಮೌರ್ಯರ ರಾಜ್ಯಧಾನಿಯನ್ನು ಹೆಸರಿಸಿ.
3. ಕೌಟಿಲ್ಯಬರೆದ ಗ್ರಂಥ ಯಾವುದು?
4. ಮೆಗಸ್ತನೀಸ್ ಬರೆದ ಗ್ರಂಥದ ಹೆಸರೇನು?
5. "ಪ್ರಜೆಗಳೆಲ್ಲರು ತನ್ನ ಮಕ್ಕಳಿದ್ದಂತೆ". ಹೀಗೆಂದು ನುಡಿದ ಸಾಮ್ರಾಟನು ಯಾರು?
6. "ಧರ್ಮಮಹಾಮಾತ್ರರು" ಮಾಡುತ್ತಿದ್ದ ಕಾರ್ಯಗಳು ಯಾವುವು?
7. ಕನಿಷ್ಕನು ಬೌದ್ಧ ಮಹಾಸಭೆಯನ್ನು ಎಲ್ಲಿ ನಡೆಸಿದನು?
8. ಅಶ್ವಘೋಷನ ಕೃತಿ ಯಾವುದು?

**III. ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಕಳಿಂಗ ಯುದ್ಧದ ಮಹತ್ವ ಕುರಿತು ಬರೆಯಿರಿ.

**IV. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| ಅಶೋಕ | ಕನಿಷ್ಕಪುರ |
| ಕನಿಷ್ಕ | ಬುದ್ಧಚರಿತ |
| ಅಶ್ವಘೋಷ | ಕಲಾಕೇಂದ್ರ |
| ಗಂಧಾರ | ದೇವನಾಂಪ್ರಿಯ |

**ಚಟುವಟಿಕೆ**

- ಮೌರ್ಯರ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ. ಒಂದು ಆಲ್ಬಂ ತಯಾರಿಸಿ.
- ಕರ್ನಾಟಕದಲ್ಲಿ ಅಶೋಕನ ಶಾಸನಗಳು ದೊರೆತಿರುವ ಸ್ಥಳಗಳನ್ನು ಪಟ್ಟಿ ಮಾಡಿರಿ.

©KTBS Not to be republished

## ಗುಪ್ತರು

ಮೌರ್ಯರ ನಂತರ ಸಾಮ್ರಾಜ್ಯ ಕಟ್ಟಿದವರು ಗುಪ್ತರು. ಗುಪ್ತರು ಭಾರತದ ಮಹತ್ವದ ರಾಜಮನೆತನವಾಗಿದೆ. ಗುಪ್ತರ ರಾಜಧಾನಿ ಪಾಟಲಿಪುತ್ರವಾಗಿದೆ. ಈ ವಂಶದಲ್ಲಿ ಸಮುದ್ರಗುಪ್ತ ಮತ್ತು ಎರಡನೇ ಚಂದ್ರಗುಪ್ತ ಪ್ರಸಿದ್ಧರಾದ ದೊರೆಗಳು.

### ಸಮುದ್ರಗುಪ್ತ

ಸಮುದ್ರಗುಪ್ತನು ಮಹಾಪರಾಕ್ರಮಿ ಅವನ ದಿಗ್ವಿಜಯವನ್ನು ಕುರಿತು ಅಲಹಾಬಾದಿನ ಸ್ತಂಭದ ಮೇಲಿನ ಶಾಸನವೊಂದು ವಿವರ ನೀಡುತ್ತದೆ. ಈ ಶಾಸನವನ್ನು ಸಮುದ್ರಗುಪ್ತನ ಆಸ್ಥಾನ ಕವಿ ಹರಿಸೇಣ ರಚಿಸಿದನು. ಅದರಂತೆ ಸಮುದ್ರಗುಪ್ತನು ಉತ್ತರ ಭಾರತದ ಒಂಬತ್ತು ರಾಜರನ್ನು ಸೋಲಿಸಿದನು. ಅವನ ಪ್ರಚಂಡ ಸೈನಿಕ ಶಕ್ತಿಯನ್ನು ಅರಿತೇ ಅಲ್ಲಿಯ ಇನ್ನಿತರ ರಾಜರು ತಾವಾಗಿಯೇ ಶರಣಾದರು. ದೂರದ ಆಫ್ಘಾನಿಸ್ತಾನದ ಕುಶಾನ ದೊರೆಗಳೂ ಗುಜರಾತಿನ ಸತ್ರಪರೂ (ಶಕರು) ಸಮುದ್ರಗುಪ್ತನ ಪರಮಾಧಿಕಾರವನ್ನು ಒಪ್ಪಿಕೊಂಡರು.

ನಂತರ ದಕ್ಷಿಣ ಭಾರತದ ದಂಡಯಾತ್ರೆ ಕೈಗೊಂಡ ಸಮುದ್ರಗುಪ್ತನು ದಕ್ಷಿಣದ ಹನ್ನೆರಡು ಮಂದಿ ರಾಜರನ್ನು ಸೋಲಿಸಿದನು. ಅವರಲ್ಲಿ ಕಾಂಚಿಯ ರಾಜನೂ ಒಬ್ಬನು. ಈ ದಂಡಯಾತ್ರೆಯ ನೆನಪಿಗಾಗಿ ಅಶ್ವಮೇಧಯಾಗವನ್ನು ಮಾಡಿದನು.



ಸಮುದ್ರಗುಪ್ತನ ಕಾಲದ ನಾಣ್ಯಗಳು

ಸಮುದ್ರಗುಪ್ತನು ವಿದ್ಯಾಪೋಷಕನಾಗಿದ್ದನು. ಸ್ವತಃ ಕವಿ ಹಾಗೂ ಸಂಗೀತನಾಗಿದ್ದ ಆತನು 'ಕವಿರಾಜ' ಎಂಬ ಬಿರುದನ್ನು ಧರಿಸಿದ್ದನು. ಅವನು ವೀಣೆ ನುಡಿಸುವ ಚಿತ್ರವಿರುವ ನಾಣ್ಯಗಳು ದೊರೆತಿವೆ. ವಸುಬಂಧು ಎಂಬ ಹಿರಿಯ ಬೌದ್ಧ ವಿದ್ವಾಂಸ ಅವನ ಮಂತ್ರಿಯಾಗಿದ್ದನು. ಸಮುದ್ರಗುಪ್ತನ ಚಿನ್ನದ ನಾಣ್ಯಗಳು ಗುಪ್ತ ಸಾಮ್ರಾಜ್ಯದ ಶಕ್ತಿ, ಸಂಪತ್ತು ಹಾಗೂ ವೈಭವವನ್ನು ಪ್ರತಿಬಿಂಬಿಸುತ್ತವೆ.

### ಎರಡನೆಯ ಚಂದ್ರಗುಪ್ತ

ಸಮುದ್ರಗುಪ್ತನ ಪುತ್ರ ಹಾಗೂ ಉತ್ತರಾಧಿಕಾರಿಯಾದ ಎರಡನೆಯ ಚಂದ್ರಗುಪ್ತನು ಯುದ್ಧ ಕಲೆಯಲ್ಲಿ ನಿಪುಣನಾಗಿದ್ದನು. ಗುಜರಾತಿನಲ್ಲಿ ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲ ಆಳ್ವಿಕೆ ನಡೆಸುತ್ತಿದ್ದ ಸತ್ರಪರನ್ನು ಚಂದ್ರಗುಪ್ತನು ಸೋಲಿಸಿದನು. ಇದು ಅವನ ಮುಖ್ಯ ಸೈನಿಕ ಸಾಧನೆಯಾಗಿತ್ತು. ಅವನಿಗೆ 'ವಿಕ್ರಮಾದಿತ್ಯ' ಎಂಬ ಬಿರುದಿತ್ತು. ಚಂದ್ರಗುಪ್ತನು ಹೊಸ ಬಗೆಯ

©KTBS Not to be republished

ಚಿನ್ನದ ನಾಣ್ಯಗಳನ್ನು ಹೊರಡಿಸಿದನು. ಆತನ ಆಸ್ಥಾನದಲ್ಲಿ ಮಹಾಕವಿ ಕಾಳಿದಾಸ ಮತ್ತು ಇತರ ಪ್ರಖ್ಯಾತ ವಿದ್ವಾಂಸರಿದ್ದರು.



**ಎರಡನೇ ಚಂದ್ರಗುಪ್ತನ ಕಾಲದ ನಾಣ್ಯಗಳು**

ಸಾಮ್ರಾಜ್ಯವು ಆರ್ಥಿಕ ಕ್ಷೇತ್ರದಲ್ಲಿ ಭಾರಿ ಸಮೃದ್ಧಿ ಸಾಧಿಸಿತ್ತು. ಸಾಹಿತ್ಯ, ಮೂರ್ತಿಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ, ವಿಜ್ಞಾನ ಹಾಗೂ ಗಣಿತ ಕ್ಷೇತ್ರಗಳಲ್ಲಿ ಹಿಂದೆಂದೂ ಕಾಣದ ಸಾಧನೆಗಳಾದವು.

**ಫಾಹಿಯಾನ :** ಫಾಹಿಯಾನ್ ಚೀನಾ ದೇಶದ ಬೌದ್ಧ ಭಿಕ್ಷು. ಬೌದ್ಧಧರ್ಮದ ತವರನ್ನು ನೋಡಬೇಕೆಂಬ ಹಂಬಲದಿಂದ ಪ್ರಯಾಸಪಟ್ಟು ಭಾರತಕ್ಕೆ ಬಂದನು. ಅದು ಎರಡನೇ ಚಂದ್ರಗುಪ್ತನ ಆಳ್ವಿಕೆ ಕಾಲವಾಗಿತ್ತು. ಭಾರತದ ಅನುಭವಗಳನ್ನು ಫಾಹಿಯಾನ್ ತನ್ನ ಕೃತಿ 'ಫೋ-ಕೋ-ಕಿ' ಯಲ್ಲಿ ದಾಖಲಿಸಿದ್ದಾನೆ. ಅವನ ಪ್ರಕಾರ ಗುಪ್ತ ಸಾಮ್ರಾಜ್ಯದಲ್ಲಿ ಅಪರಾಧಗಳು ಅಪರೂಪವಾಗಿದ್ದವು. ಆಡಳಿತ ಜನಪರವಾಗಿತ್ತು. ದೇಶ ಸಂಚಾರ ಸುಗಮವಾಗಿತ್ತು.

ಫಾಹಿಯಾನ್ ಭಾರತದಲ್ಲಿ ಅನೇಕ ವರ್ಷ ಪ್ರವಾಸ ಮಾಡಿ ಬೌದ್ಧ ಕ್ಷೇತ್ರಗಳನ್ನು ಸಂದರ್ಶಿಸಿದನು. ಹಲವು ಬೌದ್ಧ ಧರ್ಮಗ್ರಂಥಗಳೊಂದಿಗೆ ತನ್ನ ದೇಶಕ್ಕೆ ಹಿಂತಿರುಗಿದನು. ಅವುಗಳನ್ನು ಚೀನಿ ಭಾಷೆಗೆ ಅನುವಾದ ಮಾಡಿದನು.

## ಗುಪ್ತರ ಕೊಡುಗೆಗಳು

**ಸಂಸ್ಕೃತ ಸಾಹಿತ್ಯ :** ಗುಪ್ತರ ಕಾಲದಲ್ಲಿ ರಾಜಾಶ್ರಯದಿಂದ ಸಂಸ್ಕೃತ ಸಾಹಿತ್ಯವು ಸಮೃದ್ಧವಾಗಿ ಬೆಳೆಯಿತು. ಕಾಳಿದಾಸನು ಗುಪ್ತಕಾಲದ ಮಹಾಕವಿ. ಈತನು ಜಗತ್ತಿನ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬನಾಗಿದ್ದಾನೆ. ಎರಡನೇ ಚಂದ್ರಗುಪ್ತನ ಆಸ್ಥಾನವನ್ನು ಅಲಂಕರಿಸಿದ್ದ ಒಂಬತ್ತು ಮಂದಿ 'ನವರತ್ನ'ರಲ್ಲಿ ಈತನು ಒಬ್ಬನಾಗಿದ್ದನು. ಕಾಳಿದಾಸನು ನಾಲ್ಕು ಕಾವ್ಯಗಳು ಮತ್ತು ಮೂರು ನಾಟಕಗಳನ್ನು ರಚಿಸಿದ್ದಾನೆ. 'ಅಭಿಜ್ಞಾನ ಶಾಕುಂತಲಂ' ಆತನ ಶ್ರೇಷ್ಠ ನಾಟಕ. ಅವನನ್ನು 'ಕವಿಕುಲ ಗುರು' ಎಂಬುವುದಾಗಿ ಪ್ರಶಂಸೆ ಮಾಡಲಾಗಿದೆ.

'ಮೃಚ್ಛಕಟಿಕ' ಬರೆದ ಶೂದ್ರಕ ಮತ್ತು 'ಮುದ್ರಾರಾಕ್ಷಸ' ಬರೆದ ವಿಶಾಖದತ್ತ ಆ ಕಾಲದ ಇತರ ಪ್ರಸಿದ್ಧ ನಾಟಕಕಾರರು. ವಿಷ್ಣುಶರ್ಮನ 'ಪಂಚತಂತ್ರ' ಎಂಬ ಕಥಾಸಂಗ್ರಹವು ಇದೇ ಕಾಲಕ್ಕೆ ಸೇರಿದೆ. ಅಮರಸಿಂಹನ 'ಅಮರಕೋಶ' ಎಂಬ ಶಬ್ದಕೋಶವು ಒಂದು ಅಪರೂಪದ ಕೃತಿ. ಅದು ಇಂದಿಗೂ ಬಳಕೆಯಲ್ಲಿದೆ.

© KTBS Not to be republished

**ದೇವಾಲಯ ವಾಸ್ತುಶಿಲ್ಪ :** ನಮ್ಮ ದೇಶದಲ್ಲಿ ದೇವಾಲಯ ನಿರ್ಮಾಣ ವಾಸ್ತು ಆರಂಭಗೊಂಡದ್ದು ಗುಪ್ತರ ಕಾಲದಲ್ಲಿ. ಮಧ್ಯಪ್ರದೇಶದ ಸಾಂಚಿಯ ದೇವಾಲಯವು ಭಾರತದ ಪ್ರಾಚೀನ ದೇವಾಲಯವಾಗಿದೆ. ಗುಪ್ತರ ಇತರ ದೇವಾಲಯಗಳು ಮಧ್ಯಪ್ರದೇಶದ ಬಿತರ್‌ಗಾಂವ್ ಮತ್ತು ದೇವಗಢದಲ್ಲಿವೆ. ದೇವಗಢದ ದಶಾವತಾರ ದೇವಾಲಯದಲ್ಲಿರುವ ವಿಷ್ಣುವಿನ ಮೂರ್ತಿಶಿಲ್ಪ ಸುಂದರವಾಗಿದೆ.



**ಸಾಂಚಿ ದೇವಾಲಯ**

**ಸ್ತೂಪ ಮತ್ತು ಚೈತ್ಯಾಲಯ :** ಸಾರನಾಥದಲ್ಲಿರುವ 128 ಅಡಿ ಎತ್ತರದ ಧಮೇಖ್ ಸ್ತೂಪವು ಗುಪ್ತರ ಕಾಲದ ಅನುಪಮ ನಿರ್ಮಾಣವಾಗಿದೆ.



**ಧಮೇಖ್ ಸ್ತೂಪ**

© KTBS Not to be republished

**ಚಿತ್ರಕಲೆ :** ಗುಪ್ತರ ಕಾಲದಲ್ಲಿ ಬಂಡೆಯನ್ನು ಕೊರೆದು ಮಾಡಿದ ಬೌದ್ಧ ವಿಹಾರ ಮತ್ತು ಗುಹಾಲಯಗಳು ಅಜಂತಾ ಮತ್ತು ಎಲ್ಲೋರಾ ಎಂಬಲ್ಲಿವೆ. ಅಜಂತಾದ ಗುಹಾಲಯಗಳಲ್ಲಿ ಗೋಡೆ ಮತ್ತು ಛಾವಣಿಗಳ ಮೇಲಿನ ಚಿತ್ರಗಳು ಜಗದ್ವಿಖ್ಯಾತವಾಗಿವೆ.



ಅಜಂತಾ ಗುಹಾಲಯ

©KTBS Not to be republished

**ವಿಜ್ಞಾನ – ಗಣಿತ, ಖಗೋಳಶಾಸ್ತ್ರ :** ಗುಪ್ತರ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಅಪಾರ ಪ್ರಗತಿ ಸಾಧಿಸಿತ್ತು. ಪಾಟಲೀಪುತ್ರದ ಆರ್ಯಭಟನು ಗುಪ್ತ ಯುಗದ ಶ್ರೇಷ್ಠ ಗಣಿತ ಮತ್ತು ಖಗೋಳ ಶಾಸ್ತ್ರಜ್ಞ. ಈತನ ಗ್ರಂಥ 'ಆರ್ಯಭಟೀಯ'. ಆರ್ಯಭಟನು ಗ್ರಹಣಗಳ ಕಾರಣವನ್ನು ಕಂಡುಹಿಡಿದನು. ಅವನು ಇಪ್ಪತ್ತಮೂರನೆ ವಯಸ್ಸಿಗೆ ಇಷ್ಟೊಂದು ಸಾಧನೆ ಮಾಡಿದ್ದನು. ಬ್ರಹ್ಮಗುಪ್ತ ಆ ಕಾಲದ ಇನ್ನೊಬ್ಬ ಗಣಿತ ವಿದ್ವಾಂಸ. ಶ್ರೇಷ್ಠ ಖಗೋಳಶಾಸ್ತ್ರಜ್ಞ ವರಾಹಮಿಹಿರನು ಇದೇ ಕಾಲದವನು.

**ಲೋಹ ವಿಜ್ಞಾನ :** ಗುಪ್ತರ ಕಾಲದಲ್ಲಿ ಲೋಹ ವಿಜ್ಞಾನವು ಗಣನೀಯ ಮುನ್ನಡೆ ಸಾಧಿಸಿತ್ತು. ದೆಹಲಿಯ ಕುತುಬ್ ಮಿನಾರಿನ ಸಮೀಪವಿರುವ ಮೆಹರೌಲಿ ಕಬ್ಬಿಣದ ಕಂಬವು ಇದಕ್ಕೊಂದು ಉದಾಹರಣೆ. ಈ ಕಂಬವು 1500 ವರ್ಷಗಳಷ್ಟು ಹಳೆಯದಾದರೂ ಅದಕ್ಕೆ ತುಕ್ಕು ಹಿಡಿದಿಲ್ಲ ಮತ್ತು ಸ್ವಲ್ಪವೂ ಸವೆದಿಲ್ಲ.



ಮೆಹರೌಲಿ ಕಬ್ಬಿಣದ ಕಂಬ

**ಆಯುರ್ವೇದ :** ಗುಪ್ತರ ಕಾಲದ ವಾಗ್ಭಟನು 'ಚರಕ ಸಂಹಿತೆ'ಯ ಸಾರವನ್ನು ಸಿದ್ಧಪಡಿಸಿದನು. ಅದುವೇ 'ಅಷ್ಟಾಂಗ ಹೃದಯ ಸಂಹಿತ'. ಇದು ಆಯುರ್ವೇದದ ಪ್ರಮುಖ ಶಾಸ್ತ್ರಗ್ರಂಥವಾಗಿದೆ. ಪ್ರಾಚೀನ ಭಾರತದಲ್ಲಿ ಶಸ್ತ್ರ ಚಿಕಿತ್ಸೆಯೂ ಸಾಕಷ್ಟು ಪ್ರಗತಿ ಹೊಂದಿತ್ತು. ಶಸ್ತ್ರ ಚಿಕಿತ್ಸಕರು 127 ಬಗೆಯ ಶಸ್ತ್ರಚಿಕಿತ್ಸಾ ಉಪಕರಣವನ್ನು ಬಳಸುತ್ತಿದ್ದರು. ದೇಹದೊಳಗೆ ಸೇರಿಕೊಂಡ ಕಬ್ಬಿಣ, ಕಲ್ಲುಗಳನ್ನು ಹೊರತೆಗೆಯುತ್ತಿದ್ದರು. ಪಾದರಸವನ್ನು ಔಷಧಿಯಾಗಿ ಮೊದಲ ಬಾರಿಗೆ ಬಳಕೆಗೆ ತಂದ ಕೀರ್ತಿ ಭಾರತೀಯ ವೈದ್ಯರಿಗೆ ಸಲ್ಲುತ್ತದೆ.

**ಹೊಸ ಪದ**

**ಖಗೋಳಶಾಸ್ತ್ರ** – ಗ್ರಹ, ನಕ್ಷತ್ರ ಮೊದಲಾದ ಆಕಾಶಕಾಯಗಳನ್ನು ಕುರಿತು ಅಧ್ಯಯನ ಮಾಡುವ ವಿಜ್ಞಾನ.

© KTBS Not to be republished

## ನಿಮಗೆ ತಿಳಿದಿರಲಿ

1. ಗುಪ್ತ ವಂಶವು ಸುಮಾರು 1600 ವರ್ಷಗಳಷ್ಟು ಹಿಂದೆ ಸ್ಥಾಪನೆಗೊಂಡು ಎರಡು ಶತಮಾನಗಳಿಗಿಂತಲೂ ಹೆಚ್ಚು ಕಾಲ ಆಳ್ವಿಕೆ ನಡೆಸಿತು.

2. ಕಾಳಿದಾಸನ ನಾಟಕಗಳು – ಅಭಿಜ್ಞಾನ ಶಾಕುಂತಲಾ, ಮಾಲವಿಕಾಗ್ನಿಮಿತ್ರ ಮತ್ತು ವಿಕ್ರಮೋರ್ವಶೀಯ; ಕಾವ್ಯಗಳು – ರಘುವಂಶ, ಕುಮಾರಸಂಭವ, ಋತುಸಂಹಾರ ಮತ್ತು ಮೇಘದೂತ.

3. ಗುಪ್ತರ ಕಾಲದ ದೇವಾಲಯವನ್ನು ಆರಂಭದಲ್ಲಿ ಚೌಕಾಕಾರದ ತಳಪಾಯದ ಮೇಲೆ ಕಟ್ಟಲಾಗುತ್ತಿದ್ದು. ಗರ್ಭಗೃಹ ಮತ್ತು ಮುಖಮಂಟಪಗಳು ಮಾತ್ರವೇ ಇದ್ದವು.

4. ಭಿತ್ತಿ ಎಂದರೆ ಗೋಡೆ. ಗೋಡೆಯ ಮೇಲೆ ಬರೆದ ಚಿತ್ರಗಳೇ ಭಿತ್ತಿಚಿತ್ರಗಳು. ಭಿತ್ತಿಚಿತ್ರಗಳು ಅಜಂತಾದ ಬೌದ್ಧ ಗುಹಾಲಯಗಳಲ್ಲಿವೆ. ಸಾಮಾನ್ಯ ಕುಂಚಗಳಿಂದ ಸ್ಥಳೀಯವಾಗಿ ಸಿಗುತ್ತಿದ್ದ ಬಣ್ಣಗಳಿಂದ ಚಿತ್ರಗಳನ್ನು ಬರೆಯಲಾಗಿದೆ. ಅನೇಕ ಶತಮಾನಗಳವರೆಗೆ ಈ ಗುಹೆಗಳು ಕಣ್ಣಿಗೆ ಮರೆಯಾಗಿದ್ದವು. 1819 ರಲ್ಲಿ ಅವನ್ನು ಪತ್ತೆಹಚ್ಚಲಾಯಿತು.

5. ಮೆಹರೌಲಿಯ ಕಬ್ಬಿಣದ ಕಂಬದ ತೂಕ ಆರು ಟನ್, ಎತ್ತರ 23 ಅಡಿ. 19ನೇ ಶತಮಾನದ ಆರಂಭದವರೆಗೂ ಯೂರೋಪಿನ ಯಾವ ನಿಪುಣ ಕಮ್ಮಾರನಿಗೂ ಅಂಥ ಕಂಬವನ್ನು ಎರಕ ಹೊಯ್ಯಲು ಸಾಧ್ಯವಾಗುತ್ತಿರಲಿಲ್ಲ.

©KTBS Not to be republished

### I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಗುಪ್ತರ ರಾಜಧಾನಿ ________
2. ಅಲಹಾಬಾದಿನ ಸ್ತಂಭ ಶಾಸನವನ್ನು ರಚಿಸಿದವರು ________
3. 'ಕವಿರಾಜ' ಬಿರುದು ಹೊಂದಿದ್ದ ಗುಪ್ತರ ರಾಜ ________
4. ಮುದ್ರಾರಾಕ್ಷಸ ಕೃತಿಯನ್ನು ಬರೆದವರು ________
5. 'ಕವಿಕುಲಗುರು' ಎಂಬ ಬಿರುದನ್ನು ಹೊಂದಿದ್ದ ಮಹಾಕವಿ ________

### II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಅಲಹಾಬಾದ್ ಸ್ತಂಭಶಾಸನದಲ್ಲಿ ಯಾವ ಚಕ್ರವರ್ತಿಯ ವಿವರಗಳಿವೆ?
2. 'ವಿಕ್ರಮಾದಿತ್ಯ' ಎಂಬುದು ಯಾವ ಗುಪ್ತ ಸಾಮ್ರಾಟನ ಬಿರುದಾಗಿತ್ತು?
3. ಗುಪ್ತರ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಚೀನಿ ಯಾತ್ರಿಕ ಯಾರು?

4. ಕಾಳಿದಾಸನು ರಚಿಸಿದ ಯಾವುದಾದರೂ ಒಂದು ನಾಟಕವನ್ನು ಹೆಸರಿಸಿ.

5. 'ಮೃಚ್ಛಕಟಿಕ' ಯಾರು ರಚಿಸಿದ ಕೃತಿಯಾಗಿದೆ?

6. ಅಮರಸಿಂಹನು ರಚಿಸಿದ ಶಬ್ದಕೋಶ ಯಾವುದು?

7. ಧಮೇಖ್ ಸ್ತೂಪ ಎಲ್ಲಿದೆ?

8. ಗುಪ್ತರ ಕಾಲದ ಪ್ರಸಿದ್ಧ ಗಣಿತಶಾಸ್ತ್ರಜ್ಞನ ಹೆಸರೇನು?

9. 'ಅಷ್ಟಾಂಗ ಹೃದಯ'ವನ್ನು ಸಿದ್ಧಪಡಿಸಿದವರು ಯಾರು?

**III. ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಸಮುದ್ರಗುಪ್ತನ ಸಾಧನೆಯನ್ನು ಬಣ್ಣಿಸಿ.

2. ಸಂಸ್ಕೃತ ಸಾಹಿತ್ಯಕ್ಕೆ ಗುಪ್ತರ ಕೊಡುಗೆಯನ್ನು ವಿವರಿಸಿ.

**IV. ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| ಕವಿರಾಜ | ಫೋ-ಕೋ-ಕಿ |
| ವಿಕ್ರಮಾದಿತ್ಯ | ಖಗೋಳಶಾಸ್ತ್ರಜ್ಞ |
| ಫಾಹಿಯಾನ್ | ಸಮುದ್ರಗುಪ್ತ |
| ಮೆಹರೌಲಿ | ಎರಡನೆಯ ಚಂದ್ರಗುಪ್ತ |
| ವರಾಹಮಿಹಿರ | ಕಬ್ಬಿಣದ ಕಂಬ |

**ಚಟುವಟಿಕೆ**

1. ಭಾರತದ ಪ್ರಾಚೀನ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.
2. ಸಮುದ್ರಗುಪ್ತ, ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯ, ಕಾಳಿದಾಸ, ಆರ್ಯಭಟ, ವರಾಹಮಿಹಿರ ಮತ್ತು ವಾಗ್ಭಟ ಇವರ ಜೀವನ ಚರಿತ್ರೆಗಳನ್ನು ಓದಿರಿ.

## ವರ್ಧನರು

ಗುಪ್ತಸಾಮ್ರಾಜ್ಯದ ಅವನತಿಯ ನಂತರ ಉತ್ತರ ಭಾರತದಲ್ಲಿ ಹಲವು ಸಣ್ಣಪುಟ್ಟ ರಾಜಮನೆತನಗಳು ತಲೆ ಎತ್ತಿದವು. ಅವುಗಳಲ್ಲಿ ಥಾಣೇಶ್ವರದ ಪುಷ್ಯಭೂತಿ ಮನೆತನವೂ ಒಂದು. ಇದು ವರ್ಧನ ಮನೆತನ ಎಂದೇ ಪ್ರಸಿದ್ಧವಾಗಿದೆ. ಹರ್ಷವರ್ಧನನು ಈ ಮನೆತನದ ಜನಪ್ರಿಯ ದೊರೆಯಾಗಿದ್ದನು.

© KTBS Not to be republished

## ಹರ್ಷವರ್ಧನ

ಹರ್ಷವರ್ಧನನು ಸಿಂಹಾಸನವೇರಿದಾಗ ಹದಿನಾರು ವರ್ಷದ ಯುವಕನಾಗಿದ್ದನು. ಈ ವೇಳೆಗೆ ಅವನ ಬದುಕಿನಲ್ಲಿ ಹಲವು ದುರಂತಗಳು ಘಟಿಸಿದ್ದವು. ಹರ್ಷವರ್ಧನನ ತಂದೆ ಪ್ರಭಾಕರವರ್ಧನನು ಮಡಿದ ನಂತರ ಅಣ್ಣ ರಾಜ್ಯವರ್ಧನನು ಅಧಿಕಾರಕ್ಕೆ ಬಂದನು. ತಂಗಿ ರಾಜ್ಯಶ್ರೀಯನ್ನು ಮೌಖರಿ ಮನೆತನದ ಗ್ರಹವರ್ಮನಿಗೆ ವಿವಾಹ ಮಾಡಿಕೊಡಲಾಗಿತ್ತು. ಮಾಳ್ವದ ದುಷ್ಟರಾಜನೊಬ್ಬ ಗ್ರಹವರ್ಮನನ್ನು ಕೊಂದು ರಾಜ್ಯಶ್ರೀಯನ್ನು ಕನೌಜಿನಲ್ಲಿ ಬಂಧಿಸಿಟ್ಟನು. ಆಗ ರಾಜ್ಯವರ್ಧನನು ದಂಡೆತ್ತಿ ಹೋಗಿ ಮಾಳ್ವದ ಸೇನೆಯನ್ನು ಸೋಲಿಸಿದನಾದರೂ, ಗೌಡದೇಶದ ಶಶಾಂಕನಿಂದ ಕೊಲ್ಲಲ್ಪಟ್ಟನು. ಇಂತಹ ಸಂಕಷ್ಟಮಯ ಕಾಲದಲ್ಲಿ ಹರ್ಷವರ್ಧನನು ಅಧಿಕಾರಕ್ಕೆ ಬಂದನು.




ಈ ಹೊತ್ತಿಗೆ ಬಂಧನದಿಂದ ಬಿಡುಗಡೆಗೊಂಡು ವಿಂಧ್ಯಪರ್ವತದ ಅರಣ್ಯದಲ್ಲಿ ಅಲೆಯುತ್ತಿದ್ದ ವಿಧವೆ ತಂಗಿ ರಾಜ್ಯಶ್ರೀಯನ್ನು ಪತ್ತೆ ಮಾಡಿದನು. ಮುಂದೆ ಭಾವನಾದ ಗ್ರಹವರ್ಮನ ಮೌಖರಿ ರಾಜ್ಯ ಕೂಡ ಹರ್ಷವರ್ಧನನ ಆಳ್ವಿಕೆಗೆ ಒಳಪಟ್ಟಿತು. ಮೌಖರಿಗಳ ಕನೌಜ್ ನಗರವನ್ನು ತನ್ನ ರಾಜಧಾನಿ ಮಾಡಿಕೊಂಡನು. ನಂತರ ಅಣ್ಣ ರಾಜ್ಯವರ್ಧನನ ಸಾವಿಗೆ ಕಾರಣನಾದ ಶಶಾಂಕನ ಮೇಲೆ ಯುದ್ಧ ಸಾರಿದನು. ಮುಂದೆ ಸಾಕಷ್ಟು ಸೇನೆಯನ್ನು ಸಂಘಟಿಸಿ ಕಾಶ್ಮೀರ, ಸಿಂಧ್ ಪ್ರದೇಶಗಳನ್ನು ಗೆದ್ದನು.

©KTBS Not to be republished

ದಕ್ಷಿಣ ಭಾರತದ ಮೇಲೆ ಆಕ್ರಮಣ ಕೈಗೊಂಡನು. ದಕ್ಷಿಣದಲ್ಲಿ ನರ್ಮದಾ ನದಿ ತೀರದವರೆಗೆ ಬಂದ ಹರ್ಷವರ್ಧನನನ್ನು ಕನ್ನಡದ ದೊರೆ ಚಾಲುಕ್ಯ ಮನೆತನದ ಇಮ್ಮಡಿ ಪುಲಕೇಶಿಯು ಹಿಮ್ಮೆಟ್ಟಿಸಿದನು. ಒಟ್ಟಾರೆ, ಉತ್ತರ ಭಾರತದ ಮೇಲೆ ಪ್ರಭುತ್ವ ಸಾಧಿಸಿದ್ದ ಹರ್ಷವರ್ಧನನು ಸುಮಾರು 40 ವರ್ಷಗಳ ಕಾಲ ಆಳಿದನು. ಚೀನಾದ ಪ್ರವಾಸಿ ಹ್ಯೂಯನ್‌ತ್ಸಾಂಗನು ಹರ್ಷವರ್ಧನನ ಆಪ್ತನಾಗಿದ್ದನು.

**ಸಾಹಿತ್ಯ :** ಹರ್ಷವರ್ಧನನು ಕಲಿ ಮಾತ್ರವಲ್ಲ, ಕವಿಯೂ ಆಗಿದ್ದನು. ಸ್ವತಃ ಹರ್ಷವರ್ಧನನು ಸಂಸ್ಕೃತದಲ್ಲಿ ಪ್ರಿಯದರ್ಶಿಕಾ, ರತ್ನಾವಳಿ ಮತ್ತು ನಾಗಾನಂದ ಎಂಬ ಮೂರು ನಾಟಕಗಳನ್ನು ರಚಿಸಿದ್ದಾನೆ. ಬಾಣಭಟ್ಟ ಮೊದಲಾದ ಕವಿಗಳಿಗೂ ಆಶ್ರಯ ನೀಡಿದ್ದನು. ಬಾಣಭಟ್ಟನು ಹರ್ಷವರ್ಧನನನ್ನು ಕುರಿತು 'ಹರ್ಷಚರಿತ' ಎಂಬ ಕೃತಿಯನ್ನು ಬರೆದನು. ಶಿಕ್ಷಣಪ್ರೇಮಿಯೂ ಆಗಿದ್ದ ಹರ್ಷವರ್ಧನನು ಪ್ರಾಚೀನ ನಲಂದ ವಿಶ್ವವಿದ್ಯಾನಿಲಯಕ್ಕೆ ಉದಾರವಾಗಿ ದತ್ತಿಗಳನ್ನು ನೀಡಿದ್ದನು.

**ಧರ್ಮ :** ಹರ್ಷವರ್ಧನನು ಸರ್ವಧರ್ಮ ಸಹಿಷ್ಣುವಾಗಿದ್ದನು. ಅಂದರೆ ಎಲ್ಲಾ ಧರ್ಮಗಳನ್ನು ಗೌರವಿಸುತ್ತಿದ್ದನು. ಮೂಲತಃ ಶೈವ ಧರ್ಮೀಯನಾಗಿದ್ದರೂ ಕೂಡ ಬೌದ್ಧಧರ್ಮಕ್ಕೆ ಅಪಾರ ಮನ್ನಣೆ ನೀಡಿದನು. ಕನೌಜ್ ಮತ್ತು ಪ್ರಯಾಗಗಳಲ್ಲಿ ಧರ್ಮಸಮ್ಮೇಳನಗಳನ್ನು ಆಯೋಜಿಸಿದರು.

## ಹ್ಯೂಯನ್ ತ್ಸಾಂಗ್


ಹ್ಯೂಯನ್ ತ್ಸಾಂಗ್

ಹ್ಯೂಯನ್ ತ್ಸಾಂಗ್ (Hiuen Tsang) ಚೀನಾದ ಪ್ರಸಿದ್ಧ ಪ್ರವಾಸಿ. ಈತನು ಸುಮಾರು 1400 ವರ್ಷಗಳ ಹಿಂದೆ ಭಾರತಕ್ಕೆ ಬಂದನು. ಹದಿನೈದು ವರ್ಷಗಳ ಕಾಲ ಭಾರತದಲ್ಲಿ ಸಂಚರಿಸಿ ಬೌದ್ಧ ಸಾಹಿತ್ಯ ಅಧ್ಯಯನ ನಡೆಸಿದನು. ನಳಂದ ವಿಶ್ವವಿದ್ಯಾಲಯದಲ್ಲಿಯೂ ಕಲಿತನು. ಹರ್ಷವರ್ಧನನ ಆಸ್ಥಾನದಲ್ಲಿ ಹಲವು ವರ್ಷಗಳ ಕಾಲ ನೆಲೆಸಿದನು. ಭಾರತದ ಅನುಭವಗಳನ್ನು 'ಸಿ–ಯು–ಕಿ' (ಪಶ್ಚಿಮ ರಾಜ್ಯದ ದಾಖಲೆ Record of western kingdom) ಎಂಬ ಪ್ರವಾಸಿ ಕಥನದಲ್ಲಿ ದಾಖಲಿಸಿದ್ದಾನೆ.

**ನಳಂದ ವಿಶ್ವವಿದ್ಯಾಲಯ :** ಇಂದಿನ ಬಿಹಾರ ರಾಜ್ಯದಲ್ಲಿರುವ ನಳಂದ ವಿಶ್ವವಿದ್ಯಾಲಯವು ಗುಪ್ತರ ಕಾಲದಿಂದ ಆರು ಶತಮಾನಗಳಿಗೂ ಹೆಚ್ಚು ಜಗತ್ಪ್ರಸಿದ್ಧಿ ಪಡೆದಿತ್ತು. ಇದು ಪ್ರಾಚೀನ ಭಾರತದ ಪ್ರಸಿದ್ಧ ವಿಶ್ವವಿದ್ಯಾಲಯವಾಗಿತ್ತು. ಅಧ್ಯಯನಕ್ಕಾಗಿ ಜಪಾನ್, ಚೀನಾ ಮುಂತಾದ ವಿದೇಶಗಳಿಂದ ಸಾವಿರಾರು ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು. ಇಲ್ಲಿ ಎಂಟು ಮಹಾ ಪಾಠ ಶಾಲೆಗಳೂ, ಮೂರು ಬೃಹತ್ ಗ್ರಂಥಭಂಡಾರಗಳೂ ಇದ್ದುವು. ಬೌದ್ಧಮತ ಇಲ್ಲಿನ ಮುಖ್ಯ ಅಧ್ಯಯನ ವಿಷಯವಾಗಿದ್ದರೂ ವೇದ, ಯೋಗ, ವೈದ್ಯ ಮತ್ತಿತರ ವಿಷಯಗಳನ್ನೂ ಕಲಿಸುತ್ತಿದ್ದರು. ಹ್ಯೂಯನ್ ತ್ಸಾಂಗ್ ಈ ಮಹಾವಿದ್ಯಾಲಯದಲ್ಲಿ ಹಲವು ವರ್ಷಗಳನ್ನು ಕಳೆದನು.

©KTBS Not to be republished

## ನಿಮಗೆ ತಿಳಿದಿರಲಿ

ನಳಂದ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಕ್ಕಾಗಲಿ, ಊಟ ವಸತಿಗಳಿಗಾಗಲೀ ಶುಲ್ಕವಿರಲಿಲ್ಲ. ಈ ಎಲ್ಲ ಖರ್ಚನ್ನು ನಿರ್ವಹಿಸಲು ನೂರು ಗ್ರಾಮಗಳ ಆದಾಯವು ಮೀಸಲಾಗಿದ್ದಿತು. ಸಾಮ್ರಾಟ ಹರ್ಷವರ್ಧನ ಈ ಮಹಾವಿದ್ಯಾಲಯದ ಪೋಷಕರಲ್ಲೊಬ್ಬ. ವಿದ್ಯಾರ್ಥಿ ಜೀವನ ಕಟ್ಟುನಿಟ್ಟಾಗಿತ್ತು. ಶ್ರೇಷ್ಠಪಂಡಿತರು ಅಧ್ಯಾಪಕ ವರ್ಗದಲ್ಲಿದ್ದರು.



ನಳಂದ ವಿಶ್ವವಿದ್ಯಾಲಯ

© KTBS Not to be republished

## I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಹರ್ಷವರ್ಧನನ ಆಪ್ತನಾಗಿದ್ದ ಚೀನಾದ ಪ್ರವಾಸಿ__________
2. ಹ್ಯೂಯನ್ ತ್ಸಾಂಗನ ಪ್ರವಾಸ ಕಥನದ ಹೆಸರು __________
3. ನಲಂದ ವಿಶ್ವವಿದ್ಯಾಲಯವು ಇಂದಿನ __________ ರಾಜ್ಯದಲ್ಲಿದೆ.
4. ಹರ್ಷವರ್ಧನನನ್ನು ನರ್ಮದಾ ನದಿ ತೀರದಲ್ಲಿ ಸೋಲಿಸಿದ ಕನ್ನಡದ ದೊರೆ__________

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಹರ್ಷವರ್ಧನನ ಅಣ್ಣ ಮತ್ತು ತಂಗಿಯನ್ನು ಹೆಸರಿಸಿ.
2. ಹರ್ಷವರ್ಧನನ ರಾಜಧಾನಿ ಯಾವುದು?
3. 'ಹರ್ಷಚರಿತೆ' ಎಂಬ ಗ್ರಂಥವನ್ನು ಯಾರು ರಚಿಸಿದರು?
4. ಹರ್ಷವರ್ಧನನು ರಚಿಸಿದ ನಾಟಕಗಳನ್ನು ಹೆಸರಿಸಿ.
5. ಹರ್ಷವರ್ಧನನ ಆಸ್ಥಾನಕ್ಕೆ ಬಂದಿದ್ದ ಚೀನಾ ದೇಶದ ಪ್ರವಾಸಿ ಯಾರು?
6. ಪ್ರಾಚೀನ ಭಾರತದ ಖ್ಯಾತ ವಿಶ್ವವಿದ್ಯಾಲಯ ಯಾವುದು ಮತ್ತು ಎಲ್ಲಿದೆ?

*****

©KTBS Not to be republished

| ಪಾಠ 9 | ಪೌರತ್ವ |
|---|---|

## ಪಾಠದ ಪರಿಚಯ

ಈ ಪಾಠದಲ್ಲಿ ಪೌರತ್ವದ ಅರ್ಥ, ಮಹತ್ವ, ಲಕ್ಷಣಗಳು, ಪೌರತ್ವ ಪಡೆಯುವ ಹಾಗೂ ಕಳೆದುಕೊಳ್ಳುವ ವಿಧಾನಗಳನ್ನು ನಿರೂಪಿಸಲಾಗಿದೆ.

## ಸಾಮರ್ಥ್ಯಗಳು

1] ಪೌರತ್ವದ ಅರ್ಥ ಮತ್ತು ಮಹತ್ವವನ್ನು ತಿಳಿಯುವುದು.

2] ಪೌರತ್ವದ ಲಕ್ಷಣಗಳನ್ನು ಪಟ್ಟಿ ಮಾಡುವುದು.

3] ಪೌರತ್ವ ಪಡೆಯುವ ವಿಧಾನಗಳನ್ನು ಅರ್ಥ ಮಾಡಿಕೊಳ್ಳುವುದು.

4] ಪೌರತ್ವ ಕಳೆದುಕೊಳ್ಳುವ ವಿಧಾನಗಳನ್ನು ತಿಳಿಯುವುದು.

©KTBS Not to be republished

## ಪೌರತ್ವದ ಅರ್ಥ ಮತ್ತು ಮಹತ್ವ

**ಅರ್ಥ:** ಪ್ರತಿಯೊಬ್ಬ ವ್ಯಕ್ತಿಯ ಉತ್ತಮ ಜೀವನ ನಿರ್ವಹಿಸುವುದಕ್ಕೆ ಪೂರಕವಾಗಿರುವ ಸಂಘಟನೆಯನ್ನು ರಾಷ್ಟ್ರವೆಂದು ಕರೆಯಲಾಗುತ್ತದೆ.ಒಂದು ರಾಷ್ಟ್ರಕ್ಕೆ ಸೇರಿದ ಜವಾಬ್ದಾರಿಯುತ ಸದಸ್ಯನನ್ನು ಪೌರನೆಂದು ಕರೆಯಲಾಗುತ್ತದೆ.ಪೌರತ್ವವನ್ನು ಹೊಂದಿರುವ ಪ್ರತಿಯೊಬ್ಬರೂ ಕೂಡಾ ಆ ರಾಷ್ಟ್ರ ಒದಗಿಸುವ ಹಕ್ಕುಗಳನ್ನು ಪಡೆದಿರುತ್ತಾರೆ. ಅಂದರೆ ಕನಿಷ್ಠ ಜೀವನ ಮಟ್ಟ, ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ ಹಾಗೂ ಇನ್ನಿತರ ಹಕ್ಕುಗಳನ್ನು ಪಡೆದಿರುತ್ತಾರೆ.ಜೊತೆಗೆ ಪೌರರಿಂದ ರಾಷ್ಟ್ರವು ಕೆಲವು ಕರ್ತವ್ಯಗಳನ್ನು ನಿರೀಕ್ಷಿಸುತ್ತದೆ.ಪೌರರು ತಮ್ಮ ರಾಷ್ಟ್ರದೊಂದಿಗೆ ನಿಕಟ ಸಂಬಂಧ ಹೊಂದಿರುತ್ತಾರೆ. ಏಕ ಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ರಾಷ್ಟ್ರಗಳ ಪೌರತ್ವ ಪಡೆಯಲು ಅವಕಾಶವಿರುವುದಿಲ್ಲ.

**ಮಹತ್ವ:** ತಾನು ವಾಸಿಸುವ ರಾಷ್ಟ್ರದಲ್ಲಿ ಗೌರವಯುತ ಜೀವನ ನಡೆಸಲು, ರಾಷ್ಟ್ರದ ಆಡಳಿತದಲ್ಲಿ ಭಾಗವಹಿಸಲು ಹಾಗೂ ಪ್ರತಿಯೊಬ್ಬರೂ ಉತ್ತಮ ಜೀವನ ನಡೆಸಲು ಅನುಕೂಲವಾದ ಆಡಳಿತ ಸ್ಥಾಪಿಸಲು ಪೌರತ್ವ ಅಗತ್ಯ. ಅಲ್ಲದೆ, ರಾಷ್ಟ್ರದ ಏಕತೆ ಹಾಗೂ ಸಮಗ್ರತೆಗೆ ಧಕ್ಕೆ ಬರದಂತೆ ನಡೆದುಕೊಳ್ಳಲು ಪೌರತ್ವ ಅತಿ ಮುಖ್ಯವೆನಿಸುತ್ತದೆ.

## ಲಕ್ಷಣಗಳು

1) ವ್ಯಕ್ತಿ ತಾನು ಒಂದು ದೇಶದ ಪ್ರಜೆಯೆಂದು ಪೌರತ್ವದ ಮೂಲಕ ಗುರುತಿಸಿಕೊಳ್ಳುತ್ತಾನೆ.

2) ಪೌರರು ರಾಷ್ಟ್ರ ನೀಡುವ ಎಲ್ಲ ಹಕ್ಕುಗಳನ್ನು ಪಡೆಯಬಹುದು.

3) ಪೌರರಿಗೆ ರಾಷ್ಟ್ರವು ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

4) ಪೌರತ್ವವು ಪ್ರಜೆಗಳು ತಮ್ಮ ದೇಶದ ಕಾನೂನಿಗನುಗುಣವಾಗಿ ಜೀವನ ನಡೆಸುವಂತೆ ಮಾಡುತ್ತದೆ.

5) ದೇಶದ ಅತ್ಯುನ್ನತ ಹುದ್ದೆಯಿಂದ ಹಿಡಿದು ಇನ್ನಿತರ ಹುದ್ದೆಗಳನ್ನು ಹೊಂದುವ ಅಧಿಕಾರವನ್ನು ಪೌರರು ಪಡೆಯುತ್ತಾರೆ.

6) ವಿದೇಶಿಯರಿಗೆ ರಾಜಕೀಯ ಹಕ್ಕನ್ನು ನಿರಾಕರಿಸುತ್ತದೆ.



ಸ್ವದೇಶಿ ಮೈಸೂರು ಅರಮನೆ ವಿದೇಶಿ

© KTBS Not to be republished

**ಪೌರತ್ವ ಪಡೆಯುವ ವಿಧಾನ:**

ಪ್ರಜೆಗಳು ಒಂದು ದೇಶದ ಪೌರತ್ವವನ್ನು ಕೆಳಕಂಡ ವಿಧಾನದ ಮೂಲಕ ಪಡೆಯಬಹುದು.

1) **ಜನನದ ಮೂಲಕ:** ಯಾವುದೇ ವ್ಯಕ್ತಿ ತಾನು ಯಾವ ದೇಶದಲ್ಲಿ ಜನಿಸುತ್ತಾನೊ ಅಥವಾ ಜನಿಸುತ್ತಾಳೊ ಅವರು ತಾನು ಜನಿಸಿದ ದೇಶದ ಪೌರತ್ವವನ್ನು ಪಡೆಯುತ್ತಾರೆ. ಅಂತಹವರಿಗೆ ತಂದೆ ತಾಯಿ ಯಾವ ರಾಷ್ಟ್ರದವರೆಂದು ಪರಿಗಣಿಸದೆ ಪೌರತ್ವ ನೀಡಲಾಗುತ್ತದೆ. ಹಾಗಾಗಿ ಒಂದು ದೇಶದ ಪೌರತ್ವ ಪಡೆಯಲು ಜನನವು ಮುಖ್ಯ ಆಧಾರವಾಗಿದೆ. ಉದಾಹರಣೆಗೆ– ಜನವರಿ 26, 1950 ರಂದು ಅಥವಾ ನಂತರ ಭಾರತದಲ್ಲಿ ಜನಿಸಿದವರು ಭಾರತದ ಪೌರರಾಗಿರುತ್ತಾರೆ. ಏಕೆಂದರೆ ಈ ದಿನದಂದು ಸ್ವತಂತ್ರ ಭಾರತವು ತನ್ನದೇ ಆದ ಸಂವಿಧಾನವನ್ನು ಜಾರಿಗೊಳಿಸಿತು.

**2) ವಂಶ ಪಾರಂಪರ್ಯದ ಮೂಲಕ:** ಈ ವಿಧಾನದ ಪ್ರಕಾರ ಒಬ್ಬ ವ್ಯಕ್ತಿಯ ತಂದೆ ತಾಯಿಯು ಯಾವ ದೇಶಕ್ಕೆ ಸೇರಿದವರು ಎನ್ನುವ ಆಧಾರದ ಮೇಲೆ ಪೌರತ್ವ ಪಡೆಯುತ್ತಾರೆ. ಉದಾಹರಣೆಗೆ– ಜನವರಿ 26, 1950 ರಂದು ಅಥವಾ ನಂತರ ಭಾರತದ ಹೊರಗೆ ಭಾರತ ದೇಶದವರಾದ ಕುಟುಂಬಗಳಲ್ಲಿ ಜನಿಸಿದವರಿಗೆ ಭಾರತದ ಪೌರತ್ವ ದೊರೆಯುತ್ತದೆ.

**3) ನೋಂದಣಿಯ ಮೂಲಕ:** ಯಾವುದೇ ಒಂದು ದೇಶದ ಪೌರತ್ವವನ್ನು ಸೂಕ್ತವಾದ ವಿಧಾನದ ಮೂಲಕ ಸಂಬಂಧಪಟ್ಟ ಕಛೇರಿಯಲ್ಲಿ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಸಿಕೊಳ್ಳುವ ಮೂಲಕ ಪೌರತ್ವವನ್ನು ಪಡೆಯಬಹುದು. ಹೀಗೆ ಅರ್ಜಿ ಸಲ್ಲಿಸಲು ಕೆಲವೊಂದು ಮಾನದಂಡಗಳನ್ನು ಪ್ರತಿಯೊಂದು ರಾಷ್ಟ್ರವೂ ವಿಧಿಸಿರುತ್ತದೆ. ಉದಾಹರಣೆಗೆ– ಭಾರತದಲ್ಲಿ ಕನಿಷ್ಠ 5 ವರ್ಷಗಳ ಕಾಲ ವಾಸವಾಗಿದ್ದರೆ ಅಂತಹವರು ನೊಂದಾಯಿಸಿಕೊಳ್ಳುವ ಮೂಲಕ ಪೌರತ್ವ ಪಡೆಯಬಹುದು.

4) ಒಂದು ದೇಶದೊಂದಿಗೆ ಇನ್ನೊಂದು ದೇಶದ ಭೂಭಾಗ ಸೇರ್ಪಡೆಗೊಂಡರೆ ಯಾವ ದೇಶದೊಂದಿಗೆ ಇನ್ನೊಂದು ಭೂಪ್ರದೇಶ ಸೇರ್ಪಡೆಗೊಳ್ಳುತ್ತದೆಯೊ ಆ ದೇಶದ ಪೌರತ್ವ ಲಭ್ಯವಾಗುತ್ತದೆ. ಸಾಮಾನ್ಯವಾಗಿ ಯುದ್ಧಗಳಿಂದ ಅಥವಾ ಒಂದು ದೇಶ ಸ್ವನಿರ್ಧಾರದಿಂದ ಇನ್ನೊಂದು ದೇಶದೊಂದಿಗೆ ಸೇರ್ಪಡೆಗೊಳ್ಳಬಹುದು. ಅಂತಹ ಸಂದರ್ಭದಲ್ಲೂ ಸಹ ಸೇರ್ಪಡೆಗೊಂಡ ದೇಶದ ಪೌರತ್ವ ಲಭ್ಯವಾಗುತ್ತದೆ.

**ಪೌರತ್ವ ಕಳೆದುಕೊಳ್ಳುವ ವಿಧಾನ:**

ಒಂದು ದೇಶದ ಪೌರತ್ವವನ್ನು ಕೆಳಕಂಡ ವಿಧಾನಗಳ ಮೂಲಕ ಕಳೆದುಕೊಳ್ಳುತ್ತಾರೆ.

**1) ಪರಿತ್ಯಾಗ (Renunciation):** ಯಾವುದೇ ಭಾರತೀಯ ಪೌರ, ಮತ್ತೊಂದು ರಾಷ್ಟ್ರದ ಪೌರತ್ವ ಪಡೆದರೆ ಸ್ವ–ಇಚ್ಛೆಯಿಂದ ನೋಂದಣಿಯ ಮೂಲಕ ಪ್ರಕಟಿಸಿ ಭಾರತದ ಪೌರತ್ವವನ್ನು ತ್ಯಾಗಮಾಡಬಹುದು.

**2) ಅಂತ್ಯಗೊಳ್ಳುವಿಕೆ (Termination):** ಭಾರತದ ಯಾವುದೇ ಪೌರನೊಬ್ಬ ವಿದೇಶವೊಂದರ ಪೌರತ್ವ ಪಡೆದರೆ ಅವನಿಂದ ಅರ್ಜಿ ಸಲ್ಲಿಕೆಯನ್ನು ನಿರೀಕ್ಷಿಸದೆ ಕಾನೂನು ಬದ್ಧವಾಗಿ ಆತನ ಭಾರತದ ಪೌರತ್ವವನ್ನು ಅಂತ್ಯಗೊಳಿಸಲಾಗುತ್ತದೆ..

**3) ಪದಚ್ಯುತಿ (By Deprivation):** ಯಾರಾದರು ವ್ಯಕ್ತಿಯೊಬ್ಬ ವಂಚನೆಯ ಮೂಲಕ ಭಾರತದ ಪೌರತ್ವವನ್ನು ಹೊಂದಿದ್ದರೆ ಅಥವಾ ಅವನು/ ಅವಳು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ

©KTBS Not to be republished

ತೊಡಗಿಸಿಕೊಂಡಿದ್ದರೆ ಅಥವಾ ಭಾರತದ ಸಂವಿಧಾನಕ್ಕೆ ಅವಿಧೇಯನಾಗಿ ನಡೆದುಕೊಂಡರೆ ಅಂತಹವರನ್ನು ಭಾರತ ಸರ್ಕಾರವು ಪೌರತ್ವದಿಂದ ರದ್ದುಗೊಳಿಸಬಹುದು. ಇದು ಬಲವಂತದ ಪದಚ್ಯುತಿಯಾಗಿದೆ.

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಪೌರತ್ವ ಎಂದರೇನು?
2. ಪೌರತ್ವದ ಲಕ್ಷಣಗಳನ್ನು ಪಟ್ಟಿ ಮಾಡಿ.
3. ಪೌರತ್ವ ಪಡೆಯುವ ವಿಧಾನಗಳನ್ನು ತಿಳಿಸಿ.
4. ಪೌರತ್ವ ಕಳೆದುಕೊಳ್ಳುವ ಸಂದರ್ಭಗಳನ್ನು ತಿಳಿಸಿ.

**ಚರ್ಚಿಸಿ:**

1. ಪೌರತ್ವ ಏಕೆ ಆವಶ್ಯಕ?
2. ಪೌರತ್ವ ಕಳೆದುಕೊಳ್ಳುವುದರಿಂದ ಆಗುವ ನಷ್ಟಗಳನ್ನು ಪಟ್ಟಿಮಾಡಿ.

* * * * *

©KTBS Not to be republished

| ಪಾಠ 10 | ರಾಷ್ಟ್ರೀಯ ಚಿಹ್ನೆಗಳು ಮತ್ತು ರಾಷ್ಟ್ರೀಯ ಭಾವೈಕ್ಯತೆ |
|---|---|

### ಪಾಠದ ಪರಿಚಯ

ಈ ಪಾಠದಲ್ಲಿ ನಮ್ಮ ರಾಷ್ಟ್ರಧ್ವಜ, ರಾಷ್ಟ್ರಲಾಂಛನ, ರಾಷ್ಟ್ರಗೀತೆ, ರಾಷ್ಟ್ರೀಯ ಹಬ್ಬಗಳು ಹಾಗೂ ದಿನಾಚರಣೆಗಳನ್ನು ಪರಿಚಯ ಮಾಡಲಾಗಿದೆ.

### ಸಾಮರ್ಥ್ಯಗಳು

1] ರಾಷ್ಟ್ರಧ್ವಜದ ವಿಶೇಷತೆಯನ್ನು ಅರ್ಥೈಸಿಕೊಳ್ಳುವುದು.

2] ರಾಷ್ಟ್ರಧ್ವಜ ಸಂಹಿತೆಯನ್ನು ತಿಳಿದುಕೊಂಡು ಅದನ್ನು ಪಾಲಿಸುವುದು.

3] ರಾಷ್ಟ್ರಲಾಂಛನದ ವಿವರಗಳು ಮತ್ತು ಮಹತ್ವವನ್ನು ಅರಿತುಕೊಂಡು ಮೆಚ್ಚುವುದು.

4] ರಾಷ್ಟ್ರಗೀತೆ ಹಿನ್ನೆಲೆ ಮತ್ತು ಮಹತ್ವವನ್ನು ತಿಳಿದುಕೊಳ್ಳುವುದು.

5] ರಾಷ್ಟ್ರಗೀತೆಯನ್ನು ಸೂಕ್ತವಾಗಿ ಹಾಡಲು ಸಮರ್ಥವಾಗುವುದು.

6] ರಾಷ್ಟ್ರೀಯ ಹಬ್ಬಗಳು ಮತ್ತು ದಿನಾಚರಣೆಗಳ ಮಹತ್ವವನ್ನು ತಿಳಿಯುವುದು.

©KTBS Not to be republished

### ರಾಷ್ಟ್ರೀಯ ಚಿಹ್ನೆಗಳು:

ಸಾಮಾನ್ಯವಾಗಿ ಒಂದು ದೇಶವು ತನ್ನ ಸಂಸ್ಕೃತಿ ಮತ್ತು ಪರಂಪರೆಗಳ ವಿಶೇಷತೆಗಳನ್ನು ಪ್ರತಿಬಿಂಬಿಸುವ ಕೆಲವು ಚಿಹ್ನೆಗಳನ್ನು ಬಳಕೆ ಮಾಡುತ್ತದೆ. ಅವುಗಳನ್ನು ರಾಷ್ಟ್ರೀಯ ಚಿಹ್ನೆಗಳು ಎನ್ನುವರು. ಮುಖ್ಯವಾಗಿ ರಾಷ್ಟ್ರಧ್ವಜ ಮತ್ತು ರಾಷ್ಟ್ರಲಾಂಛನವು ಒಂದು ದೇಶದ ರಾಷ್ಟ್ರೀಯ ಚಿಹ್ನೆಗಳು. ಪ್ರತಿ ದೇಶಕ್ಕೂ ತನ್ನದೇ ಆದ ರಾಷ್ಟ್ರಗೀತೆಯಿದೆ. ಹಾಗೆಯೇ ಭಾರತ ದೇಶಕ್ಕೆ ರಾಷ್ಟ್ರೀಯ ಪ್ರಾಣಿ, ರಾಷ್ಟ್ರೀಯ ಪಕ್ಷಿ ಇವೆ. ಪ್ರಜೆಗಳಲ್ಲಿ ದೇಶಾಭಿಮಾನ ಮತ್ತು ಭಾವೈಕ್ಯತೆ ಬೇರೂರಲು ಇವು ಪೂರಕ.

### ನಮ್ಮ ರಾಷ್ಟ್ರಗೀತೆ:

'ಜನಗಣಮನ' ಭಾರತದ ರಾಷ್ಟ್ರಗೀತೆ. ಇದನ್ನು **ರವೀಂದ್ರನಾಥ ಠಾಕೂರ್** ಅವರು 1911ರಲ್ಲಿ ಬಂಗಾಲಿ ಭಾಷೆಯಲ್ಲಿ ರಚಿಸಿದರು. ಈ ದೀರ್ಘಗೀತೆಯ ಐದು ವೃತ್ತಗಳಲ್ಲಿ ಮೊದಲ ವೃತ್ತವನ್ನು ಮಾತ್ರ ರಾಷ್ಟ್ರಗೀತೆಯೆಂದು ಸಂವಿಧಾನ ಸಭೆಯು 24 ಜನವರಿ 1950ರಂದು ಅಂಗೀಕರಿಸಿತು. ಗೀತೆಯನ್ನು ಹಾಡಲು ಬೇಕಾಗುವ ಕಾಲಾವಧಿ 52 ಸೆಕೆಂಡುಗಳು. ಕೆಲವು ಸಂದರ್ಭಗಳಲ್ಲಿ ಸಂಕ್ಷಿಪ್ತವಾಗಿ ಗೀತೆಯ ಮೊದಲ ಮತ್ತು ಕೊನೆಯ ಸಾಲುಗಳನ್ನು ಮಾತ್ರವೇ ಹಾಡಲಾಗುವುದು. ಇದಕ್ಕೆ ಸುಮಾರು 20 ಸೆಕೆಂಡುಗಳು ತಗಲುತ್ತವೆ.

ರಾಷ್ಟ್ರಗೀತೆಗೆ ಗೌರವ ಸಲ್ಲಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಅಗೌರವ ಸೂಚಿಸುವುದು, ಅದರ ಹಾಡುವಿಕೆಗೆ ಅಡ್ಡಿಪಡಿಸುವುದು ಶಾಸನದ ಪ್ರಕಾರ ಶಿಕ್ಷಾರ್ಹ ಅಪರಾಧ.

- ರಾಷ್ಟ್ರಗೀತೆಯನ್ನು ಹಾಡುವಾಗ ಶಿಸ್ತಿನಿಂದ ನೇರವಾಗಿ ನಿಲ್ಲಬೇಕು.
- ಉಚ್ಚಾರದಲ್ಲಿ ತಪ್ಪಿಲ್ಲದಂತೆ ಹಾಡಬೇಕು.

## ನಮ್ಮ ರಾಷ್ಟ್ರಧ್ವಜ:

ಧ್ವಜವು ರಾಷ್ಟ್ರದ ಒಂದು ಲಾಂಛನ. ರಾಷ್ಟ್ರಧ್ವಜವು ಸ್ವಾತಂತ್ರ್ಯ, ದೇಶಪ್ರೇಮ, ಒಗ್ಗಟ್ಟು ಹಾಗೂ ನಿಷ್ಠೆಯ ಪ್ರತೀಕವಾಗಿದೆ. ರಾಷ್ಟ್ರಧ್ವಜವು ಸ್ತಂಭದ ಮೇಲೇರಿದಾಗ ಪ್ರತಿಯೊಬ್ಬ ಪ್ರಜೆಯ ಹೃದಯ ತುಂಬಿಬರುತ್ತದೆ.



ರಾಷ್ಟ್ರಧ್ವಜ

**ಸ್ವತಂತ್ರ ಭಾರತದ ತ್ರಿವರ್ಣ ಧ್ವಜ ವರ್ಣನೆ:** ನಮ್ಮದು ಮೂರು ಬಣ್ಣಗಳಿಂದ ಕೂಡಿದ ಧ್ವಜವಾಗಿದೆ. ಮೇಲೆ ಕೇಸರಿ, ಮಧ್ಯ ಬಿಳಿ ಮತ್ತು ಕೆಳಗೆ ಹಸಿರು ಬಣ್ಣಗಳಿವೆ. ಬಿಳಿ ಬಣ್ಣದ ಮಧ್ಯದಲ್ಲಿ ನೀಲಿ ಬಣ್ಣದ ಚಕ್ರವಿದೆ. ಚಕ್ರದಲ್ಲಿ ಇಪ್ಪತ್ತನಾಲ್ಕು ಅರಗಳಿವೆ. ಚಕ್ರದ ವ್ಯಾಸ ಬಿಳಿ ಪಟ್ಟಿಯ ಅಗಲದಷ್ಟೇ ಇದೆ.

ಧ್ವಜವು ಆಯತಾಕಾರವಾಗಿದೆ. ಅದರ ಉದ್ದಗಲಗಳ ಅನುಪಾತ 3:2 ಇರುತ್ತದೆ. ಮೂರು ಬಣ್ಣದ ಪಟ್ಟಿಗಳು ಸಮ ಪ್ರಮಾಣದಲ್ಲಿರುತ್ತವೆ. ಧ್ವಜದ ಬಟ್ಟೆಯು ಹತ್ತಿ ಮತ್ತು ರೇಷ್ಮೆಯದ್ದಾಗಿರಬೇಕು. ಜೊತೆಗೆ ಅದು ಕೈನೇಯ್ಗೆಯದ್ದಾಗಿರಬೇಕು. ಅದರ ದಾರ ಕೈಯಿಂದಲೇ ಮಾಡಿದ್ದಾಗಿರಬೇಕು.

## ರಾಷ್ಟ್ರಧ್ವಜದ ವಿಶೇಷತೆ:

ನಮ್ಮ ರಾಷ್ಟ್ರಧ್ವಜದ ಬಣ್ಣಗಳು ಏನನ್ನು ಹೇಳುತ್ತವೆ? ಕೇಸರಿ ಬಣ್ಣವು ನಿಸ್ವಾರ್ಥ ಹಾಗೂ ತ್ಯಾಗವನ್ನು ಸಂಕೇತಿಸಿದರೆ, ಬಿಳಿ ಬಣ್ಣವು ಸತ್ಯ, ಶಾಂತಿ, ಪರಿಶುದ್ಧತೆಯ ಪ್ರತೀಕವಾಗಿದೆ. ಹಸಿರು ಸಸ್ಯಶ್ಯಾಮಲೆಯಾದ ಭೂಮಿಯ ಸಂಕೇತ; ಕೃಷಿ, ಕೈಗಾರಿಕೆಗಳ ಸಮೃದ್ಧಿಯ ಗುರುತು. ಚಕ್ರವು ಸಾರನಾಥದ ಅಶೋಕ ಸ್ತಂಭದಲ್ಲಿರುವ ಚಕ್ರದ ಪ್ರತಿರೂಪವಾಗಿದೆ. ಅಶೋಕಚಕ್ರವು ನಿರಂತರ ಚಲನೆಯ ಹಾಗೂ ಪ್ರಗತಿಯ ಪ್ರತೀಕವೂ ಹೌದು.

## ರಾಷ್ಟ್ರಧ್ವಜ ಸಂಹಿತೆ

- ಧ್ವಜ ಕೊಳೆಯಾಗಿರಬಾರದು, ಹರಿದಿರಬಾರದು.
- ಹಾರಿಸುವಾಗ ಯಾವಾಗಲೂ ಕೇಸರಿ ಬಣ್ಣ ಮೇಲೆ ಬರುವಂತೆ ಹಾರಿಸಬೇಕು.
- ರಾಷ್ಟ್ರಧ್ವಜದ ಎತ್ತರಕ್ಕೆ ಬೇರಾವ ಧ್ವಜವನ್ನು ಹಾರಿಸಬಾರದು.
- ಕಂಬದ ತುದಿಯವರೆಗೂ ಮೇಲೇರಿಸಿ ಹಾರಿಸಬೇಕು.

©KTBS Not to be republished

- ಯಾವಾಗಲೂ ಸೂರ್ಯೋದಯದ ನಂತರ ರಾಷ್ಟ್ರಧ್ವಜವನ್ನು ಹಾರಿಸಬೇಕು; ಸೂರ್ಯಾಸ್ತಕ್ಕೆ ಮೊದಲು ಇಳಿಸಿ ಮಡಿಚಿಡಬೇಕು.
- ರಾಷ್ಟ್ರೀಯ ಶೋಕವನ್ನು ಆಚರಿಸುವ ಸಮಯದಲ್ಲಿ ಧ್ವಜವನ್ನು ಅರ್ಧ ಎತ್ತರಕ್ಕೆ ಹಾರಿಸುವುದು.
- ಧ್ವಜವನ್ನು ಬಲಗೈಲಿ ಹಿಡಿದು ನಡೆಯಬೇಕು.
- ಧ್ವಜವನ್ನು ನೆಲಕ್ಕೆ ತಾಗಿಸಬಾರದು.

**ಪ್ಲಾಸ್ಟಿಕ್ ಧ್ವಜವನ್ನು ಬಳಸಬಾರದು.**

## ನಮ್ಮ ರಾಷ್ಟ್ರಲಾಂಛನ


ರಾಷ್ಟ್ರಲಾಂಛನ

ನಮ್ಮ ರಾಷ್ಟ್ರಲಾಂಛನವನ್ನೊಮ್ಮೆ ಗಮನಿಸಿ.ಇದು ಸಾರನಾಥದ ಅಶೋಕನ ಶಿಲಾಸ್ತಂಭದ ಬೋದಿಗೆಯು (ಮೇಲುಭಾಗದ) ರೂಪಾಂತರವಾಗಿದೆ. ಬೋದಿಗೆಯಲ್ಲಿ ಸಿಂಹಗಳಿರುವುದರಿಂದ ಇದನ್ನು 'ಸಿಂಹ ಬೋದಿಗೆ' ಎನ್ನುವರು. ಸಾರನಾಥದ ಸಿಂಹ ಬೋದಿಗೆಯು ನಮ್ಮ ರಾಷ್ಟ್ರಲಾಂಛನ ಅಥವಾ ಮುದ್ರೆ ಮೂಲ ಶಿಲ್ಪಕೃತಿಯಲ್ಲಿ ನಾಲ್ಕು ಸಿಂಹಗಳು ನಾಲ್ಕು ದಿಕ್ಕುಗಳಿಗೆ ಮುಖಮಾಡಿ, ಒಂದಕ್ಕೊಂದು ಬೆನ್ನು ಮಾಡಿ, ಪೀಠವೊಂದರ ಮೇಲೆ ನಿಂತಿವೆ. ಪೀಠವು ಗುಂಡಾಗಿದೆ. ಅದರ ನಾಲ್ಕು ದಿಕ್ಕುಗಳಲ್ಲೂ ಒಂದೊಂದು ಚಕ್ರವಿದೆ. ಆ ಚಕ್ರಗಳ ನಡುವೆ ಆನೆ, ಗೂಳಿ, ಕುದುರೆ, ಸಿಂಹಗಳ ಚಿತ್ರಣವಿದೆ. ಪೀಠದಲ್ಲಿರುವ ಚಕ್ರವನ್ನು 'ಧರ್ಮಚಕ್ರ'ವೆಂದೂ ಕರೆಯುತ್ತಾರೆ. ನಮ್ಮ ರಾಷ್ಟ್ರಧ್ವಜದ ಬಿಳಿಯ ಪಟ್ಟಿಯ ನಡುವೆ ಚಕ್ರದ ಚಿಹ್ನೆಯಿದೆ.

ಭಾರತ ಸರ್ಕಾರವು ನಮ್ಮ ರಾಷ್ಟ್ರಲಾಂಛನವನ್ನು 26 ಜನವರಿ 1950ರಂದು ಅಂಗೀಕರಿಸಿತು. ಚಿತ್ರದಲ್ಲಿ ಮೂರೇ ಸಿಂಹಗಳು ಮಾತ್ರ ಕಾಣಿಸುತ್ತವೆ. ಪೀಠದ ಕೆಳಗೆ ದೇವನಾಗರಿ ಲಿಪಿಯಲ್ಲಿ ಬರೆದ "ಸತ್ಯಮೇವ ಜಯತೇ" (ಸತ್ಯವೊಂದೇ ಗೆಲ್ಲುತ್ತದೆ) ಎಂಬ ಮುಂಡಕ ಉಪನಿಷತ್ತಿನ ವಾಕ್ಯವಿದೆ.

## ರಾಷ್ಟ್ರೀಯ ಪ್ರಾಣಿ ಹಾಗೂ ರಾಷ್ಟ್ರೀಯ ಪಕ್ಷಿ

ಹುಲಿ ನಮ್ಮ ರಾಷ್ಟ್ರೀಯ ಪ್ರಾಣಿ. ನೋಡಲು ಅದು ಆಕರ್ಷಕ ಹಾಗೂ ಗಂಭೀರ. ಅದರ ಮೈಕಟ್ಟು ಬಲಿಷ್ಠ. ನವಿಲು ಭಾರತದ ರಾಷ್ಟ್ರೀಯ ಪಕ್ಷಿ. ಕೆಂಪು ಮತ್ತು ಹಳದಿ ಮಿಶ್ರ ಬಣ್ಣದ ರೆಕ್ಕೆ; ತಲೆಯ ಮೇಲೆ ತುರಾಯಿಯಂತಿರುವ ಗರಿಯುಳ್ಳ ನವಿಲು ನೋಡಲು ಮನೋಹರ.

©KTBS Not to be republished



ರಾಷ್ಟ್ರೀಯ ಪ್ರಾಣಿ ಹುಲಿ



ರಾಷ್ಟ್ರೀಯ ಪಕ್ಷಿ ನವಿಲು

©KTBS Not to be republished

## ರಾಷ್ಟ್ರೀಯ ಭಾವೈಕ್ಯತೆ

**ರಾಷ್ಟ್ರೀಯ ಭಾವೈಕ್ಯತೆಯ ಅರ್ಥ:** ರಾಷ್ಟ್ರೀಯ ಭಾವೈಕ್ಯವೆಂದರೆ ಒಬ್ಬರು ಇನ್ನೊಬ್ಬರ ಬಗ್ಗೆ ಅಥವಾ ಒಂದು ಜನಾಂಗ ಇನ್ನೊಂದು ಜನಾಂಗದ ಬಗ್ಗೆ ದ್ವೇಷ, ಅಸೂಯೆ ಮತ್ತು ಪೂರ್ವಾಗ್ರಹ ಪೀಡಿತರಾಗದೆ ಒಂದು ಎಂಬ ಭಾವನೆಯಿಂದ ಬದುಕುವುದು. ಬದಲಾಗಿ ಒಬ್ಬರು ಇನ್ನೊಬ್ಬರನ್ನು ಗೌರವಿಸುವುದು ಹಾಗೂ ಪರಸ್ಪರ ಸೌಹಾರ್ದತೆಯಿಂದ ಇರುವುದು. ಎಲ್ಲರು ರಾಷ್ಟ್ರವೆಂಬ ಒಂದೇ ಕುಟುಂಬದ ಸಮಸದಸ್ಯರು ಎನ್ನುವ ಭಾವನೆಯನ್ನು ಹೊಂದುವುದು. ಜಾತಿ, ಮತ, ಪಂಗಡ, ಧರ್ಮ, ಲಿಂಗ ತಾರತಮ್ಯವಿಲ್ಲದೆ ಒಂದು ದೇಶದ ಜನರೆಲ್ಲರೂ ಒಂದೇ ಎನ್ನುವ ಭಾವನೆಯನ್ನು ಮೂಡಿಸುವುದು ರಾಷ್ಟ್ರೀಯ ಭಾವಕ್ಯತೆ. ಒಂದು ಸಶಕ್ತ ರಾಷ್ಟ್ರ ನಿರ್ಮಾಣಕ್ಕೆ ಇಂತಹ ಭಾವನೆ ಎಲ್ಲರಲ್ಲೂ ಮೂಡುವುದು ಅಗತ್ಯ. ಭಾರತೀಯರೆಲ್ಲಾ ಒಂದೇ ಎನ್ನುವ ಭಾವನೆಯನ್ನು ಗಟ್ಟಿಗೊಳಿಸುವುದೇ ರಾಷ್ಟ್ರೀಯ ಭಾವೈಕ್ಯತೆ.

**ಪ್ರಾಮುಖ್ಯತೆ:** ಒಂದು ರಾಷ್ಟ್ರದ ಜನತೆಯಲ್ಲಿ ಒಗ್ಗಟ್ಟು ಉಂಟುಮಾಡಲು ಭಾವೈಕ್ಯತೆ ಅಗತ್ಯವಾಗಿದೆ. ರಾಷ್ಟ್ರದ ಹಿತಾಸಕ್ತಿಯನ್ನು ಸಾಧಿಸಲು, ಅಭಿವೃದ್ಧಿ ಹೊಂದಲು ರಾಷ್ಟ್ರದ ಜನರು ತಾವೆಲ್ಲರೂ ಒಂದೆಂಬ ಭಾವನೆ ಬೆಳೆಸಲು ಭಾವೈಕ್ಯತೆ ಅಗತ್ಯವಾಗಿದೆ. ಭಾವೈಕ್ಯತೆಯು ದೇಶದ ಸಮಗ್ರತೆ, ಸೋದರತೆ ಮತ್ತು ಸಮಾನತೆಗೆ ಪ್ರಮುಖ ಪ್ರೇರಣೆಯಾಗುತ್ತದೆ.

## ಭಾರತೀಯ ವೈವಿಧ್ಯತೆ

ಭಾರತದ ವಿವಿಧತೆಯು ಪ್ರಾಕೃತಿಕ ವೈವಿಧ್ಯ, ಜೀವ ವೈವಿಧ್ಯ ಹಾಗೂ ಜನಜೀವನ ವೈವಿಧ್ಯದಲ್ಲಿ ಪ್ರಕಟಗೊಂಡಿದೆ.

- **ಪ್ರಾಕೃತಿಕ ವೈವಿಧ್ಯ:** ಭಾರತದಲ್ಲಿ ಬಲು ಎತ್ತರದ ಪರ್ವತ ಶ್ರೇಣಿಗಳು, ಅತಿ ಉದ್ದದ ನದಿಗಳು ಮತ್ತು ವಿಶಾಲವಾದ ಮೈದಾನಗಳಿವೆ. ಅಂತೆಯೇ ಅತ್ಯಂತ ಚಳಿಯ ಹಾಗೂ ಸೆಕೆಯ ಪ್ರದೇಶಗಳಿವೆ. ಸುಡುವ ಮರುಭೂಮಿಯೂ ಇಲ್ಲಿದೆ. ದಟ್ಟಕಾಡು, ತಂಪಿನ ಸರೋವರ, ಧುಮುಕುವ ಜಲಪಾತ, ಮನಸೆಳೆಯುವ ಕರಾವಳಿ, ನೂರಾರು ಚಿಕ್ಕಪುಟ್ಟ ದ್ವೀಪಗಳು–ಇವು ನಮಗೆ ಪ್ರಕೃತಿಯು ನೀಡಿದ ಕೊಡುಗೆಗಳು.
- **ಜೀವ ವೈವಿಧ್ಯ:** ಭಾರತದ ಜೀವ ವೈವಿಧ್ಯ ಅಪಾರವಾದದ್ದು. ಜಗತ್ತಿನಲ್ಲಿ ಇಷ್ಟೊಂದು ಜೀವವೈವಿಧ್ಯದ ದೇಶಗಳು ಇರುವುದು ಕೆಲವು ಮಾತ್ರ.

ಈವರೆಗೆ 47,000 ಹೆಚ್ಚು ಸಸ್ಯವರ್ಗಗಳನ್ನು ಗುರುತಿಸಿ ವರ್ಣಿಸಲಾಗಿದೆ. ದೇಶದಲ್ಲಿ ಸುಮಾರು 90,000 ಬಗೆಯ ವೈವಿಧ್ಯಮಯ ಪ್ರಾಣಿಗಳಿವೆ. ಅವುಗಳಲ್ಲಿ 1,232 ಬಗೆಯ ಪಕ್ಷಿವರ್ಗಗಳು ಮತ್ತು 2,546 ಬಗೆಯ ಮೀನಿನವರ್ಗಗಳು ಇವೆ. ವರ್ಣಮಯ ಜೀವಸಂಕುಲ ಭಾರತದ ಅಮೂಲ್ಯ ಆಸ್ತಿ.

- **ಜನ ವೈವಿಧ್ಯ:** ವಿಶಾಲ ಭಾರತದಲ್ಲಿ ವಿವಿಧ ಬಗೆಯ ಸಮುದಾಯಕ್ಕೆ ಸೇರಿದ ಜನರಿದ್ದಾರೆ. ಅವರ ರೂಪ, ಮೈಕಟ್ಟು, ಭಾಷೆ, ವೇಷಭೂಷಣ, ಆಹಾರ, ರೀತಿನೀತಿ, ಆಚಾರ ವಿಚಾರ, ಮತಧರ್ಮಗಳು ಬಗೆಬಗೆಯದಾಗಿವೆ. ನಮ್ಮ ಜನಜೀವನದ ಸೊಗಸನ್ನು ಕಣ್ಣಾರೆ ಕಂಡು ಸವಿಯಲು ಭಾರತವನ್ನು ಸುತ್ತಾಡಿ ಬರಬೇಕು.

## ಬಹುತ್ವದಲ್ಲಿ ಏಕತೆ

ವಿವಿಧ ಭಾಷೆ, ಸಂಸ್ಕೃತಿ, ಧರ್ಮಗಳಲ್ಲಿ ನಂಬಿಕೆ ಇಟ್ಟಿರುವ ಜನ ಸಮುದಾಯದ ಜೀವನ ವಿಧಾನವನ್ನು ಬಹುಸಂಸ್ಕೃತಿ ಅಥವಾ ಬಹುತ್ವ ಎನ್ನಲಾಗುತ್ತದೆ. ಭಾರತವು ವೈವಿಧ್ಯಮಯ ರಾಷ್ಟ್ರವಾಗಿದ್ದು, ವಿಶ್ವದ ಜನಸಂಖ್ಯೆಯಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ. ಭೌಗೋಳಿಕವಾಗಿಯೂ ಭಿನ್ನತೆಯನ್ನು ಹೊಂದಿರುವ ದೇಶ ನಮ್ಮದು. ಪ್ರತಿಯೊಬ್ಬ ಪ್ರಜೆಯೂ ತನಗಿಷ್ಟ ಬಂದ ಧರ್ಮವನ್ನು ಅನುಸರಿಸಬಹುದಾಗಿದೆ. ಪ್ರಾದೇಶಿಕ ಭಾಷೆಗಳಲ್ಲೇ ಮಾತನಾಡಿ ಸಾಮಾಜಿಕ ಜೀವನದಲ್ಲಿ ಬೆರೆಯಬಹುದಾಗಿದೆ. ಹಾಗಾಗಿ, ಭಾರತದಲ್ಲಿ ಈ ಹಲವು ಭಿನ್ನತೆಗಳಿಂದ ವಾಸಿಸುವ ಜನರು ಐಕ್ಯತೆಯಿಂದಿರುವುದರಿಂದ ಬಹುತ್ವದಲ್ಲೂ ಏಕತೆಯನ್ನು ಕಾಣಬಹುದಾಗಿದೆ. ವಿವಿಧ ಭಾಷೆ, ಸಂಸ್ಕೃತಿ, ಧರ್ಮಗಳಲ್ಲಿ ನಂಬಿಕೆ ಇಟ್ಟಿರುವ ಬಹುಸಂಸ್ಕೃತಿಯ ಜನರು ಇಲ್ಲಿ ವಾಸವಾಗಿದ್ದಾರೆ. ವಿಭಿನ್ನ ಧರ್ಮಗಳುಳ್ಳ ನಮ್ಮ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ತನಗಿಷ್ಟ ಬಂದ ಧರ್ಮವನ್ನು ಅನುಸರಿಸಬಹುದಾಗಿದೆ. ಈ ಹಲವು ಭಿನ್ನತೆಗಳಿಂದ ಒಂದು ರಾಷ್ಟ್ರದಲ್ಲಿ ವಾಸಿಸುವ ಜನರು ಐಕ್ಯತೆಯಿಂದರುವುದರಿಂದ ಬಹುತ್ವದಲ್ಲೂ ಏಕತೆಯನ್ನು ಕಾಣಬಹುದಾಗಿದೆ. ಬಹುತ್ವವನ್ನು ನಮ್ಮ ಸಂವಿಧಾನವು ಮನ್ನಿಸಿದೆ. ಬಹುತ್ವವು ಯಾವತ್ತೂ ಏಕತೆಗೆ ಮಾರಕವಲ್ಲ, ಪೂರಕ.

©KTBS Not to be republished

## ರಾಷ್ಟ್ರೀಯ ಏಕತೆಗೆ ಮಾರಕವಾದ ಅಂಶಗಳು

- **ಜಾತೀಯತೆ:** ಜಾತೀಯತೆಯೆಂದರೆ ಬೇರೆ ಜಾತಿಯ ವಿರುದ್ಧವಾಗಿ ತಮ್ಮ ಜಾತಿಯನ್ನು ಎತ್ತಿ ಕಟ್ಟುವುದು. ತಮ್ಮ ಜಾತಿಯೇ ಶ್ರೇಷ್ಠ ಉಳಿದವು ಕನಿಷ್ಠವೆಂಬ ಮೇಲರಿಮೆಯೇ ಜಾತೀಯತೆ. ಜಾತೀಯತೆಯು ಏಕತೆಗೆ ಮಾರಕವಾಗಿದೆ. ಇಂದು ಜಾತೀಯತೆ ಎಲ್ಲಾ ಕ್ಷೇತ್ರಗಳನ್ನು ಆವರಿಸಿದೆ. ಇದರಿಂದಾಗಿ ಸಂಕುಚಿತ ಭಾವನೆ ಬೆಳೆಯುತ್ತಿದೆ. ಹಾಗಾಗಿ ಜಾತೀಯತೆ ದೇಶದ ಐಕ್ಯತೆಗೆ ಮಾರಕವಾಗಿದೆ.

- **ಮತೀಯವಾದ:** ಬೇರೆ ಧರ್ಮಕ್ಕಿಂತ ತಮ್ಮ ಧರ್ಮವೇ ಶ್ರೇಷ್ಠವಾದುದು ಎಂದು ನಂಬುವುದು ಮತ್ತು ಕೇವಲ ತಮ್ಮ ಧರ್ಮದ ಸಲುವಾಗಿ ಮಾತ್ರ ಹೊಡೆದಾಡುವುದು ಮತೀಯವಾದ ಅಥವಾ ಕೋಮುವಾದ. ಕೋಮುವಾದವು ಶಾಂತಿಯನ್ನು ಕದಡುತ್ತದೆ. ಇದರಿಂದ ಜೀವ ಮತ್ತು ಆಸ್ತಿಪಾಸ್ತಿಗಳ ನಾಶ ಸಂಭವಿಸುತ್ತದೆ. ಅಷ್ಟೇ ಅಲ್ಲ ಇದು ಜನರ ನಡುವಿನ ಸ್ನೇಹ ಸೌಹಾರ್ದತೆಯನ್ನು ಹಾಳುಮಾಡುತ್ತದೆ. ಕೋಮುವಾದವು ನಾನಾ ಮತಧರ್ಮದ ಜನರಲ್ಲಿ ಹೊಂದಾಣಿಕೆ ಇಲ್ಲದಂತೆ ಮಾಡಿ, ದೇಶದ ಪ್ರಗತಿಗೆ ತೊಡಕಾಗಿದೆ. ಅಭಿವೃದ್ಧಿಗೆ ಕಂಟಕವಾಗಿದೆ.

- **ಪ್ರಾದೇಶಿಕವಾದ:** ರಾಷ್ಟ್ರೀಯ ಭಾವೈಕ್ಯತೆಗೆ ಮಾರಕವಾಗಬಹುದಾದ ಮತ್ತೊಂದು ಅಂಶ ಪ್ರಾದೇಶಿಕವಾದ. ತನ್ನ ಪ್ರದೇಶದ ಕಾಳಜಿ ಕುರಿತು ವ್ಯಕ್ತಿಗಿರುವ ಏಕಪಕ್ಷೀಯ ನಿಷ್ಠೆ ಮತ್ತು ಸಂಕುಚಿತ ಭಾವನೆಯೇ ಪ್ರಾದೇಶಿಕವಾದ. ಆದರೆ ಸಂವಿಧಾನದ ಪ್ರಕಾರ ನಮ್ಮದು ವಿವಿಧ ರಾಜ್ಯಗಳುಳ್ಳ ಒಕ್ಕೂಟ ವ್ಯವಸ್ಥೆಯಾದ್ದರಿಂದ ಪ್ರಾದೇಶಿಕ ಭಾಷೆ, ಸಂಸ್ಕೃತಿ, ಆಡಳಿತಗಳ ಅಸ್ತಿತ್ವವೂ ಮುಖ್ಯ. ಆದ್ದರಿಂದ ರಾಷ್ಟ್ರದ ಸಮಗ್ರತೆಗೆ ಧಕ್ಕೆ ತರುವ ಏಕಪಕ್ಷೀಯ ಪ್ರಾದೇಶಿಕವಾದ ಆರೋಗ್ಯಕರವಲ್ಲ. ನಾವು 'ಮೊದಲು ಭಾರತೀಯರು ಆನಂತರ ಒಂದು ರಾಜ್ಯ ಅಥವಾ ಪ್ರದೇಶಕ್ಕೆ ಸೇರಿದವರು' ಎಂಬುದನ್ನು ಅರಿಯಬೇಕು. ಪ್ರಾದೇಶಿಕವಾದವು ಪ್ರತ್ಯೇಕತಾವಾದವಾಗಬಾರದು. ಆಗ ಅದು ರಾಷ್ಟ್ರೀಯ ಏಕತೆಗೆ ತೀವ್ರ ಧಕ್ಕೆ ಉಂಟಾಗುವುದು.

## ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. 'ವಿವಿಧತೆಯಲ್ಲಿ ಏಕತೆ' ಎಂದರೇನು?
2. ಭಾರತದಲ್ಲಿ ಏಕತೆಗೆ ಪೂರಕವಾದ ಅಂಶಗಳು ಯಾವುವು?
3. ರಾಷ್ಟ್ರೀಯ ಏಕತೆಗೆ ಮಾರಕವಾದ ಅಂಶಗಳು ಯಾವುವು?

© KTBS Not to be republished

**ಚರ್ಚಿಸಿ.**

ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವ ನಿಟ್ಟಿನಲ್ಲಿ ಯಾವ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬಹುದು?

**ಚಟುವಟಿಕೆಗಳು.**

1. ಏಕತೆಗೆ ಮಾರಕವಾದ ನಿಮ್ಮ ಗ್ರಾಮದ ಸ್ಥಳೀಯ ಸಮಸ್ಯೆಗಳನ್ನು ಪಟ್ಟಿಮಾಡಿ ಪರಿಹಾರಗಳನ್ನು ಗುರುತಿಸಿ.
2. ಇಂದು ಭಾರತದಲ್ಲಿ ಭಾವೈಕ್ಯದ ದೃಷ್ಟಿಯಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿರುವ ವಿಚಾರ. ಇದಕ್ಕೆ ಕಾರಣಗಳೇನು? ಅದನ್ನು ಸರಿಪಡಿಸುವುದು ಹೇಗೆ? ದೇಶದಲ್ಲಿ ಭಾವೈಕ್ಯ ಹೇಗೆ ಮೂಡಿಸಬಹುದು? ಒಂದು ಚರ್ಚಾಕೂಟವನ್ನು ಏರ್ಪಡಿಸಿ ಮೂಡಿಬಂದ ಸಲಹೆಗಳ ಪಟ್ಟಿಮಾಡಿ.

* * * * *

©KTBS Not to be republished

# ಭೂಗೋಳ ವಿಜ್ಞಾನ

| ಪಾಠ 11 | ಗ್ಲೋಬ್ ಮತ್ತು ನಕಾಶೆಗಳು |
|---|---|

**ಪಾಠದ ಪರಿಚಯ**

ಭೂಗೋಳ ವಿಜ್ಞಾನವನ್ನು ಸರಿಯಾಗಿ ಅರಿತುಕೊಳ್ಳಲು ಮಾದರಿ ಗೋಳ (ಗ್ಲೋಬ್) ಮತ್ತು ನಕಾಶೆಗಳು ಉತ್ತಮ ಕಲಿಕಾ ಸಾಧನಗಳಾಗಿವೆ. ಭೂಮಿಯ ಮಾದರಿಯಾದ ಗ್ಲೋಬ್‌ನ ಅರ್ಥ ಮತ್ತು ಉಪಯೋಗಗಳನ್ನು ತಿಳಿಯುವುದು. ನಕಾಶೆಗಳ ಅರ್ಥ, ವಿಧಗಳು ಮತ್ತು ಅವುಗಳ ಉಪಯೋಗಗಳನ್ನು ತಿಳಿಯುವುದು. ನಕಾಶೆಗಳನ್ನು ರಚಿಸಲು ಮತ್ತು ಓದಲು ಬೇಕಾಗುವ ಪ್ರಮುಖ ಚಿಹ್ನೆಗಳನ್ನು ಈ ಪಾಠದಲ್ಲಿ ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1] ಗ್ಲೋಬ್‌ನ್ನು ಅದರ ಪ್ರಾಮುಖ್ಯತೆ ಮತ್ತು ಉಪಯೋಗಗಳೊಂದಿಗೆ ಅರ್ಥೈಸಿಕೊಳ್ಳುವುದು.

2] ನಕಾಶೆಗಳ ವಿಧಗಳು ಮತ್ತು ಅವುಗಳನ್ನು ರಚಿಸಲು ಬೇಕಾದ ಘಟಕ ಸಂಗತಿಗಳನ್ನು ತಿಳಿಯುವುದು.

3] ನಕಾಶೆಗಳು ಹೊಂದಿರಬಹುದಾದ ಪ್ರಮುಖ ಚಿಹ್ನೆ ಮತ್ತು ಸಂಕೇತಗಳನ್ನು ಮತ್ತು ಅವುಗಳ ಉಪಯೋಗಗಳನ್ನು ಅರಿಯುವುದು.

4] ನಕಾಶೆಗಳಲ್ಲಿರುವ ಭೌಗೋಳಿಕ ಸಂಕೇತ ಮತ್ತು ಚಿಹ್ನೆಗಳನ್ನು ಗ್ರಹಿಸುವುದು.

5] ನಕಾಶೆ ಓದುವ ಕೌಶಲವನ್ನು ಅರಿತುಕೊಳ್ಳುವುದು.

©KTBS Not to be republished

## 1. ಮಾದರಿ ಗೋಳ (ಗ್ಲೋಬ್)

**ಅರ್ಥ:** ಹಿಂದಿನ ಸೆಮಿಸ್ಟರಿನಲ್ಲಿ ನೀವು ಭೂಮಿಯ ಆಕಾರ ಮತ್ತು ಗಾತ್ರಗಳನ್ನು ಕುರಿತು ಅಧ್ಯಯನ ಮಾಡಿದ್ದೀರಿ. ಭೂಮಿಯು 'ಜಿಯಾಯ್ಡ್' (Geoid) ಆಕಾರದಲ್ಲಿದ್ದು ಅದನ್ನು ಮಾದರಿ ಗೋಳಗಳಿಂದ ನಿರೂಪಿಸಬಹುದು. ಕೃತಕ ಉಪಗ್ರಹಗಳಿಂದ ಪಡೆದ ಛಾಯಾಚಿತ್ರ ಭೂಮಿಯ ನೈಜ ಚಿತ್ರಣ ಮತ್ತು ಆಕಾರಗಳನ್ನು ತೋರಿಸುತ್ತದೆ. ಆದರೆ ಅದರಲ್ಲಿ ನಾವು ಭೂಮಿಯ ಒಂದು ಭಾಗವನ್ನು ಮಾತ್ರ ನೋಡಬಹುದು. ಭೂಮಿಯ ಪ್ರತಿರೂಪವಾದ ಮಾದರಿ ಗೋಳವನ್ನು ತಿರುಗಿಸಬಹುದಾದುದರಿಂದ ಭೂಮಿಯ ಪೂರ್ಣ ನೋಟವನ್ನು ಪಡೆಯಲು ಸಾಧ್ಯ.



ಮಾದರಿ ಗೋಳ (ಗ್ಲೋಬ್)

### ಮಾದರಿ ಗೋಳದ ಲಕ್ಷಣಗಳು

'ಗ್ಲೋಬ್' ಇದು ಭೂಮಿಯ ಒಂದು ಚಿಕ್ಕ ಮಾದರಿಯಾಗಿದೆ. ಇದು ಭೂಮಿಯ ನೈಜ ಗೋಳಾಕಾರವನ್ನು ತೋರಿಸುತ್ತದೆ ಮತ್ತು ಅದು ನಕಾಶೆಯಂತೆ ಚಪ್ಪಟೆಯಾದುದಲ್ಲ. ಜೊತೆಗೆ ಹಲವು ಲಕ್ಷಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡುವುದು. ಇದೊಂದು ಸರಳವಾದ ಕಲಿಕಾ ಉಪಕರಣ. ಈ ಮಾದರಿಯನ್ನು ಮೇಜಿನ ಮೇಲೆ ಇಟ್ಟು ತಿರುಗಿಸಿ ಭೂಮಿಯ ವಿವಿಧ ಭೌಗೋಳಿಕ ಪರಿಕಲ್ಪನೆಗಳನ್ನು ತಿಳಿಯಬಹುದು.

### ಉಪಯೋಗಗಳು


ಭೂಮಿಯ ಸ್ಯಾಟಲೈಟ್ ಚಿತ್ರ

ಅ. 'ಗ್ಲೋಬ್' ಭೂಮಿಯ ಆಕಾರವನ್ನು ತಿಳಿಯಲು ಸಹಾಯವಾಗುತ್ತದೆ.

ಆ. ಭೂಮಿಯ ಮೇಲಿನ ಭೂಖಂಡ, ಸಮುದ್ರ ಮತ್ತು ಸಾಗರಗಳ ಸ್ಥಾನ, ಗಾತ್ರ ಮತ್ತು ಆಕಾರ ತಿಳಿಯಲು ನೆರವಾಗುತ್ತದೆ.

ಇ. ಇದು ಅಕ್ಷಾಂಶ ಮತ್ತು ರೇಖಾಂಶಗಳಿಂದ ಪ್ರದೇಶಗಳ ನಿಖರ ಸ್ಥಾನ ಮತ್ತು ರಾಜಕೀಯ ಗಡಿಗಳನ್ನು ತಿಳಿಯಲು ಸಹಕಾರಿಯಾಗಿದೆ.

ಈ. ಉತ್ತಮ ಮಾದರಿಗೋಳವು ಭೂಅಕ್ಷದ ಓಲುವಿಕೆ, ಭೂಮಿಯ ಚಲನೆಗಳು, ದೈನಂದಿನ ಮತ್ತು ವಾರ್ಷಿಕ ಚಲನೆ ಹಾಗೂ ಅವುಗಳ ಪರಿಣಾಮ ತಿಳಿಯಲು ಅನುಕೂಲವಾಗಿದೆ. ಉದಾ: ಹಗಲು-ರಾತ್ರಿ, ಋತುಗಳು.

ಉ. ಗ್ಲೋಬ್‌ನಿಂದ ಭೂಮಿಯ ಮೇಲಿನ ವಿವಿಧ ಭೌಗೋಳಿಕ, ಸಾಮಾನ್ಯ ಮಾಹಿತಿಗಳನ್ನು ತಿಳಿಯಬಹುದು. ಅವುಗಳೆಂದರೆ: ಪರ್ವತ, ಪ್ರಸ್ಥಭೂಮಿ, ಮೈದಾನ, ಮರುಭೂಮಿ, ದ್ವೀಪಗಳು, ನದಿ, ಹುಲ್ಲುಗಾವಲು ಮತ್ತು ಅರಣ್ಯಗಳು ಇತ್ಯಾದಿ.

## 2. ನಕ್ಷೆಗಳು (ನಕಾಶೆಗಳು)

ಗ್ಲೋಬ್‌ಗಳು ನಮಗೆ ಭೂಮಿಯ ಕುರಿತಾದ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುತ್ತವೆ. ಆದರೆ ಒಂದು ಸ್ಥಳ, ರಾಜ್ಯ, ದೇಶ ಹಾಗೂ ಇತರ ಭೌಗೋಳಿಕ ಲಕ್ಷಣಗಳ ವಿವರವಾದ ಮಾಹಿತಿ ಪಡೆಯಲು ನಕ್ಷೆಗಳು ಬೇಕಾಗುತ್ತವೆ.

ಭೂಮಿಯ ಪೂರ್ಣ ಅಥವಾ ಭಾಗಶಃ ಭಾಗವನ್ನು ಸಮತಲದ ಮೇಲೆ ಮಾಪಕಕ್ಕೆ (Scale) ಅನುಗುಣವಾಗಿ ರೂಪಿಸುವ ಆಕೃತಿಯೇ (ಚಿತ್ರ) ನಕ್ಷೆಯಾಗಿದೆ. ನಕ್ಷೆಯನ್ನು ತಯಾರಿಸುವ ವಿಜ್ಞಾನ ಮತ್ತು ಕಲೆಗೆ **'ನಕ್ಷಾಶಾಸ್ತ್ರ'** ಎನ್ನುವರು. ವಿವಿಧ ಪ್ರಕಾರದ ನಕ್ಷೆಗಳನ್ನು ಸೇರಿಸಿ ತಯಾರಿಸಿದ ಪುಸ್ತಕವನ್ನು **'ಅಟ್ಲಾಸ್'** ಅಥವಾ **'ನಕಾಶೆ ಪುಸ್ತಕ'** ಎನ್ನುವರು.

©KTBS Not to be republished

## ನಕಾಶೆಗಳ ವಿಧಗಳು

ನಕಾಶೆಗಳನ್ನು ಅವುಗಳ ಮಾಪಕ ಮತ್ತು ಉದ್ದೇಶಗಳ ಆಧಾರದ ಮೇಲೆ ಅನೇಕ ವಿಧಗಳಾಗಿ ವಿಂಗಡಿಸಲಾಗಿದೆ.

### 1) ಮಾಪಕ ಆಧಾರಿತ ನಕ್ಷೆಗಳು

ಮಾಪಕ ಆಧಾರದ ಮೇಲೆ ನಕ್ಷೆಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ.

**ಅ) ದೊಡ್ಡ ಪ್ರಮಾಣದ ನಕ್ಷೆಗಳು:** ಇವು ಚಿಕ್ಕ ಪ್ರದೇಶಗಳನ್ನು ಪ್ರತಿನಿಧಿಸುತ್ತವೆ. ಇವುಗಳನ್ನು ಕಂದಾಯ ನಕ್ಷೆಗಳು ಮತ್ತು ಸ್ಥಳ ಸ್ವರೂಪ ನಕ್ಷೆಗಳೆಂದು ವಿಂಗಡಿಸಬಹುದು. ಕಂದಾಯ ನಕ್ಷೆಗಳು ವೈಯಕ್ತಿಕ ಆಸ್ತಿ ಬಗ್ಗೆ ಮಾಹಿತಿ ನೀಡುತ್ತವೆ. ಭೂಸ್ವರೂಪ ನಕ್ಷೆಗಳು ಒಂದು ಸ್ಥಳ ಮತ್ತು ಪ್ರದೇಶದ ಹೆಚ್ಚಿನ ಮಾಹಿತಿಯನ್ನು ತೋರಿಸುತ್ತವೆ.




ದೊಡ್ಡ ಪ್ರಮಾಣದ ನಕ್ಷೆ ಮಾಪಕ : 1:25,000

Not to be republished ©KTBS

**ಆ) ಚಿಕ್ಕ ಪ್ರಮಾಣದ ನಕ್ಷೆಗಳು:** ಇವು ವಿಶಾಲವಾದ ಪ್ರದೇಶವನ್ನು ನಿರೂಪಿಸುತ್ತವೆ. ಉದಾ: ಪ್ರಪಂಚ, ಭೂಖಂಡಗಳು, ದೇಶ ಇತ್ಯಾದಿ. ಇವುಗಳಲ್ಲಿ ಭೂಪಟ ಮತ್ತು ಅಟ್ಲಾಸ್ ಪುಸ್ತಕಗಳೆಂದು ಎರಡು ವಿಧಗಳಿವೆ.




ಚಿಕ್ಕ ಪ್ರಮಾಣದ ನಕ್ಷೆ

©KTBS Not to be republished

ಭೂಪಟಗಳು ಅಟ್ಲಾಸ್‌ಗಳಿಗಿಂತ ದೊಡ್ಡವು. ಅವುಗಳನ್ನು ತರಗತಿಗಳಲ್ಲಿ ಬೋಧನ ಸಾಧನವಾಗಿ ಉಪಯೋಗಿಸಲಾಗುವುದು. ಅವು ರಾಜಕೀಯ ವಿಭಾಗಗಳು, ಮೇಲ್ಮೈ ಲಕ್ಷಣಗಳು ಮುಂತಾದ ಸಾಮಾನ್ಯ ಮತ್ತು ಪ್ರಮುಖ ಲಕ್ಷಣಗಳನ್ನು ತೋರಿಸುತ್ತವೆ.

## 2) ಉದ್ದೇಶ ಆಧಾರಿತ ನಕ್ಷೆಗಳು

ಇವು ವಿಷಯಾಧಾರಿತ ನಕ್ಷೆಗಳು. ಅವುಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

**ಅ) ಸ್ವಾಭಾವಿಕ ನಕ್ಷೆಗಳು:** ಇವು ನೈಸರ್ಗಿಕವಾದ ವಿಷಯಗಳಿಗೆ ಸಂಬಂಧಿಸಿದ್ದು ಭೂ ಮೇಲ್ಮೈ ಲಕ್ಷಣಗಳಾದ ಪರ್ವತ, ಪ್ರಸ್ಥಭೂಮಿ, ಬಯಲು ಪ್ರದೇಶ, ನದಿ ಇತ್ಯಾದಿಗಳನ್ನು ತೋರಿಸುತ್ತವೆ.

**ಆ) ರಾಜಕೀಯ ನಕ್ಷೆಗಳು:** ಇವು ರಾಜ್ಯ, ದೇಶ, ಖಂಡ ಮತ್ತು ಅವುಗಳ ಸ್ಥಾನ, ವಿಸ್ತೀರ್ಣ ಇತ್ಯಾದಿಗಳನ್ನು ತೋರಿಸುತ್ತವೆ.

**ಇ) ಹಂಚಿಕೆ ನಕ್ಷೆಗಳು:** ಈ ನಕ್ಷೆಗಳನ್ನು ಭೂಬಳಕೆ, ವಾಯುಗೋಳದ ಉಷ್ಣಾಂಶ, ಮಳೆ, ಜನಸಂಖ್ಯೆ, ಮಣ್ಣು, ಸ್ವಾಭಾವಿಕ ಸಸ್ಯವರ್ಗ, ಬೆಳೆಗಳು, ಖನಿಜ, ಕೈಗಾರಿಕೆ, ರೈಲುಮಾರ್ಗ, ರಸ್ತೆ, ಜಲಮಾರ್ಗಗಳು ಇತ್ಯಾದಿ ಹಂಚಿಕೆಯ ಬಗ್ಗೆ ತಿಳಿಯಲು ಉಪಯೋಗಿಸಲಾಗುವುದು.

## ನಕ್ಷೆಯ ಮೂಲಾಂಶಗಳು

ಸಿದ್ಧವಾದ ಉತ್ತಮ ನಕ್ಷೆಯು ಸೂಕ್ತವಾದ ಶೀರ್ಷಿಕೆ, ಮಾಪಕ, ಅಕ್ಷಾಂಶ ಮತ್ತು ರೇಖಾಂಶಗಳು, ದಿಕ್ಕು ಮತ್ತು ಸೂಚಿ ಮುಂತಾದ ಅಗತ್ಯವಾದ ಮಾಹಿತಿಗಳನ್ನು ಹೊಂದಿರಬೇಕು.

**1. ಶೀರ್ಷಿಕೆ (ತಲೆಬರಹ):** ಪ್ರತಿಯೊಂದು ನಕ್ಷೆಯು ಅವಶ್ಯಕವಾಗಿ ಶೀರ್ಷಿಕೆಯನ್ನು ಹೊಂದಿರಬೇಕು. ಅದು ನಮಗೆ ಬೇಕಾದ ಒಳವಿಷಯವನ್ನು ತಿಳಿಸುವುದು. ಉದಾ: ಭಾರತದ ಭೌಗೋಳಿಕ ಲಕ್ಷಣಗಳು, ಭಾರತದ ಆಡಳಿತ ವಿಭಾಗಗಳು ಇತ್ಯಾದಿ.

**2. ಮಾಪಕ:** ಮಾಪಕವು ಭೂಮಿಯ ಮೇಲಿನ ಎರಡು ಸ್ಥಳಗಳ ಅಂತರವನ್ನು ತಿಳಿಯಲು ನಮಗೆ ಸಹಾಯವಾಗಿದೆ. ಭೂಮಿಯ ಮೇಲಿನ ವಾಸ್ತವ ದೂರಕ್ಕೂ (ಅಂತರಕ್ಕೂ) ಮತ್ತು ನಕಾಶೆಯ ಮೇಲಿನ ದೂರಕ್ಕೂ ಇರುವ ಪರಿಮಾಣವೇ ಮಾಪಕ. ನಕಾಶೆಯ ಮೇಲಿನ ಎರಡು ಸ್ಥಳಗಳು ತುಂಬಾ ಹತ್ತಿರದಲ್ಲಿವೆ ಎಂದೆನಿಸಿದರೂ ಭೂಮಿಯ ಮೇಲೆ ಅವು ತುಂಬಾ ದೂರದಲ್ಲಿರುತ್ತವೆ.

**3. ಅಕ್ಷಾಂಶ ಮತ್ತು ರೇಖಾಂಶಗಳು:** ಇವು ಕಾಲ್ಪನಿಕ ರೇಖೆಗಳ ಜಾಲವಾಗಿವೆ. ನಕಾಶದ ಮೇಲಿನ ಸ್ಥಳವೊಂದರ ಸ್ಥಾನ, ದೂರ ಮತ್ತು ದಿಕ್ಕುಗಳನ್ನು ಗುರುತಿಸುವುದಕ್ಕೆ ಸಹಾಯಕವಾಗುತ್ತದೆ.

**4. ದಿಕ್ಕು:** ನಕ್ಷೆಯಲ್ಲಿ 'ಉ' (**N**) ಅಕ್ಷರವುಳ್ಳ ಬಾಣದ ಗುರುತಿನ ಚಿಹ್ನೆಯಿಂದ ಉತ್ತರ ದಿಕ್ಕನ್ನು ಸೂಚಿಸಲಾಗುತ್ತದೆ. ಬಾಣದ ತುದಿ ಉತ್ತರಕ್ಕೆ ನಿರ್ದೇಶಕವಾಗಿರುತ್ತದೆ. ಈ ಚಿಹ್ನೆಯಿಂದ ಒಮ್ಮೆ ಉತ್ತರ ದಿಕ್ಕು ತಿಳಿಯುತ್ತಲೇ ಇತರೆ ದಿಕ್ಕುಗಳನ್ನು ಸರಳವಾಗಿ ಗುರುತಿಸಬಹುದು.

**5. ಸೂಚಿ:** ನಕ್ಷೆಯಲ್ಲಿ ಸೂಚಿಸಲು ಮತ್ತು ಗುರುತಿಸುವುದಕ್ಕಾಗಿ ಬಳಕೆ ಮಾಡುವ ಯಾವುದೇ ಸೂಚಿಗೆ **'ನಕ್ಷಾ ಸೂಚಿ'** ಎನ್ನುವರು. ಇದು ನಕಾಶದ ಪ್ರಮುಖ ಮೂಲಾಂಶವಾಗಿದ್ದು, ನಕಾಶೆಯಲ್ಲಿ ತೋರಿಸಿರುವ ಎಲ್ಲ ಲಕ್ಷಣಗಳನ್ನು ಸೂಚಿಸುತ್ತದೆ. ಸೂಚಿಯಲ್ಲಿ ವಿವಿಧ ಬಣ್ಣಗಳು ಮತ್ತು ಭೌಗೋಳಿಕ ಚಿಹ್ನೆಗಳನ್ನು ಬಳಸಲಾಗುತ್ತದೆ. ಉದಾ: ನೀಲಿ ಬಣ್ಣವು ಜಲರಾಶಿಗಳನ್ನು, ಹಸಿರು ಬಣ್ಣ ಮೈದಾನಗಳನ್ನು ತೋರಿಸುವುದು ಇತ್ಯಾದಿ.

©KTBS Not to be republished




ಉತ್ತರ ದಿಕ್ಕು ನಿರೂಪಣೆ




ನಕ್ಷಾ ಸೂಚಿ

**ನಕಾಶೆಗಳ ಉಪಯೋಗ:** ನಕಾಶೆಗಳು ನಮಗೆ ಹಲವು ರೀತಿಯಲ್ಲಿ ನೆರವಾಗುತ್ತವೆ.

- ನಕಾಶೆಗಳು ನಮಗೆ ನಗರ, ಜಿಲ್ಲೆ, ರಾಜ್ಯ, ದೇಶ, ಖಂಡ ಮುಂತಾದವುಗಳ ಸ್ಥಳ, ನಿರ್ದೇಶನ ತಿಳಿಯಲು ಸಹಾಯವಾಗುತ್ತವೆ.
- ಭೌತಿಕ ಲಕ್ಷಣಗಳಾದ ಪರ್ವತ, ಪ್ರಸ್ಥಭೂಮಿ, ಮರುಭೂಮಿ, ತೀರ ಪ್ರದೇಶ, ದ್ವೀಪ ಮುಂತಾದವುಗಳನ್ನು ಸೂಚಿಸಲು ಸಹಕಾರಿಯಾಗುತ್ತವೆ.
- ಪ್ರದೇಶಗಳ ಸಾರಿಗೆ-ಸಂಪರ್ಕ (ರಸ್ತೆ, ರೈಲು, ವಾಯುಮಾರ್ಗಗಳು)ಗಳನ್ನು ಅರಿಯಲು ಅನುಕೂಲವಾಗುತ್ತವೆ.
- ಬೆಳೆಗಳು, ಖನಿಜಗಳು, ಕೈಗಾರಿಕೆಗಳು ಇತ್ಯಾದಿಗಳ ಹಂಚಿಕೆಯನ್ನು ತಿಳಿಯುವುದಕ್ಕೆ ನೆರವಾಗುತ್ತವೆ.
- ಯುದ್ಧ ಹಾಗೂ ರಕ್ಷಣೆಯ ಸಂದರ್ಭಗಳಲ್ಲಿ ಸೈನಿಕರಿಗೆ ಬಹಳ ಉಪಯೋಗವಾಗುತ್ತವೆ.
- ಅವುಗಳು ಪ್ರವಾಸಿಗರಿಗೆ ಮಾರ್ಗದರ್ಶನ ನೀಡುವವು.
- ನಕಾಶೆಗಳು ಒಂದು ಪ್ರಮುಖ ಬೋಧನಾ ಅಥವಾ ಕಲಿಕಾ ಸಾಧನಗಳಾಗಿವೆ. ಅವುಗಳನ್ನು ಒಯ್ಯುವುದು ಸುಲಭ.

©KTBS Not to be republished

## 3. ಭೌಗೋಳಿಕ ಸಂಕೇತಗಳು

ಒಂದು ಸಂಕೇತವು ಒಂದು ವಸ್ತುವಿನ ಕಲ್ಪನೆಯ ಚಿಹ್ನೆಯಾಗಿದೆ. ನಕ್ಷೆಯಲ್ಲಿ ಬಳಸುವ ಸಂಕೇತಗಳು ಪ್ರಪಂಚದಾದ್ಯಂತ ಒಂದೇ ರೀತಿಯಾಗಿರುತ್ತವೆ. ಸಂಕೇತಗಳು ವೈವಿಧ್ಯ ಮಾಹಿತಿಗಳನ್ನು ಒದಗಿಸುತ್ತವೆ.

**ಬಣ್ಣಗಳು:** ನೀವು ನಕಾಶೆಯನ್ನು ನೋಡಿದಾಗ ವಿವಿಧ ಬಣ್ಣಗಳನ್ನು ಕಾಣುತ್ತೀರಿ. ಈ ಬಣ್ಣಗಳು ನಕಾಶೆಗಳ ಮೇಲೆ ವಿವಿಧ ಪ್ರಾಕೃತಿಕ ಸಂಗತಿಗಳನ್ನು ತೋರಿಸುತ್ತವೆ. ಪ್ರಾಕೃತಿಕ ನಕಾಶೆಯಲ್ಲಿ ಬಳಸುವ ಮಹತ್ವದ ಬಣ್ಣಗಳೆಂದರೆ,




ಭೌಗೋಳಿಕ ಸಂಕೇತಗಳು




ವರ್ಣ ಸಂಕೇತಗಳು

©KTBS Not to be republished

**ಅ) ನೀಲಿ:** ಜಲಭಾಗಗಳನ್ನು ಸೂಚಿಸುತ್ತದೆ. – ಮಹಾಸಾಗರ, ಸಮುದ್ರ, ಸರೋವರಗಳು ಇತ್ಯಾದಿ.

**ಆ) ಹಸಿರು:** ಮೈದಾನ ಮತ್ತು ತಗ್ಗು ಪ್ರದೇಶಗಳನ್ನು ತೋರಿಸುತ್ತದೆ.

**ಇ) ಹಳದಿ:** ಎತ್ತರವಾದ ಭೂಭಾಗಗಳು ಅಥವಾ ಮೈದಾನಗಳಿಗಿಂತ ಎತ್ತರವಾದ ಭಾಗಗಳನ್ನು ತೋರಿಸುತ್ತದೆ.

**ಈ) ಕಂದು:** ಬೆಟ್ಟಗಳು ಮತ್ತು ಪರ್ವತಗಳಿಗಿಂತ ಕಡಿಮೆ ಎತ್ತರದ ಭಾಗಗಳನ್ನು ಸೂಚಿಸುತ್ತದೆ.

**ಉ) ಕಡು ಕಂದು ಬಣ್ಣ:** ಅತಿ ಎತ್ತರವಾದ ಪರ್ವತಗಳನ್ನು ನಿರೂಪಿಸುತ್ತದೆ.

**ಊ) ಬಿಳುಪು ಅಥವಾ ನೇರಳೆ ಬಣ್ಣ:** ಹಿಮದಿಂದಾವೃತ ಪ್ರದೇಶಗಳನ್ನು ಸೂಚಿಸುತ್ತವೆ.

ಅಲ್ಲದೆ ರಾಜಕೀಯ ನಕಾಶೆಗಳಲ್ಲಿ ಜಿಲ್ಲೆ ಅಥವಾ ರಾಜ್ಯಗಳಲ್ಲಿ ಕೂಡಲೇ ಗುರುತಿಸುವುದಕ್ಕೆ ವಿವಿಧ ಬಣ್ಣಗಳಿಂದ ಅವುಗಳನ್ನು ಚಿತ್ರಿಸಲಾಗುತ್ತದೆ.

**ಗೆರೆಗಳು:** ನಕಾಶೆಯ ಮೇಲೆ ರಸ್ತೆ, ರೈಲು, ವಾಯುಮಾರ್ಗ ಇತ್ಯಾದಿ ಜಾಲಗಳನ್ನು ತೋರಿಸಲು ವಿವಿಧ ಬಗೆಯ ಗೆರೆಗಳನ್ನು ವಿವಿಧ ಬಣ್ಣಗಳಿಂದ ಎಳೆಯಲಾಗುವುದು. ಕಪ್ಪು ಬಣ್ಣವನ್ನು ಗಡಿರೇಖೆಗಳು, ಕೆಂಪು ಬಣ್ಣವನ್ನು ರಸ್ತೆಗಳನ್ನು ತೋರಿಸಲು ಇತ್ಯಾದಿಯಾಗಿ ಉಪಯೋಗಿಸಲಾಗುವುದು.

## 4. ನಕಾಶೆಯನ್ನು ಓದುವಿಕೆ

ನಕಾಶೆಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಕೆಲವೊಂದು ಅಂಶಗಳನ್ನು ತಿಳಿದಿರಬೇಕು. ಒಂದು ಅರ್ಥಪೂರ್ಣ ಶಬ್ಧ ತಯಾರಿಸಲು ನಿಮಗೆ ಹೇಗೆ ವರ್ಣಮಾಲೆ ತಿಳಿದಿರಬೇಕೋ ಹಾಗೆಯೇ ನಕ್ಷೆ ಓದುವುದರಲ್ಲಿಯೂ ವಿವಿಧ ಬಣ್ಣಗಳು, ರೇಖೆಗಳು ಮತ್ತು ಚಿಹ್ನೆಗಳ ಬಗ್ಗೆಯೂ ತಿಳಿದಿರಬೇಕು.

©KTBS Not to be republished



©KTBS Not to be republished

ನಕ್ಷೆ ಓದುವ ವಿಧಾನದ ನಿರೂಪಣೆ

**ವಿ.ಸೂ.:** ಮಾಪಕವನ್ನಾಧರಿಸಿ ಕಲಬುರಗಿ ಮತ್ತು ಬಾಗಲಕೋಟೆ ಜಿಲ್ಲಾ ಕೇಂದ್ರಗಳ ನೇರ ಅಂತರ 222 ಕಿ.ಮೀ.ಗಳಾಗಿರುತ್ತದೆ.

ನಕಾಶೆ ಓದುವುದು ಒಂದು ಕೌಶಲ್ಯ. ನಾವೆಲ್ಲರೂ ನಕಾಶೆ ಮೇಲಿನ ಸ್ಥಳ ಮತ್ತು ವಿವಿಧ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಕೆಲವು ಪರಿಣತಿ ಮತ್ತು ಸಾಮಾನ್ಯ ನಿರ್ದೇಶನಗಳನ್ನು ಹೊಂದಿರಬೇಕು. ಅವು ಈ ಕೆಳಕಂಡಂತಿವೆ.

1. **ಸ್ಥಳ ಗುರುತಿಸುವಿಕೆ:** ಮೇಲಿನ ಸ್ಥಳಗಳನ್ನು ತಿಳಿಯಲು ನಾವು ಅಕ್ಷಾಂಶ ಮತ್ತು ರೇಖಾಂಶಗಳ ಬಗ್ಗೆ ತಿಳಿದಿರಬೇಕು.

2. **ದಿಕ್ಕು ಗುರುತಿಸುವಿಕೆ:** ನಕಾಶೆ ಮೇಲಿನ ಸ್ಥಳದ ದಿಕ್ಕನ್ನು ತಿಳಿಯಲು ಉತ್ತರದ ದಿಕ್ಕಿಗೆ ಮುಖ ಮಾಡಿದ ಬಾಣದ ಚಿಹ್ನೆಯನ್ನು ತಿಳಿದರೆ ಉಳಿದ ದಿಕ್ಕುಗಳನ್ನು ಸರಳವಾಗಿ ಗುರುತಿಸಿಕೊಳ್ಳಬಹುದು.

3. **ಸ್ಥಳಗಳ ನಡುವಿನ ಅಂತರ ಗುರುತಿಸುವಿಕೆ:** ಎರಡು ಸ್ಥಳಗಳ ನಡುವಿನ ಅಂತರ ತಿಳಿಯಲು ನಕಾಶೆಯಲ್ಲಿ ಕೊಟ್ಟಿರುವ ಮಾಪಕವು ಸಹಕಾರಿಯಾಗುತ್ತದೆ.

## ಹೊಸ ಪದಗಳು

ಮಾದರಿಗೋಳ (ಗ್ಲೋಬ್), ನಕಾಶೆ, ಸನ್ನಿವೇಶ, ಭೌಗೋಳಿಕ ಲಕ್ಷಣ, ಅಟ್ಲಾಸ್, ಮಾಪಕ, ನಕ್ಷಾಶಾಸ್ತ್ರ, ಸೂಚಿ, ಶೀರ್ಷಿಕೆ, ಚಿಹ್ನೆ, ಸಾರಿಗೆ ಸಂಪರ್ಕ.

## ನಿಮಗೆ ತಿಳಿದಿರಲಿ

- ಅತ್ಯಂತ ಪುರಾತನ ನಕಾಶೆಯು ಬಾಬಿಲೋನಿಯದಲ್ಲಿ (ಕ್ರಿ.ಪೂ.2300) ಕಂಡುಬಂದರೆ, ಗ್ರೀಕ್‌ನ ಖಗೋಳ ವಿಜ್ಞಾನಿಯಾದ ಕ್ಲಾಡಿಯಸ್ ಟಾಲೆಮಿಯವರ (ಕ್ರಿ.ಶ. 90–168) ಅಟ್ಲಾಸ್ ಪ್ರಥಮದ್ದಾಗಿದೆ.
- ವಿಶಾಲ ಪ್ರದೇಶಗಳನ್ನು ತೋರಿಸುವ ನಕಾಶೆಗಳು ಚಿಕ್ಕ ಪ್ರಮಾಣದ ನಕ್ಷೆಗಳಾಗಿದ್ದು, ಚಿಕ್ಕ ಪ್ರದೇಶಗಳನ್ನು ತೋರಿಸುವ ನಕಾಶೆಗಳು ದೊಡ್ಡ ಪ್ರಮಾಣದ ನಕಾಶೆಗಳಾಗಿವೆ.
- ಭೂಗೋಳಶಾಸ್ತ್ರ ಅಧ್ಯಯನದಲ್ಲಿ ನಕಾಶೆಗಳು ನೆರವಾಗುತ್ತವೆ. ಅವು ಬೋಧನ ಸಾಧನಗಳು.
- ಭೂಮಿಯ ಮೇಲಿನ ನಿಖರ ಅಂತರವನ್ನು ತಿಳಿಯಲು ನಾವು ಮಾಪಕವನ್ನು ಸೆಂ.ಮೀ.ನಿಂದ ಕಿ.ಮೀ.ಗೆ ಅಥವಾ ಅಂಗುಲದಿಂದ ಮೈಲಿಗೆ ಪರಿವರ್ತಿಸಿಕೊಳ್ಳಬೇಕಾಗುತ್ತದೆ.
- ಆಯಸ್ಕಾಂತೀಯ ಕಂಪಾಸಿನಲ್ಲಿರುವ ಮುಳ್ಳು ಯಾವಾಗಲೂ ಉತ್ತರ ದಿಕ್ಕನ್ನೇ ತೋರಿಸುತ್ತದೆ.

©KTBS Not to be republished

## ಉತ್ತರಿಸಿ.

1. ಮಾದರಿಗೋಳ ಅಥವಾ ಗ್ಲೋಬ್ ಎಂದರೇನು?
2. ಗ್ಲೋಬ್‌ನ ಎರಡು ಉಪಯೋಗಗಳನ್ನು ತಿಳಿಸಿ.
3. ನಕಾಶೆ ಎಂದರೇನು?
4. ನಕಾಶೆಗಳ ವಿವಿಧ ಪ್ರಕಾರಗಳು ಯಾವುವು?
5. ನಕಾಶೆಗಳ ಎರಡು ಉಪಯೋಗಗಳನ್ನು ತಿಳಿಸಿ.
6. ಅಟ್ಲಾಸ್ ಅಥವಾ ನಕಾಶೆ ಪುಸ್ತಕ ಎಂದರೇನು?
7. ಮಾಪಕ ಎಂದರೇನು?
8. ಭೌಗೋಳಿಕ ಸಂಕೇತಗಳು ಎಂದರೇನು?
9. ನಕ್ಷೆಯ ಪ್ರಮುಖ ಮೂಲಾಂಶಗಳಾವುವು?
10. ನಕ್ಷೆಯಲ್ಲಿ ಜಲರಾಶಿಗಳನ್ನು ತೋರಿಸುವ ಯಾವ ಬಣ್ಣವನ್ನು ಉಪಯೋಗಿಸಲಾಗುವುದು?

## ಚಟುವಟಿಕೆಗಳು

1. ಕಾಗದ, ರಬ್ಬರ್ ಚೆಂಡು ಅಥವಾ ಇನ್ನಿತರ ವಸ್ತುಗಳಿಂದ ಯಥಾವತ್ತಾಗಿ ಭೂಗೋಳದ ಮಾದರಿ ತಯಾರಿಸುವುದು.
2. ವಿವಿಧ ಪ್ರಕಾರದ ನಕ್ಷೆಗಳನ್ನು ಇಟ್ಟುಕೊಂಡು ಅವುಗಳ ಪ್ರಮುಖ ವ್ಯತ್ಯಾಸಗಳನ್ನು ಗುರುತಿಸುವುದು.
3. ಭಾರತದ ಬಾಹ್ಯ ನಕ್ಷೆಯಲ್ಲಿ ಸೂಕ್ತ ಬಣ್ಣಗಳನ್ನು ಉಪಯೋಗಿಸಿ.

ಅ) ಭಾರತದ ಪ್ರಾಕೃತಿಕ ಲಕ್ಷಣಗಳನ್ನು ಗುರುತಿಸುವುದು.

ಆ) ಭಾರತವನ್ನಾವರಿಸಿರುವ ಸಾಗರ ಮತ್ತು ಸಮುದ್ರಗಳಿಗೆ ಬಣ್ಣ ಹಾಕುವುದು ಮತ್ತು ಹೆಸರಿಸುವುದು.

* * * * *

© KTBS Not to be republished

| ಪಾಠ 12 | ಏಷ್ಯ – ವೈಪರೀತ್ಯಗಳ ಖಂಡ |
|---|---|

**ಪಾಠದ ಪರಿಚಯ**

ಏಷ್ಯ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ, ಪ್ರಾದೇಶಿಕ ವಿಭಾಗಗಳು, ಪ್ರಾಕೃತಿಕ ಲಕ್ಷಣಗಳು, ಪ್ರಮುಖ ನದಿಗಳು ಮತ್ತು ವ್ಯವಸಾಯ, ವಾಯುಗುಣ ಮತ್ತು ಸಸ್ಯವರ್ಗ, ಪ್ರಮುಖ ಖನಿಜಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಕುರಿತ ಪರಿಚಯ ಈ ಪಾಠದಲ್ಲಿದೆ.

**ಸಾಮರ್ಥ್ಯಗಳು**

1] ಏಷ್ಯ ಖಂಡದ ಸ್ಥಾನ, ವಿಸ್ತೀರ್ಣ, ಭೌಗೋಳಿಕ ಸನ್ನಿವೇಶ ಹಾಗೂ ವೈಪರೀತ್ಯಗಳ ಲಕ್ಷಣಗಳನ್ನು ತಿಳಿಯುವುದು.

2] ಪ್ರಾದೇಶಿಕ ವಿಭಾಗಗಳ ವಿಂಗಡಣೆ ಮತ್ತು ಅವುಗಳ ನಡುವಣ ಹೋಲಿಕೆ ಬಗ್ಗೆ ಅರಿಯುವುದು.

3] ಏಷ್ಯದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ಕುರಿತ ವಿವರಣೆ ಪಡೆಯುವುದು.

4] ನದಿಗಳ ವ್ಯವಸ್ಥೆ ಮತ್ತು ವ್ಯವಸಾಯಗಳ ನಡುವಣ ಸಂಬಂಧ ತಿಳಿದುಕೊಳ್ಳುವುದು.

5] ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಗಳ ನಡುವಣ ಸಂಬಂಧ ಕುರಿತು ತಿಳಿಯುವುದು.

6] ಪ್ರಮುಖ ಖನಿಜಗಳು, ಅವುಗಳ ಹಂಚಿಕೆ. ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಜನಸಾಂದ್ರತೆ ಕುರಿತು ತಿಳಿದುಕೊಳ್ಳುವುದು.

## 1. ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

**ಪರಿಚಯ :** ಪ್ರಪಂಚದ ಭೂಖಂಡಗಳಲ್ಲಿ ಏಷ್ಯ ದೊಡ್ಡದು. ಹೀಗಾಗಿ ಅದು ಪ್ರಾಕೃತಿಕ ಲಕ್ಷಣ, ವಾಯುಗುಣ, ಸಸ್ಯವರ್ಗ, ವನ್ಯಜೀವಿ, ಮಣ್ಣಿನ ಪ್ರಕಾರ ಮೊದಲಾದವುಗಳಲ್ಲಿ ವೈವಿಧ್ಯ ಹೊಂದಿದೆ. ಈ ಖಂಡದಲ್ಲಿ ಅತ್ಯಂತ ಎತ್ತರವುಳ್ಳ ಪರ್ವತ, ಪ್ರಸ್ಥಭೂಮಿ, ಫಲವತ್ತಾದ ವಿಶಾಲ ಮೈದಾನ, ಮರುಭೂಮಿ, ನದಿ ವ್ಯವಸ್ಥೆ ಮತ್ತು ಸರೋವರಗಳು ಕಂಡುಬರುತ್ತವೆ. ಜೊತೆಗೆ ಭಾಷೆ, ಧರ್ಮ, ಜನಸಂಖ್ಯೆಯ ಹಂಚಿಕೆ ಮತ್ತು ಜನಸಾಂದ್ರತೆಗಳಲ್ಲಿಯೂ ನಾವು ವೈವಿಧ್ಯತೆಯನ್ನು ಕಾಣಬಹುದು. ಆದ್ದರಿಂದ ಏಷ್ಯವನ್ನು "ವೈಪರೀತ್ಯಗಳ ಖಂಡ" ಎಂದು ಕರೆಯುತ್ತಾರೆ.

©KTBS Not to be republished

**ಚಟುವಟಿಕೆ:** ಏಷ್ಯ ಖಂಡವನ್ನು ವೈಪರೀತ್ಯಗಳ ಖಂಡ ಎಂದು ಕರೆಯುವ ಕಾರಣಗಳೇನೆಂಬುದನ್ನು ಚರ್ಚಿಸಿ. ಏಷ್ಯದ ಭೂಪಟವನ್ನು ಮುಂದಿಟ್ಟುಕೊಂಡು ಚರ್ಚಿಸಿ.

**ಸ್ಥಾನ:** ಏಷ್ಯ ಖಂಡವು $1^0$–$16^0$ ಉತ್ತರದಿಂದ $77^0$–$41^0$ ಉತ್ತರ ಅಕ್ಷಾಂಶ ಹಾಗೂ $26^0$–$04^0$ ಪೂರ್ವದಿಂದ $169^0$–$40^0$ ಪಶ್ಚಿಮ ರೇಖಾಂಶಗಳ ನಡುವೆ ವಿಸ್ತರಿಸಿದೆ. ಮಲೇಷ್ಯದಿಂದ ಸ್ವಲ್ಪ ದಕ್ಷಿಣದಲ್ಲಿ ಭೂಮಧ್ಯರೇಖೆ ಹಾಗೂ ಕರ್ಕಾಟಕ ಸಂಕ್ರಾಂತಿ ವೃತ್ತವು ಭಾರತ ಮತ್ತು ಅರೇಬಿಯಗಳ ಮೂಲಕ ಹಾಯ್ದು ಹೋಗಿವೆ.

**ವಿಸ್ತೀರ್ಣ:** ಏಷ್ಯಖಂಡದ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು 44 ಮಿಲಿಯನ್ ಚ.ಕಿ.ಮೀ.ಗಳು. ಇದು ಪ್ರಪಂಚದ ಮೇಲ್ಮೈ ವಿಸ್ತೀರ್ಣದಲ್ಲಿ ಶೇ.33 ಭಾಗದಷ್ಟಾಗಿದೆ. ಈ ಖಂಡವು ಪೂರ್ಣವಾಗಿ ಉತ್ತರ ಗೋಳಾರ್ಧದಲ್ಲಿದೆ.



ಪ್ರಪಂಚದಲ್ಲಿ ಏಷ್ಯಾದ ಸ್ಥಾನ

**ಭೌಗೋಳಿಕ ಸನ್ನಿವೇಶ:** ಏಷ್ಯಾ ಖಂಡವು ಮೂರು ಕಡೆ ಸಾಗರಗಳು ಮತ್ತು ಒಂದು ಕಡೆ ಭೂಭಾಗದಿಂದಾವರಿಸಿದೆ. ಸುತ್ತುವರಿದಿರುವ ಸಾಗರಗಳೆಂದರೆ: ಉತ್ತರದಲ್ಲಿ ಆರ್ಕ್ಟಿಕ್, ಪೂರ್ವಭಾಗದಲ್ಲಿ ಪೆಸಿಫಿಕ್ ಮತ್ತು ದಕ್ಷಿಣದಲ್ಲಿ ಹಿಂದೂಸಾಗರಗಳು. ಪಶ್ಚಿಮಕ್ಕೆ ಯೂರೋಪ್ ಖಂಡವಿದೆ.

ಏಷ್ಯ ಮತ್ತು ಯೂರೋಪ್ ಖಂಡಗಳ ಗಡಿಯು ಸಾಂಪ್ರದಾಯಿಕವಾದ ಕಾಲ್ಪನಿಕ ರೇಖೆಯಾಗಿದ್ದು, ಅದು ಅಂಕುಡೊಂಕಾಗಿದೆ ಮತ್ತು ಯೂರಲ್ ಪರ್ವತ, ಕ್ಯಾಸ್ಪಿಯನ್ ಸಮುದ್ರ, ಕಕಾಸಸ್ ಪರ್ವತ ಮತ್ತು ಕಪ್ಪು ಸಮುದ್ರಗಳ ಮುಖಾಂತರ ಹಾಯ್ದು ಹೋಗುತ್ತದೆ.

©KTBS Not to be republished

**ಯೂರೋಪ್ ಮತ್ತು ಏಷ್ಯಗಳನ್ನು ಒಟ್ಟುಗೂಡಿಸಿ 'ಯೂರೆಷ್ಯ' ಎನ್ನುವರು**




**ಏಷ್ಯಾದ ಸ್ಥಾನ ಮತ್ತು ಭೌಗೋಳಿಕ ಸನ್ನಿವೇಶ**

ಏಷ್ಯ ಮತ್ತು ಆಫ್ರಿಕ ಖಂಡಗಳ ಗಡಿಯು ಸಾಮಾನ್ಯವಾಗಿ ಸೂಯೇಜ್ ಕಾಲುವೆಯ ಮುಖಾಂತರ ಹಾಗೂ ಏಷ್ಯ ಮತ್ತು ಆಸ್ಟ್ರೇಲಿಯಗಳ ಗಡಿ ರೇಖೆಯು ನ್ಯೂಗಿನಿ ಮತ್ತು ಆಸ್ಟ್ರೇಲಿಯಗಳ ನಡುವೆ ಹಾಯ್ದು ಹೋಗುತ್ತದೆ.

## 2. ಏಷ್ಯದ ಪ್ರಾದೇಶಿಕ ವಿಭಾಗಗಳು

ಇಂದು ಏಷ್ಯದಲ್ಲಿ 48 ದೇಶಗಳಿವೆ. ಅವುಗಳನ್ನು ಕೆಳಕಂಡಂತೆ ಐದು ಪ್ರಾದೇಶಿಕ ಗುಂಪುಗಳಾಗಿ ವಿಂಗಡಿಸಲಾಗಿದೆ.

**1. ಪೂರ್ವ ಏಷ್ಯ:** ಇದರಲ್ಲಿ ಚೀನ, ಉತ್ತರ ಮತ್ತು ದಕ್ಷಿಣ ಕೊರಿಯ, ಜಪಾನ್, ಹಾಂಕ್‌ಕಾಂಗ್, ತೈವಾನ್ ಮತ್ತು ಮಂಗೋಲಿಯ ದೇಶಗಳು ಸೇರಿವೆ. ಇದು ಉತ್ತರದಲ್ಲಿ ವಿಶಾಲವಾದ ರಷ್ಯ, ದಕ್ಷಿಣದಲ್ಲಿ ದಕ್ಷಿಣ ಏಷ್ಯ ಮತ್ತು ಆಗ್ನೇಯ ಏಷ್ಯಗಳ ನಡುವೆ ವಿಸ್ತರಿಸಿದೆ.

**2. ಆಗ್ನೇಯ ಏಷ್ಯ:** ಇದು ಮಯನ್ಮಾರ್, ಲಾವೋಸ್, ವಿಯೆಟ್ನಾಂ, ಥೈಲೆಂಡ್, ಕಾಂಬೋಡಿಯಾ, ಮಲೇಷ್ಯ, ಇಂಡೊನೇಷ್ಯ, ಸಿಂಗಾಪುರ, ಬ್ರುನೈ ಮತ್ತು ಫಿಲಿಪೈನ್ಸ್

©KTBS Not to be republished

ದೇಶಗಳನ್ನೊಳಗೊಂಡಿದೆ. ಇದೊಂದು ಪರ್ಯಾಯ ದ್ವೀಪ. ದ್ವೀಪ ಸಮೂಹಗಳ ಪ್ರದೇಶ. ಉದಾ: ಸುಮಾತ್ರ, ಜಾವ, ಸುಲಾವೇಶಿ, ಬೋರ್ನಿಯೊ, ಪಾಪುವ ಇತ್ಯಾದಿ. ಇದರ ಪಶ್ಚಿಮಕ್ಕೆ ಹಿಂದೂಸಾಗರ ಮತ್ತು ಪೂರ್ವಕ್ಕೆ ಪೆಸಿಫಿಕ್ ಸಾಗರಗಳಿವೆ.




ಏಷ್ಯಾದ ಪ್ರಾದೇಶಿಕ ವಿಭಾಗಗಳು

**3. ದಕ್ಷಿಣ ಏಷ್ಯ:** ಇದು ಭಾರತ, ಬಾಂಗ್ಲಾದೇಶ, ಭೂತಾನ, ನೇಪಾಲ, ಪಾಕಿಸ್ತಾನ, ಶ್ರೀಲಂಕ ಮತ್ತು ಮಾಲ್ಡೀವ್ಸ್‌ಗಳನ್ನು ಒಳಗೊಂಡಿದೆ. ಇವುಗಳಲ್ಲಿ ಭಾರತ ಅತಿ ದೊಡ್ಡದು. ಇದನ್ನು ದಕ್ಷಿಣದಲ್ಲಿ ಹಿಂದೂಸಾಗರ ಮತ್ತು ಅದರ ಉಪಭಾಗಗಳಾದ ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರಗಳು ಸುತ್ತುವರಿದಿವೆ. ಉತ್ತರದಲ್ಲಿ ಹಿಮಾಲಯ ಪರ್ವತ ಸರಣಿ, ಪೂರ್ವಕ್ಕೆ ಮಯನ್ಮಾರ್ ಮತ್ತು ಪಶ್ಚಿಮಕ್ಕೆ ಅಫ್ಘಾನಿಸ್ತಾನಗಳಿವೆ.

**4. ನೈಋತ್ಯ ಏಷ್ಯ:** ಅಫ್‌ಘಾನಿಸ್ತಾನ, ಬಹ್ರೇನ್, ಸೈಪ್ರಸ್, ಇರಾನ್, ಇರಾಕ್, ಇಸ್ರೇಲ್, ಜೋರ್ಡಾನ್, ಕುವೈತ್, ಲೆಬನಾನ್, ಓಮನ್, ಕಟಾರ್, ಸಿರಿಯ, ಪ್ಯಾಲೆಸ್ಟೈನ್, ಸೌದಿಅರೇಬಿಯ, ಅರಬ್ ಎಮಿರೇಟ್ಸ್, ಯೆಮನ್ ಮತ್ತು ಟರ್ಕಿ ದೇಶಗಳು ಈ ವಿಭಾಗದಲ್ಲಿ ಸೇರುತ್ತವೆ. ಈ ವಿಭಾಗವು ಕಪ್ಪುಸಮುದ್ರದ ದಕ್ಷಿಣ ಭಾಗದಲ್ಲಿದ್ದು, ಪಶ್ಚಿಮಕ್ಕೆ ಮೆಡಿಟರೇನಿಯನ್ ಸಮುದ್ರ ಮತ್ತು ಪೂರ್ವಕ್ಕೆ ಭಾರತಗಳ ನಡುವೆ ವಿಸ್ತರಿಸುತ್ತದೆ. ಇದು ಬಹಳವಾಗಿ ಮರುಭೂಮಿ

©KTBS Not to be republished

ಮತ್ತು ಅರೆಮರುಭೂಮಿಗಳಿಂದ ಆವರಿಸಿದ್ದರೂ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳಿಂದ ಸಮೃದ್ಧವಾಗಿದೆ.

**5. ಮಧ್ಯ ಏಷ್ಯ:** ಇದು ಪಶ್ಚಿಮ ಕ್ಯಾಸ್ಪಿಯನ್ ಸಮುದ್ರದಿಂದ ಪೂರ್ವದಲ್ಲಿ ಚೀನದವರೆಗೆ ಹಾಗೂ ಉತ್ತರದಲ್ಲಿ ಕಜಕಿಸ್ತಾನದಿಂದ ದಕ್ಷಿಣದಲ್ಲಿ ಇರಾನ್-ಅಫ್ಘಾನಿಸ್ತಾನಗಳವರೆಗೆ ವಿಸ್ತರಿಸಿದೆ. ಈ ಭಾಗದ ಪ್ರಮುಖ ದೇಶಗಳೆಂದರೆ: ಕಜಕಿಸ್ತಾನ, ಕಿರ್ಗಿಸ್ತಾನ, ತಜಕಿಸ್ತಾನ, ಟರ್ಕ್ಮೇನಿಸ್ತಾನ ಮತ್ತು ಉಜ್ಬೇಕಿಸ್ತಾನ ಹಾಗೂ ಸೈಬೀರಿಯ(ರಷ್ಯ)ಗಳು.

## 3. ಪ್ರಾಕೃತಿಕ ಲಕ್ಷಣಗಳು

ಏಷ್ಯದ ಪ್ರಾಕೃತಿಕ ಲಕ್ಷಣಗಳಲ್ಲಿ ಎತ್ತರವಾದ ಪರ್ವತ ಸರಣಿಗಳು ಪ್ರಮುಖ ಭೂಸ್ವರೂಪಗಳಾಗಿವೆ. ಜೊತೆಗೆ ವಿವಿಧ ಪ್ರಸ್ಥಭೂಮಿ, ಮೆಕ್ಕಲು ಮಣ್ಣುಳ್ಳ ಮೈದಾನ ಮತ್ತು ದ್ವೀಪ ಸಮೂಹಗಳನ್ನೂ ಹೊಂದಿದೆ.

**ಪ್ರಮುಖ ಪ್ರಾಕೃತಿಕ ವಿಭಾಗಗಳು:** ಭೂರಚನೆ ಮತ್ತು ಮೇಲ್ಮೈ ಲಕ್ಷಣಗಳನ್ನಾಧರಿಸಿ ಏಷ್ಯಖಂಡವನ್ನು ಐದು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಬಹುದು:

1. ವಾಯವ್ಯ ತಗ್ಗು ಮೈದಾನಗಳು
2. ಕೇಂದ್ರದ ಎತ್ತರ ಭಾಗಗಳು
3. ದಕ್ಷಿಣ ಪ್ರಸ್ಥಭೂಮಿಗಳು
4. ನದಿಗಳ ಮಹಾ ಮೈದಾನಗಳು
5. ದ್ವೀಪ ಸಮೂಹಗಳು

**1. ವಾಯವ್ಯ ತಗ್ಗು ಮೈದಾನಗಳು:** ಈ ವಿಭಾಗವು ಏಷ್ಯದ ಪ್ರಾಕೃತಿಕ ಲಕ್ಷಣಗಳಲ್ಲಿ ಹೆಚ್ಚು ಮಹತ್ವವುಳ್ಳದ್ದು. ಬೇರಿಂಗ್ ಜಲಸಂಧಿಯಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ವಿಸ್ತರಿಸಿದೆ. ಕೇಂದ್ರದ ಎತ್ತರ ಭಾಗಗಳು ಮತ್ತು ಆರ್ಕ್ಟಿಕ್ ಸಾಗರದ ನಡುವೆ ಕಂಡುಬರುತ್ತದೆ. ತ್ರಿಕೋನ ಆಕಾರವುಳ್ಳ ಈ ವಿಶಾಲವಾದ ತಗ್ಗು ಮೈದಾನವನ್ನು 'ಸೈಬೀರಿಯ ಮೈದಾನ' ಎಂದು ಕರೆಯುತ್ತಾರೆ. ಉತ್ತರದ ಕಡೆಗೆ ಸಾಧಾರಣ ಇಳಿಜಾರುಳ್ಳದ್ದು. ಈ ಮೈದಾನದ ಮೂಲಕ ಕೆಲವು ನದಿಗಳು ಹರಿಯುತ್ತವೆ. ಉದಾ: ಲೀನ, ಓಬ್ ಮತ್ತು ಯೆನ್ಸಿ. ಇವು ಉತ್ತರದ ಕಡೆಗೆ ಹರಿದು ಆರ್ಕ್ಟಿಕ್ ಸಾಗರವನ್ನು ಸೇರುತ್ತವೆ.

**2. ಕೇಂದ್ರದ ಎತ್ತರ ಭಾಗಗಳು:** ಇದು ಏಷ್ಯದ ಎರಡನೆ ಅತಿ ಪ್ರಮುಖ ಪ್ರಾಕೃತಿಕ ವಿಭಾಗ. ವಾಯವ್ಯ ತಗ್ಗು ಮೈದಾನಗಳ ದಕ್ಷಿಣ ಭಾಗದಲ್ಲಿವೆ. ಮಧ್ಯ ಏಷ್ಯದಲ್ಲಿರುವ ಪರ್ವತ ಸರಣಿಗಳನ್ನು 'ಕೇಂದ್ರದ ಎತ್ತರ ಭಾಗಗಳು' ಎನ್ನುವರು. ಇದು ಏಷ್ಯ ಮೈನರ್‌ನಿಂದ ಬೇರಿಂಗ್ ಜಲಸಂಧಿವರೆಗೂ ವಿಸ್ತರಿಸಿದೆ. ಇಲ್ಲಿ ಅನೇಕ ಪರ್ವತ ಸರಣಿಗಳು ಪಾಮಿರ್ ಗ್ರಂಥಿಯಿಂದ ಎಲ್ಲೆಡೆಗೂ ಹಬ್ಬಿವೆ. ಪೂರ್ವದಿಕ್ಕಿನ ಸರಣಿಗಳಲ್ಲಿ ಹಿಮಾಲಯ, ಕುನ್‌ಲುನ್, ಕಾರಾಕೋರಂ, ಟಿಯೆನ್‌ಶಾನ್, ಆಲ್ಟಾಯ್, ಸಯಾನ್, ಯಬ್ಲೋನಿ, ಕಿಂಗಾನ್ ಮತ್ತು ಸ್ಟಾನ್‌ವಾಯ್

©KTBS Not to be republished

ಪರ್ವತಗಳು ಮುಖ್ಯವಾದವು. ಪಶ್ಚಿಮದ ಸರಣಿಗಳಲ್ಲಿ ಹಿಂದುಕುಶ್, ಕಿರ್ತಾರ್, ಸುಲೈಮಾನ್, ಎಲ್ಬರ್ಜ್, ಜಾಗ್ರೋಸ್, ಕಕಾಸಸ್, ಪೊಂಟಿನ್ ಮತ್ತು ತಾರಸ್ ಪರ್ವತಗಳು ಸೇರಿವೆ.



ಮೌಂಟ್ ಎವರೆಸ್ಟ್

ಮಡಿಕೆ ಪರ್ವತಗಳಾದ ಹಿಮಾಲಯದ ಸರಣಿಯು ಪಾಮಿರ್ ಗ್ರಂಥಿಯಿಂದ ಆಗ್ನೇಯಕ್ಕೆ ಹಬ್ಬಿವೆ. ಅವು ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಪರ್ವತಗಳು. ಇಲ್ಲಿನ ಮೌಂಟ್ ಎವರೆಸ್ಟ್ ಪ್ರಪಂಚದಲ್ಲೇ ಎತ್ತರವಾದ ಶಿಖರ.

ಪರ್ವತ ಸರಣಿಗಳ ನಡುವೆ ಅನೇಕ ಪ್ರಸ್ಥ ಭೂಮಿಗಳಿವೆ. ಉದಾ: ಟಿಬೆಟ್, ಮಂಗೋಲಿಯ, ಇರಾನ್, ಅನಟೋಲಿಯ ಪ್ರಸ್ಥಭೂಮಿ ಇತ್ಯಾದಿ. ಏಷ್ಯ ಖಂಡದ ಅನೇಕ ನದಿಗಳು ಈ ಎತ್ತರದ ಭಾಗಗಳಲ್ಲಿ ಉಗಮವಾಗುತ್ತವೆ.

©KTBS Not to be republished




ಏಷ್ಯಾದ ಪ್ರಾಕೃತಿಕ ವಿಭಾಗಗಳು

**3. ದಕ್ಷಿಣ ಪ್ರಸ್ಥಭೂಮಿಗಳು:** ಇವು ಕಠಿಣ ಮತ್ತು ಸ್ಪಟಿಕ ಶಿಲೆಗಳಿಂದ ರಚನೆಗೊಂಡ ಪುರಾತನ ಪ್ರಸ್ಥಭೂಮಿಗಳು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಅರೇಬಿಯ, ದಖನ್ (ಭಾರತ), ಯುನ್ನಾನ್ (ಚೀನ) ಮತ್ತು ಶಾನ್ (ಮಯನ್ಮಾರ್) ಪ್ರಸ್ಥಭೂಮಿ.

ಅರೇಬಿಯ ಪ್ರಸ್ಥಭೂಮಿಯು ಒಂದು ಪರ್ಯಾಯ ದ್ವೀಪ ಮತ್ತು ಇದೊಂದು ಶುಷ್ಕ ಪ್ರದೇಶ.

ದಖನ್ ಪ್ರಸ್ಥಭೂಮಿಯು ಭಾರತದ ಪರ್ಯಾಯ ದ್ವೀಪದ ಹೆಚ್ಚು ಭಾಗವನ್ನಾವರಿಸಿದೆ. ಮಧ್ಯಭಾರತದ ಬೆಟ್ಟದ ಸಾಲುಗಳು, ಪಶ್ಚಿಮ ಘಟ್ಟ ಹಾಗೂ ಪೂರ್ವ ಘಟ್ಟಗಳ ನಡುವೆ ಇದೆ. ಇದು ಪೂರ್ವ ದಿಕ್ಕಿಗೆ ಇಳಿಜಾರಾಗಿದ್ದು, ಆ ಮೂಲಕ ಅನೇಕ ನದಿಗಳು ಹರಿಯುವವು.

ಚೀನದ ನೈಋತ್ಯಕ್ಕೆ ಯುನ್ನಾನ್ ಪ್ರಸ್ಥಭೂಮಿಯಿದೆ. ಇದೊಂದು ಉನ್ನತ ಸುಣ್ಣಕಲ್ಲು ಪ್ರದೇಶ. ಇದರ ಮುಂದುವರಿದ ಭಾಗವೇ ಶಾನ್ ಪ್ರಸ್ಥಭೂಮಿ.

**4. ನದಿಗಳ ಮಹಾ ಮೈದಾನಗಳು:** ಹಿಂದೂ ಸಾಗರ ಅಥವಾ ಪೆಸಿಫಿಕ್ ಸಾಗರಗಳಿಗೆ ಸೇರುವ ಏಷ್ಯದ ನದಿಗಳ ಮೈದಾನಗಳನ್ನೊಳಗೊಂಡಿದೆ. ಇಲ್ಲಿ ಹರಿಯುವ ನದಿಗಳು ಮೆಕ್ಕಲು ಮಣ್ಣನ್ನು ಸಂಚಯ ಮಾಡುವುದರೊಂದಿಗೆ ಫಲವತ್ತಾದ ಮೈದಾನಗಳನ್ನು ನಿರ್ಮಿಸಿವೆ. ಈ ವಿಭಾಗದ ಪ್ರಮುಖ ಮೈದಾನಗಳೆಂದರೆ: ಸಿರಿಯ ಮತ್ತು ಇರಾಕ್‌ನ ಟೈಗ್ರಿಸ್–ಯುಪ್ರಟೀಸ್, ಭಾರತ–ಪಾಕಿಸ್ತಾನಗಳ ಸಿಂಧೂ–ಗಂಗ ಮೈದಾನಗಳು, ಮಯನ್ಮಾರಿನ ಇರವಾಡಿ, ಇಂಡೊ–ಚೀನದ ಮೀನಾಮ್ ಮತ್ತು ಮೀಕಾಂಗ್, ಚೀನದ ಚಿಯಾಂಗ್–ಜಿಯಾಂಗ್ (ಯಾಂಗ್‌ಟ್ಸೆ), ಸಿಕಿಯಾಂಗ್ ಮತ್ತು ಹ್ವಾಂಗ್‌ಹೊ ನದಿ ಮೈದಾನಗಳು. ಇವು ಹೆಚ್ಚು ಜನಭರಿತವಾಗಿವೆ.

**5. ದ್ವೀಪ ಸಮೂಹ:** ಏಷ್ಯಖಂಡದ ಆಗ್ನೇಯ ಮತ್ತು ಪೆಸಿಫಿಕ್ ತೀರಗಳಲ್ಲಿ ಅನೇಕ ದ್ವೀಪಗಳಿವೆ. ಅವು ಉತ್ತರದಲ್ಲಿ ಕಮಚಟ್ಕದಿಂದ ದಕ್ಷಿಣದಲ್ಲಿ ಫಿಲಿಪೈನ್ಸ್ ಮತ್ತು ಬೋರ್ನಿಯೊವರೆಗೆ ಮಾಲೆಯಂತೆ ಹಬ್ಬಿವೆ. ಅವು ಐದು ಸಮುದ್ರಗಳಿಂದ ಆವರಿಸಿವೆ. ಉದಾ: ಓಖೋಟಸ್ಕ ಸಮುದ್ರ, ಜಪಾನ್ ಸಮುದ್ರ, ಹಳದಿ ಸಮುದ್ರ, ಪೂರ್ವ ಚೀನ ಸಮುದ್ರ ಮತ್ತು ದಕ್ಷಿಣ ಚೀನ ಸಮುದ್ರ.

**ಪ್ರಮುಖ ದ್ವೀಪ ಸಮೂಹಗಳೆಂದರೆ:** ಕ್ಯೂರೈಲ್, ಜಪಾನ್, ಲಾಚು, ಫಿಲಿಪೈನ್ಸ್ ಮತ್ತು ಬೋರ್ನಿಯೊ. ಇವುಗಳಲ್ಲಿ ಬಹಳಷ್ಟು ಜ್ವಾಲಾಮುಖಿ ಜನಿತವಾದವು. ಜೊತೆಗೆ ಫಲವತ್ತಾದ ಮಣ್ಣು, ಆಳವಾದ ಕಣಿವೆ ಮತ್ತು ಶಂಖಾಕೃತಿ ಪರ್ವತಗಳನ್ನು ಹೊಂದಿವೆ.

## 4. ಪ್ರಮುಖ ನದಿಗಳು ಮತ್ತು ವ್ಯವಸಾಯ

**ಏಷ್ಯದ ನದಿಗಳು:** ಏಷ್ಯದ ನದಿ ಜಾಲಗಳಲ್ಲಿ ವೈವಿಧ್ಯವಿದೆ. ಈ ಖಂಡದ ನದಿವ್ಯವಸ್ಥೆಯ ಮೇಲೆ ಪ್ರಾಕೃತಿಕ ಲಕ್ಷಣ ಮತ್ತು ಸುತ್ತಲಿನ ಜಲರಾಶಿಗಳು ಪ್ರಭಾವ ಬೀರುತ್ತವೆ. ಆರ್ಕ್ಟಿಕ್,

©KTBS Not to be republished

ಪೆಸಿಫಿಕ್ ಮತ್ತು ಹಿಂದೂ ಸಾಗರಗಳು ಏಷ್ಯವನ್ನು ಸುತ್ತುವರಿದಿವೆ. ಈ ಖಂಡದಲ್ಲಿ ಹರಿಯುವ ಹೆಚ್ಚಿನ ಸಂಖ್ಯೆಯ ನದಿಗಳು ಈ ಸಾಗರಗಳಿಗೆ ಸೇರುವವು. ಹೀಗಾಗಿ ಸಾಗರಗಳಿಗೆ ನದಿಗಳು ಸೇರುವುದನ್ನಾಧರಿಸಿ ಏಷ್ಯದ ನದಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

**1. ಹಿಂದೂ ಸಾಗರ ಸೇರುವ ನದಿಗಳು:** ಈ ಗುಂಪಿಗೆ ಸೇರಿದ ಮುಖ್ಯ ನದಿಗಳೆಂದರೆ: ಸಿರಿಯ ಹಾಗೂ ಇರಾಕ್ ದೇಶಗಳ ಟೈಗ್ರಿಸ್ ಮತ್ತು ಯುಫ್ರಟೀಸ್ ನದಿಗಳು ಪರ್ಷಿಯ ಖಾರಿಯನ್ನೂ, ಪಾಕಿಸ್ತಾನ ಮತ್ತು ಭಾರತದ ಸಿಂಧೂ, ಗಂಗ ಮತ್ತು ಬ್ರಹ್ಮಪುತ್ರ ನದಿಗಳು ಹಿಮಾಲಯದಲ್ಲಿ ಉಗಮಿಸಿ ದಕ್ಷಿಣಕ್ಕೆ ಹರಿದು ಹಿಂದೂ ಸಾಗರವನ್ನು ಸೇರುತ್ತವೆ. ಮಯನ್ಮಾರಿನ ಸಿಟ್ಯಾಂಗ್, ಸಾಲ್ವೀನ್ ಮತ್ತು ಇರವಾಡಿ ನದಿಗಳು ಬಂಗಾಳ ಕೊಲ್ಲಿಗೆ ಸೇರುವವು.

**2. ಪೆಸಿಫಿಕ್ ಸಾಗರ ಸೇರುವ ನದಿಗಳು:** ಈ ಗುಂಪಿನಲ್ಲಿ ರಷ್ಯದ ಅಮುರ್, ಚೀನದ ಹ್ವಾಂಗ್ ಹೊ, ಚಿಯಾಂಗ್ ಜಿಯಾಂಗ್ (ಯಾಂಗ್‌ಟ್ಸೆ) ಮತ್ತು ಸಿಕಿಯಾಂಗ್ ನದಿಗಳು ಪೂರ್ವದ ಕಡೆಗೆ ಹರಿಯುತ್ತಾ ಕ್ರಮವಾಗಿ ಓಖೋಟಸ್ಕ, ಹಳದಿ ಸಮುದ್ರ ಮತ್ತು ಚೀನ ಸಮುದ್ರಗಳನ್ನು ಸೇರುತ್ತವೆ. ಇಂಡೋಚೀನದ ಮೀನಾಮ್ ಮತ್ತು ಮೀಕಾಂಗ್ ನದಿಗಳು ದಕ್ಷಿಣ ಚೀನ ಸಮುದ್ರವನ್ನು ಸೇರುತ್ತವೆ.




ಏಷ್ಯದ ನದಿ ವ್ಯವಸ್ಥೆ

©KTBS Not to be republished

**3. ಆರ್ಕ್ಟಿಕ್ ಸಾಗರ ಸೇರುವ ನದಿಗಳು:** ಓಬ್, ಯೆನ್ನಿಸಿ ಮತ್ತು ಲೀನ ಎಂಬುವವು ಈ ಗುಂಪಿನ ಪ್ರಮುಖ ನದಿಗಳು. ಇವು ಕೇಂದ್ರದ ಉನ್ನತ ಭಾಗಗಳಲ್ಲಿ ಉಗಮಹೊಂದಿ ಉತ್ತರಕ್ಕೆ ಹರಿದು ಆರ್ಕ್ಟಿಕ್ ಸಾಗರವನ್ನು ಸೇರುತ್ತವೆ.

**4. ಒಳನಾಡಿನ ನದಿಗಳು:** ಈ ಗುಂಪಿಗೆ ಸೇರಿದ ನದಿಗಳು ಒಳನಾಡಿನ ಸಮುದ್ರಗಳಿಗೆ ಸೇರುವವು. ಉದಾ: ವೋಲ್ಗ ಮತ್ತು ಯೂರಲ್ ನದಿ ಕ್ಯಾಸ್ಪಿಯನ್ ಸಮುದ್ರವನ್ನು ಮತ್ತು ಅಮುದರಿಯ ಮತ್ತು ಸಿರ್‌ದರಿಯಾ ನದಿಗಳು ಅರಲ್ ಸಮುದ್ರವನ್ನೂ ಸೇರುತ್ತವೆ.

## ಏಷ್ಯದ ವ್ಯವಸಾಯ

ವ್ಯವಸಾಯವು ಏಷ್ಯದ ಪ್ರಮುಖ ವೃತ್ತಿ. ಸುಮಾರು ನಾಲ್ಕನೇ ಮೂರು ಭಾಗದಷ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಏಷ್ಯದಿಂದ ರಫ್ತಾಗುವ ಸರಕುಗಳಲ್ಲಿ ಬಹುಭಾಗ ಕೃಷಿ ಉತ್ಪನ್ನಗಳಾಗಿರುತ್ತವೆ.

ಏಷ್ಯದ ವ್ಯವಸಾಯ ಮತ್ತು ನದಿ ವ್ಯವಸ್ಥೆಗಳ ನಡುವೆ ನಿಕಟವಾದ ಸಂಬಂಧವಿದೆ. ಸೈಬೀರಿಯಾವನ್ನು ಹೊರತುಪಡಿಸಿ, ಉಳಿದ ಹೆಚ್ಚಿನ ಭಾಗಗಳಲ್ಲಿ ವ್ಯವಸಾಯವು ನದಿಬಯಲುಗಳಲ್ಲಿ ರೂಢಿಯಲ್ಲಿದೆ. ಇದಕ್ಕೆ ಇಲ್ಲಿನ ಫಲವತ್ತಾದ ಮಣ್ಣು ಮತ್ತು ನೀರಾವರಿ ಮೂಲಕ ನೀರು ಪೂರೈಕೆ ಮುಖ್ಯ ಕಾರಣಗಳು.

ಏಷ್ಯದ ಅನೇಕ ದೇಶಗಳಲ್ಲಿ ರೈತರು ಸಾಗುವಳಿ ಕಾರ್ಯಗಳಿಗೆ ಕೈಯಿಂದ ಮಾಡಿದ ಉಪಕರಣ ಮತ್ತು ಪ್ರಾಣಿಗಳನ್ನು ಉಪಯೋಗಿಸುವರು. ಅವರು ಸಾಂದ್ರಬೇಸಾಯ ಪದ್ಧತಿಯನ್ನು ಅನುಸರಿಸುವರು. ರೂಢಿಯಲ್ಲಿರುವ ಇತರೆ ಬೇಸಾಯ ಕ್ರಮಗಳೆಂದರೆ: ನೀರಾವರಿ ಬೇಸಾಯ, ಒಣ ಬೇಸಾಯ, ನೆಡುತೋಟ ಬೇಸಾಯ, ಮಿಶ್ರ ಬೇಸಾಯ, ಸ್ಥಳಾಂತರ ಬೇಸಾಯ ಇತ್ಯಾದಿ. ಇತ್ತೀಚೆಗೆ ಆಧುನಿಕ ವ್ಯವಸಾಯ ಉಪಕರಣ, ರಾಸಾಯನಿಕ ಗೊಬ್ಬರ, ಅಧಿಕ ಇಳುವರಿ ನೀಡುವ ತಳಿಗಳ ಬಳಕೆ ಇತ್ಯಾದಿಗಳು ಏಷ್ಯದ ಕೆಲವು ದೇಶಗಳಲ್ಲಿ ಹೆಚ್ಚು ರೂಢಿಗೆ ಬಂದಿವೆ. ಆದಾಗ್ಯೂ ಇನ್ನೂ ಅನೇಕ ದೇಶಗಳಲ್ಲಿ ಹಲವು ಕಾರಣಗಳಿಂದ ಇಳುವರಿ ಕಡಿಮೆ ಇದೆ.

## ಬೆಳೆಗಳು


*ಭತ್ತದ ಬೆಳೆ*

ಏಷ್ಯದಲ್ಲಿ ಅನೇಕ ವಿಧದ ಬೆಳೆಗಳ ಸಾಗುವಳಿ ಕಂಡುಬರುತ್ತದೆ. ಭತ್ತ ಮತ್ತು ಗೋಧಿಗಳು ಪ್ರಮುಖ ಆಹಾರ ಬೆಳೆಗಳು. ಚೀನ ಮತ್ತು ಭಾರತಗಳು ಪ್ರಮುಖ ಭತ್ತ ಉತ್ಪಾದಿಸುವ ದೇಶಗಳಾಗಿದ್ದು, ಪ್ರಪಂಚದ ಭತ್ತದ ಒಟ್ಟು ಉತ್ಪಾದನೆಯಲ್ಲಿ ಶೇ.90 ಭಾಗವನ್ನು ಪೂರೈಸುತ್ತವೆ. ಜಪಾನ್, ಬಾಂಗ್ಲಾದೇಶ, ಥೈಲೆಂಡ್ ಹಾಗೂ ಆಗ್ನೇಯ ಏಷ್ಯ ದೇಶಗಳು ಇತರ ಪ್ರಮುಖ ಭತ್ತ ಉತ್ಪಾದಿಸುವ ದೇಶಗಳು. ಚೀನ, ಭಾರತ, ಪಾಕಿಸ್ತಾನ ಮತ್ತು ಏಷ್ಯದ ರಷ್ಯಾ ಭಾಗಗಳು ಪ್ರಮುಖ ಗೋಧಿ ಉತ್ಪಾದಿಸುವ ದೇಶಗಳು.

©KTBS Not to be republished

ಪ್ರಪಂಚದ ಸ್ವಾಭಾವಿಕ ರಬ್ಬರ್ ಮತ್ತು ಚಹ ಉತ್ಪಾದನೆಯಲ್ಲಿ ಏಷ್ಯ ಮುಂದಿದೆ. ಇಂಡೋನೇಷ್ಯ, ಮಲೇಷ್ಯ ಮತ್ತು ಥೈಲೆಂಡ್‌ಗಳು ಪ್ರಮುಖ ಸ್ವಾಭಾವಿಕ ರಬ್ಬರ್ ಉತ್ಪಾದಕರು. ಪ್ರಮುಖ ಚಹ ಉತ್ಪಾದಕರೆಂದರೆ: ಚೀನ, ಇಂಡೊನೇಷ್ಯ, ಮಲೇಷ್ಯ, ಭಾರತ ಮತ್ತು ಥೈಲೆಂಡ್ ದೇಶಗಳು.



ಚಹ ತೋಟ



ಕಾಫಿ ತೋಟ

ಏಷ್ಯದಲ್ಲಿ ಬೆಳೆಯುವ ಇತರ ಪ್ರಮುಖ ಬೆಳೆಗಳೆಂದರೆ: ಹತ್ತಿ, ಸೆಣಬು (ನಾರುಬೆಳೆ) ಮತ್ತು ಕಬ್ಬು. ಚೀನ, ಭಾರತ, ಪಾಕಿಸ್ತಾನ, ಟರ್ಕಿ, ಟರ್ಕ್ಮೇನಿಸ್ತಾನ ಮತ್ತು ಉಜ್ಬೇಕಿಸ್ತಾನಗಳು ಪ್ರಮುಖ ಹತ್ತಿ ಉತ್ಪಾದಿಸುವ ದೇಶಗಳು. ಬಾಂಗ್ಲಾದೇಶ, ಚೀನ ಮತ್ತು ಭಾರತಗಳಿಂದ ಸೆಣಬು ಉತ್ಪಾದನೆಯಾಗುತ್ತದೆ. ಕಬ್ಬು ಬೆಳೆಯುವ ಪ್ರದೇಶಗಳು ಹೆಚ್ಚಾಗಿ ಭಾರತ, ಇಂಡೊನೇಷ್ಯ, ಫಿಲಿಪ್ಪೈನ್ಸ ಮತ್ತು ಬಾಂಗ್ಲಾದೇಶಗಳಲ್ಲಿ ಕಂಡುಬರುತ್ತವೆ. ಭಾರತವು ಪ್ರಪಂಚದ ಎರಡನೆಯ ಪ್ರಮುಖ ಕಬ್ಬು ಉತ್ಪಾದಿಸುವ ದೇಶ.

ಕಾಫಿ, ಕೋಕೊ, ವಿವಿಧ ತೃಣಧಾನ್ಯ (ನವಣೆ, ಸಜ್ಜೆ, ಸಾವೆ), ದ್ವಿದಳಧಾನ್ಯ, ಎಣ್ಣೆಕಾಳು ಸಾಂಬಾರು ಪದಾರ್ಥಗಳು ಮೊದಲಾದವುಗಳ ಉತ್ಪಾದನೆಗೂ ಏಷ್ಯ ಪ್ರಸಿದ್ಧವಾದುದು.

## 5. ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ

**ವಾಯುಗುಣ:** ಈಗಾಗಲೇ ತಿಳಿಸಿದಂತೆ, ಏಷ್ಯ ವಿಶಾಲವಾದ ಭೂಖಂಡ. ಅದು ದಕ್ಷಿಣದಲ್ಲಿ ಭೂಮಧ್ಯ ರೇಖೆಯಿಂದ ಧ್ರುವೀಯ ಪ್ರದೇಶದವರೆಗೂ ವಿಸ್ತರಿಸಿದೆ. ಪರಿಣಾಮವಾಗಿ ಈ ಖಂಡದ ವಿವಿಧ ಪ್ರದೇಶಗಳಲ್ಲಿ ವಿವಿಧ ವಾಯುಗುಣದ ಪರಿಸ್ಥಿತಿಯಿದೆ. ಏಷ್ಯದಲ್ಲಿ ಕೆಲವು ಭಾಗಗಳು ಪ್ರಪಂಚದಲ್ಲೇ ಅತ್ಯಂತ ಶೀತ(ಧ್ರುವೀಯ)ವಾದ ಪರಿಸ್ಥಿತಿಯನ್ನು ಹೊಂದಿದ್ದರೆ ಮತ್ತೆ ಕೆಲವು ಭಾಗಗಳು ಅತಿ ಉಷ್ಣತೆಯುಳ್ಳವು (ಕೇಂದ್ರ ಮತ್ತು ನೈಋತ್ಯ). ಹಾಗೆಯೇ ಅತಿಶುಷ್ಕ ಮತ್ತು ಅಧಿಕ ಮಳೆ ಬೀಳುವ ಸ್ಥಳಗಳೂ ಸಹ ಇಲ್ಲಿ ಕಂಡುಬರುತ್ತವೆ. ಏಷ್ಯದ ವಿವಿಧ ವಾಯುಗುಣದ ಸ್ಥಿತಿಗೆ ಹಲವು ಅಂಶಗಳು ಕಾರಣವಾಗಿವೆ. ಉದಾ: ವಿಸ್ತೀರ್ಣ, ಅಕ್ಷಾಂಶಗಳ ವಿಸ್ತರಣೆ, ಪ್ರಾಕೃತಿಕ ಲಕ್ಷಣ, ಮಾನ್ಸೂನ್ ಮಾರುತ ಇತ್ಯಾದಿ.

©KTBS Not to be republished




ವಾರ್ಷಿಕ ಉಷ್ಣಾಂಶದ ಹಂಚಿಕೆ

©KTBS Not to be republished

**ಉಷ್ಣಾಂಶ:** ಇದು ಸಹಜವಾಗಿ ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುವುದು. ಜನವರಿ ತಿಂಗಳಲ್ಲಿ ಏಷ್ಯದ ದಕ್ಷಿಣ ದೇಶಗಳಿಗಿಂತ ಉತ್ತರದ ದೇಶಗಳಲ್ಲಿ ಶೀತವು ಹೆಚ್ಚಾಗಿರುತ್ತದೆ. ಸೈಬೀರಿಯಾದಲ್ಲಿರುವ ವರ್ಕೊಯಾನ್‌ಸ್ಕ್ ಅತ್ಯಂತ ಶೀತವಾದ ಸ್ಥಳ. ಜುಲೈ ತಿಂಗಳಲ್ಲಿ ಸೈಬೀರಿಯಾದ ಉತ್ತರ ಭಾಗ ಹಾಗೂ ಮಧ್ಯ ಏಷ್ಯದ ಎತ್ತರವುಳ್ಳ ಪರ್ವತ ಮತ್ತು ಪ್ರಸ್ಥಭೂಮಿ ಭಾಗಗಳನ್ನು ಹೊರತುಪಡಿಸಿ, ಏಷ್ಯದ ಬಹಳಷ್ಟು ಭಾಗಗಳಲ್ಲಿ ಶಾಖವು ಹೆಚ್ಚು. ಕೆಲವು ಭಾಗಗಳಲ್ಲಿ ಉಷ್ಣಾಂಶವು $40^0$ ಸೆಲ್ಸಿಯಸ್‌ಗಿಂತ ಹೆಚ್ಚಾಗಿರುತ್ತದೆ.

**ಮಳೆಯ ಹಂಚಿಕೆ:** ಏಷ್ಯ ಖಂಡದಲ್ಲಿ ನೈರುತ್ಯ ಮಾನ್ಸೂನ್ ಮಾರುತಗಳಿಂದ ಬೇಸಿಗೆಯಲ್ಲಿ ಹೆಚ್ಚು ಮಳೆಯಾಗುತ್ತದೆ. ಆದರೆ ಮಾನ್ಸೂನ್ ಮಾರುತಗಳು ಮಧ್ಯ ಏಷ್ಯವನ್ನು ತಲುಪುವುದಿಲ್ಲ. ಆ ಭಾಗವು ವರ್ಷವೆಲ್ಲ ಶುಷ್ಕ ಸ್ಥಿತಿಯನ್ನು ಹೊಂದಿರುತ್ತದೆ. ಪಶ್ಚಿಮ ಏಷ್ಯದ ದೇಶಗಳು, ಚಳಿಗಾಲದ ಪಶ್ಚಿಮ ಮಾರುತ(ಪ್ರತಿವಾಣಿಜ್ಯ)ಗಳಿಂದಲೂ ಹಾಗೂ ಚೀನದ ಪೂರ್ವಭಾಗ ಮತ್ತು ಫಿಲಿಪ್ಪೈನ್ಸ್, ಮಲೇಷ್ಯ ಮೊದಲಾದವು ಉಷ್ಣವಲಯದ ಆವರ್ತ ಮಾರುತಗಳಿಂದ ಮಳೆ ಪಡೆಯುತ್ತವೆ.




ವಾರ್ಷಿಕ ಮಳೆಹಂಚಿಕೆ

**ಚಳಿಗಾಲ:** ಏಷ್ಯದ ಹೆಚ್ಚಿನ ಭಾಗಗಳಲ್ಲಿ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಚಳಿಗಾಲವಾಗಿರುತ್ತದೆ. ಏಷ್ಯದ ಬಹುಭಾಗವು ಉತ್ತರಾರ್ಧ ಗೋಳದಲ್ಲಿದೆ. ಈ ಅವಧಿಯಲ್ಲಿ ಉತ್ತರಾರ್ಧಗೋಳಕ್ಕೆ ಓರೆಯಾದ ಸೂರ್ಯನ ಕಿರಣಗಳು ಪ್ರಸರಿಸುವವು. ಹೀಗಾಗಿ ಏಷ್ಯದ ಹೆಚ್ಚಿನ ಭಾಗಗಳಲ್ಲಿ ಬಹಳ ಕಡಿಮೆ ಉಷ್ಣಾಂಶವಿದ್ದು, ಅತಿ ಶೀತವಾದ ವಾಯುಗುಣವಿರುತ್ತದೆ.

ಮಧ್ಯ ಏಷ್ಯದಲ್ಲಿ ವಾಯುವಿನ ಒತ್ತಡ ಅಧಿಕ ಮತ್ತು ಹಿಂದೂ ಸಾಗರದಲ್ಲಿ ಒತ್ತಡ ಕಡಿಮೆ ಇರುತ್ತದೆ. ಹೀಗಾಗಿ ಮಾರುತಗಳು ಭೂಭಾಗದಿಂದ ಸಮುದ್ರದ ಕಡೆಗೆ ಬೀಸುತ್ತವೆ. ಅವು ಒಣಗಾಳಿಗಳು, ಮಳೆ ತರಲಾರವು. ಚಳಿಗಾಲದಲ್ಲಿ ಮಳೆ ವಿರಳ.

**ಬೇಸಿಗೆ ಕಾಲ:** ಚಳಿಗಾಲಕ್ಕೆ ವಿರುದ್ಧ ಪರಿಸ್ಥಿತಿ ಇರುತ್ತದೆ. ಇದು ಏಪ್ರಿಲ್‌ನಲ್ಲಿ ಆರಂಭ ಮತ್ತು ಸೆಪ್ಟಂಬರ್‌ನಲ್ಲಿ ಅಂತ್ಯಗೊಳ್ಳುತ್ತದೆ. ಉತ್ತರಾರ್ಧಗೋಳದಲ್ಲಿ ಸೂರ್ಯ ನೇರವಾಗಿ ಪ್ರಕಾಶಿಸುವುದು. ಆದ್ದರಿಂದ ಏಷ್ಯದ ಬಹುಭಾಗಗಳಲ್ಲಿ ಉಷ್ಣಾಂಶ ಹೆಚ್ಚು ಮತ್ತು ಮಧ್ಯ ಏಷ್ಯದಲ್ಲಿ ಒತ್ತಡ ಕಡಿಮೆ. ಮಾರುತಗಳು ಸಮುದ್ರಗಳಿಂದ ಭೂಭಾಗಗಳಿಗೆ ಬೀಸುತ್ತವೆ. ಅವು ಹೆಚ್ಚು ಕಡಿಮೆ ಖಂಡದ ಎಲ್ಲೆಡೆಗೂ ಮಳೆಯನ್ನು ಸುರಿಸುತ್ತವೆ.

©KTBS Not to be republished

- ಜನವರಿಯಲ್ಲಿ ಸೈಬೀರಿಯಾದ ವರ್ಕೋಯಾನಸ್ಕ್ – $51^0$ ಸೆ ಮತ್ತು ಓಮಿಯಾಕ್ನಿ – $71^0$ ಸೆ. ಕನಿಷ್ಠ ಉಷ್ಣಾಂಶವನ್ನು ದಾಖಲಿಸುತ್ತವೆ.
- ಭಾರತದ ಮೇಘಾಲಯ ರಾಜ್ಯದ ಮಾಸಿನ್‌ರಾಮ್ ಪ್ರಪಂಚದಲ್ಲೇ ಅತಿ ಹೆಚ್ಚು ಮಳೆ ಪಡೆಯುತ್ತದೆ. (118.7 ಸೆಂ.ಮೀ)

## ಸ್ವಾಭಾವಿಕ ಸಸ್ಯವರ್ಗ

ಏಷ್ಯದ ಸ್ವಾಭಾವಿಕ ಸಸ್ಯವರ್ಗ ಮತ್ತು ವಾಯುಗುಣಗಳ ನಡುವೆ ಪರಸ್ಪರ ಸಂಬಂಧವಿದೆ. ಭೂಸ್ವರೂಪ, ಮಣ್ಣು ಮತ್ತು ಮಾನವನ ಪ್ರವೇಶಗಳೂ ಸಹ ಸಸ್ಯವರ್ಗದ ವಿಧ ಮತ್ತು ಹಂಚಿಕೆಯ ಮೇಲೆ ಪ್ರಭಾವ ಬೀರುವವು. ಏಷ್ಯದ ಸಸ್ಯವರ್ಗದಲ್ಲಿ ವೈವಿಧ್ಯತೆ ಇದೆ. ಅವುಗಳನ್ನು ಏಳು ವಿಧಗಳಾಗಿ ವಿಂಗಡಿಸಬಹುದು.




ಸ್ವಾಭಾವಿಕ ಸಸ್ಯವರ್ಗ

©KTBS Not to be republished

**1. ಟಂಡ್ರ ಸಸ್ಯವರ್ಗ:** ಈ ಸಸ್ಯವರ್ಗವು ಆರ್ಕ್ಟಿಕ್ ಕರಾವಳಿಯ ಉದ್ದಕ್ಕೂ ಕಿರಿದಾದ ಭಾಗದಲ್ಲಿ ಕಂಡುಬರುತ್ತದೆ. ಇದು ಬಹುವಾಗಿ ನೀರ್ಗಲ್ಲು ಮತ್ತು ಹಿಮದಿಂದಾವರಿಸಿರುತ್ತದೆ. ಹೀಗಾಗಿ ಸಸ್ಯ ಬೆಳವಣಿಗೆ ಪಾಚಿ ಮತ್ತು ಶಿಲಾವಲ್ಕಗಳಿಗೆ ಸೀಮಿತಗೊಂಡಿದೆ.

**2. ಶಂಕುವಿನಾಕಾರದ ಮರಗಳ (ಕೊನಿಫೆರಸ್) ಅರಣ್ಯಗಳು:** ಟಂಡ್ರ ಪ್ರದೇಶದಲ್ಲಿ ಹಂಚಿಕೆಯಾಗಿವೆ. ಅವುಗಳನ್ನು 'ಟೈಗ ಅರಣ್ಯ' ಎಂತಲೂ ಕರೆಯಲಾಗಿದೆ. ಫರ್, ಸ್ಪ್ರೂಸ್, ಲಾರ್ಚ್ ಮತ್ತು ಪೈನ್ ಎಂಬುವವು ಇಲ್ಲಿ ಬೆಳೆಯುವ ಮುಖ್ಯ ಮರಗಳು. ಅವು ಮೃದು ಮರದ ತಿರುಳಿನ ಮರಗಳಾಗಿರುತ್ತವೆ.



ಟೈಗ ಅರಣ್ಯ

**3. ಸಮಶೀತೋಷ್ಣವಲಯದ ಹುಲ್ಲುಗಾವಲು (ಸ್ಟೆಪ್ಪೀಸ್):** ಮಧ್ಯ ಏಷ್ಯ ಮತ್ತು ಮರುಭೂಮಿ ಮತ್ತು ಅರೆಮರುಭೂಮಿಗಳ ಅಂಚುಗಳಲ್ಲಿ ಕಂಡುಬರುತ್ತದೆ. ಕಡಿಮೆ ಮಳೆಯಿಂದಾಗಿ ಇಲ್ಲಿ ಕಡಿಮೆ ಎತ್ತರವುಳ್ಳ ಹುಲ್ಲು ಬೆಳೆಯುತ್ತದೆ.

**4. ಮರುಭೂಮಿ ಸಸ್ಯವರ್ಗ:** ಇದು ಏಷ್ಯದ ಉಷ್ಣವಲಯ ಮತ್ತು ಸಮಶೀತೋಷ್ಣವಲಯಗಳ ಮರುಭೂಮಿಗಳಲ್ಲಿ ಕಂಡುಬರುತ್ತದೆ. ಉದಾ: ಅರೇಬಿಯ, ಇರಾನ್, ಥಾರ್ ಮರುಭೂಮಿ ಇತ್ಯಾದಿ. ಇಲ್ಲಿ ಮುಳ್ಳಿನ ಗಿಡಗಂಟಿ, ಕುರುಚಲು ಸಸ್ಯ ಮತ್ತು ಹುಲ್ಲುಗಳು ಮಾತ್ರ ಬೆಳೆಯುವವು. ಓಯಾಸಿಸ್‌ಗಳ ಬಳಿ ಖರ್ಜೂರ ಮತ್ತು ತಾಳೆ ಜಾತಿ ಮರಗಳು ಕಂಡುಬರುವವು.

Not to be Republished



ಮಾನ್ಸೂನ್ ಅರಣ್ಯ

**5. ಮಾನ್ಸೂನ್ ಅರಣ್ಯಗಳು:** ದಕ್ಷಿಣ, ಆಗ್ನೇಯ ಮತ್ತು ಪೂರ್ವ ಏಷ್ಯ ಭಾಗಗಳಲ್ಲಿ ಕಂಡುಬರುತ್ತವೆ. ಇಲ್ಲಿ ಹೆಚ್ಚು ಶಾಖ ಮತ್ತು ಮಳೆ ಬೀಳುವುದರಿಂದ ಕಾಡುಗಳಿರುತ್ತವೆ. ತೇಗ, ಸಲೆ, ಆಲ, ಬಿದಿರು, ಶ್ರೀಗಂಧ ಹಾಗೂ ಇನ್ನೂ ಹಲವು ಗಟ್ಟಿ ಮರಗಳು ಇಲ್ಲಿ ಬೆಳೆಯುತ್ತವೆ. ಅವು ಶರತ್ಕಾಲದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ.

**6. ಸಮಭಾಜಕ ವೃತ್ತ ಪ್ರದೇಶದ ಅರಣ್ಯಗಳು:** ಹೆಚ್ಚಾಗಿ ಪೂರ್ವ ಇಂಡೀಸ್ ಮತ್ತು ಅಧಿಕ ಮಳೆ ಬೀಳುವ ಮಾನ್ಸೂನ್ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅವು ಸದಾ ಹಸಿರು ಮತ್ತು ಎತ್ತರಕ್ಕೆ ಬೆಳೆಯುವ ಮರಗಳಿಂದ ಕೂಡಿರುತ್ತವೆ. ಮಹಾಗನಿ, ಎಬೋನಿ, ರಬ್ಬರ್, ಬಿದಿರು, ಬೀಟೆ ಇಲ್ಲಿ ಬೆಳೆಯುವ ಪ್ರಮುಖ ಮರಗಳು.



ಸಮಭಾಜಕ ವೃತ್ತ ಪ್ರದೇಶದ ಅರಣ್ಯ

Not ©KTBS to be republished

**7. ಮೆಡಿಟರೇನಿಯನ್ ಸಸ್ಯವರ್ಗವು** ಏಷ್ಯದ ನೈಋತ್ಯ ಭಾಗಗಳಲ್ಲಿ ಕಂಡುಬರುವುದು. ಇಲ್ಲಿ ಆಲಿವ್, ಫಿಗ್, ಓಕ್ ಮರಗಳು ಮತ್ತು ಕುರುಚಲು ಸಸ್ಯ ಬೆಳೆಯುತ್ತವೆ. ಮರಗಳು ಕಡಿಮೆ ಎತ್ತರಕ್ಕೆ ಬೆಳೆಯುತ್ತವೆ.

## 6. ಪ್ರಮುಖ ಖನಿಜಗಳು

ಏಷ್ಯ ಹೆಚ್ಚು ವಿಸ್ತಾರವಾದ ಭೂಖಂಡವಾಗಿದ್ದು, ಇದರಲ್ಲಿ ವಿವಿಧ ಖನಿಜಗಳ ಬೃಹತ್ ನಿಕ್ಷೇಪಗಳು ಕಂಡುಬರುತ್ತವೆ. ಪ್ರಮುಖ ಖನಿಜಗಳು ಈ ಕೆಳಕಂಡಂತಿವೆ:

**ಕಬ್ಬಿಣದ ಅದಿರು:** ಇದು ಕಬ್ಬಿಣ ಮತ್ತು ಉಕ್ಕು ತಯಾರಿಕೆಗೆ ಅಗತ್ಯವಾದ ಕಚ್ಚಾವಸ್ತು. ಏಷ್ಯ ಅಪಾರ ಕಬ್ಬಿಣದ ಅದಿರು ಹೊಂದಿದೆ ಮತ್ತು ಪ್ರಪಂಚದ ಶೇ.30 ಭಾಗದಷ್ಟು ಕಬ್ಬಿಣದ ಅದಿರು ನಿಕ್ಷೇಪ ಈ ಖಂಡದಲ್ಲಿದೆ. ಚೀನ ಅಧಿಕ ಕಬ್ಬಿಣದ ಅದಿರು ಉತ್ಪಾದಿಸುವ ದೇಶ. ಭಾರತ, ಟರ್ಕಿ, ಫಿಲಿಪ್ಪೈನ್ಸ್, ಮಲೇಷ್ಯ, ಥೈಲೆಂಡ್, ಇಂಡೋನೇಷ್ಯ, ಮಯನ್ಮಾರ್, ವಿಯೆಟ್ನಾಂ, ಕಜಕಿಸ್ತಾನ ಮತ್ತು ಪಾಕಿಸ್ತಾನ ಇತರೆ ಪ್ರಮುಖ ಉತ್ಪಾದಕರು. ಕೊರಿಯ, ತೈವಾನ್, ಶ್ರೀಲಂಕ, ಜಪಾನ್ ಮತ್ತು ನೈಋತ್ಯ ಏಷ್ಯದ ರಾಷ್ಟ್ರಗಳಲ್ಲಿ ಅಲ್ಪ ಪ್ರಮಾಣದ ಕಬ್ಬಿಣದ ಅದಿರು ದೊರೆಯುತ್ತದೆ.




ಪ್ರಮುಖ ಖನಿಜಗಳು

Not to be republished ©KTBS

**ಮ್ಯಾಂಗನೀಸ್:** ಪ್ರಮುಖ ಮಿಶ್ರಲೋಹ ಖನಿಜ. ಉತ್ತಮ ಉಕ್ಕು ತಯಾರಿಕೆಗೆ ಇದು ಅತ್ಯಾವಶ್ಯಕ. ಏಷ್ಯ ಖಂಡವು ಅಧಿಕ ಪ್ರಮಾಣದ ಮ್ಯಾಂಗನೀಸ್ ನಿಕ್ಷೇಪವನ್ನು ಹೊಂದಿದೆ. ಅದು ಟ್ರಾನ್ಸ್ ಕಕಾಸಸ್, ಮಧ್ಯ ಏಷ್ಯ, ಸೈಬೀರಿಯ, ಚೀನ ಮತ್ತು ಭಾರತಗಳಲ್ಲಿ ಹೆಚ್ಚು ಹಂಚಿಕೆಯಾಗಿದೆ. ಉತ್ಪಾದನೆಯಲ್ಲಿ ಚೀನ ಮುಂದಿದೆ.

**ಬಾಕ್ಸೈಟ್:** ಇದು ಕಬ್ಬಿಣೇತರ ಲೋಹ. ಖನಿಜ ಮತ್ತು ಅಲ್ಯೂಮಿನಿಯಂ ತಯಾರಿಸುವುದಕ್ಕೆ ಅಗತ್ಯವಾದುದು. ಏಷ್ಯ ಅಪಾರವಾದ ಬಾಕ್ಸೈಟ್ ನಿಕ್ಷೇಪವುಳ್ಳ ಖಂಡ. ಅದು ಹೆಚ್ಚಾಗಿ ಕಜಕ್‌ಸ್ತಾನ ಮತ್ತು ದಕ್ಷಿಣ ಕೇಂದ್ರ ಸೈಬೀರಿಯಾಗಳಲ್ಲಿ ದೊರೆಯುತ್ತದೆ. ಅಲ್ಲದೆ ಭಾರತ ಇಂಡೊನೇಷ್ಯ, ಟರ್ಕಿ, ಮಲೇಷ್ಯ ಹಾಗೂ ಚೀನ ದೇಶಗಳಲ್ಲಿಯೂ ಸಾಕಷ್ಟು ಬಾಕ್ಸೈಟ್ ದೊರೆಯುತ್ತದೆ.

**ಕಲ್ಲಿದ್ದಲು:** ಇದು ಪಳೆಯುಳಿಕೆ ಇಂಧನ ಖನಿಜ. ಒಂದು ಪ್ರಮುಖ ಶಕ್ತಿಯ ಮೂಲ. ಏಷ್ಯದಲ್ಲಿ ಅಪಾರವಾದ ಕಲ್ಲಿದ್ದಲು ದೊರೆಯುತ್ತದೆ. ಆದರೆ ಅದರ ಹಂಚಿಕೆಯಲ್ಲಿ ಅಸಮಾನತೆಯಿದೆ. ಅತ್ಯಧಿಕ ಪ್ರಮಾಣದ ಕಲ್ಲಿದ್ದಲು ನಿಕ್ಷೇಪವು ಚೀನ, ಭಾರತ, ಇಂಡೊನೇಷ್ಯ, ಸೈಬೀರಿಯ ಮತ್ತು ಮಧ್ಯ ಏಷ್ಯ ದೇಶಗಳಲ್ಲಿ ಕಂಡುಬರುತ್ತದೆ.

ಪ್ರಪಂಚದಲ್ಲಿ ಅತಿ ಹೆಚ್ಚು ಕಲ್ಲಿದ್ದಲು ನಿಕ್ಷೇಪ ಮತ್ತು ಉತ್ಪಾದನೆ ಎರಡರಲ್ಲೂ ಚೀನ ದೇಶ ಮೊದಲನೆಯದು. ಚೀನದ ಎಲ್ಲಾ ಪ್ರಾಂತ್ಯಗಳಲ್ಲೂ ಕಲ್ಲಿದ್ದಲು ಲಭ್ಯವಿದೆ. ಭಾರತವು ಏಷ್ಯದ ಎರಡನೆಯ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ದೇಶ. ಇತ್ತೀಚೆಗೆ ಮಧ್ಯ ಸೈಬೀರಿಯಾದಲ್ಲಿರುವ ಕುಜೆನೆಟ್ಸ್ ಬಯಲು ಹೆಚ್ಚು ಕಲ್ಲಿದ್ದಲು ಉತ್ಪಾದಿಸುವ ಭಾಗವಾಗಿದೆ. ಅಲ್ಪ ಪ್ರಮಾಣದ ಕಲ್ಲಿದ್ದಲು ನಿಕ್ಷೇಪವು ಉಜ್ಬೇಕಿಸ್ತಾನ, ಕಿರ್ಘಿಸ್ತಾನ, ತಜಕಿಸ್ತಾನ, ಪಾಕಿಸ್ತಾನ ಮತ್ತು ಜಪಾನ್ ದೇಶಗಳಲ್ಲಿ ದೊರೆಯುತ್ತದೆ.

**ಪೆಟ್ರೋಲಿಯಂ:** ಇದೊಂದು ತೈಲ ಇಂಧನ. ಸ್ವಯಂಚಾಲಿತ ವಾಹನಗಳು, ರೈಲು, ಹಡಗು ಮತ್ತು ವಿಮಾನಗಳಿಗೆ ಬೇಕಾಗುವ ಶಕ್ತಿಸಾಧನವಾಗಿದೆ. ನೈಋತ್ಯ ಏಷ್ಯಾದಲ್ಲಿ ಅಪಾರವಾದ ಪೆಟ್ರೋಲಿಯಂ ನಿಕ್ಷೇಪವಿದೆ. ಅದು ಹೆಚ್ಚಾಗಿ ಸೌದಿ ಅರೇಬಿಯ, ಇರಾನ್, ಇರಾಕ್, ಕುವೈತ್, ಬಹ್ರೇನ್, ಕಟಾರ್ ಮತ್ತು ಸಂಯುಕ್ತ ಅರಬ್ ಎಮಿರೇಟೀಸ್ (UAE) ಗಳಲ್ಲಿ ಕಂಡುಬರುವುದು. ಇವು ಪ್ರಪಂಚದ ಒಟ್ಟು ಪೆಟ್ರೋಲ್ ನಿಕ್ಷೇಪದಲ್ಲಿ ಅರ್ಧಭಾಗವನ್ನು ಹೊಂದಿವೆ ಮತ್ತು ಪ್ರಪಂಚದ ಶೇ.25 ಭಾಗದಷ್ಟು ಪೆಟ್ರೋಲನ್ನು ಉತ್ಪಾದಿಸುತ್ತವೆ.

ಪೂರ್ವ ಮತ್ತು ಆಗ್ನೇಯ ಏಷ್ಯದ ಕೆಲವು ದೇಶಗಳಲ್ಲಿಯೂ ಪೆಟ್ರೋಲಿಯಂ ನಿಕ್ಷೇಪ ದೊರೆಯತ್ತದೆ. ಉದಾ: ಇಂಡೊನೇಷ್ಯ, ಮಲೇಷ್ಯ, ಚೀನ, ತೈವಾನ್, ಮಯನ್ಮಾರ್, ಸಾರ್ವಾಕ್, ಭಾರತ, ವಿಯೆಟ್ನಾಂ ಇತ್ಯಾದಿ.

ಇತ್ತೀಚೆಗೆ ಸೈಬೀರಿಯ ಭಾಗದಲ್ಲಿ ಪೆಟ್ರೋಲಿಯಂ ಉತ್ಪಾದನೆ ಹೆಚ್ಚಾಗಿದೆ.

©KTBS Not to be republished

- ಪೆಟ್ರೋಲಿಯಂ ಶಬ್ದ (Petroleum)ವು 'Petra' ಎಂದರೆ 'ಕಲ್ಲು' ಮತ್ತು 'Oleum' ಎಂದರೆ 'ತೈಲ' ಎಂಬ ಎರಡು ಲ್ಯಾಟಿನ್ ಭಾಷಾ ಪದಗಳಿಂದ ಸಂಯೋಜಿತವಾದದ್ದು.
- ಸೌದಿ ಅರೇಬಿಯ ಪ್ರಪಂಚದಲ್ಲೇ ಅತಿ ಹೆಚ್ಚು ಪೆಟ್ರೋಲಿಯಂ ಉತ್ಪಾದಿಸುವ ದೇಶ.

ಮಧ್ಯ ಏಷ್ಯದ ಟರ್ಕ್ಮೇನಿಸ್ತಾನ, ಉಜ್ಬೇಕಿಸ್ತಾನ, ಕಜಕಿಸ್ತಾನ ಮೊದಲಾದ ಭಾಗಗಳಲ್ಲಿಯೂ ಸಾಕಷ್ಟು ಪೆಟ್ರೋಲ್ ಲಭ್ಯವಿದೆ.

## ಪ್ರಮುಖ ಕೈಗಾರಿಕಾ ಪ್ರದೇಶಗಳು

ಏಷ್ಯಾ ಖಂಡವು ವಿಶಾಲ ಪ್ರದೇಶ. ಸಮೃದ್ಧ ಖನಿಜ ಮತ್ತು ವ್ಯವಸಾಯೋತ್ಪನ್ನಗಳನ್ನು ಹೊಂದಿದ್ದರೂ ಯೂರೋಪ್ ಖಂಡದಷ್ಟು ಕೈಗಾರಿಕೀಕರಣ ಸಾಧಿಸಿಲ್ಲ. ಇದಕ್ಕೆ ಮುಖ್ಯ ಕಾರಣಗಳೆಂದರೆ ತಂತ್ರಜ್ಞಾನ, ಬಂಡವಾಳಗಳ ಕೊರತೆ, ಸಾಂಪ್ರದಾಯದ ಸ್ವಭಾವ ಮತ್ತು ಹೆಚ್ಚು ಜನರು ವ್ಯವಸಾಯದಲ್ಲಿ ತೊಡಗಿರುವುದು.

ಪ್ರಮುಖ ಕೈಗಾರಿಕೆ ಮತ್ತು ಕೈಗಾರಿಕಾ ಚಟುವಟಿಕೆಗಳನ್ನುಳ್ಳ ಪ್ರದೇಶಕ್ಕೆ 'ಕೈಗಾರಿಕಾ ಪ್ರದೇಶ' ಎನ್ನುವರು. ಇವು ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲಕರವಾದ ಕೆಲವೇ ಭಾಗಗಳಲ್ಲಿ ಕಂಡುಬರುತ್ತವೆ.

ಏಷ್ಯದ ಪ್ರಮುಖ ಕೈಗಾರಿಕಾ ಪ್ರದೇಶಗಳು ಈ ಕೆಳಕಂಡಂತಿವೆ.

**ಜಪಾನ್:** ಈ ದೇಶದಲ್ಲಿ ನಾಲ್ಕು ಪ್ರಮುಖ ಕೈಗಾರಿಕಾ ಪ್ರದೇಶಗಳಿವೆ.

1. ಕಿಹೀನ್ ಪ್ರದೇಶವು ಟೋಕಿಯೊ, ಕವಾಸಾಕಿ ಮತ್ತು ಯೋಕೊಹಾಮ ನಗರಗಳನ್ನೊಳಗೊಂಡ ದೊಡ್ಡ ಕೈಗಾರಿಕಾ ಪ್ರದೇಶ. ಇಲ್ಲಿ ಜವಳಿ, ಎಂಜಿನಿಯರಿಂಗ್, ಹಡಗುಕಟ್ಟುವುದು, ಕಾಗದ ಮತ್ತು ಸಿಮೆಂಟ್ ಕೈಗಾರಿಕೆಗಳು ಪ್ರಮುಖವಾಗಿವೆ.
2. ಹಾನ್ಶಿನ್ ಪ್ರದೇಶದಲ್ಲಿ ಒಸಾಕ, ಕೋಬೆ ಮತ್ತು ಕಿಯೂಟೊ ಮಹಾನಗರಗಳಿವೆ. ಇಲ್ಲಿ ಜವಳಿ (ಬಟ್ಟೆ) ಕೈಗಾರಿಕೆ ಪ್ರಮುಖವಾಗಿದೆ.
3. ಐಸೆ ಕೊಲ್ಲಿ ಪ್ರದೇಶವು ನಗೋಯ ನಗರದ ಸುತ್ತಮುತ್ತ ವಿಸ್ತರಿಸಿದೆ. ಇಲ್ಲಿ ಜವಳಿ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳು ಪ್ರಮುಖವಾಗಿವೆ.
4. ಕಿಟ ಕಿಯೂಶು ಪ್ರದೇಶವು ಯವಾಟ, ಮೋಜಿ ಮತ್ತು ಕೊಕುರ ನಗರಗಳಿಂದ ಕೂಡಿದ್ದು ಉಕ್ಕು, ಹಡಗು, ಯಂತ್ರೋಪಕರಣ, ರಾಸಾಯನಿಕ ಮತ್ತು ಜವಳಿ ಉದ್ಯಮಕ್ಕೆ ಪ್ರಸಿದ್ಧವಾಗಿದೆ.

© KTBS Not to be republished

**ಚೀನ:** ವ್ಯವಸಾಯ ಪ್ರಧಾನ ದೇಶವಾಗಿದ್ದು, ಕೈಗಾರಿಕಾಭಿವೃದ್ಧಿ ಕಡಿಮೆ. ಕಮ್ಯುನಿಷ್ಟ್ ಸರ್ಕಾರ ಬಂದ ಮೇಲೆ ಕೈಗಾರಿಕೀಕರಣದ ಕಡೆಗೆ ಆದ್ಯತೆ ನೀಡಲಾಗಿದೆ. ಈ ದೇಶದ ಪ್ರಮುಖ ಕೈಗಾರಿಕಾ ಪ್ರದೇಶಗಳೆಂದರೆ;

1. **ಮಂಚೂರಿಯ ಪ್ರದೇಶ:** ಇಲ್ಲಿ ಕಬ್ಬಿಣ ಮತ್ತು ಉಕ್ಕು, ಎಂಜಿನಿಯರಿಂಗ್ ಮತ್ತು ರಾಸಾಯನಿಕ ಕೈಗಾರಿಕೆಗಳು ಮುಖ್ಯವಾದವು.
2. **ಬೀಜಿಂಗ್ ಪ್ರದೇಶ:** ಲೋಹ ತಯಾರಿಕೆ, ಇಂಜಿನಿಯರಿಂಗ್, ಹಡಗು ನಿರ್ಮಾಣ, ಜವಳಿ ಮತ್ತು ರಸಾಯನಿಕ ಕೈಗಾರಿಕೆಗಳು ಮುಖ್ಯವಾದವು.
3. **ಶಾನ್ಸಿ-ಬಾವಟೋವ್:** ಕಬ್ಬಿಣ ಮತ್ತು ಉಕ್ಕು ಹಾಗೂ ಕೃಷಿ ಉಪಕರಣಗಳು.
4. **ಚಾಂಗ್ ಜಿಯಾಂಗ್:** ಪ್ರದೇಶದಲ್ಲಿ ಜವಳಿ ಉದ್ಯಮ, ಹಡಗು ನಿರ್ಮಾಣ ಮತ್ತು ಉಕ್ಕು ತಯಾರಿಕೆ ಘಟಕಗಳು ಮತ್ತು ಇಂಜಿನಿಯರಿಂಗ್ ಕಂಡುಬರುತ್ತವೆ.
5. **ವುಹಾನ್ ಪ್ರದೇಶ:** ಲೋಹ ತಯಾರಿಕೆ ಮತ್ತು ಬೃಹತ್ ಕೈಗಾರಿಕಾ ಸರಕು ತಯಾರಿಕೆ.

**ಭಾರತ – ಪ್ರಮುಖ ಕೈಗಾರಿಕಾ ಪ್ರದೇಶಗಳು :** 1. ಹೂಗ್ಲಿ–ಕೋಲ್ಕೊತ ಪ್ರದೇಶ, 2. ಮುಂಬಯಿ –ಪುಣೆ ಪ್ರದೇಶ, 3. ಅಹ್ಮದಾಬಾದ್ –ವಡೋದರ ಪ್ರದೇಶ, 4. ಮದುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ, 5. ಛೋಟನಾಗಪುರ ಪ್ರದೇಶ 6. ದೆಹಲಿ–ಮೀರತ್, 7. ವಿಶಾಖಪಟ್ಟಣ, ಹಾಗೂ 8. ಕೊಲ್ಲಮ್–ತಿರುವನಂತಪುರ ಪ್ರದೇಶ.

ದಕ್ಷಿಣ ಕೊರಿಯ, ಹಾಂಕಾಂಗ್, ಸಿಂಗಾಪುರ ಮತ್ತು ಮಲೇಷ್ಯಗಳಲ್ಲಿ ಏಷ್ಯದ ಇತರ ಕೈಗಾರಿಕಾ ಪ್ರದೇಶಗಳಿವೆ.

## 7. ಏಷ್ಯದ ಜನಸಂಖ್ಯೆ

**ಬೆಳವಣಿಗೆ:** ಏಷ್ಯಖಂಡದಲ್ಲಿ ಸುಮಾರು 4.2 ಬಿಲಿಯನ್ ಜನಸಂಖ್ಯೆಯಿದೆ. ಇದು ಪ್ರಪಂಚದ ಜನಸಂಖ್ಯೆಯ ಶೇ.60 ಭಾಗದಷ್ಟಾಯಿತು. ಇಂದಿನ ಜನಸಂಖ್ಯೆ ಕಳೆದ ಮೂರು ಶತಮಾನಗಳಿಗಿಂತ ಐದು ಪಟ್ಟು ಹೆಚ್ಚಾಗಿದೆ. 1950 ರಲ್ಲಿ ಏಷ್ಯದ ಜನಸಂಖ್ಯೆ 1.4 ಬಿಲಿಯನ್ ಮಾತ್ರ. ಇತ್ತೀಚಿನವರೆಗೂ ಜನಸಂಖ್ಯಾ ಬೆಳವಣಿಗೆಯ ದರವು ಹೆಚ್ಚಾಗಿತ್ತು. ಆದರೆ ಈಗ ಅದು ಕಡಿಮೆಯಾಗುತ್ತಿದೆ.

**ಹಂಚಿಕೆ ಮತ್ತು ಸಾಂದ್ರತೆ:** ಏಷ್ಯಖಂಡದ ಜನಸಂಖ್ಯಾ ಹಂಚಿಕೆಯಲ್ಲಿ ಹೆಚ್ಚು ಅಸಮಾನತೆಯಿದೆ. ಏಷ್ಯದ ಹೆಚ್ಚಿನ ಭಾಗಗಳಲ್ಲಿ ವಿರಳ ಜನಸಂಖ್ಯೆ ಮತ್ತು ಕಡಿಮೆ ಭಾಗಗಳಲ್ಲಿ ಅಧಿಕ ಜನಸಂಖ್ಯೆಯಿರುವುದನ್ನು ನಾವು ಕಾಣಬಹುದು.

©KTBS Not to be republished

ಏಷ್ಯ ಖಂಡದ ಸರಾಸರಿ ಜನಸಾಂದ್ರತೆ ಪ್ರತಿ ಚದರ ಕಿ.ಮೀ.ಗೆ 96 ಜನರು. ಆದರೆ ಇದು ಖಂಡದಾದ್ಯಂತ ಅಸಮಾನವಾಗಿದೆ. ಅತ್ಯಂತ ಶೀತವಾದ ಉತ್ತರ ಮತ್ತು ಪೂರ್ವ ಸೈಬೀರಿಯ, ಮರುಭೂಮಿಗಳನ್ನುಳ್ಳ ಅರೇಬಿಯ, ಇರಾನ್ ಮತ್ತು ಥಾರ್ (ಭಾರತ) ಪ್ರದೇಶಗಳು ಹಾಗೂ ಅತ್ಯಂತ ಎತ್ತರವುಳ್ಳ ಮಧ್ಯ ಏಷ್ಯ ಭಾಗಗಳು ಏಷ್ಯಾದ ಅತಿ ವಿರಳ ಜನಸಂಖ್ಯಾ ಭಾಗಗಳು.

ಏಷ್ಯದ ಜನಭರಿತ ಭಾಗಗಳಲ್ಲಿ ಭಾರತದ ಮಹಾಮೈದಾನಗಳು, ಬಾಂಗ್ಲಾದೇಶ, ಚೀನ, ಜಪಾನ್, ಕೊರಿಯ ಹಾಗೂ ಜಾವದ್ವೀಪ(ಇಂಡೊನೇಷ್ಯ)ಗಳು ಪ್ರಮುಖವಾದವು. ಇವುಗಳಲ್ಲಿ ಹೆಚ್ಚಿನ ಭಾಗಗಳು ಫಲವತ್ತಾದ, ಸಮತಟ್ಟಾದ ಮೈದಾನ ಅಥವಾ ನದಿ ಬಯಲುಗಳನ್ನುಳ್ಳವು. ಮಯನ್ಮಾರ್, ಥೈಲೆಂಡ್, ಫಿಲಿಪ್ಪೈನ್ಸ್, ಇರಾಕ್, ಶ್ರೀಲಂಕ, ವಿಯೆಟ್ನಾಂ, ಮಲೇಷ್ಯ ಮತ್ತು ಕಾಂಬೋಡಿಯಗಳಲ್ಲಿಯೂ ಜನಸಾಂದ್ರತೆಯು ಹೆಚ್ಚಾಗಿದೆ.



ಏಷ್ಯದ ಜನಸಾಂದ್ರತೆ

©KTBS
Not to be republished

ಏಷ್ಯ ಖಂಡದಲ್ಲಿ ವಿವಿಧ ಜನಾಂಗದವರು ವಾಸಿಸುತ್ತಿದ್ದಾರೆ. ಪೂರ್ವ ಮತ್ತು ಆಗ್ನೇಯ ಏಷ್ಯಗಳಲ್ಲಿ ಹಳದಿ ವರ್ಣದ ಜನ(ಮಂಗೋಲರು)ರಿದ್ದಾರೆ. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ದಕ್ಷಿಣ ಏಷ್ಯದ ಇತರ ಭಾಗಗಳಲ್ಲಿ ಕಂದು ವರ್ಣದ ಜನರಿದ್ದಾರೆ. ನೈಋತ್ಯ ಏಷ್ಯದ ಭಾಗಗಳಲ್ಲಿ ಅರಬ್ಬರು, ಟರ್ಕರು, ಪರ್ಷಿಯನ್ನರು, ಆಫ್ಘನ್ನರು ಮೊದಲಾದವರು ವಾಸಿಸುವರು. ಮಧ್ಯ ಏಷ್ಯ ಭಾಗಗಳಲ್ಲಿ ಕಜಕ್ ಮತ್ತು ಕಿರ್ಘಿಜರಿದ್ದಾರೆ. ಇದೇ ರೀತಿ ವಿವಿಧ ಧರ್ಮೀಯರೂ ಸಹ ಏಷ್ಯದಲ್ಲಿದ್ದಾರೆ.

### ಹೊಸ ಪದಗಳು

ಶರತ್ಕಾಲ, ಬಿಲಿಯನ್, ಶಂಕುವಿನಾಕಾರದ ಮರಗಳ ಅರಣ್ಯ (ಶಂಖುಧಾರಿಕಾಡು), ಪಳೆಯುಳಿಕೆ ಇಂಧನ, ಮಡಿಕೆ ಪರ್ವತಗಳು, ಗ್ರಂಥಿ, ಸುಣ್ಣಕಲ್ಲು, ಪಾಚಿ, ಶಿಲಾವಲ್ಕ, ಓಯಾಸಿಸ್, ಕಚ್ಚಾವಸ್ತು, ತೈಗ, ಟಂಡ್ರ.

### ಇದು ನಿಮಗೆ ತಿಳಿದಿರಲಿ

- ಏಷ್ಯ ಖಂಡದ ಅತ್ಯಂತ ಎತ್ತರವಾದ ಬಿಂದು ಮೌಂಟ್ ಎವರೆಸ್ಟ್ (8848 ಮೀ.)
- ಏಷ್ಯದ ಅತ್ಯಂತ ಕೆಳಮಟ್ಟದ ಬಿಂದು ಮೃತ ಸಮುದ್ರ. (ಸಮುದ್ರಮಟ್ಟಕ್ಕಿಂತ 305 ಮೀ. ಕೆಳಗೆ)
- ಪ್ರಪಂಚದಲ್ಲೇ ಹೆಚ್ಚಿನ ಸಂಖ್ಯೆಯ ಹಿಮನದಿಗಳು ಕಾರಾಕೊರಂ ಪರ್ವತ ಸರಣಿಗಳಲ್ಲಿವೆ.
- ಟಿಬೆಟ್ ಪ್ರಪಂಚದ ಅತಿ ಎತ್ತರವಾದ ಪ್ರಸ್ಥಭೂಮಿ. ಇದನ್ನು ಪ್ರಪಂಚದ ಮೇಲ್ಛಾವಣಿ ಎಂದು ಕರೆಯಲಾಗಿದೆ.
- ಕ್ಯಾಸ್ಪಿಯನ್ ಸಮುದ್ರವು ಪ್ರಪಂಚದ ಅತ್ಯಂತ ವಿಶಾಲವಾದ ಒಳನಾಡಿನ ಜಲರಾಶಿಯಾಗಿದೆ.
- ದಕ್ಷಿಣ ಸೈಬೀರಿಯಾದಲ್ಲಿರುವ ಬೈಕಲ್ ಸರೋವರವು ಪ್ರಪಂಚದಲ್ಲೇ ಆಳವುಳ್ಳದ್ದು.
- ಕ್ಷೇತ್ರ ಮತ್ತು ಜನಸಂಖ್ಯೆ ಎರಡರಲ್ಲೂ ಏಷ್ಯದ ಚಿಕ್ಕದೇಶ ಮಾಲ್ಡೀವ್ಸ್.

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. 'ಏಷ್ಯ ವೈಪರೀತ್ಯಗಳ ಖಂಡ' ಎಂದು ಕರೆಯುವರು. ಏಕೆ?
2. ಏಷ್ಯ ಖಂಡದ ಭೌಗೋಳಿಕ ಸನ್ನಿವೇಶ ತಿಳಿಸಿ.
3. ಏಷ್ಯದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?
4. ಏಷ್ಯದ ಅತಿ ಎತ್ತರವುಳ್ಳ ಪರ್ವತ ಮತ್ತು ಪ್ರಸ್ಥಭೂಮಿಗಳಾವುವು?

©KTBS Not to be republished

5. ಏಷ್ಯದಲ್ಲಿ ಯಾವ ಋತುವಿನಲ್ಲಿ ಹೆಚ್ಚು ಮಳೆಯಾಗುವುದು?

6. ಏಷ್ಯದ ಪ್ರಮುಖ ಆಹಾರ ಬೆಳೆಗಳು ಯಾವುವು?

7. ಏಷ್ಯದ ಪ್ರಮುಖ ಪಳೆಯುಳಿಕೆ ಇಂಧನಗಳನ್ನು ಹೆಸರಿಸಿ.

8. ಏಷ್ಯ ಖಂಡದ ಯಾವ ಭಾಗಗಳಲ್ಲಿ ವಿರಳ ಜನಸಂಖ್ಯೆ ಇದೆ? ಏಕೆ?

9. ಜಪಾನಿನ ಯಾವುದಾದರೂ ಮೂರು ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಹೆಸರಿಸಿ.

**ಚಟುವಟಿಕೆಗಳು**

1. ನಿಮ್ಮ ಅಟ್ಲಾಸ್ ಪುಸ್ತಕದ ಸಹಾಯದಿಂದ ಏಷ್ಯ ಭೂಪಟವನ್ನು ಅಧ್ಯಯನ ಮಾಡಿ, ಪರ್ವತ, ಪ್ರಸ್ಥಭೂಮಿ, ಮೈದಾನಗಳು ಮತ್ತು ನದಿಗಳನ್ನು ಗುರುತಿಸಿ ಮತ್ತು ಪಟ್ಟಿ ಮಾಡುವುದು. ಅವುಗಳನ್ನು ಭೂಪಟದಲ್ಲಿ ಗುರುತಿಸಿ.

2. ಏಷ್ಯ ಖಂಡದ ಪ್ರಮುಖ ನದಿಗಳು ಮತ್ತು ಅವುಗಳ ಉಪನದಿಗಳ ವಿವರಗಳಾದ– ಉಗಮಸ್ಥಾನ, ಉದ್ದ, ಉಪನದಿಗಳು, ಮುಖಜಭೂಮಿ, ಅಣೆಕಟ್ಟುಗಳ ಮಾಹಿತಿ ಮತ್ತು ಚಿತ್ರಗಳನ್ನು ಸಂಗ್ರಹಿಸುವುದು.

3. ನೀವು ವಾಸಮಾಡುತ್ತಿರುವ ನೆರೆಹೊರೆಯನ್ನು ವೀಕ್ಷಿಸಿ, ಅಲ್ಲಿನ ಬೆಳೆ, ಸಸ್ಯವರ್ಗ ಮತ್ತು ಜಲರಾಶಿಗಳ ಬಗ್ಗೆ ಪಟ್ಟಿ ಮಾಡುವುದು.

©KTBS Not to be republished

* * * * *